ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಗೋ ಸಂರಕ್ಷಕರ ಅನೈತಿಕ ಪೋಲೀಸ್‌ಗಿರಿ

ಸೆಪ್ಟೆಂಬರ್ 7, 2011 ಪುಟ 20 ರೂ. 14/-




ನಾನು ಅಣ್ಣಾ ಆಗಲಾರೆ

-ಅರುಂಧತಿ ರಾಯ್

ಅಣ್ಣನ ಸುವರ್ಣ ಗ್ರಾಮ

ಇಲ್ಲಿ ದಲಿತರು ಯಾಕಿಲ್ಲ?



ಎರಡೂ ಬಣದ ಉದ್ಧಟತನ

ಣ್ಣನಿಗೆ ಸುಣ್ಣ


ಂಗಳೂರು
ಟ್ಟೈ ಹುಡುಗಿ
ಜೊತೆ
ಜೆಸಿಬಿ
ನಾರಾಯಣ

ಲೋಕಾಯುಕ್ತ
ಬಗಲಲ್ಲೇ
ಭ್ರಷ್ಟ ಎಸ್‌ಪಿ
ರಂಗಸ್ವಾಮಿ
ನಾಯಕ

ಹುಬ್ಬಳ್ಳಿ
ಶಿಕ್ಷಕಿ
ಸಲೋಮಿಯ
ವೇಶ್ಯಾ
ದಂಧೆ

ಕರಾವಳಿ: ಬಲಿಯಾಯ್ತು 'ಜ' ಗ್ರೂಪ್

ಜೋರಿನ ದೇವೀರಮ್ಮ ಸಾಧು ನಂದೀಬಸಪ್ಪ



ಮದುವೆ ಕಾರ್ಯಗಳೆಲ್ಲ ಅಂತೂ ಮುಗಿದವು. ನನ್ನ ಅಪ್ಪಯ್ಯನಿಗೆ ನನ್ನ ಮೇಲೆ ಸಿಟ್ಟು, ಬೇಜಾರು ಇನ್ನೂ ಇದ್ದೇ ಇತ್ತು. ಆದರೂ ನಾವೆಲ್ಲಾ ಒಂದೇ ಮನೆಯಲ್ಲಿ ವಾಸಿಸಲು ಶುರುಮಾಡಿದೆವು. ಆಗಲೂ ಅಪ್ಪಯ್ಯ ಆ ಮನೆಗೆ ಬಾಡಿಗೆ ಕೊಡುವುದನ್ನು ನಿಲ್ಲಿಸಿರಲಿಲ್ಲ. ಅಡುಗೆಯವರು ಅಡುಗೆ ಮಾಡಿಟ್ಟು ಹೋಗುತ್ತಿದ್ದರು. ನಿಧಾನವಾಗಿ ನಾನು ಅನ್ನ, ಸಾರು, ಚಿತ್ರಾನ್ನ, ಅವಲಕ್ಕಿ ತರಹದ ಸಿಂಪಲ್ ಅಡುಗೆಗಳನ್ನು ಮಾಡುವುದನ್ನು ಕಲಿತೆ.

ಆಗ ನನಗೆ 17, ಲಂಕೇಶರಿಗೆ 24 ವರ್ಷ ವಯಸ್ಸು. ಅಷ್ಟೊತ್ತಿಗೆ ಅವರನ್ನು ಆವರಿಸಿದ್ದ ಸಾಹಿತ್ಯ ಲೋಕದ ಪರಿಚಯ ನನಗಿರಲಿಲ್ಲ. ಹಾಗೆಯೇ ನನ್ನನ್ನು ಆವರಿಸಿದ್ದ


ಶಿವಮೊಗ್ಗ ಮನೆಯಲ್ಲಿ ನವದಂಪತಿಗಳು...

ಮುಗ್ಧತೆಯ ಲೋಕವನ್ನು ಅವರು ದಾಟ ಹಲವು ವರ್ಷಗಳಾಗಿದ್ದವು. ಆದರೂ ಆಗತಾನೆ ಮದುವೆಯಾಗಿದ್ದ ನಮ್ಮಿಬ್ಬರ ಮುಂದೆ ಒಂದು ಹೊಸ ಪ್ರಪಂಚವನ್ನು ಪ್ರವೇಶಿಸುತ್ತಿದ್ದೇವೆ ಎಂಬ ಭಾವನೆ ಇತ್ತು, ಅದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಅವರ ನೇರ ನಡವಳಿಕೆ ಹಾಗೂ ಹುಂಬತನದೊಂದಿಗೆ ನನ್ನ ಮುಗ್ಧತೆ ಬೆರೆತಿದ್ದ ದಿನಗಳವು.

ಲಂಕೇಶರು ಪ್ರತಿ ದಿನ ಸೂಟು ಬೂಟು ತೊಟ್ಟು ಸೈಕಲ್ ಮೇಲೆ ಕಾಲೇಜಿಗೆ ಹೋಗಿ ಸಂಜೆ ಹೊತ್ತಿಗೆ ಮನೆಗೆ ಬರುತ್ತಿದ್ದರು. ನನ್ನ ತಮ್ಮ ಶಿವಕುಮಾರ್ ಮತ್ತು ನಾನು ಸ್ನೇಹಿತರ ತರಹ ಇದ್ದೆವು. ಆಗ ಅವನು ಹೈಸ್ಕೂಲ್‌ನಲ್ಲಿ ಓದುತ್ತಿದ್ದ. ಮನೆಯ ಮುಂದೆ ಮಲ್ಲಿಗೆ ಬಳ್ಳಿ ಇತ್ತು. ಶಿವು ಅದರ ಎಲ್ಲಾ ಹೂಗಳನ್ನು ನನಗೆ ಕಿತ್ತುಕೊಡುತ್ತಿದ್ದ. ನನಗೆ ಸೂಜಿಮಲ್ಲಿಗೆ ಎಂದರೆ ತುಂಬಾ ಇಷ್ಟ. ನಾವಿಬ್ಬರು ಒಣ ಮಂಡಕ್ಕಿಗೆ ಒಗ್ಗರಣೆ ಹಾಕಿಕೊಂಡು, ಅದನ್ನು ತಿನ್ನುತ್ತಾ ಮಾತಾಡುತ್ತಾ ಕುಳಿತರೆ ಹೊತ್ತು ಹೋಗುತ್ತಿದ್ದುದ್ದೇ ಗೊತ್ತಾಗುತ್ತಿರಲಿಲ್ಲ. ಸಂಜೆ ಹೊತ್ತಿಗೆ ನಾನು ಸೀರೆ ಉಟ್ಟು, ಎರಡು ಜಡೆ ಹಾಕಿಕೊಂಡು ರೆಡಿ ಆಗಿರುತ್ತಿದ್ದೆ. ಲಂಕೇಶ್ ಮತ್ತು ನಾನು ಹೋಟೆಲ್, ಸಿನಿಮಾ, ಪಾರ್ಕ್ ಎಂದೆಲ್ಲ ಸುತ್ತಾಡುತ್ತಿದ್ದೆವು.

ಮದುವೆಯಾದ ಹದಿನೈದು ದಿನಗಳ ನಂತರ ನಾವು ಬೆಂಗಳೂರಿಗೆ ಬಂದೆವು. ಒಂದು ದಿನ ಎಂ.ಜಿ.ರಸ್ತೆಯಲ್ಲಿ ಈಗಲೂ ಇರುವ ಜಿ.ಕೆ.ವೇಲ್ ಎಂಬ ಸ್ಟುಡಿಯೋಗೆ ಹೋದೆವು. ಆಗ ನಮ್ಮಿಬ್ಬರ ಫೋಟೋ ತೆಗೆಯಲು ಬಂದವರು ಲಂಕೇಶರ ಬಣ್ಣ ಮತ್ತು ಗಟ್ಟುಮುಟ್ಟಾದ ಮೈಕಟ್ಟನ್ನು ನೋಡಿ "ನೀವು ಕೊಡಗಿನವರಾ? ಆರ್ಮಿಯಲ್ಲಿದ್ದೀರಾ?" ಎಂದು ಕೇಳಿದರು. ಅಷ್ಟೇ ಅಲ್ಲ, "ಅಷ್ಟೊಂದು ಸ್ಟಿಫ್ ಆಗಿ ನಿಲ್ಲಬೇಡಿ. ರಿಲ್ಯಾಕ್ ಮಾಡಿ, ಸ್ವಲ್ಪ ಬಗ್ಗಿ" ಎಂದೆಲ್ಲ ಹೇಳಿದರು.

ನನ್ನ ಅತ್ತೆ ದೇವೀರಮ್ಮ ಮತ್ತು ಮಾವ ನಂದೀಬಸಪ್ಪ ಪ್ರತಿ ಮಂಗಳವಾರ ಶಿವಮೊಗ್ಗೆಯ ಸಂತೆಗೆ ಬಂದಾಗ ನಮ್ಮ ಮನೆಗೆ ಬರುತ್ತಿದ್ದರು. ಅತ್ತೆ ದೇವೀರಮ್ಮನವರು ಎಂತಹವರೆಂದರೆ ಅವರು ಒಂದು ದಿನವೂ ಸುಮ್ಮನೆ ಕೂತುಕೊಳ್ಳುತ್ತಿರಲಿಲ್ಲ, ಕೊನಗಳ್ಳಿಯಲ್ಲಿ ಅವರು ಬಹಳಷ್ಟು ಎಮ್ಮೆಗಳನ್ನು ಸಾಕಿದ್ದರು. ಪ್ರತಿ ದಿನ ಅವರೇ ಹಾಲು ಕರೆಯುತ್ತಿದ್ದರು. ಒಂದು ಎಮ್ಮೆಯಂತೂ ಅತ್ತೆ ಹಾಲು ಕರೆದರೆ ಮಾತ್ರ ಹಾಲು ಕೊಡುತ್ತಿತ್ತು, ಲಂಕೇಶ್ ಅವರು ಹುಟ್ಟಿದ ದಿನ ಕೂಡ ದೇವೀರಮ್ಮನವರು ತಾವೇ ಹೋಗಿ ಹಾಲು ಕರೆದಿದ್ದರಂತೆ. ಕೆಲವು ಸಾರಿ ರೈಲಿಗೆ ಎಮ್ಮೆ ಸಿಕ್ಕಿ ಸತ್ತು ಹೋಗುತ್ತಿದ್ದವಂತೆ. ನಮ್ಮ ಮದುವೆ ಆದ ಮೇಲೂ ಒಂದು ಎಮ್ಮೆ ಹಾಗೇ ಸತ್ತು ಹೋಯಿತು. ಅವತ್ತು ಅವರು ಶಿವಮೊಗ್ಗೆಗೆ ಬಂದು ಅಳುತ್ತಾ ಕೂತಿದ್ದುದ್ದು ಇನ್ನೂ ನೆನಪಿದೆ. ಎಮ್ಮೆ ಹಾಲಿನಿಂದ ಬೆಣ್ಣೆ ಮಾಡಿ, ಅದನ್ನು ಶಿವಮೊಗ್ಗೆಯ ಸಂತೆಯಲ್ಲಿ ಮಾರಿಯೇ ಅತ್ತೆ ದೇವೀರಮ್ಮ ತಮ್ಮ ಕೊನಗವಳ್ಳಿ ಮನೆಯ ಖರ್ಚನ್ನು ನಿಭಾಯಿಸುತ್ತಿದ್ದರು.

ಅತ್ತೆ ಸ್ವಲ್ಪ ಜೋರಿನ ಸ್ವಭಾವದವರಾಗಿದ್ದರೆ ಮಾವ ತುಂಬಾ ಸಾಧು ಸ್ವಭಾವದವರು. ಇಬ್ಬರಿಗೂ ಮಗ ಲಂಕೇಶ್ ಅಂದರೆ ಪ್ರಾಣ. ಸಂತೆ ಮುಗಿಸಿ ಮನೆಗೆ ಬರುವಾಗ ಮಂಡಕ್ಕಿ, ಖಾರ, ಕರಿಕಡುಬು, ಇನ್ನು ಏನನ್ನಾದರೂ ತರುತ್ತಿದ್ದರು. ಊರಿಂದ ರೊಟ್ಟಿ ಪಲ್ಯ ಕಟ್ಟಿಕೊಂಡು





ಬರುತ್ತಿದ್ದರು. ಮಗ ಮನೆಯಲ್ಲಿ ಇರದಿದ್ದರೆ ಅದನ್ನು ನನ್ನ ಕೈಲಿ ಕೊಟ್ಟು ಮಗನಿಗೇ ಕೊಡು ಎಂದು ಒತ್ತಿಒತ್ತಿ ಹೇಳುತ್ತಿದ್ದರು.

ಮಾವನಿಗೆ ಲಂಕೇಶ್ ಬಗ್ಗೆ ಎಷ್ಟು ಪ್ರೀತಿ ಅಂದರೆ ಅವರು ಹಲವೊಮ್ಮೆ ಮಗನನ್ನೇ ನೋಡುತ್ತಾ ಕುಳಿತುಕೊಂಡುಬಿಡುತ್ತಿದ್ದರು. ಕೊನಗವಳ್ಳಿಯಲ್ಲಿನ ಜಮೀನಿನ ಕೆಲಸವನ್ನೆಲ್ಲ ಮಾವನವರೇ ನೋಡಿಕೊಳ್ಳುತ್ತಿದ್ದರು. ಅಷ್ಟೇ ಅಲ್ಲ, ಮೊಸರು ಕಡೆದು ಬೆಣ್ಣೆ ತೆಗೆಯುವುದು, ಬಚ್ಚಲಮನೆ ಹಂಡೆಗೆ ಉರಿ ಹಾಕುವುದು, ಇತ್ಯಾದಿ ಕೆಲಸಗಳನ್ನೂ ಮಾವನವರೇ ಮಾಡುತ್ತಿದ್ದರು. ಅವರು ನನ್ನನ್ನು ಪ್ರೀತಿಯಿಂದ 'ತಾಯಿ' ಎಂದು ಕರೆಯುತ್ತಿದ್ದರು.

ನಾವಿಬ್ಬರೂ ಆಗಾಗ ಕೊನಗವಳ್ಳಿಗೆ ಹೋಗುತ್ತಿದ್ದೆವು. ನಾನು ಅಲ್ಲಿಗೆ ಹೋದಾಗ "ಹಂಡೆಗೆ ಉರಿ ಹಾಕಿದ್ದೇನೆ, ಹೋಗು ಸ್ನಾನ ಮಾಡಿ ರೊಟ್ಟಿ ತಿನ್ನು ತಾಯಿ" ಎಂದು ಮಾವ ಬಹಳ ಪ್ರೀತಿಯಿಂದ ನನಗೆ ಹೇಳುತ್ತಿದ್ದರು. ಒಮ್ಮೆ "ನೀನು ಮನೆಯಲ್ಲಿ ಕುಳಿತು ಏನು ಮಾಡುತ್ತಿ? ಕಾಲೇಜ್ ಸೇರು" ಎಂದರು ಮಾವ. ಅದನ್ನು ಕೇಳಿ ಓದುವ ಆಸೆ ಮತ್ತೆ ನನ್ನಲ್ಲಿ ಚಿಗುರಿತು. ಆದರೆ ಆಗ ಶಿವಮೊಗ್ಗೆಯಲ್ಲಿ ಇದ್ದದ್ದು ಒಂದೇ ಕಾಲೇಜ್. ಸಹ್ಯಾದ್ರಿ ಕಾಲೇಜ್. ಲಂಕೇಶರು ಅದೇ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರಿಂದ ಲಂಕೇಶರು "ಬೇಡ, ನಾನು ಪಾಠ ಹೇಳಿಕೊಡುವ ಕಾಲೇಜ್‌ಗೆ ಇವಳೂ ಬಂದರೆ ಚೆನ್ನಾಗಿರುವುದಿಲ್ಲ" ಎಂದಾಗ ನಾನು ಸುಮ್ಮನಾಗಬೇಕಾಯಿತು.

ಅವರ ಮನೆತನದ ಹೆಸರು ಪಾಳ್ಯ ಅಂತ. ನನ್ನ ಅಪ್ಪಯ್ಯನ ಮನೆ ಹೆಸರು ಹುಲ್ಲತ್ತಿ ಅಂತ. ಲಂಕೇಶರ ಪೂರ್ವಿಕರು ಪಾಳೆಗಾರರಾಗಿದ್ದರಂತೆ. ಇವರ ಕೊನಗವಳ್ಳಿ ಮನೆಯ ಹಿತ್ತಲಲ್ಲಿ ಒಂದು ಕೋಟೆ - ಅದನ್ನು ವಾಡೆ ಅಂತಲೂ ಕರೆಯುತ್ತಾರೆ - ಇನ್ನೂ ಇದೆ. ಆದರೆ ಅದರ ಅರ್ಧಭಾಗ ಮಾತ್ರ ಉಳಿದಿದೆ. ಇವರ ಮನೆದೇವರು ನಂದಿ. ಮದುವೆ ಆದನಂತರ ನಂದಿತಾವರೆಯಲ್ಲಿರುವ ಇವರ ಮನೆ ದೇವರಗುಡಿಗೆ ಹೋಗಿದ್ದೆವು. ಅಲ್ಲಿ ತುಂಬಾ ಮುದ್ದಾದ ನಾಲ್ಕು ಅಡಿ ಎತ್ತರದ ಬಸವಣ್ಣನ ಪ್ರತಿಮೆ ಇದೆ. ಪುಟ್ಟ ದೇವಸ್ಥಾನ. ಅದರ ಒಳಗೆ ಹೋಗಲು ಮೂರು ಅಡಿ ಎತ್ತರದ ಬಾಗಿಲು ಇದೆ. ಒಳಗೆ ವೃತ್ತಾಕಾರದ ಕಂಬಗಳಿವೆ. ಸುಂದರವಾದ ಜಾಗ. ಲಂಕೇಶರು ಚಿಕ್ಕವರಾಗಿದ್ದಾಗ ಅವರ ಕೂದಲನ್ನು ಇದೇ ಜಾಗದಲ್ಲಿ ಮುಡಿಕೊಡಿಸಿದ್ದರಂತೆ.


ಸ್ಟುಡಿಯೋದಲ್ಲಿ ತೆಗೆಸಿದ ಫೋಟೋ

ಆಗ ಲಂಕೇಶರಿಗೆ ತಿಂಗಳಿಗೆ 240 ರೂ. ಸಂ[...] ಒಮ್ಮೊಮ್ಮೆ ನನ್ನ ಭಾವ ಶಿವರುದ್ರಪ್ಪ ಅವರು ಎರ[...] ತಾರೀಖಿನಂದು ಬಂದು ಇವರ ಜೇಬಿನಲ್ಲಿದ್ದ ದು[...] ತೆಗೆದುಕೊಂಡು ಹೋಗಿಬಿಡುತ್ತಿದ್ದರು. ಆನಂತರ ಲಂಕೇ[...] ತಮ್ಮ ಸಂಬಳವನ್ನು ನನ್ನ ಕೈಗೆ ಕೊಡಲಾರಂಭಿಸಿದ[...]

ಹೊಸದಾಗಿ ಮದುವೆಯಾದವರನ್ನು ಸಂಬಂಧಿ[...] ತಮ್ಮ ಮನೆಗೆ ಊಟಕ್ಕೆ ಕರೆಯುವುದು ವಾಡಿಕೆ. ಒಮ್ಮೆ ಲಂಕೇಶರ ಸಂಬಂಧಿಯೂ ಮತ್ತು ಸ್ನೇಹಿ[...] ಆಗಿದ್ದ ಈಶ್ವರಪ್ಪನವರು ನಮ್ಮನ್ನು ಜಿಗಳಿಯಲ್ಲಿದ್ದ [...] ಮನೆಗೆ ಆಹ್ವಾನಿಸಿದ್ದರು. ನಾವಿಬ್ಬರು ಬಸ್‌ನಲ್ಲಿ [...] ಊರಿಗೆ ಹೋದೆವು. ಬಸ್ ಇಳಿದು ಅವರ ವ[...] ನಡೆದು ಹೋಗುವಾಗ ನಾನು ಲಂಕೇಶರ ಪಕ್ಕ[...] ನಡೆಯುತ್ತಿದ್ದೆ. ಆಗ ಅವರು "ಹಳ್ಳಿ ಜನ ಆಡಿಕೊಳ್ಳು[...] ಸ್ವಲ್ಪ ಹಿಂದೆ ಹಿಂದೆ ನಡೀ" ಎಂದರು. ನನಗೆ ಅದು[...] ಕಾಣಲಿಲ್ಲ, ನಾನು ಮಹಿಳೆ ಆಗಿದ್ದರಿಂದ ಬೇರೆ [...] ಕೂರುವುದಾಗಲಿ, ಗಂಡಸರು ಕುರ್ಚಿ ಮೇಲೆ ಕ[...] ನೆಲದ ಮೇಲೆ ಕೂರುವುದಾಗಲಿ ಮಾಡುತ್ತಿ[...] ಬೇರೆ ತರಹ ವರ್ತಿಸಬೇಕೆಂದು ನಂಬಿದ್ದವಳೂ [...] ನಾನು ಹಾಗೆ ಬೆಳೆದವಳೂ ಅಲ್ಲ.

ನಾನು ಕಾಲೇಜಿಗೆ ಹೋಗುತ್ತಿದ್ದಾಗ ಲಿಪ[...] ಮತ್ತು ನೈಲ್ ಪಾಲಿಶ್ ಹಾಕಿಕೊಳ್ಳುತ್ತಿದ್ದೆ. [...] ಲಂಕೇಶರಿಗೆ ನೈಲ್ ಪಾಲಿಶ್ ಇಷ್ಟವಿರಲಿಲ್ಲವಾದ್ದ[...] ಅದನ್ನು ಹಾಕುವುದನ್ನು ಬಿಟ್ಟುಬಿಟ್ಟೆ. ಅವತ್ತು ಜಿ[...] ಹೋದಾಗ ಲಿಪ್‌ಸ್ಟಿಕ್ ಹಾಕಿಕೊಂಡಿದ್ದೆ. ಊರ[...] ನಾನು ಯಾವುದೋ ನಾಟಕ ಕಂಪನಿಯಿಂದ ಬಂದವ[...] ನನ್ನನ್ನು ಮುತ್ತಿಕೊಂಡರು.

ಇನ್ನೊಮ್ಮೆ, ಸೊರಟೂರು ಎಂಬ ಊರಿ[...] ಸಂಬಂಧಿಕರು ನಮ್ಮನ್ನು ಕರೆದಿದ್ದರು. ಅವರ ಮನೆ ತು[...] ದೊಡ್ಡದು. ನಮ್ಮಿಬ್ಬರಿಗೆ ಮಹಡಿಯ ಮೇಲಿನ ರೂ[...] ಮಲಗಲು ಹೇಳಿದರು. ಅವತ್ತು ರಾತ್ರಿ, ಇ[...] ಬಾತ್‌ರೂಮಿಗೆ ಹೋಗಬೇಕೆನಿಸಿತು. ಆದರೆ ಅದಕ್ಕೆ[...] ಮನೆಯವರನ್ನು ಎದ್ದೇಳಿಸಬೇಕು, ದೊಡ್ಡದ[...] ಬಾಗಿಲುಗಳನ್ನು ತೆರೆಸಿ ಸುಮಾರು 200 ಅಡಿ [...] ಹಿತ್ತಲಿನಲ್ಲಿದ್ದ ಬಚ್ಚಲು ಮನೆಗೆ ಹೋಗಬೇಕು. ತಮ[...] ಬೇರೆಯವರಿಗೂ ಯಾಕಿಷ್ಟೆಲ್ಲ ತೊಂದರೆ [...] ಯೋಚಿಸಿದರು. ಕಿಟಕಿ ತೆರೆದು ನೋಡಿದರು. ಹೆ[...] ಹೆಂಚಿನಿಂದ ಮಾಡಿದ್ದ ಸ್ಲೋಪಿಂಗ್ ರೂಫ್ ಇತ್ತು. [...] ಕಿಟಕಿಯಿಂದಲೇ ಮಾಡಿ ಸುಮ್ಮನೆ ಮಲಗೇ ಬಿಟ್ಟ[...]

(ಮುಂದಿನ ವಾ[...]

ಸುತ್ತ-ಮುತ್ತ

ಲಕ್ಷಾಂತರ ಜನ ಹಸಿವಿನಿಂದ ನರಳುವಾಗ ಸುಮ್ಮನಿರುವ ದೇಶ, ಕೆಲವರ ಉಪವಾಸ ಸತ್ಯಾಗ್ರಹಕ್ಕೆ ಮಾತ್ರ ಬೆಚ್ಚಿ ಬೀಳುವುದು ವಿಪರ್ಯಾಸ.

-ಚಿಂತಕ ಮತ್ತು ಬರಹಗಾರ ಡಾ. ಆನಂದ್ ತೇಲ್ತುಂಬ್ಡೆ

ಅಣ್ಣಾ ಹಜಾರೆ ಅವರ ಬಂಧನವು ಖಂಡನಾರ್ಹ ಮಾತ್ರವಲ್ಲದೆ ಅದು ಅಗಾಧ ಘಾತುಕತನದಿಂದ ಕೂಡಿದ್ದು ತಪ್ಪು ಕೂಡ ಆಗಿತ್ತು, ಆದರೆ ಅಣ್ಣಾ ಹಜಾರೆ ಅವರ ತಂಡ ರೂಪಿಸಿರುವ ಜನಲೋಕಪಾಲ್ ಕರಡು ಕೂಡ ಟೀಕೆಗೆ ಅರ್ಹವಾಗಿದೆ. ಅದು ಅತಿರೇಕಗಳಿಂದ ಕೂಡಿದೆಯಲ್ಲದೆ, ನ್ಯೂನತೆಗಳಿಂದ ತುಂಬಿರುವ ವಿವೇಚನಾರಹಿತ ಕರಡಾಗಿದೆ. ಓರ್ವ ಲೋಕಪಾಲನಿಗೆ ದಿಗ್ಭ್ರಾಂತಿ ಹುಟ್ಟಿಸುವಷ್ಟು ಅಧಿಕಾರ ಕೊಡುವುದು ಭಾರತದ ಇತಿಹಾಸದಲ್ಲಿ ಎಂದೂ ನಡೆದಿಲ್ಲ ಮಾತ್ರವಲ್ಲ, ಜಗತ್ತಿನ ಇತಿಹಾಸದಲ್ಲೂ ಕಂಡುಬಂದಿಲ್ಲ.

-ನ್ಯಾಯಮೂರ್ತಿ ಎ.ಪಿ.ಶಾ

ತಮ್ಮ ಸ್ವಂತ ಗ್ರಾಮದಲ್ಲಿ ದಲಿತರನ್ನು ಪ್ರತ್ಯೇಕವಾಗಿ ಇಡುವ ಪದ್ಧತಿಯ ವಿರುದ್ಧ ಸತ್ಯಾಗ್ರಹ ಹೂಡಬೇಕೆಂದು ಅಣ್ಣಾ ಹಜಾರೆ ಅವರಿಗೆ ಎಂದೂ ಅನ್ನಿಸಿಲ್ಲ ಯಾಕೆ?

-ಚಂದ್ರ ಭಾನ್ ಪ್ರಸಾದ್

ಅಣ್ಣಾ ಹಜಾರೆ ಅವರ ಭಕ್ತರು ಎಷ್ಟು ಅಸಹಿಷ್ಣುಗಳೆಂದು ಅರಿಯಬೇಕಾದರೆ ಅವರು ನನ್ನ ಟ್ವೀಟ್‌ಗಳಿಗೆ ಕಳುಹಿಸಿರುವ ನಿಂದನಾತ್ಮಕ ಪ್ರತಿಕ್ರಿಯೆಗಳನ್ನು ನೀವು ನೋಡಬೇಕು. ಆಹಾ ಎಷ್ಟು ಧೈರ್ಯವಂತರು!

-ಚಲನಚಿತ್ರ ನಿರ್ದೇಶಕ ಮತ್ತು ಚಿಂತಕ ಮಹೇಶ್ ಭಟ್

ಈ ಸರ್ಕಾರದ ಸಮಸ್ಯೆ ಏನೆಂದರೆ ಪ್ರಧಾನಿಗೆ ಹಲವಾರು ವಕೀಲರು ಸಲಹೆಗಳನ್ನು ನೀಡಿ ಪೊಲೀಸರನ್ನು ಛೂಬಿಡುತ್ತಿದ್ದಾರೆಯೇ ಹೊರತು ಒಂದು ರಾಜಕೀಯ ಸಮಸ್ಯೆಗೆ ರಾಜಕೀಯ ಪರಿಹಾರವನ್ನು ಕಂಡುಕೊಳ್ಳಬೇಕೆಂದು ಯಾರೂ ಹೇಳುತ್ತಿಲ್ಲ.

-ಬಿಜೆಪಿ ನಾಯಕ ಅರುಣ್ ಜೈಟ್ಲಿ

ನ್ಯಾಯಾಂಗದಲ್ಲಿ ಕುರುಡುನಂಬಿಕೆ ಅತಿ ವಿಶ್ವಾಸಕ್ಕೆ ಕಾರಣವಾಗಿದೆ. ಆದರೆ ಪ್ರತಿ ತೀರ್ಪು ಹೊಣೆಗಾರಿಕೆಯ ಅಭಿವ್ಯಕ್ತಿಯಾಗಿದೆ ಎಂಬುದನ್ನು ನೆನಪಿಡುವುದು ಅಗತ್ಯ.

-ಮಾಜಿ ಲೋಕಾಯುಕ್ತ ಸಂತೋಷ್ ಹೆಗ್ಡೆ

ತನ್ನ ತಂಡದಲ್ಲಿ ಉತ್ಸಾಹ ಮೂಡಿಸಲು ಪುಣೆ (ಗ್ರಾಮೀಣ) [...] ಎಸ್‌ಪಿ ಸಂದೀಪ್ ಕಾರ್ಣಿಕ್ ಅವರು 'ಸಿಂಘಮ್' ಚಿತ್ರದ ವಿಶೇ[...] ಪ್ರದರ್ಶನವನ್ನು ಏರ್ಪಡಿಸಿದರು. ಇದಾದ ಎರಡು ದಿನಗಳ ನಂ[...] ಅದೇ ಪೊಲೀಸ್ ತಂಡ ತಮ್ಮ ಭೂಮಿಯನ್ನು ರಕ್ಷಿಸಿಕೊಳ್ಳಲು ಹೋರಾ[...] ತ್ತಿದ್ದ ರೈತರ ಮೇಲೆ ಗುಂಡು ಹಾರಿಸಿ ಮೂವರನ್ನು ಕೊಲೆಗೈದರು.

-ಪತ್ರಿಕಾ ವ[...]

ಬಲ್ಲ ಮೂಲಗಳ ಪ್ರಕಾರ ಅಣ್ಣಾ ಹಜಾರೆಯವರನ್ನು ಬಂಧಿಸು[...] ಸಲಹೆ ಬಂದದ್ದು ಕಪಿಲ್ ಸಿಬಾಲ್ ಮತ್ತು ಪಿ.ಚಿದಂಬರಂ ಎಂಬ ಶ್ರೇ[...] ವಕೀಲರಿಂದ. ಇದಕ್ಕೆ ಸಮ್ಮತಿ ನೀಡಿದ್ದು ಅರ್ಥಶಾಸ್ತ್ರಜ್ಞ, ಮ[...] ಆಡಳಿತಾಧಿಕಾರಿಯಾದ ಮನಮೋಹನ್ ಸಿಂಗ್ ಅವರು. ಅಂದರೆ ಇವ[...] ಸೇರಿ ರಾಜಕೀಯ ಸಮಸ್ಯೆಗೆ ಆಡಳಿತಾಂಗದ ಪರಿಹಾರವನ್ನು ಕಂಡುಕೊಂಡ[...]

-ಪತ್ರಿಕಾ ವ[...]

ಪ್ರಧಾನಮಂತ್ರಿಗಳಿಗೆ ಮತ್ತು ಅವರನ್ನು ಸುತ್ತುವರಿದಿರುವ ವಕೀಲರಿ[...] ಕೊನೆಗೂ ಬುದ್ಧಿ ಹೇಳಿದ್ದು ರಾಹುಲ್ ಗಾಂಧಿ. ಸೈತಾನನ ವಕೀಲನ[...] ವಾದಿಸಿದ ರಾಹುಲ್ "ಬಾಬಾ ರಾಮ್‌ದೇವ್ ಮತ್ತು ಅಣ್ಣಾ ಹಜಾ[...] ನಡುವೆ ವ್ಯತ್ಯಾಸವಿದೆ" ಎಂದು ಅವರೆಲ್ಲರಿಗೆ ಮನವರಿಕೆ ಮಾಡಿದರು[...]

-ಪತ್ರಿಕಾ ವ[...]


ರಾಲೇಗಾಂವ್ ಸಿದ್ಧಿ ಎಂಬ ಸುವರ್ಣ ಗ್ರಾಮ



• ಗೌರಿ ಲಂಕೇಶ್
editorlankesh@gmail.com

…ಇವತ್ತಿಗೆ ಅಣ್ಣಾ ಹಜಾರೆ ಉಪವಾಸ ಸತ್ಯಾಗ್ರಹ …ಂಭಿಸಿ ಹತ್ತು ದಿನಗಳಾಗಿವೆ. ಹತ್ತುದಿನ ಊಟ …ರುವುದು ಸಾಮಾನ್ಯ ಸಂಗತಿಯಲ್ಲ. ಇವತ್ತು ಅಣ್ಣಾ …ರ ಮುಖ ಬಾಡಿದ್ದರೂ, ದನಿವು ಅವರ ದನಿಯಲ್ಲಿ …ಸುತ್ತಿದ್ದರೂ ಅವರ ಆತ್ಮಸ್ಥೈರ್ಯ ಮಾತ್ರ ಇನ್ನೂ …ಲ್ಲ. ಇವತ್ತಿಗೂ ಜನಲೋಕಪಾಲ್‌ಅನ್ನು ಜಾರಿಗೆ …ರೇಕೆಂಬ ಅವರ ನಿಲುವು ಸಡಿಲಗೊಂಡಿಲ್ಲ, ಅವರ …ರಾಟಕ್ಕೆ ದನಿವು ಎಂಬುದೂ ತಾಕಿಲ್ಲ.

…74 ವರ್ಷ ಪ್ರಾಯದ ಅಣ್ಣಾ ಹಜಾರೆಗೆ ಇಷ್ಟು … ಬರುತ್ತಿರುವುದು ಎಲ್ಲಿಂದ ಎಂದು ಅರಿಯಬೇಕಾದರೆ



…ರು ರಾಲೇಗಾಂವ್ ಸಿದ್ಧಿ ಗ್ರಾಮದತ್ತ ನೋಡಬೇಕು. …ಲ್ಲಿ ಅಣ್ಣಾ ಅವರು ತಂದಿರುವ ಸುಧಾರಣೆಗಳನ್ನು …ದುಕೊಳ್ಳಬೇಕು. ಹಾಗೆಯೇ ಆ ಬದಲಾವಣೆಗಳನ್ನು …ವರು ಹೇಗೆ ತಂದರು ಎಂಬುದನ್ನು ನೋಡಿದಾಗ ಅಣ್ಣಾ …ವರ ನೈತಿಕ ಶಕ್ತಿ ಮತ್ತು ಅವರಲ್ಲಿರುವ ಹಲವು …ಮಿತಿಗಳೂ ಅರ್ಥವಾಗುತ್ತವೆ.

… 1975ರ ತನಕ ರಾಲೇಗಾಂವ್ ಸಿದ್ಧಿ ಗ್ರಾಮವು ಬಡತನ, …ದ್ಯೋಗ, ವಲಸೆ, ಅಪೌಷ್ಟಿಕತೆ, ಮತ್ತೆಮತ್ತೆ ಕಾಡುತ್ತಿದ್ದ …ಗಾಲ ಮತ್ತು ಪರಿಸರದ ಅವನತಿಯಿಂದ ತತ್ತರಿಸುತ್ತಿತ್ತು. …ಯಲ್ಲಿ 40 ಕ್ಕೂ ಹೆಚ್ಚು ಕಳ್ಳಬಟ್ಟಿಗಳಿದ್ದು ಜನ ಕುಡಿತಕ್ಕೆ …ಸರಾಗಿದ್ದರು. ಭಾರತದ ಬಹಳಷ್ಟು ಬಡಹಳ್ಳಿಗಳಂತೆ …ಲೇಗಾಂವ್ ಸಿದ್ಧಿಯಲ್ಲೂ ಗಲೀಜು, ಅರಾಜಕತೆ, …ಸೋಲ, ನಷ್ಟ ಇತ್ಯಾದಿ ತಾಂಡವವಾಡುತ್ತಿದ್ದವು.

… ಆಗ ಭಾರತ ಸೈನ್ಯದಿಂದ ನಿವೃತ್ತಿ ಪಡೆದ ಅಣ್ಣಾ …ಜಾರೆ ತಮ್ಮ ಹಳ್ಳಿಗೆ ಹಿಂದಿರುಗಿದರು. ಮಹಾತ್ಮಾ …ಂಧಿ ಮತ್ತು ವಿವೇಕಾನಂದರಿಂದ ಪ್ರಭಾವಿತರಾಗಿದ್ದ ಅಣ್ಣಾ …ಮ್ಮ ಹಳ್ಳಿಯನ್ನು ಮತ್ತು ಅಲ್ಲಿ ವಾಸಿಸುತ್ತಿದ್ದ ಜನರನ್ನು …ದ್ಧಾರಮಾಡಬೇಕೆಂದು ನಿರ್ಧರಿಸಿದರು. ಆದರೆ ಇದು …ಬ್ಬರೇ ಮಾಡುವಂತಹದ್ದಲ್ಲ ಮತ್ತು ಒಬ್ಬರೇ ಮಾಡಲೂ …ಡದು, ಬದಲಾಗಿ ಇಡೀ ಹಳ್ಳಿಯೇ ಭಾಗವಹಿಸಬೇಕೆಂದು …ರ್ಧರಿಸಿದರು.

… ರಾಲೇಗಾಂವ್ ಸಿದ್ಧಿಯ ಜನಸಂಖ್ಯೆ ಇವತ್ತು ಸುಮಾರು …ರಡೂವರೆ ಸಾವಿರ. ಅಲ್ಲಿ 434 ಮನೆಗಳಿದ್ದು, 46 …ಲಿತ ಸಂಸಾರಗಳಿದ್ದರೆ ಉಳಿದವರೆಲ್ಲ ಮರಾಠರು. ಸುಮಾರು …10 ಹೆಕ್ಟೇರ್ ಕೃಷಿಭೂಮಿ ಇದ್ದು ಕೇವಲ ಆರು …ಸಾರಗಳು ಮಾತ್ರ ನಾಲ್ಕು ಹೆಕ್ಟೇರ್‌ಗಿಂತ ಹೆಚ್ಚು …ಮಿಯ ಒಡೆಯರಾಗಿದ್ದಾರೆ. ಹೆಚ್ಚಿನ ಜನ ಒಂದರಿಂದ …ಲ್ಕು ಹೆಕ್ಟೇರ್ ಭೂಮಿಯನ್ನು ಹೊಂದಿದ್ದಾರೆ. ಕೆಲವು …ರಹಿತರೂ ಇದ್ದಾರೆ.

… ಭೌಗೋಳಿಕವಾಗಿ ರಾಲೇಗಾಂವ್ ಸಿದ್ಧಿ ಇರುವುದು …ಹಾರಾಷ್ಟ್ರದ ಅಹಮದ್‌ನಗರ್ ಜಿಲ್ಲೆಯಲ್ಲಿ. ಈ ಜಿಲ್ಲೆಯ …ಹಳಷ್ಟು ಭಾಗ ಇವತ್ತಿಗೂ ನೀರಿಲ್ಲದ ಶುಷ್ಕ ಭೂಮಿ …ಗಿದೆ. ಆದರೆ ರಾಲೇಗಾಂವ್ ಸಿದ್ಧಿ ಮಾತ್ರ ಹಸಿರಿನಿಂದ …ಂಬಿ ನಳನಳಿಸುತ್ತಿದೆ.

… ಇದಕ್ಕೆ ಮುಖ್ಯ ಕಾರಣ 1975 ರಲ್ಲಿ ಅಣ್ಣಾ …ತ್ತಿಕೊಂಡ ಮಳೆ ನೀರು ಸಂಗ್ರಹಣಾ ಯೋಜನೆ. ಹಳ್ಳಿಯ …ರನ್ನೆಲ್ಲ ಒಟ್ಟುಗೂಡಿಸಿ ರಾಲೇಗಾಂವ್ ಸುತ್ತ ಇರುವ …ರಿಂದ 45 ಮೀಟರ್ ಎತ್ತರದ ಗುಡ್ಡಗಳಲ್ಲಿ ಹಲವಾರು …ಂಡಗಳನ್ನು, ಒಡ್ಡುಗಳನ್ನು, ಕೊಳಗಳನ್ನು ನಿರ್ಮಿಸಿದರು. …ವಿಧ ಪ್ರಮಾಣದ, ವಿವಿಧ ರೀತಿಯ ನಾಲಾಗಳನ್ನು …ಸಿದರು. ಇದೆಲ್ಲದರಿಂದಾಗಿ ಆರು ನೂರಕ್ಕೂ ಹೆಚ್ಚು …ಕ್ಟೇರ್‌ಗಳಲ್ಲಿ ಕೃಷಿ ಮಾಡಲು ಸುಮಾರು ಮೂರು ಲಕ್ಷ …ಬಿಕ್ ಮೀಟರ್‌ನಷ್ಟು ಮಳೆ ನೀರು ಸಂಗ್ರಹಿಸಿಡಲು

ಸಾಧ್ಯವಾಯಿತು. ಮಾತ್ರವಲ್ಲ, ಮಳೆ ನೀರನ್ನು ಭೂಮಿಯಲ್ಲಿ ಬಂಧಿಸಿಡಲು ಈ ಗುಡ್ಡಗಳ ಮೇಲೆ ಸಸಿಗಳನ್ನು ನೆಟ್ಟರು. ಇಲ್ಲಿಯತನಕ ಸುಮಾರು ನಾಲ್ಕು ಲಕ್ಷ ಮರಗಳನ್ನು ಈ ರೀತಿ ಬೆಳೆಸಲಾಗಿದೆ. ಮಳೆ ನೀರನ್ನು ಹೀಗೆ ಸಂಗ್ರಹಿಸಿದ್ದರಿಂದ ನೂರು ಅಡಿ ಆಳಕ್ಕೆ ಕುಗ್ಗಿದ್ದ ಅಂತರ್ಜಲ 40-50 ಅಡಿಗೆ ಏರಿತು, ಹಳ್ಳಿಯಲ್ಲಿದ್ದ ಕೆರೆ-ಬಾವಿಗಳಲ್ಲಿ ನೀರು ತುಂಬಿತು. ಈಗ ಆಕಸ್ಮಾತ್ ಒಂದು ವರ್ಷ ಸರಿಯಾಗಿ ಮಳೆ ಬೀಳದಿದ್ದರೂ ರಾಲೇಗಾಂವ್ ಸಿದ್ಧಿಯಲ್ಲಿ ನೀರಿಗೆ ಬರ ಇರುವುದಿಲ್ಲ.

ಹೀಗೆ ಮಳೆ ನೀರನ್ನು ಹದ್ದುಬಸ್ತಿಗೆ ತೆಗೆದುಕೊಂಡ ನಂತರ ಅಲ್ಲಿನ ಕೃಷಿ ಪದ್ಧತಿಯಲ್ಲಿ ಬದಲಾವಣೆ ತರಲಾಯಿತು. ಹೆಚ್ಚು ನೀರು ಕೇಳುವ ಕಬ್ಬು ಬೆಳೆಯುವುದನ್ನು ನಿಲ್ಲಿಸಿ ಬೇಳೆ, ಈರುಳ್ಳಿ, ತರಕಾರಿ, ಬಾಳೆ ಇತ್ಯಾದಿಗಳನ್ನೆ ಬೆಳೆಯಲಾಯಿತು. ಇದೆಲ್ಲದರಿಂದ ಊರಿನ ಜನರ ಆದಾಯ ಹೆಚ್ಚಿತು.

ಇದೆಲ್ಲ ನಡೆಯುತ್ತಿರುವಾಗಲೇ ಅಣ್ಣಾ ತಾವು ಸೈನ್ಯದಲ್ಲಿದ್ದಾಗ ಉಳಿಸಿದ್ದ ಹಣದಲ್ಲಿ ಹಳ್ಳಿಯ ದೇಗುಲವನ್ನು ರಿಪೇರಿ ಮಾಡಿದರು. ಅದರ ಪಕ್ಕದಲ್ಲೇ ತಾವು ವಾಸಿಸಲು ಒಂದು ಪುಟ್ಟ ಕೊಠಡಿಯನ್ನು ಕಟ್ಟಿದರು. ಊರಿನ ಜನರೆಲ್ಲ ಅಣ್ಣಾ ಅವರ ಸಲಹೆ ಕೇಳಲು, ಮಾರ್ಗದರ್ಶನ ಪಡೆಯಲು ದೇಗುಲಕ್ಕೇ ಬರಲಾರಂಭಿಸಿದರು. ಅಣ್ಣಾ ಅವರ ಪ್ರಕಾರ "ದೇವರು ದೇಗುಲದಲ್ಲಿಲ್ಲ, ಬದಲಾಗಿ ಜನರ ಶ್ರಮದಲ್ಲಿದ್ದಾನೆ. ದೇಗುಲವು ಊರಿನ ಚಟುವಟಿಕೆಗಳ ಕೇಂದ್ರವಾಗಿದೆ." ಇದರಿಂದ ಆಗಿರುವ ಒಂದು ಉಪಯೋಗ ಯಾವುದೆಂದರೆ ದೇವಾಲಯದ ಆವರಣದಲ್ಲಿ ತೆಗೆದುಕೊಂಡ ನಿರ್ಧಾರಗಳನ್ನು ಜನ ಉಲ್ಲಂಘಿಸದೇ ಪಾಲಿಸುತ್ತಾರೆ.

ಸ್ವಲ್ಪದಿನಗಳ ನಂತರ ಬರೀ ಆರ್ಥಿಕ ಬದಲಾವಣೆ ಸಾಕಾಗುವುದಿಲ್ಲ, ಅದರೊಂದಿಗೆ ಸಾಮಾಜಿಕ ಬದಲಾವಣೆಯೂ ಅಗತ್ಯ ಎಂದು ನಿರ್ಧರಿಸಿದ ಅಣ್ಣಾ ಪಂಚಸೂತ್ರಗಳನ್ನು ಜಾರಿಗೆ ತಂದರು. ಆ ಪಂಚಸೂತ್ರಗಳು: ಕುಟುಂಬ ಯೋಜನೆ, ಪಾನ ನಿಷೇಧ, ದನ ಕರುಗಳನ್ನು ಎಲ್ಲೆಂದರಲ್ಲಿ ಬಿಟ್ಟು ಮೇಯಿಸುವಂತಿಲ್ಲ, ಮರಗಳನ್ನು ಕಡಿಯುವಂತಿಲ್ಲ ಮತ್ತು ಊರಿನ ಒಳಿತಿಗಾಗಿ ಎಲ್ಲರೂ ಶ್ರಮದಾನ ಮಾಡಬೇಕು.


ರಾಲೇಗಾಂವ್ ಸಿದ್ಧಿಯಲ್ಲಿ ಚೆಕ್‌ಡ್ಯಾಂ

ಮೊದಲು ಅಣ್ಣಾ ಊರಿನಲ್ಲಿ ಮಾದಕಗಳ ತಯಾರಿಕೆ ಮತ್ತು ಸೇವನೆ, ಎರಡನ್ನೂ ನಿಷೇಧಿಸಬೇಕೆಂದು ಒತ್ತಾಯ ಮಾಡಿದರು. ಇದಕ್ಕೆ ಹಳ್ಳಿಯ ಬಹಳಷ್ಟು ಜನ ಒಪ್ಪಿದರು. ಆದರೆ ಒಪ್ಪದಿದ್ದ ಕೆಲವರನ್ನು ಮೊದಲು ಮಾತಿನ ಮೂಲಕ ಪರಿವರ್ತಿಸಲು ಪ್ರಯತ್ನಿಸಲಾಯಿತು, ಆನಂತರ ಬೆದರಿಸಲಾಯಿತು, ಅದಕ್ಕೂ ಒಪ್ಪದಿದ್ದಾಗ ಅವರನ್ನು ದೇಗುಲದ ಮುಂದೆ ಇರುವ ಕಂಬಕ್ಕೆ ಕಟ್ಟಿಹಾಕಿ ಅಣ್ಣಾ ಹಜಾರೆಯವರು ಥಳಿಸುವ ಮೂಲಕ ದಾರಿಗೆ ತಂದರು. ಇವತ್ತಿಗೂ ಕುಡುಕರನ್ನು ಆ ಕಂಬಕ್ಕೆ ಕಟ್ಟಿ ಥಳಿಸಲಾಗುತ್ತದೆ. ಅದನ್ನು ಸ್ವತಃ ಅಣ್ಣಾ ಅವರೇ ಮಾಡುತ್ತಾರೆ ಅಥವಾ ಅವರು ನೇಮಿಸಿರುವ ತರುಣ ಮಂಡಳಿಯ ಸದಸ್ಯರು ಮಾಡುತ್ತಾರೆ. ಅಷ್ಟೇ ಅಲ್ಲ, ಇಡೀ ಊರಿನಲ್ಲಿ ಸಿಗರೇಟ್ ಮತ್ತು ಬೀಡಿ ಕೂಡ ನಿಷೇಧಕ್ಕೆ ಒಳಪಟ್ಟಿವೆ.

ದನಕರುಗಳನ್ನು ಎಲ್ಲೆಂದರಲ್ಲಿ ಬಿಟ್ಟು ಮೇಯಿಸುವ ಬದಲು ನಿರ್ದಿಷ್ಟ ಪ್ರದೇಶಗಳಲ್ಲಿ ಹುಲ್ಲನ್ನು ಬೆಳೆಯಲಾಗುತ್ತದೆ. ಇದರಿಂದಾಗಿ ಊರಿನ ಜಾನುವಾರುಗಳಿಗೆ ಅಗತ್ಯವಾದಷ್ಟು ಮೇವು ಸಿಗುತ್ತದೆಯಲ್ಲದೆ ಹೈನುಗಾರಿಕೆಯಿಂದಲೂ ಆದಾಯ ಹೆಚ್ಚಾಗಿದೆ.

ಅಣ್ಣಾ ಜಾರಿಗೆ ತಂದಿರುವ ಕುಟುಂಬ ಯೋಜನೆಯ ಪ್ರಕಾರ ಯಾರೂ ಇಬ್ಬರಿಗಿಂತ ಹೆಚ್ಚು ಮಕ್ಕಳನ್ನು ಹಡೆಯುವಂತಿಲ್ಲ. ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗಿದೆ. ಆಕಸ್ಮಾತ್ ಯಾರಾದರೂ ಇದನ್ನು ಉಲ್ಲಂಘಿಸಿದರೆ ಅವರಿಗೆ ಬಲವಂತವಾಗಿ ಸಂತಾನಹರಣ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಲಾಗುತ್ತದೆ. ಇವತ್ತು ಈ ಕುಟುಂಬ ಯೋಜನೆಯಿಂದಾಗಿ ಆ ಗ್ರಾಮದ ಜನಸಂಖ್ಯೆ ನಿಯಂತ್ರಣದಲ್ಲಿದೆ ಮಾತ್ರವಲ್ಲ ಇದು ಬಡತನ ನಿವಾರಣೆಗೂ ನೆರವಾಗಿದೆ.

ಹಾಗೆಯೇ ಮರಗಳನ್ನು ಕಡಿಯದಿರುವುದರಿಂದ ಅಲ್ಲಿನ ಪರಿಸರಕ್ಕೆ ರಕ್ಷಣೆ ಸಿಕ್ಕಿದೆ ಮತ್ತು ಅಂತರ್ಜಲವನ್ನು ಕಾಪಾಡಿದೆ.

'ಶ್ರಮಶಕ್ತಿ ಮೂಲಕ ಗ್ರಾಮದ ವಿಕಾಸ' ಎಂಬ ಅಣ್ಣಾ ಅವರ ಸಿದ್ಧಾಂತದ ಪ್ರಕಾರವೇ ರಾಲೇಗಾಂವ್ ಸಿದ್ಧಿಯ ಜನ ತಮ್ಮ ಮಕ್ಕಳಿಗೆ ಶಾಲಾ ಕಟ್ಟಡವನ್ನು ಕಟ್ಟಿದ್ದಾರೆ. ಅದಕ್ಕೊಂದು ಹಾಸ್ಟಲ್ ಕೂಡ ಇದೆ. ಸಮುದಾಯ ಶೌಚಾಲಯಗಳಿದ್ದು ಅದನ್ನು ಜನರೇ ಸ್ವಚ್ಛಗೊಳಿಸುತ್ತಾರೆ. ಆ ಶೌಚಾಲಯಗಳಿಗೆ ಹತ್ತು ಬಯೋಗ್ಯಾಸ್ ಘಟಕಗಳನ್ನು ಅಳವಡಿಸಲಾಗಿದ್ದು ಅವುಗಳಿಂದ ಊರಿಗೆ ಅಗತ್ಯವಾದ ಅಡುಗೆ ಅನಿಲವನ್ನು ತಯಾರಿಸಲಾಗುತ್ತದೆ. ಹಳ್ಳಿಯ ರಸ್ತೆಬದಿ ದೀಪಗಳಿಗೆ ಸೋಲಾರ್ ಪ್ಯಾನೆಲ್‌ಗಳನ್ನು ಅಳವಡಿಸಲಾಗಿದ್ದು ಅಲ್ಲಿ ಎಂದೂ ಮನೆ ದೀಪಗಳಿಗೆ ವಿದ್ಯುತ್ ಶಕ್ತಿಯ ಕೊರತೆ ಇಲ್ಲದಂತಾಗಿದೆ.

ಕೆಲವು ಗ್ರಾಮ ಅಭಿವೃದ್ಧಿ ಯೋಜನೆಗಳಿಗೆ ಅಣ್ಣಾ ಅವರೇ ಬ್ಯಾಂಕ್ ಮತ್ತು ಇತರ ಸಂಸ್ಥೆಗಳಿಂದ ಸಾಲ ಪಡೆದು, ಜನರೊಂದಿಗೆ ಸೇರಿ ದುಡಿದು ಅದನ್ನು ತೀರಿಸಿದ್ದಾರೆ. ಹಲವೊಮ್ಮೆ ಊರಿನ ಜನರೆಲ್ಲ ತಮ್ಮ ಭೂಮಿಯನ್ನು ಒತ್ತೆ ಇಟ್ಟು ಸಾಲ ಪಡೆದು ಆನಂತರ ಅದನ್ನು ತೀರಿಸಿದ್ದಾರೆ. ಹಳ್ಳಿಯಲ್ಲಿ ಈಗ 14 ಕಾರ್ಯಕಾರಿ ಸಮಿತಿಗಳಿದ್ದು ಅವು ನೀರಿನ ಸರಬರಾಜಿನಿಂದ ಹಿಡಿದು ಸಹಕಾರಿ ಸಂಘ, ಬೀಜ ಬ್ಯಾಂಕ್, ಹಾಲು ಬ್ಯಾಂಕ್, ಶಿಕ್ಷಣದ ತನಕ ಎಲ್ಲ ನಿರ್ಧಾರಗಳನ್ನು ತೆಗೆದುಕೊಳ್ಳುತ್ತವೆ.

ರಾಲೇಗಾಂವ್ ಸಿದ್ಧಿಯಲ್ಲಿ ಯಾವುದಕ್ಕೂ ಚುನಾವಣೆಗಳು ನಡೆಯುವುದಿಲ್ಲ. ಅಣ್ಣಾ ಅವರ ಪ್ರಕಾರ ಚುನಾವಣೆಗಳ ಜೊತೆಗೆ ರಾಜಕೀಯ ಬೆಸೆದುಕೊಂಡಿರುವುದರಿಂದ ಅವು ಜನಸಮುದಾಯದಲ್ಲಿ ಬಿರುಕುಗಳನ್ನು ಮೂಡಿಸುತ್ತವೆ ಮತ್ತು ಪೈಪೋಟಿಯನ್ನು ಹೆಚ್ಚಿಸುತ್ತವೆ. ಜೊತೆಗೆ ಭ್ರಷ್ಟಾಚಾರವನ್ನೂ ತರುತ್ತದೆ. ಆದ್ದರಿಂದ ರಾಲೇಗಾಂವ್‌ನ ಪಂಚಾಯತಿಗಾಗಲಿ, ಸಹಕಾರಿ ಸಂಘಕ್ಕಾಗಲಿ ಕಳೆದ 25 ವರ್ಷಗಳಿಂದ ಚುನಾವಣೆಗಳು ನಡೆದಿಲ್ಲ. ಬದಲಾಗಿ ತಮ್ಮ ನಾಯಕರನ್ನು ಒಮ್ಮತದಿಂದ ಆಯ್ಕೆ ಮಾಡಲಾಗುತ್ತದೆ. ಹಾಗೆಯೇ ಅಣ್ಣಾ ಅವರ ಆಶಯದಂತೆ ಪಂಚಾಯತಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರನ್ನೇ ನೇಮಿಸಲಾಗುತ್ತದೆ.

ಅಂದಹಾಗೆ ರಾಜ್ಯ ಮತ್ತು ರಾಷ್ಟ್ರಮಟ್ಟದ ಚುನಾವಣೆಗಳು ನಡೆದಾಗಲೂ ಈ ಗ್ರಾಮದಲ್ಲಿ ಪೋಸ್ಟರ್‌ಗಳನ್ನು ಅಂಟಿಸುವಂತಿಲ್ಲ, ಭಿತ್ತಿಪತ್ರಗಳನ್ನು ಹಂಚುವಂತಿಲ್ಲ, ನೇರವಾಗಿ ಚುನಾವಣಾ ಪ್ರಚಾರವನ್ನೂ ಮಾಡುವಂತಿಲ್ಲ.

ರಾಲೇಗಾಂವ್ ಸಿದ್ಧಿಯ ಇನ್ನೊಂದು ವಿಶೇಷತೆ ಏನೆಂದರೆ ಇವತ್ತಿಗೂ ಅಲ್ಲಿ ಒಂದೇ ಒಂದು ಟಿವಿ ಸೆಟ್ ಇರುವುದು. ಅದೂ ದೇಗುಲದಲ್ಲಿದ್ದು ಅದರಲ್ಲಿ ವಾರ್ತೆ ತರಹದ ಕಾರ್ಯಕ್ರಮಗಳನ್ನು ಮಾತ್ರ ನೋಡಲಾಗುತ್ತದೆ. ಯಾಕೆಂದರೆ ಆ ಊರಿನಲ್ಲಿ ಟಿವಿ ಮತ್ತು ಕೇಬಲ್ ಮಾತ್ರವಲ್ಲ; ಜೊತೆಗೆ ಸಿನಿಮಾಗಳನ್ನು ಮತ್ತು ಸಿನಿಮಾ ಹಾಡುಗಳನ್ನೂ ನಿಷೇಧಿಸಲಾಗಿದೆ. 'ಸಂತ ತುಕಾರಾಮ್' ಮತ್ತು 'ಸಂತ ಗ್ಯಾನೇಶ್ವರ' ತರಹದ ಸಿನಿಮಾಗಳು ಮಾತ್ರ ಅಲ್ಲಿ ಪ್ರದರ್ಶನಗೊಂಡಿವೆ.

ಇನ್ನು ಊರಿನ ಹಬ್ಬಗಳು ಮತ್ತು ಮದುವೆಗಳು ಸಾಮೂಹಿಕವಾಗಿ ದೇಗುಲದಲ್ಲೇ ನಡೆಯುತ್ತವೆ. ಯಾರೂ ತಮ್ಮ ಮನೆಗಳಲ್ಲಿ ಹಬ್ಬ ಅಥವಾ ಮದುವೆಯನ್ನು ಮಾಡುವಂತಿಲ್ಲ. ಇದಕ್ಕೆ, ಹಬ್ಬ ಮತ್ತು ಮದುವೆಗೆಂದು ರೈತರು ಸಾಲ ಮಾಡಿ ಆರ್ಥಿಕ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳಬಾರದು ಎಂಬುದು ಒಂದು ಕಾರಣವಾದರೆ, ಎರಡನೆ ಕಾರಣ ಸರಳ ಮತ್ತು ಸಾಮೂಹಿಕ ಮದುವೆಗಳು ಸಮುದಾಯದ ಒಗ್ಗಟ್ಟನ್ನು ಹೆಚ್ಚಿಸುತ್ತವೆ ಎಂಬುದು. ಇಂತಹ ಹಬ್ಬ ಮತ್ತು ಮದುವೆ ಸಂದರ್ಭಗಳಲ್ಲೂ ಲೌಡ್‌ಸ್ಪೀಕರ್‌ಗಳಲ್ಲಿ ಧಾರ್ಮಿಕ ಹಾಡುಗಳನ್ನು ಮತ್ತು ಭಜನೆಗಳನ್ನು ಮಾತ್ರ ಹಾಕಲಾಗುತ್ತದೆ. ಹಾಗೆಯೇ ಊರಿನ ತರುಣ ಮಂಡಳಿಯೇ ಅಡುಗೆ ಮಾಡಿ ಎಲ್ಲರಿಗೆ ಬಡಿಸುತ್ತದೆ.

ರಾಲೇಗಾಂವ್ ಸಿದ್ಧಿಯಲ್ಲಿ 46 ದಲಿತ ಕುಟುಂಬಗಳಿದ್ದು ಅವರ ಉದ್ಧಾರಕ್ಕೂ ಅಣ್ಣಾ ಶ್ರಮಿಸಿದ್ದಾರೆ. ಮೊದಮೊದಲು ಈ ದಲಿತ ಕುಟುಂಬಗಳು ಊರಿನ ಆಚೆ ವಾಸಿಸುತ್ತಿದ್ದರಲ್ಲದೆ ಇತರೆ ಗ್ರಾಮಗಳಂತೆ ಇಲ್ಲಿಯೂ ಅಸ್ಪೃಶ್ಯತೆಯನ್ನು ಪಾಲಿಸಲಾಗುತ್ತಿತ್ತು. ಆದರೆ ಅಸ್ಪೃಶ್ಯತೆ ವಿರುದ್ಧ ಹೋರಾಡಿದ ಅಣ್ಣಾ ದಲಿತರಿಗೆ ದೇಗುಲಕ್ಕೆ ಪ್ರವೇಶ ನೀಡಿದರು. ಊರಿನ ಬಾವಿಗಳಿಂದ ಇತರರಂತೆ ದಲಿತರೂ ನೀರು ಪಡೆಯುವಂತೆ ಮಾಡಿದರು. ಆನಂತರ ದೇಗುಲದ ಹತ್ತಿರವೇ ಅವರೆಲ್ಲರಿಗೆ ಮನೆಗಳನ್ನು ಕಟ್ಟಿಸಿಕೊಟ್ಟರು. ಇದಕ್ಕಾಗಿ ಊರಿನ ಎಲ್ಲ ಜನರೂ ಶ್ರಮದಾನ ಮಾಡಿದರು. ದಲಿತ ಯುವಕರನ್ನೂ ತಮ್ಮ ತರುಣ ಮಂಡಳಿಯಲ್ಲಿ ಸೇರಿಸಿಕೊಂಡು ಎಲ್ಲ ನಿರ್ಧಾರಗಳಲ್ಲೂ ಅವರ ಭಾಗವಹಿಸುವಿಕೆ ಇರುವಂತೆ ನೋಡಿ ಕೊಂಡರು. ಯಾವುದೇ ಹೊಸ ಯೋಜನೆ ಜಾರಿಯಾಗುವಾಗ ಮೊದಲು ದಲಿತ ಕುಟುಂಬಗಳಿಗೆ ಅದರ ಲಾಭಸಿಗುವಂತೆ ಎಚ್ಚರ ವಹಿಸಿದರು. ದಲಿತರ ಮದುವೆಗಳನ್ನು ಇತರೆ ಜಾತಿಗಳವರೊಂದಿಗೆ ಮಾಡಿಸಿದರು. ತರುಣ ಮಂಡಳಿಯಲ್ಲಿ ದಲಿತರೂ ಹಬ್ಬ ಹರಿದಿನಗಳಲ್ಲಿ ಅಡುಗೆ ಮಾಡಿ ಬಡಿಸುವ ಮೂಲಕ ಅಸ್ಪೃಶ್ಯತೆ ಇಲ್ಲದಂತೆ ನೋಡಿಕೊಂಡರು.

1970 ರಲ್ಲಿ ಏನಾಯಿತೆಂದರೆ ಕೆಲ ದಲಿತ ಕುಟುಂಬಗಳು ಬ್ಯಾಂಕಿನಿಂದ 22,000 ರೂಪಾಯಿ ಸಾಲಾ

6ನೇ ಪುಟಕ್ಕೆ...

ಕರಾವಳಿ: ಮಹತ್ವಾಕಾಂಕ್ಷೆಗೆ ಬಲಿಯಾಯ್ತು ಜಿ ಗ್ರೂಪ್’!

ಎಲ್ಲವೂ ಸರಿಯಾಗಿದ್ದಿದ್ದರೆ ಕರ್ನಾಟಕ, ಕೇರಳದ ಪಾಲಿಗೆ ಒಬ್ಬ ಸಹಕಾರಿ ದಿಗ್ಗಜ ಹುಟ್ಟಿಕೊಳ್ಳುತ್ತಿದ್ದ. ಅಂತಹ ಸಾಮರ್ಥ್ಯ ಬಂದಿಯಡ್ಕದ ಡಾ. ರಾಜೇಶ್ ಆಳ್ವ ಎಂಬ ಆಸಾಮಿಗಿತ್ತು. ಆ ಪರಿಯ ಚಿಂತನೆ, ಪ್ಲಾನ್‌ಗಳನ್ನು ಗುಣಿಸಿ ಗುಡ್ಡೆ ಹಾಕಿಕೊಂಡಿದ್ದ. ಮಧ್ಯಮ ವರ್ಗದವರ ಮಧ್ಯೆ ಒಂದು ‘ಸೂಪರ್’ ಯೋಜನೆಯನ್ನು ಹುಟ್ಟುಹಾಕಿ, ಅದನ್ನು ಯಶಸ್ವಿಯಾಗಿಯೂ ನಡೆಸಿಕೊಂಡು ಬಂದು ಆರ್ಥಿಕ ವ್ಯವಸ್ಥೆಯಲ್ಲಿ ಹೊಸದೊಂದು ಶಕೆ ಶುರು ಮಾಡುವ ಭರವಸೆಯಲ್ಲಿದ್ದ ವ್ಯಕ್ತಿ ಬಹಳಷ್ಟು ಮಹತ್ವಾಕಾಂಕ್ಷೆ, ಚೂರೇಚೂರು ಸ್ವಾರ್ಥ, ಅಸ್ಪಷ್ಟ ವ್ಯವಹಾರದ ಕಾರಣಗಳಿಂದ ಚೀಟಿಂಗ್ ಕೇಸ್ ಗೀಚಿಸಿಕೊಂಡು ಜೈಲು ಸೇರಿದ್ದು ದುರದೃಷ್ಟ.

ಒಂದು ಅದ್ಭುತ ಯೋಜನೆ, ಅಷ್ಟೇ ಚತುರ ಜನ, ಸಾವಿರಾರು ಷೇರುದಾರರು, ಕೋಟಿ ಕೋಟಿ ಹಣ; ಕರಾವಳಿ ತೀರದಲ್ಲಿ ಇತ್ತೀಚೆಗೆ ತಲೆ ಎತ್ತಿ ಈಗ ತಲೆಬಗ್ಗಿಸುವ ಸ್ಥಿತಿ ತಂದುಕೊಂಡಿರುವ ‘ಜಿ ಗ್ರೂಪ್’ನ ಕಥೆಯಿದು. ಅತ್ತ ಕೇರಳ, ಇತ್ತ ಕರ್ನಾಟಕ ಎರಡೂ ಕಡೆಯೂ ಕಾಲೂರಿ ನಿಂತ ‘ಜಿ’ ಗ್ರೂಪ್ ಎಂಬ ಸಂಸ್ಥೆಯ ತೇಪೆಗಳು ಈಗ ಹೊರ ಬರುತ್ತಿವೆ. ‘ಗ್ರಾಮೀಣ ಸೂಪರ್ ಮಾರ್ಕೆಟ್’ ಅಂತ ನೇಮ್‌ಬೋರ್ಡ್ ತಗುಲಿಸಿಕೊಂಡ ಪುತ್ತೂರಿನ ಶಾಖೆ ತನ್ನ ಷೇರುದಾರರಿಗೆ ಕೊಡಬೇಕಾದ ಹಣವನ್ನು, ಲಾಭಾಂಶವನ್ನೂ ಕೊಡದೆ ಯಾಮಾರಿಸಲು ಹೋಗಿ ಚೀಟಿಂಗ್ ಕೇಸ್ ಜಡಿಸಿಕೊಂಡಿದೆ, ಮಾತ್ರವಲ್ಲ ಅದರ ಚೇರ್ಮನ್ ರಾಜೇಶ್ ಆಳ್ವ ಮತ್ತು ಎಂ.ಡಿ. ಪಾಂಡುರಂಗ ಭಟ್ ಜೈಲಿನ ಕಂಬಿಗಳ ಹಿಂದೆ ಪೋಸು ಕೊಡುವಂತಾಗಿದೆ.

ಏನಿದು ‘ಜಿ’ ಗ್ರೂಪ್?

ಎಲ್ಲವೂ ಸರಿಯಾಗಿದ್ದಿದ್ದರೆ ಕರ್ನಾಟಕ, ಕೇರಳದ ಪಾಲಿಗೆ ಒಬ್ಬ ಸಹಕಾರಿ ದಿಗ್ಗಜ ಹುಟ್ಟಿಕೊಳ್ಳುತ್ತಿದ್ದ. ಅಂತಹ ಸಾಮರ್ಥ್ಯ ಬಂದಿಯಡ್ಕದ ಡಾ. ರಾಜೇಶ್ ಆಳ್ವ ಎಂಬ ಆಸಾಮಿಗಿತ್ತು, ಆ ಪರಿಯ ಚಿಂತನೆ, ಪ್ಲಾನ್‌ಗಳನ್ನು ಗುಣಿಸಿ ಗುಡ್ಡೆ ಹಾಕಿಕೊಂಡಿದ್ದ. ಇತ್ತ ಎಂ.ಎನ್.ಸಿ. ಹೆಸರಿನ ವಿದೇಶಿ ದೈತ್ಯ ಕಂಪೆನಿಗಳು ದೇಸಿ ಜನರ ಉಸಿರು ಕಸಿದುಕೊಳ್ಳುತ್ತಿದ್ದರೆ, ಬಲಿಯಾಧೀಶರ ಸೂಪರ್ ಮಾರ್ಕೆಟ್‌ಗಳು ಸಾಮಾನ್ಯ ಜನರಿಗೆ ಗಾಜಿನ ಷೋಕೇಸುಗಳಲ್ಲಿ ಬ್ರೆಡ್ಡು ಬನ್ನು ತೋರಿಸುತ್ತಿವೆ. ಅಂತಹವರ ನಡುವೆ ಕೇವಲ ‘ಸಾವಿರ’ ಗಳ ಮುಖ ನೋಡಿ ಸಂತೃಪ್ತರಾದ ಜನರನ್ನು ಕೂಡಿಸಿದ ಈತ ಅವರಿಂದ ಷೇರಿನ ರೂಪದಲ್ಲಿ ಒಂದಷ್ಟು ಹಣ ಸಂಗ್ರಹಿಸಿ ಕಾಸರಗೋಡು ಪ್ರಾಂತ್ಯದಲ್ಲಿ ‘ಗ್ರಾಮೀಣ ಸೂಪರ್ ಮಾರ್ಕೆಟ್’ ಅನ್ನು ಶುರು ಮಾಡಿದ.



ವ್ಯವಸ್ಥಿತವಾಗಿರಲಿ ಎಂಬ ಕಾರಣಕ್ಕೆ ಆ ಗುಂಪಿಗೆ ‘ಜಿ ಗ್ರೂಪ್’ ಎಂಬ ಮಾತೃಸಂಸ್ಥೆಯನ್ನೂ ಹುಟ್ಟುಹಾಕಿದ.

ಕೆಲವೇ ದಿನಗಳ ಅಂತರದಲ್ಲಿ ಕೇರಳದ ಸುಮಾರು ನಾಲ್ಕು ಜಿಲ್ಲೆಗಳಲ್ಲಿ ಹದಿನೈದು ಶಾಖೆಗಳನ್ನು ತೆರೆಯುವಷ್ಟರಮಟ್ಟಿಗೆ ಆತನ ಯೋಜನೆ ಸಿಕ್ಕಾಪಟ್ಟೆ ಸಕ್ಸಸ್‌ನ ಹಾದಿ ಹಿಡಿದಿತ್ತು, ಷೇರು ವ್ಯವಹಾರ ಅದೆಷ್ಟು ನೀಟಾಗಿ ನಡೆಯುತ್ತಿತ್ತೆಂದರೆ ಮೊದಮೊದಲು ಷೇರು ಹಾಕಲು ಹಿಂದೇಟು ಹಾಕುತ್ತಿದ್ದವರೆ ನಾ ಮುಂದು ತಾ ಮುಂದು ಅಂತ ಷೇರು ಖರೀದಿಸಲು ಮುಗಿಬೀಳುವಂತಾಯ್ತು. ಕಣ್ಣೂರು, ತ್ರಿಶೂರ್, ಪಾಲಕ್ಕಾಡ್, ಕೊಟ್ಟಾಯಂ ಕಡೆಗಳಲ್ಲೆಲ್ಲ ಸೆಮಿನಾರ್ ರೂಪದ ಸಂಘಟನೆಗಿಳಿದ ರಾಜೇಶ್ ಆಳ್ವನಿಗೆ ನಂಬಿಕಸ್ಥನ ಇಮೇಜೂ ಬಂದಿತ್ತು, ಏಕೆಂದರೆ ಅವನ ಯೋಜನೆಯಲ್ಲಿ ಅಷ್ಟರಮಟ್ಟಿಗೆ ಪಾರದರ್ಶಕತೆಯಿತ್ತು.

ತನ್ನ ಈ ‘ಜಿ ಗ್ರೂಪ್’ ಸಂಸ್ಥೆಯನ್ನು ಕರ್ನಾಟಕಕ್ಕೂ ಹಿಗ್ಗಿಸಿದ ಈತ ಪುತ್ತೂರು ಮತ್ತು ಕಡಬವೂ ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 13 ‘ಸೂಪರ್ ಮಾರ್ಕೆಟ್’ಗಳನ್ನು ತೆರೆದು ಅಲ್ಲೆಲ್ಲ ತನ್ನ ಷೇರುದಾರರನ್ನು ಹೊಂದಿದ್ದಾನೆ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ತನ್ನ ಷೇರುದಾರರದೇ ಒಂದು ಕಮಿಟಿಯನ್ನು ನಿರ್ಮಿಸಿ, ಎಲ್ಲ ಲೆಕ್ಕಾಚಾರವನ್ನು ಆ ಕಮಿಟಿಯೇ ನೋಡಿಕೊಳ್ಳುವಂತೆ ಮಾಡಿಟ್ಟಿದ್ದ ತಮ್ಮಲ್ಲಿದ್ದ ಸಾವಿರಗಳನ್ನು ಸೂಪರ್ ಮಾರ್ಕೆಟ್ ವ್ಯವಹಾರಕ್ಕೆ ಬಂಡವಾಳ ಹಾಕಿ ಲಕ್ಷಲಕ್ಷ ಲಾಭ ಎಣಿಸುವ ಆಸೆ ಅದ್ಯಾವ ಪಾಪಿಗೆ ತಾನೆ ಇರುವುದಿಲ್ಲ, ಅಷ್ಟಕ್ಕೂ ‘ಜಿ ಗ್ರೂಪ್’ ಸಂಸ್ಥೆಯೇನು ಅಷ್ಟರಲ್ಲಾಗಲೇ ಸಣ್ಣದಾಗಿ ಉಳಿದಿರಲಿಲ್ಲ, ಎರಡು ರಾಜ್ಯದಲ್ಲಿ ತನ್ನ ವ್ಯವಹಾರವನ್ನು ವಿಸ್ತರಿಸಿಕೊಂಡು ಭರ್ಜರಿ ನಂಬಿಕೆಯನ್ನೇ ಗಳಿಸಿಕೊಂಡಿತ್ತು, ಆರ್ಥಿಕ ಸಂಕಷ್ಟವನ್ನೂ, ಅದರಿಂದ ಪಾರಾಗಲು ನಾವೆಂತ ಸಹಕಾರ-ಸಂಘ ಜೀವನಕ್ಕೆ ಮುಂದಾಗಬೇಕು, ಆ ನಿಟ್ಟಿನಲ್ಲಿ ಈ ‘ಗ್ರಾಮೀಣ ಸೂಪರ್ ಮಾರ್ಕೆಟ್’ ಅದೇಗೆ ನೆರವಾಗಲಿದೆ ಎಂಬುದರ ಬಗ್ಗೆ ರಾಜೇಶ್ ಆಳ್ವನ ಭಾಷಣ ಕೇಳಿದವರಿಗೆ ಒಂದು ಷೇರು ಖರೀದಿಸಿ ನೋಡೇಬಿಡಬೇಕು ಅನ್ನಿಸದಿರುತ್ತಿರಲಿಲ್ಲ, ಆತನ ಯೋಜನೆ ನಿಜಕ್ಕೂ ಸಾಮಾನ್ಯವಾದುದೇನಾಗಿರಲಿಲ್ಲ, ಅದರಲ್ಲೂ ನಮ್ಮ ಭಾರತದಂತಹ ಅಪ್‌ಕಮಿಂಗ್ ದೇಶಕ್ಕೆ ಇಂತಹದ್ದೊಂದು ಕಲ್ಪನೆ ವೆರಿ ಸ್ಯೂಟೆಬಲ್. ಅದಕ್ಕೇ ಆತ ರಾಷ್ಟ್ರಮಟ್ಟದಲ್ಲಿಯೂ ಹೆಸರು ಮಾಡಿದ. ಖುದ್ದು ರಾಷ್ಟ್ರಪತಿ ಪ್ರತಿಭಾ ಸಿಂಗ್ ಪಾಟೀಲ್‌ರವರು ರಾಜೇಶ್ ಆಳ್ವನನ್ನು ಟೀ ಪಾರ್ಟಿಗೆಂದು ರಾಷ್ಟ್ರಪತಿ ಭವನಕ್ಕೆ ಆಹ್ವಾನಿಸುತ್ತಾರೆಂದರೆ ಆತನ ಪ್ಲಾನ್, ಸ್ಪೀಡ್, ನೆಟ್‌ವರ್ಕ್‌ಗಳನ್ನು ಶ್ಲಾಘಿಸಲೇಬೇಕು.

ರಾಷ್ಟ್ರಪತಿಯವರೊಟ್ಟಿಗೆ ಚಹಾ ಚಪ್ಪರಿಸಿ ಬಂದ ವ್ಯಕ್ತಿ ಕೆಲವೇ ದಿನಗಳಲ್ಲಿ ಕಂಬಿ ಹಿಂದೆ ಕೂರುವುದನ್ನು ಬದುಕಿನ ದುರಂತ ಎನ್ನುವುದಕ್ಕಿಂತ ದುರಾಸೆಯ ಪ್ರತಿರೂಪವೆನ್ನ ಬಹುದೇನೋ. ಕೋಟಿ-ಕೋಟಿಗಳ ಮುಖ ನೋಡುತ್ತಿದ್ದಂತೆ ಆತನ ಒಳಗಿದ್ದ ಪ್ರಾಮಾಣಿಕನೂ ಕಾಣೆಯಾಗಿರಬೇಕು. ಅದರ ಪರಿಣಾಮವಾಗಿ 2007 ರಲ್ಲಿ ಪುತ್ತೂರಿನಲ್ಲಿ ತೆರೆದ ಅವನದೇ ಸೂಪರ್ ಮಾರ್ಕೆಟ್ ಇವತ್ತಾತನಿಗೆ ಜೈಲಿನ ದರ್ಶನ ಮಾಡಿಸಿದೆ.

ಎಡವಟ್ಟಾಗಿದ್ದು ಹೇಗೆ?

ಕೋಟಿಗಟ್ಟಲೆ ಹಣ ಬಂದುಬೀಳುತ್ತಿದ್ದಂತೆ ರಾಜೇಶಪ್ಪನ ಮಹತ್ವಾಕಾಂಕ್ಷೆಯ ಹೆಡ್‌ಲೈಟ್ ಝಗ್ ಎಂದಿದೆ. ಅದರ ಮೊದಲ ಕಂತಾಗಿ ತಾನು ಷೇರು ಸಂಗ್ರಹಿಸುತ್ತಿದ್ದವರಿಂದ ಐದು ಸಾವಿರವನ್ನು ಸದಸ್ಯತ್ವ ಶುಲ್ಕವನ್ನಾಗಿ ಪಡೆದಿದ್ದಾನೆ. ಅಂದರೆ ಹದಿನೈದು ಸಾವಿರದ ಷೇರಿಗೆ ಆತನ ಟೀಮು ನೀಡುವುದು ಕೇವಲ ಹತ್ತು ಸಾವಿರದ ಸರ್ಟಿಫಿಕೇಟು, ಇನ್ನುಳಿದ ಐದು ಸಾವಿರಕ್ಕೆ ನಾನ್ ರೀಫಂಡಬಲ್ ಫೀಸ್ ಅನ್ನೋ ಸಬೂಬೇ ರಸೀದಿ! ಅಷ್ಟಕ್ಕೂ ಪುತ್ತೂರಿನ ಈ ಸೂಪರ್ ಮಾರ್ಕೆಟ್ 2007 ರಲ್ಲಿ ನೋಂದಣಿಯಾಯಿತಲ್ಲ ಆ ಕಾಯ್ದೆಯನ್ವಯ ಷೇರು ವಿನಿಮಯವೇ ನಡೆದಿಲ್ಲ.

ಮೊದಲು 15 ಜನರನ್ನು ನಂತರದಲ್ಲಿ ಅವರ ಲಿಂಕ್‌ನ ಮೂಲಕ 100 ಜನರನ್ನು ಷೇರುದಾರರನ್ನಾಗಿಸಿಕೊಳ್ಳಬೇಕಿರುವುದು ನಿಯಮ. ಅದ್ಯಾವುದನ್ನೂ ಲೆಕ್ಕಿಸದೆ ಮನಬಂದಂತೆ ಷೇರು ಮಾರಾಟ ಮಾಡಲಾಗಿದೆ. ಇತ್ತ ಷೇರುದಾರರಿಂದ ನೋಂದಣಿ ಶುಲ್ಕ ಅಂತ ಐದು ಸಾವಿರವನ್ನೇನು ವಸೂಲಿ ಮಾಡಲಾಯಿತಲ್ಲ ಅದನ್ನೂ ಸಹ ಸೂಪರ್ ಮಾರ್ಕೆಟ್‌ನ ಲೆಕ್ಕದಲ್ಲಿ ತೋರಿಸಿಯೇ ಇಲ್ಲ, ಅದು ಅರಬ್ಬೀ ಸಮುದ್ರ ಬಿದ್ದು ಅದ್ಯಾವ ಅಕೌಂಟು ಸೇರಿತೆಂಬುದು ಸ್ವತಃ ಷೇರುದಾರರಿಗೇ ಸುಳಿವಿಲ್ಲ.

ಸೂಪರ್ ಮಾರ್ಕೆಟ್‌ನ ಕಲ್ಪನೆ ಅದ್ಯಾವಾಗ ಕ್ಲಿಕ್ ಆಯಿತೋ ತನ್ನ ‘ಜಿ ಗ್ರೂಪ್’ನ ಅಡಿಯಲ್ಲಿ ಭಾರೀ ಭಾರೀ ಯೋಜನೆಗಳನ್ನು ರಾಜೇಶ್ ರೂಪಿಸಿಕೊಂಡಿದ್ದಾನೆ. ನಿಜವಾದ ಎಡವಟ್ಟಾದದ್ದೇ ಅಲ್ಲಿ, ಜಿ. ಉದ್ಯೋಗ ಕಾರ್ಪೊರೇಷನ್, ಜೆಮ್ ಪ್ಲಸ್, ಜಿ-ಟ್ರಾವೆಲ್, ಜಿ-ಪ್ರಾಪರ್ಟಿ ಅನ್ನೋ ವೆರೈಟಿ ವೆರೈಟಿ ಸ್ಕೀಮ್‌ಗಳನ್ನು ತೆರೆದು ಕುಳಿತ ರಾಜೇಶ್ ಸೂಪರ್ ಮಾರ್ಕೆಟ್‌ನ ಗ್ರ್ಯಾಂಡ್ ಸಕ್ಸಸ್ ಇವುಗಳಲ್ಲಿಯೂ ಸಿಕ್ಕೇ ಸಿಗುತ್ತೆ ಎಂಬ ಭಾರೀ ಭರವಸೆಯಲ್ಲಿದ್ದ. ಆತನ ಭರವಸೆ ಅದ್ಯಾವ ಪರಿ ಲಿಮಿಟ್ ಕ್ರಾಸ್ ಮಾಡಿತ್ತೆಂದರೆ ಅವುಗಳಿಗೆ ಷೇರು ಹರಿದುಬರುವುದನ್ನು ಕಾಯುತ್ತಾ ಕೂರುವಷ್ಟು ತಾಳ್ಮೆಯೂ ಇರಲಿಲ್ಲ. ‘ಸೂಪರ್ ಮಾರ್ಕೆಟ್’ಗೆ ಅಂತ ಅದಾಗಲೇ ಷೇರು ಹೂಡಿದ್ದ ಹಣವನ್ನೇ ಈ ಎಲ್ಲ ಯೋಜನೆಗಳಿಗೂ ಹರಿಸಿದ್ದ. ಈ ಯಾವ ಮಾಹಿತಿಯೂ ಷೇರು ಹೂಡಿದವರಿಗೆ ಇರಲೇ ಇಲ್ಲ, ಸೂಪರ್ ಮಾರ್ಕೆಟ್‌ನ ಷೇರುದಾರರ ಹಣವನ್ನು 2009 ರಲ್ಲಿ ತೆರೆಯಲಾದ ಗ್ರಾಮೀಣ ಉದ್ಯೋಗ ನಿಗಮದ ಖಾತೆಗೆ ಜಮಾವಣೆ ಮಾಡಿಕೊಳ್ಳತೊಡಗಿದ. ಪುತ್ತೂರಿನಲ್ಲಿ ಸಂಗ್ರಹವಾದದ್ದು ಬರೋಬ್ಬರಿ 3.5 ಕೋಟಿ ರೂಪಾಯಿ. ಆದರೆ ಇರಬೇಕಾಗಿದ್ದ ಅಕೌಂಟ್‌ನಲ್ಲಿ ಮಾತ್ರ ಅಷ್ಟು ಹಣವಿರಲಿಲ್ಲ, ಎನ್‌ಕ್ವೈರಿ ಸಮಯದಲ್ಲಿ ಅದೆಲ್ಲವನ್ನು ‘ಜಿ’ ಗ್ರೂಪ್‌ನ ಇತರೆ ಯೋಜನೆಗಳಿಗೆ ಉಪಯೋಗಿಸಿರುವುದು ಬೆಳಕಿಗೆ ಬಂದಿದೆ.



ಆತನಿಗೆ ಜನತೆಯ ನಂಬಿಕೆಯನ್ನು ಗಳಿಸಿಕೊಟ್ಟಿದ್ದೇ ಅವನ ಪಾರದರ್ಶಕ ಅಕೌಂಟ್ ಸಿಸ್ಟಮ್. ಆದರೆ ಬೇರೆ ಬೇರೆ ಮಹತ್ವಾಕಾಂಕ್ಷೆಗಳು ಅವನ ಮೇಳ ಸೇರಿಕೊಂಡ ನಂತರ ಅವುಗಳನ್ನು ಸಲಹಲು ವ್ಯವಸ್ಥೆಯಲ್ಲಿ ಕೊಂಚ ಕೊಂಚವೇ ಮಾರ್ಪಾಟು ಮಾಡಿಕೊಳ್ಳುತ್ತಾ ಬಂದಿದ್ದಾನೆ. ಆಯಾ ತಾಲ್ಲೂಕು ಇಲ್ಲವೆ ಜಿಲ್ಲಾ ಮಟ್ಟದ ಕಮಿಟಿ ಸಂಪೂರ್ಣ ವ್ಯವಹಾರ ನೋಡಿಕೊಳ್ಳುವುದು ಜಿ-ಗ್ರೂಪ್‌ನ ಧ್ಯೇಯದಂತಿತ್ತು. ಆದರೆ ಪುತ್ತೂರು ಶಾಖೆಯ ವ್ಯವಹಾರ ನಾಮಕಾವಸ್ಥೆಗೆ ಮಾತ್ರ ಸ್ಥಳೀಯ ಕಮಿಟಿಯ ಕೈಲಿದ್ದರೆ ಉಳಿದ ಸಂಪೂರ್ಣ ಹಣದ ಓಡಾಟ ರಾಜೇಶ್ ಆಳ್ವನ ಕೈ ಮೇಲೆಯೇ ನಡೆಯುತ್ತಿತ್ತು, ಹಾಗಾಗಿ ಹಣವನ್ನಾತ ಸಲೀಸಾಗಿ ಇತ್ತಿಂದ ಎತ್ತಿ ಅತ್ತ ಕಡೆಗೆ ಎಸೆದಿದ್ದಾನೆ.

ಅಂತೂ-ಇಂತೂ ಬಯಲಿಗೆ ಬಂತು

ತಮ್ಮ ದುಡ್ಡು ಗ್ರಾಮೀಣ ಸೂಪರ್ ಮಾರ್ಕೆಟ್‌ಯರ್‍ರಾಬರ್‍ರಿ ದುಡಿಯುತ್ತಿದ್ದು ಲಾಭದ ಲಕ್ಷ್ಮಿ ತೂರಿಕೊಂಡು ಬರುತ್ತಾಳೆ ಎಂಬ ಕಲ್ಪನೆಯಲ್ಲಿದ್ದ ಜನರಿಗೆ ಇತ್ತೀ... ಭಾರೀ ನಡುಕ ಶುರುವಾಗಿದೆ. ಪುತ್ತೂರಿನ ವಿದ್ಯಾನಗ... ರಾಘವನ್ ನಾಯರ್ ಎಂಬಾತನು ಸಹಾ ಅಂತದೇ ಒ... ಆಶಯದಲ್ಲಿ ಲಾಭಕ್ಕಾಗಿ ಕಾದು ಕುಳಿತಿದ್ದ, ಇದೇ ಸ... ಅದೇ ವ್ಯಕ್ತಿ ಕೇರಳದಲ್ಲಿ same ವ್ಯವಹಾರ ವನ್ನು ಅ... ಅಚ್ಚುಕಟ್ಟಾಗಿ, ನಂಬಿಕಾರ್ಹವಾಗಿ ನಿಭಾಯಿಸಿ ಷೇರುದಾರ... ಲಕ್ಷಲಕ್ಷ ಲಾಭ ಮಾಡಿಕೊಟ್ಟಿರಬೇಕಾದರೆ ರಾಘವ... ಆಸೆಗೂ ಒಂದು ತೂಕವಿತ್ತು, ಆದರೆ ರಾಜೇಶ್ ತನ್ನ ಇತರೆ ಹೊಸ ಹೊಸ ಯೋಜನೆಗಳಿಗೆ ಷೇರುದಾರರ ಹಣವನ್ನೆಲ್ಲ ಹೂಡಿ ಆಗಸ ನೋಡು... ಕುಳಿತಿದ್ದದ್ದು ಇವರ್‍ಯಾರಿಗೂ ತಿಳಿದೇ ಇರಲಿಲ್ಲ.


ಇತ್ತ ಲಾಭದ ಪಾಲಿಗಾಗಿ ಕಾದು ಕಾದು ಬೆ... ನಾಯರ್ ತಾವೇ ಖುದ್ದು ಹೋಗಿ ಕಮಿಟಿಯ ... ತನ್ನ ಲಾಭವನ್ನು ಕೇಳಿದ್ದಾರೆ. ನೋಟುಗಳ ನಿರೀಕ್ಷೆಯ... ದ್ದವನಿಗೆ ಸಿಕ್ಕಿದ್ದು ಹಾರಿಕೆಯ ಉತ್ತರಗಳು. ಅದ್ಯಾಕೆ... ಆತನಿಗೆ ಸಣ್ಣದಾಗಿ ಅನುಮಾನವೊಂದು ಶುರುವಾಗಿ... ತಡ ತನ್ನ ಷೇರು ಹಣವನ್ನಾದರೂ ವಾಪಸ್ಸು ಕೊಡುವ... ಕೇಳಿದಾಗ ಅದಕ್ಕೂ ನಿರೀಕ್ಷಿತ ಪ್ರತಿಕ್ರಿಯೆ ಸಿಕ್ಕ... ತಡಮಾಡದೆ ಆತ ಪೊಲೀಸರಿಗೆ ದೂರನ್ನು ನೀಡಿದ... ‘ಪ್ರೈಸ್ ಚಿಟ್ಸ್ ಅಂಡ್ ಮನಿ ಸರ್ಕ್ಯುಲೇಷನ್’ ನಿಯಮ... ಕೇಸು ಜಡಾಯಿಸಿಕೊಂಡು ಡಾ. ರಾಜೇಶ್ ಕೃಷ್ಣ ... ಮತ್ತು ಆಡಳಿತ ನಿರ್ದೇಶಕ ಎಂ.ಡಿ. ಪಾಂಡುರಂಗ... ಕಾಸರಗೋಡು ಪೊಲೀಸರು ಬಂಧಿಸಿ ಜೈಲಿಗಟ್ಟಿದ... ಅತ್ತ ಇವರಿಬ್ಬರೂ ಅರೆಸ್ಟ್ ಆಗುತ್ತಿದ್ದಂತೆಯೇ ಗ್ರಾಮಿ... ಸೂಪರ್ ಮಾರ್ಕೆಟ್‌ಗೆ ಷೇರು ಹೂಡಿದವರೆಲ್ಲ ತ... ಹಣದ ಮೇಲೆ ಕ್ವಶ್ಚನ್ ಮಾರ್ಕ್‌ನ ಗಾಳ ಎಸೆದು ಕೂ... ಕುಳಿತಿದ್ದಾರೆ. ಇನ್ನು ಆಯಾ ಶಾಖೆಯ ಕಮಿಟಿಯ... ‘ಯಾರ ಇಡಗಂಟಿಗೂ ಮೋಸವಿಲ್ಲ ಹಣ ಸುಭದ್ರವಾ... ಖಂಡಿತ ಲಾಭಾಂಶ ತಲುಪಿಸಲಾಗುವುದು’ ಎಂಬಂತಹ ಶೋಕಾಚರಣೆಯ ಶ್ಲೋಕವನ್ನುದುರಿಸು... ಹಣ ಹಾಕಿದವರ ಸಮಾಧಾನಕ್ಕೆ ಹಗಲಿರುಳೂ ಶ್ರಮಿಸುತ್ತಿದ್ದಾರೆ. ಒಟ್ಟಿನಲ್ಲಿ ಮಧ್ಯಮ ವರ್ಗದವರ ಮಧ್ಯೆ ಒಂದು ‘ಸೂಪರ್’ ಯೋಜನೆಯನ್ನು ಹುಟ್ಟುಹಾಕಿ, ಅದನ್ನು ಯಶಸ್ವಿಯಾಗಿಯೂ ನಡೆಸಿಕೊಂಡು ಬಂದು ಆರ್ಥಿಕ ವ್ಯವಸ್ಥೆಯಲ್ಲಿ ಹೊಸದೊಂದು ಶಕೆ ಶುರು ಮಾಡುವ ಭರವಸೆಯಲ್ಲಿದ್ದ ವ್ಯಕ್ತಿ ಬಹಳಷ್ಟು ಮಹತ್ವಾಕಾಂಕ್ಷೆ, ಚೂರೇಚೂರು ಸ್ವಾರ್ಥ, ಅಸ್ಪಷ್ಟ ವ್ಯವಹಾರದ ಕಾರಣಗಳಿಂದ ಚೀಟಿಂಗ್ ಕೇಸ್ ಗಿಟ್ಟಿಸಿಕೊಂಡು ಜೈಲು ಸೇರಿದ್ದು ದುರದೃಷ್ಟ. ಜನ... ನಂಬಿಕೆಯಂತೆ ಪಾರದರ್ಶಕ ಯೋಜನೆಯನ್ನು ಮುಂದುವರೆಸಿಕೊಂಡು ಹೋಗಿದಿದ್ದರೆ ಪತ್ರಿಕೆ ಆತನ ಸಾ... ಕುರಿತು ಬೇರೆಯದೇ ರೀತಿ ಬರೆಯುತ್ತಿತ್ತು, But very bad........

• ಗಿರೀಶ್ ತಾಳೀಕ...

ಪ್ರತಿಭಾರಿಂದಲೂ ಸೈ ಅನ್ನಿಸಿಕೊಂಡ ‘ಪ್ರತಿಭೆ’!?

ಸಹಕಾರ ಮತ್ತು ಆರ್ಥಿಕ ಬೆಳವಣಿಗೆಯಲ್ಲಿ ದೇಸೀ ಜನರ ಸಾಂಘಿಕ ಪಾತ್ರದ ಕುರಿತ ಡಾ.ರಾಜೇಶ್‌ಕ... ಆಳ್ವನ ‘ಜಿ-ಗ್ರೂಪ್’ ಯೋಜನೆಯನ್ನು ರಾಷ್ಟ್ರಪತಿ ಪ್ರತಿಭಾ ಸಿಂಗ್ ಪಾಟೀಲ್ ರವರೇ ಮೆಚ್ಚಿದ್ದರು. ಮೇ 2... ರಂದು ರಾಷ್ಟ್ರಪತಿ ಭವನಕ್ಕೆ ಚಹಾ ಪಾರ್ಟಿಗೆ ಆಹ್ವಾನಿಸಿ ಬೆನ್ನು ತಟ್ಟಿ ಕಳಿಸಿದ್ದರು. ಕೇರಳದ ಬದಿಯಡ್ಕ ಮೂಲ... ರಾಜೇಶ್ ಆಳ್ವ ಸಣ್ಣದಾಗಿ ಹುಟ್ಟು ಹಾಕಿ ಪ್ರಾರಂಭಿಸಿದ ‘ಗ್ರಾಮೀಣ ಸೂಪರ್ ಮಾರ್ಕೆಟ್’ ಕರ್ನಾಟಕ, ಕೇರಳ ರಾಜ್ಯದಲ್ಲಿ 51 ಶಾಖೆ ಹೊಂದುವುದರ ಮೂಲಕ ವಿಪರೀತ ಯಶಸ್ಸು ಗಳಿಸಿದೆ. ಮಾತ್ರವಲ್ಲ, ಬಹುಕೋಟಿ ಮಾಲ್, ಬಜಾರ್‌ಗಳನ್ನು ಎದುರಿಸಲು ಮಧ್ಯಮ ವರ್ಗದವರ ಏಕೀಕರಣಕ್ಕೆ ದಾರಿ ಮಾಡಿಕೊಟ್ಟಿತ್ತು, ಈತನ ಈ ಸಾಧನೆಯನ್ನು ಗಮನಿಸಿದ ವಿದೇಶಿ ವಿ.ವಿ.ಯೊಂದು ಈತನ ಹೆಸರಿನ ಮುಂದೆ ಡಾಕ್ಟರೇಟ್ ಪದವಿಯನ್ನೂ ನೇತು ಹಾಕಿದೆ. ಈತ ಅದೆಷ್ಟು ವ್ಯವಸ್ಥಿತವಾಗಿ ಯೋಜನೆಯನ್ನು ಅನುಷ್ಠಾನಗೊಳಿಸಿದ್ದನೆಂದರೆ ಯಾವ ಬಂಡವಾಳವೂ ಇಲ್ಲದೆ ಶುರುವಾಗಿ ಈಗ 57,270 ಷೇರುದಾರರಿಂದ 7,17,36,000 ರೂ. ಷೇರು ಸಂಗ್ರಹಿಸುವಷ್ಟು ಬೆಳೆಸಿದ್ದ, ಇದೇ ಉತ್ಸಾಹ, ಉದ್ದೇಶ ಆತನಿಗಿದ್ದಿದ್ದರೆ ‘ಜಿ-ಗ್ರೂಪ್ ಜನರಿಗೋಸ್ಕರ’ ಅಂತ ಸ್ಲೋಗನ್ ಬಿತ್ತರಿಸಿಕೊಂಡು ಬಂದ ಮನುಷ್ಯ ಆಯತಪ್ಪಿ ಎಡವಟ್ಟು ಮಾಡಿಕೊಂಡ... ಷೇರುದಾರರ ನಂಬಿಕೆಗೆ ಭಾರೀ ಬೆದರಿಕೆಯನ್ನೇ ಒಡ್ಡಿದ್ದಾನೆ.





ಲೋಕಾಯುಕ್ತರ ಕಚೇರಿಲಿ ಭ್ರಷ್ಟ ಎಸ್‌ಪಿ ರಂಗಸ್ವಾಮಿ ನಾಯಕ

ಲೋಕಾಯುಕ್ತ ಕಚೇರಿಯ ಆಯಕಟ್ಟಿನ ಜಾಗದಲ್ಲಿರುವ ರಂಗಸ್ವಾಮಿ ನಾಯಕ ಮತ್ತವರ ಪಟಾಲಂನ ದುರಾಡಳಿತ ಮೇಲಿನವರ ಗಮನಕ್ಕೆ ಬರುವುದು ಕಷ್ಟ. ಶಿವರಾಜ್ ಪಾಟೀಲರು ಈಗ ಎಚ್ಚೆತ್ತುಕೊಳ್ಳದೆ ಹೋದರೆ ಒಳ್ಳೆಯ ಕೆಲಸ ಮಾಡಿ ತೋರಿಸಬೇಕೆಂಬ ಅವರ ಆಶಯಕ್ಕೆ ಸ್ಪಂದಿಸಬಲ್ಲ ದಕ್ಷ-ಪ್ರಾಮಾಣಿಕ ಸಹಚರರ ತಂಡವೇ ಇರದ ಸ್ಥಿತಿ ಬರಬಹುದು.

ಕರ್ನಾಟಕ ಲೋಕಾಯುಕ್ತ ಪಡೆಯಲ್ಲಿ ಅತೀ ...ಷಿಯೂ, ಚಾಣಾಕ್ಷರೂ ಆಗಿದ್ದ ಪ್ರಾಮಾಣಿಕ ಅಧಿಕಾರಿ ...ಬ್ ಮೊಹಾಂತಿಗೆ ಹೊಸ ಮುಖ್ಯಮಂತ್ರಿ ಸದಾನಂದ ...ಡ ವರ್ಗಾವಣೆಯ ಶಿಕ್ಷೆ ನೀಡಿದ್ದಾರೆ. ಇದರಲ್ಲಿ ಇನ್ನೇನು ...ಲಿಗೆ ಹೋಗಲಿರುವ ಮಾಜಿ ಸಿಎಂ ಯಡಿಯೂರಪ್ಪನ ...ವಾಡವಿರುವುದು ಖಚಿತ. ಆದರೆ ಆಳಕ್ಕಿಳಿದು ನೋಡಿದರೆ ...ಬ್ಬರ ಕೈವಾಡವೂ ಕಾಣಸಿಗುತ್ತಿದೆ.

ಅವರಲ್ಲೊಬ್ಬ ಯಡ್ಡಿ ಮಗ ರಾಘವೇಂದ್ರನಾದರೆ ...ಲ್ಲೊಬ್ಬಾತ ರಂಗಸ್ವಾಮಿ ನಾಯಕ!

ಈ ರಂಗಸ್ವಾಮಿ ನಾಯಕ ಬೇರೆ ಯಾರೂ ...ಲ್ಲ, ಹಾಲಿ ಲೋಕಾಯುಕ್ತರ ಕೇಂದ್ರ ...ಚೇರಿಯಲ್ಲೇ ಸೂಪರಿಂಟೆಂಡೆಂಟ್ ಆಫ್ ...ಲೀಸ್ (ಆಡಳಿತ) ಆಗಿ ಕೆಲಸ ಮಾಡುತ್ತಿದ್ದಾರೆ. ...ದೆರಡು ವರ್ಷದಿಂದ ಐಪಿಎಸ್ ಶ್ರೇಣಿಗೆ ...ಮೋಷನ್ ಗಿಟ್ಟಿಸಲು ಭಾರೀ ಲಾಬಿ ನಡೆಸು...ದ್ದಾರೆ. ಬಹಳ ಮುಖ್ಯವಾಗಿ ಕಳೆದ ನಾಲ್ಕು ...ರ್ಷದಿಂದಲೂ ಲೋಕಾಯುಕ್ತ ಎಸ್‌ಪಿ ...ಡ್ಮಿನಿಸ್ಟ್ರೇಷನ್) ಹುದ್ದೆಯಲ್ಲೇ ಝುಂಡಾ ಊರಿ ...ಳಿತು ಬಿಟ್ಟಿದ್ದಾರೆ.

ಈ ವಿಚಾರ ಇಲ್ಲಿ ಯಾಕೆ ಮುಖ್ಯವಾಗು...ದೆಂದರೆ ಡಿಐಜಿಪಿ ಶ್ರೇಣಿಯ ಹಿರಿಯ ...ಧಿಕಾರಿಯಾಗಿದ್ದ ಪ್ರಣಬ್ ಮೊಹಾಂತಿ ಬಹಳ ವರ್ಷದಿಂದ ...ಲೋಕಾಯುಕ್ತದಲ್ಲೇ ಇದ್ದರೆಂದು ಹೇಳಿ ಸದಾನಂದ ಗೌಡರು ...ವರನ್ನು ವರ್ಗಾ ಮಾಡಿದ್ದಾರೆನ್ನುವುದಾದರೆ ಇದೇ ...ಯಮಾನುಸಾರ ರಂಗಸ್ವಾಮಿ ನಾಯಕ ಕೂಡಾ ಟ್ರಾನ್ಸ್‌ಫರ್ ...ಗಬೇಕಲ್ಲವೇ?

ಆದರೆ ಹಾಗಾಗುವುದಿಲ್ಲ, ಯಾಕೆಂದರೆ ರಂಗಸ್ವಾಮಿ ನಾಯಕ್ ರಾಜಕೀಯ ಪ್ರಭಾವವಿರುವಾತ!


ನೂತನ ಲೋಕಾಯುಕ್ತ ನ್ಯಾ. ಶಿವರಾಜ್ ಪಾಟೀಲರ ಅಭಿಪ್ರಾಯವನ್ನೇ ಕೇಳದೆ ನಡೆದಿರುವ ಪ್ರಣವ್ ಮೊಹಾಂತಿಯವರ ವರ್ಗದ ಹಿಂದೆ ಬಿಜೆಪಿ ಸರ್ಕಾರದ ಅನೇಕ ಲೆಕ್ಕಾಚಾರಗಳು ಇರುವಂತಿವೆ.

ಲೋಕಾಯುಕ್ತರು ಗಮನಿಸಲಿ

ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಹಾಗೂ ಗಣಿ ಹಗರಣದ ತನಿಖೆಯನ್ನು ಲೋಕಾಯುಕ್ತ ಸಂತೋಷ್ ಹೆಗ್ಡೆಯವರ ತಂಡ ನಡೆಸುತ್ತಿದ್ದಾಗ ಅನೇಕ ರಹಸ್ಯ ವಿಚಾರಗಳು ಸೋರಿಹೋಗುತ್ತಿದ್ದ ಬಗ್ಗೆ ರೂಮರ್‌ಗಳಿದ್ದವು. ಯಡ್ಡಿ - ರೆಡ್ಡಿ ಗ್ಯಾಂಗ್‌ಗೆ ಲೋಕಾಯುಕ್ತರ ಕಚೇರಿಯ ಅನೇಕ ಒಳವಿವರಗಳು ಪ್ರತಿದಿನ ಅಪ್‌ಡೇಟ್ ಆಗುತ್ತಿದ್ದ ಬಗ್ಗೆ ಆಗ ಸಂತೋಷ್ ಹೆಗ್ಡೆಯವರ ಗಮನಕ್ಕೆ ಬರಲೇ ಇಲ್ಲ. ಜೊತೆಗೆ ಆಗ ಉಪಲೋಕಾಯುಕ್ತರಾಗಿದ್ದ ಪತ್ರಿ ಬಸವನ ಗೌಡರೂ ಈ ರಂಗಸ್ವಾಮಿ ನಾಯಕ ಪ್ರಾಮಾಣಿಕ ಎಂತಲೇ ನಂಬಿಕೊಂಡು ಕೊಂಚ ಸಲೀಸಾಗಿ ಬಿಟ್ಟುಬಿಟ್ಟಿದ್ದರು. ಇದನ್ನು ಚೆನ್ನಾಗಿ ಬಳಸಿಕೊಂಡ ರಂಗಸ್ವಾಮಿ ನಾಯಕ ಯಡ್ಡಿ ಮಗ ರಾಘವೇಂದ್ರನ ಜೊತೆ ಕೈಜೋಡಿಸಿದರು. ಅಷ್ಟೇ ಅಲ್ಲದೆ ಕೇಂದ್ರ ಕಚೇರಿಯ ಆಡಳಿತ ವಿಭಾಗದ ಮುಖ್ಯಸ್ಥನ ಸ್ಥಾನದ ಪ್ರಭಾವ ಬಳಸಿಕೊಂಡು ತನಗೆ ಬೇಕಾದವರನ್ನು ಆಯಕಟ್ಟಿನ ಜಾಗಗಳಿಗೆ ತಂದು ಕೂರಿಸತೊಡಗಿದರು. ಉದಾಹರಣೆಗೆ ಹಾಲಿ ಚಿತ್ರದುರ್ಗದ ಲೋಕಾಯುಕ್ತ ಎಸ್‌ಪಿಯಾಗಿರುವ ಎಂ.ಎನ್.ನಾಗರಾಜ್ ವಿಚಾರವನ್ನೇ ತೆಗೆದುಕೊಳ್ಳಿ. ಈತ ರಂಗಸ್ವಾಮಿ ನಾಯಕರ ಲಿಂಕ್ ಮೂಲಕ ಬಳ್ಳಾರಿ ಲೋಕಾಯುಕ್ತ ಎಸ್‌ಪಿಯಾಗಿ ಹೋದರು. ಅಲ್ಲಿ ಕೇವಲ ಎರಡೇ ತಿಂಗಳಲ್ಲಿ ನಾಗರಾಜ್ ಎಷ್ಟು ಕೆಟ್ಟ ಹೆಸರು ಪಡೆದರೆಂದರೆ ಜನ ಬೀದಿಗಿಳಿದು ಪ್ರತಿಭಟಿಸುವ ಹಂತ ಬಂತು.




ಮೊಹಾಂತಿ





ಧರ್ಮೇಂದ್ರ



ಲಂಚಕೋರ ಸ್ವಾಮಿ

ನಾಗರಾಜ್ ಲಂಚಗುಳಿತನ ಆ ಪ್ರಮಾಣಕ್ಕೇರಿತ್ತು. ಕೊನೆಗೆ ನಾಗರಾಜ್ ಬಳ್ಳಾರಿಯಿಂದ ಎತ್ತಂಗಡಿಯಾದರೂ ಸಹ ಪಕ್ಕದ ಚಿತ್ರದುರ್ಗಕ್ಕೆ ಬಂದರು.

ರಂಗಸ್ವಾಮಿ ನಾಯಕರ ಕೃಪೆ ಅದು

ಬೀದರಿನ ಹುಮ್ನಾಬಾದ್‌ನ 'ಎ'ಕೆಟಗರಿಯ ಚೆಕ್‌ಪೋಸ್ಟ್‌ನಲ್ಲಿ ಟಿ.ಜಿ. ರಾಯ್ಕರ್ ಎಂಬಾತನಿದ್ದಾನೆ. ಕಡುಭ್ರಷ್ಟನೆಂದು ಇಡೀ ಲೋಕಾಯುಕ್ತ ಸಿಬ್ಬಂದಿಯೇ ಹೇಳುವ ರಾಯ್ಕರ್‌ಗೂ ರಂಗಸ್ವಾಮಿ ನಾಯಕನೇ ಗಾಡ್‌ಫಾದರ್!


ಸಬ್‌ಇನ್ಸ್‌ಪೆಕ್ಟರ್ ಆಗಿ ಇಲಾಖೆ ಸೇರಿದ ರಂಗಸ್ವಾಮಿ ನಾಯಕ ನಂತರ ಡಿವೈಎಸ್‌ಪಿಯಾಗಿ ಕೋಲಾರದಲ್ಲಿದ್ದು ಈಗ ಎಸ್‌ಪಿ ಆಗಿದ್ದಾರೆ. ಆದರೆ ಕಲಿತಿರುವ ಕೆಲಸ, ಶ್ರದ್ಧೆ ಅಷ್ಟಕಷ್ಟೆ. ಈತ ಒಮ್ಮೆ ಯಾವುದೋ ಕೇಸಿನಲ್ಲಿ ಚಾರ್ಟೆರ್ಡ್ ಅಕೌಂಟೆಂಟ್ ವಿರುದ್ಧ ಎಫ್‌ಐಆರ್ ದಾಖಲಿಸಲು ಹೊರಟಿದ್ದ. ಆತ ಸರ್ಕಾರಿ ನೌಕರ ಎಂಬುದು ರಂಗಸ್ವಾಮಿಯ ನಂಬಿಕೆಯಾಗಿತ್ತು!

ಲೋಕಾಯುಕ್ತ ಕಚೇರಿಯ ಆಯಕಟ್ಟಿನ ಜಾಗದಲ್ಲಿರುವ ರಂಗಸ್ವಾಮಿ ನಾಯಕ ಮತ್ತವರ ಪಟಾಲಂನ ದುರಾಡಳಿತ ಮೇಲಿನವರ ಗಮನಕ್ಕೆ ಬರುವುದು ಕಷ್ಟ. ಯಾಕೆ ಗೊತ್ತೇ?

ಲೋಕಾಯುಕ್ತದಲ್ಲೇ ಯಾರಾದರೂ ಭ್ರಷ್ಟಾಚಾರ ಮಾಡಿದ ಬಗ್ಗೆ ಸಾರ್ವಜನಿಕರು ಲಿಖಿತ ದೂರು ನೀಡಿದರೆ ಅದು ವಿಭಾಗ ಮುಖ್ಯಸ್ಥ ರಂಗಸ್ವಾಮಿ ನಾಯಕ್ ಕೈಸೇರುತ್ತದೆ. ತನಗೆ ಬೇಕಾದವರ ವಿರುದ್ಧ ದೂರುಗಳಿದ್ದರೆ ಅಂತಹ ದೂರನ್ನೇ ಮಟಾಶ್ ಮಾಡುವ ಕಲೆ ನಾಯಕನಿಗಿದೆ ಎನ್ನಲಾಗಿದೆ.

ಆದರೆ ಈಗ ತಾನೆ ಇನ್ನೊಂದು ಲಂಚದ ಕೇಸ್‌ನಲ್ಲಿ ರಾಮನಗರ ಲೋಕಾಯುಕ್ತ ಎಸ್‌ಪಿ ಎ.ಎನ್. ಸ್ವಾಮಿ ಹಾಗೂ ಈ ರಂಗಸ್ವಾಮಿ ನಾಯಕ್ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾರೆ.

ಲಾರಿ ಕಳುವು ಪ್ರಕರಣವೊಂದರ ತನಿಖೆ ನಡೆಸುತ್ತಿದ್ದ ರಾಮನಗರ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಧರ್ಮೇಂದ್ರ ಲಾರಿ ಮಾಲೀಕನಿಗೆ ಅನುಕೂಲ ಮಾಡಿಕೊಡಲು 15 ಸಾವಿರ ಲಂಚ ಕೇಳಿದರೆಂದು ಲೋಕಾಯುಕ್ತ ಪೊಲೀಸರು 2010 ರಲ್ಲಿ ಬಂಧಿಸಿದ್ದರು. ಆದರೆ ಅದೇ ಕೇಸ್ ಅನ್ನು 'ಬಿ' ರಿಪೋರ್ಟ್ ಹಾಕಿ ಮುಗಿಸಲು ಆರೋಪಿ ಧರ್ಮೇಂದ್ರನಿಂದ 2 ಲಕ್ಷ ಲಂಚ ಕೇಳಿ ಸಿಕ್ಕಿಬಿದ್ದಿದ್ದಾನೆ ಲೋಕಾಯುಕ್ತ ಎಸ್‌ಪಿ ಸ್ವಾಮಿ. ಈ 2 ಲಕ್ಷ ಲಂಚದ ಬಾಬ್ತಿನಲ್ಲಿ ಒಂದು ಭಾಗ ರಂಗಸ್ವಾಮಿ ನಾಯಕನಿಗೂ ಕೊಡುವ ಬಗ್ಗೆ ನಡೆದಿರುವ ಸಂಭಾಷಣೆ ರೆಕಾರ್ಡ್ ಆಗಿ ಈಗ ಲೋಕಾಯುಕ್ತರ ಕಚೇರಿಗೇ ಬಂದಿದೆ.



ಯು.ವಿ.ಸಿಂಗ್

ನ್ಯಾ.ಶಿವರಾಜ್ ಪಾಟೀಲರು ಇದನ್ನೆಲ್ಲ ಗಮನಿಸಿದರೆ ಒಳಿತು. ಅವರು ಅಧಿಕಾರ ವಹಿಸಿಕೊಂಡಿರುವ ಸಂದರ್ಭದಲ್ಲೇ ಉತ್ತಮ ಆಫೀಸರುಗಳು ಹೊರಹೋಗುವಂತಾಗಿದೆ. ಮಧುಕರ್‌ಶೆಟ್ಟಿ, ರೂಪಕ್ ಕುಮಾರ್, ದತ್ತ, ಡಾ. ಯು.ವಿ.ಸಿಂಗ್, ಈಗ ಪ್ರಣವ್ ಮೊಹಾಂತಿ...! ಇದರಲ್ಲಿ ಕೆಲವರ ವರ್ಗಾ ಅನಿವಾರ್ಯವಾಗಿದ್ದರೆ ಉಳಿದವರದ್ದು ರಾಜಕೀಯ ಪ್ರೇರಿತ.

ಶಿವರಾಜ್ ಪಾಟೀಲರು ಈಗ ಎಚ್ಚೆತ್ತುಕೊಳ್ಳದೆ ಹೋದರೆ ಒಳ್ಳೆಯ ಕೆಲಸ ಮಾಡಿ ತೋರಿಸಬೇಕೆಂಬ ಅವರ ಆಶಯಕ್ಕೆ ಸ್ಪಂದಿಸಬಲ್ಲ ದಕ್ಷ-ಪ್ರಾಮಾಣಿಕ ಸಹಚರರ ತಂಡವೇ ಇರದ ಸ್ಥಿತಿ ಬರಬಹುದು.

ಮತ್ತೊಂದೆಡೆ ಈ ರಂಗಸ್ವಾಮಿ ನಾಯಕ, ಗಾಂವ್ಕರ್, ಎಂ.ಎನ್.ನಾಗರಾಜ್ ತರಹದವರನ್ನು ಜೊತೆಗಿಟ್ಟುಕೊಂಡರೆ ಅಪಾಯ ತಪ್ಪಿದ್ದಲ್ಲ.

• ಪಾರ್ವತೀಶ



ಅರುಣ್ ಚಕ್ರವರ್ತಿ ಯಡ್ಡಿ ಭಂಟ

ಖಡಕ್ ಆಫೀಸರ್ ಪ್ರಣವ್ ಮೊಹಾಂತಿಯವ ಜಾಗಕ್ಕೆ ಅರುಣ್ ಚಕ್ರವರ್ತಿ ಬರುತ್ತಿದ್ದಾರೆ......!

ಈತ ಖದೀಮ ಯಡಿಯೂರಪ್ಪನ ನೆರಳಲ್ಲೇ ಇದ್ದ ಅಧಿಕಾರಿ. ಕೆಲವರ್ಷ ಶಿವಮೊಗ್ಗ ಎಸ್‌ಪಿಯಾಗಿ ತೀರಾ ಕೆಟ್ಟ ಹೆಸರು ಪಡೆದಾತ. ದುರಾಡಳಿತ, ದಬ್ಬಾಳಿಕೆ, ಇಲಾಖೆಯ ಹಣಕಾಸಿನ ನಿರ್ವಹಣೆಯಲ್ಲಿ ಕೈಕೆಡಿಸಿಕೊಂಡಿರುವುದು.... ಹೀಗೆ ಅರುಣ್ ಚಕ್ರವರ್ತಿಯ ಅಪಕೀರ್ತಿಯ ಚರಿತ್ರೆ ದೊಡ್ಡದಿದೆ. ಯಡ್ಡಿಯ ರಕ್ಷಣೆಗಾಗಿ ಈ ವರ್ಗಾ ನಡೆದಿದೆಯೇ?

ಧಾರವಾಡ: ದಲಿತ ದ್ವೇಷಿಗಳಿಗೆ ಕಾಂಗ್ರೆಸ್ ಖದೀಮರ ರಕ್ಷಣೆ!

ಈ ನೆಲದ ದಲಿತರ ಬದುಕು ಯಾವ ಸ್ಥಿತಿಯಲ್ಲಿದೆ ಎಂಬುದು ...ತ್ತೊಮ್ಮೆ ಅನಾವರಣಗೊಂಡಿದೆ. ಮೇಲ್ಜಾತಿಯ ಕೆಲ ವಿಕೃತರು ಧಾರವಾಡ ...ನಲಗುಂದದ ದಲಿತರನ್ನು ಬಹಿಷ್ಕರಿಸಿ ಕ್ರೌರ್ಯ ಮೆರೆದಿದ್ದಾರೆ.

...ನವಲಗುಂದದ ಪುಟ್ಟ ಊರು ನಾಯ್ಕನ ಹಳ್ಳಿ. ಈ ಊರೊಳಗೆ ...ಗಾಯತ, ರೆಡ್ಡಿ, ಕುರುಬ ಜನಾಂಗದವರೇ ಮೇಲುಗೈ ಪಡೆದು ...ವಂತರಾಗಿದ್ದಾರೆ. ಈ ಊರಾಚೆಗೆ ಇಪ್ಪತ್ತೇಳು ದಲಿತ ಮಾದಿಗರ ಕುಟುಂಬಗಳು ...ಸಿಸುತ್ತಿವೆ. ಮೇಲ್ಜಾತಿಯವರ ಮನೆ ಚಾಕರಿಯನ್ನೇ ನೆಚ್ಚಿಕೊಂಡಿರುವ ಈ ...ಟುಂಬ ಸದಸ್ಯರಿಗೆ ತಲೆ ಮೇಲಿನ ನಿತ್ರಾಣ ಸೂರು ಬಿಟ್ಟರೆ ಮತ್ಯಾವ ...ರೆಗಳೂ ಇಲ್ಲ, ದಿನವಿಡೀ ದುಡಿದರೂ ಸಿಗುತ್ತಿದ್ದದ್ದು ಪುಡಿಗಾಸು. ಆದರಿಂದ ...ಮನೆ ನಿರ್ವಹಣೆಗೇ ತತ್ವಾರ ಪಡುವಂಥಾ ಸ್ಥಿತಿ. ಇದರ ನಡುವೆಯೂ ...ಕ್ಕಳನ್ನು ವಿದ್ಯಾಭ್ಯಾಸಕ್ಕೆ ಹಚ್ಚಿದವರ ಪಾಡಂತೂ ಹೇಳತೀರದು.

...ನಾಡು ಸುಭಿಕ್ಷವಾಗಿದೆ ಎಂಬ ಭ್ರಮೆಯ ಮಂದಿ ಒಪ್ಪುತ್ತಾರೋ ...ಡುತ್ತಾರೋ ಗೊತ್ತಿಲ್ಲ, ಹುಬ್ಬಳ್ಳಿ-ಧಾರವಾಡ ಸೀಮೆಯಲ್ಲಿ ಇಂದಿಗೂ ಅಸ್ಪೃಶ್ಯ...ತಪದ್ಧತಿ ಜಾರಿಯಲ್ಲಿದೆ. ಅದಕ್ಕೆ ನಾಯ್ಕನ ಹಳ್ಳಿಯೂ ಹೊರತಾಗಿಲ್ಲ, ...ಲ್ಲಿನ ದಲಿತರು ಜೀತದ ಆಧಾರದಲ್ಲೇ ಸವರ್ಣೀಯರ ಮನೆಗಳಲ್ಲಿ ...ಡಿಮೆ ಮಾಡುತ್ತಾರೆ. ವರ್ಷಕ್ಕೊಮ್ಮೆ ಫಸಲು ಬಂದಾಗ ಒಡೆಯ ನೀಡುವ ...-ಕಡ್ಡಿ ಮತ್ತು ಪುಡಿಗಾಸೇ ದಲಿತರ ಬದುಕಿನಾಧಾರ. ಇದರಿಂದಾಗಿ ...ರ್ಗಕವಾಗಿ ಆಧುನಿಕತೆಗೆ ಸ್ಪಂದಿಸದ ದಲಿತರು ಇತ್ತೀಚೆಗೆ ಬೇರೆಡೆಗೆ ಕೆಲಸಕ್ಕೆ ...ಸುವ ನಿರ್ಧಾರ ಮಾಡಿದ್ದರು. ಈ ಬಗ್ಗೆ ಪ್ರಸ್ತಾಪಿಸಿದರೆ ಸವರ್ಣೀಯ ವರ್ಗ 'ಜೀತ ಮಾಡ್ಕಂಡು ಬಿದ್ದಿರಿ' ಎಂಬರ್ಥದ ಹುಕುಂ ನೀಡಿತು. ಇದರಿಂದ ಆಕ್ರೋಶಿತರಾದ ದಲಿತರು 'ಇನ್ಮುಂದೆ ನಿಮ್ ಹೊಲ್ದಾಗ ಗೇಯ್ಮೆ ಮಾಡಂಗಿಲ್ಲ, ಹಟ್ಟಿ ಬಾಚಂಗಿಲ್ಲ, ಬ್ಯಾರೆ ಕಡಿ ಕೆಲ್ಸಕ್ ಹೋಕ್ಕೇವಿ' ಅಂದು ಹೊರಟೇಬಿಟ್ಟರು.

ಇದರಿಂದ ಸವರ್ಣೀಯ ಸಮುದಾಯದ ಕೆಲ ಖದೀಮ ಎಲಿಮೆಂಟುಗಳು ರೊಚ್ಚಿಗೆದ್ದವು. ಕೆಲಸಕ್ಕೆ ಬಾರದಿದ್ದರೆ ಬಹಿಷ್ಕಾರ ಹಾಕುವ ಬೆದರಿಕೆಯೊಡ್ಡಿದರು. ಇದ್ಯಾವುದಕ್ಕೂ ದಲಿತರು ಬಗ್ಗದಿದ್ದಾಗ ಅವರನ್ನು ಬಗ್ಗುಬಡಿಯಲು ಸವರ್ಣೀಯರ ಗುಂಪೊಂದು ಸಂಚು ಹೆಣೆಯಿತು. ಅಂದಾನಿ ಗೌಡ ಪಾಟೀಲ, ರಾಜಪ್ಪಗೌಡ ಪಾಟೀಲ, ನೀಲಕಂಠ ಗೌಡ ಪಾಟೀಲ, ಬಸಪ್ಪ ಬೆಣ್ಣಿಪ್ಪನವರ, ಶಂಕ್ರಪ್ಪ ಹೂಗಾರ ಮತ್ತು ಕರಿಬಸಪ್ಪ ಜಾವೂರ ಸೇರಿಕೊಂಡು ದಲಿತರಿಗೆ ಬಹಿಷ್ಕಾರ ಹಾಕಿ ಡಂಗೂರ ಹೊಡೆಸಿದರು. ಗ್ರಾಮಸ್ಥರ್‍ಯಾರಾದರೂ ದಲಿತರಿಗೆ ಸಹಾಯ ಮಾಡಿದರೆ ದಂಡ ಹಾಕುವ ಬೆದರಿಕೆಯೊಡ್ಡಿದರು. ಚಹಾ ಅಂಗಡಿಯಿಂದ ಮೊದಲ್ಗೊಂಡು ಸರ್ಕಾರಿ ಜಾಗಗಳವರೆಗೂ ದಲಿತರು ಕಾಲಿಡುವಂತಿಲ್ಲ ಎಂದು ಬೆದರಿಕೆ ಹಾಕಿದರು.

ಇಷ್ಟಕ್ಕೇ ಸುಮ್ಮನಾಗದ ದುಷ್ಟರು ಡಂಗೂರ ಹೊಡೆಸಿದಂದೇ ರಾತ್ರಿ ಹೊತ್ತು ಕುಡಿದು ದಲಿತರ ಕೇರಿಗೆ ದಾಂಗುಡಿಯಿಟ್ಟು ಬಸಪ್ಪ ಮಾದಾರ ಎಂಬಾತನಿಗೆ ಅಟ್ಯಾಡಿಸಿ ಹೊಡೆದರು. ದಲಿತರಿಗೆ ಸೇರಿದ 80 ಆಡುಗಳನ್ನು ಹೊತ್ತೊಯ್ದರು. ದಲಿತರ ಮಕ್ಕಳಿಗೂ ಸಹ ಶಾಲೆಗೆ ಬಂದರೆ ಕೈಕಾಲು ಮುರಿಯುವ ಧಮಕಿ ಹಾಕಿದರು. ಇದರಿಂದ ಬೆದರಿದ ದಲಿತರೆಲ್ಲಾ ಅನಿವಾರ್ಯವಾಗಿ ಊರು ತೊರೆಯುವ ನಿರ್ಧಾರಕ್ಕೆ ಬಂದು ನವಲಗುಂದ ಪೊಲೀಸ್ ಠಾಣೆಯಲ್ಲೊಂದು ದೂರು ದಾಖಲಿಸಿದರು. ಸಮಾಧಾನಕರ ಸಂಗತಿಯೆಂದರೆ ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು ನೀಲಕಂಠ ಪಾಟೀಲ ಹಾಗೂ ಶಂಕ್ರಪ್ಪ ಹೂಗರನನ್ನು ಬಂಧಿಸಿದರು. ಆದರೆ ಪ್ರಮುಖ ಆರೋಪಿ ಅಂದಾನಿ ಪಾಟೀಲ ಹಾಗೂ ತಂಡ ಏಕಾಏಕಿ ತಪ್ಪಿಸಿಕೊಂಡಿತ್ತು.

ಹಾಗೆ ತಪ್ಪಿಸಿಕೊಂಡ ಖದೀಮರಿಗೆ ಆಶ್ರಯ ಕೊಟ್ಟಿದ್ದು ಮಾಜಿ ಎಂಎಲ್‌ಎ ಎಂ.ಕೆ. ಕುಲಕರ್ಣಿಯ ಸಂಬಂಧಿತರಾದ ವಿಜಯ ಕುಲಕರ್ಣಿ ಹಾಗೂ ವಿನಯ ಕುಲಕರ್ಣಿ. ಈ ಅಡ್ನಾಡಿಗಳು ಆರೋಪಿ ಅಂದಾನಿ ಗೌಡ ಮತ್ತವನ ಪಟಾಲಂಗೆ ಧಾರವಾಡ ನಗರದಲ್ಲಿರುವ ತಮ್ಮ ಮನೆಯಲ್ಲಿ ತಂಗಲು ವ್ಯವಸ್ಥೆ ಕಲ್ಪಿಸಿದ್ದರು. ಸದರಿ ಆರೋಪಿಗಳು ಲಾಗಾಯ್ತಿನಿಂದಲೂ ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದವರು. ಆದುದರಿಂದಲೇ ಕಾಂಗ್ರೆಸ್ ಖದೀಮರೇ ಮುಂದೆ ನಿಂತು ಆರೋಪಿಗಳನ್ನು ಬಚಾವು ಮಾಡಲೆತ್ನಿಸಿದ್ದಾರೆಂಬ ಆರೋಪಗಳಿವೆ. ಸಹನೀಯ ಅಂಶವೆಂದರೆ ಪೊಲೀಸರು ಆರೋಪಿಗಳನ್ನು ಧಾರವಾಡದ ಮನೆಯಿಂದಲೇ ಎಳೆ ತಂದು ಜೈಲಿಗೆ ಗದುಮಿದ್ದಾರೆ.

ಈ ದಿನಮಾನದಲ್ಲೇ ಬಹಿಷ್ಕಾರದಂಥ ಅನಿಷ್ಟ ಜಾರಿಯಲ್ಲಿರುವುದು ನಾಚಿಕೆಗೇಡಿನ ಸಂಗತಿ. ತೀರಾ ದಲಿತ ಪರ ಬೊಗಳುವ ಕಾಂಗ್ರೆಸ್ಸಿಗರೇ ದಲಿತದ್ವೇಷಿ ದುಷ್ಟರಿಗೆ ರಕ್ಷಣೆ ನೀಡಲೆತ್ನಿಸಿರುವುದು ದಗಲ್ಬಾಜಿತನದ ಪರಾಕಾಷ್ಠೆ.

ಇದ್ಯಾವುದನ್ನೂ ಲೆಕ್ಕಿಸದೆ ಆರೋಪಿಗಳನ್ನು ಜೈಲಿಗಟ್ಟಿದ ನವಲಗುಂದದ ಪೊಲೀಸರು ನಿಜಕ್ಕೂ ಅಭಿನಂದನೆಗೆ ಅರ್ಹರು.

• ಹುಬ್ಬಳ್ಳಿಯಾಂವ

ಮುರುಘಾ ಮಠ ಯೂನಿಯನ್ ಬ್ಯಾಂಕ್‌ನ ತಿಕ್ಕಲು ಮ್ಯಾನೇಜರ್ ಶ್ರೀಕಲಾ

ಇದೊಂದು ವಿಚಿತ್ರ ಪ್ರಸಂಗ.

ಬೆಂಗಳೂರಿನ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಚೀಫ್ ಮ್ಯಾನೇಜರ್ ಆಗಿರುವ ಎಲ್.ಕೆ.ಶ್ರೀಕಲಾ ಎಂಬಾಕೆ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂರಿಗೆ ಒಂದು ಪತ್ರ ಬರೆದು ಸಾಲ ವಸೂಲಿ ಮಾಡಿಕೊಡುವಂತೆ ಕೇಳಿರುವ ಪ್ರಸಂಗವಿದು!

ಈ ಪ್ರಕರಣದ ಹಿನ್ನೆಲೆ ಹೀಗಿದೆ.

ಚಿತ್ರದುರ್ಗದ ಮುರುಘಾ ಮಠಕ್ಕೆ ಸೇರಿರುವ ಎಸ್‌ಜೆಎಂ ವಿದ್ಯಾಪೀಠವು ಈಗ್ಗೆ ಆರು ವರ್ಷಗಳ ಹಿಂದೆ ಬೆಂಗಳೂರಿನ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಿಂದ ಸಾಲ ಪಡೆದಿತ್ತು. ದುರ್ಗದಲ್ಲಿ ಬಸವೇಶ್ವರ ಮೆಡಿಕಲ್ ಕಾಲೇಜು, ಡೆಂಟಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜ್, ವಿದ್ಯಾರ್ಥಿಗಳ ಹಾಸ್ಟೆಲ್‌ಗಳು ಹಾಗೂ ಆಡಿಟೋರಿಯಂಗಳ ನಿರ್ಮಾಣಕ್ಕೆಂದು 42 ಕೋಟಿ ರೂಪಾಯಿ ಸಾಲ ಪಡೆಯಲಾಗಿತ್ತು. ನಂತರ 2009ರವರೆಗೂ ಸಾಲದ ಬಾಬ್ತು ಅಸಲು-ಬಡ್ಡಿ ಸಹಿತ ಕಂತುಗಳಲ್ಲಿ ಮರುಪಾವತಿ ನಡೆಯುತ್ತಾ ಎರಡು ಬಾರಿ ಲೆಕ್ಕ ಸರಿ ಹೊಂದಾಣಿಕೆಯೂ ಆಗಿತ್ತು. ಬ್ಯಾಂಕ್ ಪರಿಭಾಷೆಯಲ್ಲಿ ಇದನ್ನು 'ಅಕೌಂಟ್ ರೀ-ಕನ್‌ಸ್ಟ್ರಕ್ಷನ್' ಎನ್ನುತ್ತಾರೆ. ಈ ಮಧ್ಯೆ 2009ರ ಮಾರ್ಚ್‌ನಲ್ಲಿ ಅಸಲು, ಬಡ್ಡಿ ಹಾಗೂ ಕಂತುಗಳಿಗೆ ಸಂಬಂಧಿಸಿದಂತೆ ಭಿನ್ನಾಭಿಪ್ರಾಯ ಬೆಳೆದು ವಿವಾದವಾಯಿತು. ಸಹಜವಾಗಿಯೇ ಈ ತರದ ವಿವಾದಗಳು ಬಂದಾಗ ಕೇಸುಗಳಾಗುತ್ತವೆ. ಅವು ಅಂತಿಮವಾಗಿ ತೀರ್ಮಾನ ಆಗುವವರೆಗೂ ಕಂತು ಪಾವತಿಯು ಒಂದೋ ತಾತ್ಕಾಲಿಕವಾಗಿ ನಿಲ್ಲುತ್ತದೆ ಅಥವಾ ಕೋರ್ಟ್‌ನ ಮಾರ್ಗದರ್ಶನದಲ್ಲಿ ಒಂದು ಪ್ರತ್ಯೇಕ ಅಕೌಂಟ್ ತೆರೆದು ಅಲ್ಲಿಗೆ ಕಂತಿನ ಹಣ ತುಂಬಬೇಕಾಗುತ್ತದೆ.

ಎಸ್‌ಜೆಎಂ ಕಾಲೇಜಿನ ವಿಚಾರದಲ್ಲಿ ಹಣ ವಸೂಲಿ ಮಾಡಿಕೊಳ್ಳಲು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾವು ಸಾಲ ವಸೂಲಾತಿ ನ್ಯಾಯಾಲಯಕ್ಕೆ ಪ್ರಕರಣ ಕೊಂಡೊಯ್ದಿತು. ಅಲ್ಲಿ ಈಗಲೂ ವಿಚಾರಣೆ ನಡೆಯುತ್ತಿದೆ. ಅರ್ಥಾತ್ ಅಂತಿಮ ತೀರ್ಪು ಹೊರಬಿದ್ದಿಲ್ಲ. ಅದರ ನಡುವೆಯೇ ಬಹುಶಃ 2010ರ ಆಗಸ್ಟ್ ತಿಂಗಳಿನಲ್ಲಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಬೆಂಗಳೂರಿನ ಅವೆನ್ಯೂ ರೋಡಿನ ಶಾಖೆಯು ಬಾಕಿ ಸಾಲ ಹಿಂಪಡೆಯಲು ಮಠದ ಆಸ್ತಿಯೊಂದನ್ನು ಮಾರಲು ಮುಂದಾಯಿತು. ಪಡೆದ ಸಾಲಕ್ಕೆ ಗ್ಯಾರಂಟಿಯಾಗಿ ನೀಡಲಾಗಿದ್ದ ಬೆಂಗಳೂರಿನ ಗಾಂಧಿನಗರದಲ್ಲಿರುವ 32 ಸಾವಿರ ಚದುರಡಿಯ ಜಾಗ ಅದು. 50 ಕೋಟಿ ರೂಪಾಯಿಗೂ ಹೆಚ್ಚು ಬೆಲೆಯ ಆ ಆಸ್ತಿ ಮಾರಿಸಿಬಿಟ್ಟರೆ ತನ್ನ ಸಾಲ ಹಿಂತಿರುಗಿ ಬಂದಂತೆಯೇ ಸರಿ ಎಂದು ಬ್ಯಾಂಕ್‌ನ ಅಧಿಕಾರಿಗಳು ಲೆಕ್ಕಹಾಕಿದ್ದರು. ಅದರಂತೆ ಆಸ್ತಿ ಮಾರಾಟದ ಬಗ್ಗೆ ಪತ್ರಿಕಾ ಜಾಹೀರಾತುಗಳೂ ಪ್ರಕಟವಾಗಿದ್ದವು. ಆದರೆ ಆ ಆಸ್ತಿ ವಿಚಾರದಲ್ಲಿ ನಿರಂಜನ ಸ್ವಾಮಿ ಎಂಬುವರ ಹೆಸರೂ ತಳುಕುಹಾಕಿಕೊಂಡಿತ್ತು. ಅಲ್ಲದೆ ಆಸ್ತಿ ಮಾರಾಟ ನಡೆಯುವ ಮುನ್ನವೇ ಮಠದ ಭಕ್ತರಲ್ಲೊಬ್ಬರಾದ ಪ್ರಕಾಶ್ ಎಂಬುವರ 'Debt Recovery Tribunal'ಗೆ ಹೋಗಿ ತಡೆಯಾಜ್ಞೆ ತಂದರು.

ಸಾಲ ವಸೂಲಾತಿ ವಿಚಾರ ಮತ್ತೆ ಎಳೆದಾಡತೊಡಗಿತು.

ಈ ಮಧ್ಯೆ 2011ರ ಮೇ ತಿಂಗಳಿನಲ್ಲಿ ಎಲ್.ಕೆ.ಶ್ರೀಕಲಾ ಎಂಬುವವರು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಚೀಫ್ ಮ್ಯಾನೇಜರ್ ಆಗಿ ಬೆಂಗಳೂರಿಗೆ ಬಂದಿಳಿದರು. ಈಕೆ ಕೇರಳದ ತ್ರಿವೇಂಡ್ರಂನವರು.

ಬ್ಯಾಂಕ್ ಎಸ್‌ಜೆಎಂ ಸಂಸ್ಥೆಗೆ ನೀಡಿದ್ದ ಸಾಲದ ಮೊತ್ತ ದೊಡ್ಡದಾಗಿದ್ದ ಕಾರಣ ವಸೂಲಿ ಮಾಡಲು ಈಕೆ ದಾರಿ ಹುಡುಕತೊಡಗಿದರು. ಡಿಆರ್‌ಟಿಯಲ್ಲಿ ವಿಚಾರಣೆಯು ತನ್ನದೇ ಸಮಯ ತೆಗೆದುಕೊಳ್ಳುತ್ತಿತ್ತು. ಆದರೆ ಇದೇನು ತಲೆ ಹೋಗುವ ಅಥವಾ ಬ್ಯಾಂಕೇ ಮುಳುಗಿ ಹೋಗಿಬಿಡುವಂಥ ಪ್ರಕರಣವೇನಾಗಿರಲಿಲ್ಲ. ಅಲ್ಲದೆ ಎಸ್‌ಜೆಎಂ ಸಂಸ್ಥೆ ನಿಭಾಯಿಸಲಿಕ್ಕಾಗದಷ್ಟು ಬೃಹತ್ ಸಾಲದ ಮೊತ್ತವೂ ಆಗಿರಲಿಲ್ಲ. ಆದರೆ ಮಠದ ಹಿನ್ನೆಲೆ ಹಾಗೂ ಕರ್ನಾಟಕದ ಆಗುಹೋಗುಗಳ ಪರಿಚಯವೇ ಇರದಿದ್ದ ಶ್ರೀಕಲಾ ವಿಚಿತ್ರವಾಗಿ ವರ್ತಿಸಲು ಶುರುಮಾಡಿದರು. ಹೇಳದೆ ಕೇಳದೆ ಮಠದ ಬಳಿ ಹೋಗುವುದು ಬಸವೇಶ್ವರ ಕಾಲೇಜಿಗೆ ಹೋಗಿ ಫೋಟೋ ತೆಗೆಯುವುದು, ಯಾರು ಎದುರಿಗೆ ಸಿಕ್ಕಿದರೂ ಸಾಲದ ವಿಚಾರವೆತ್ತಿ ಮಾತನಾಡುವುದು... ಹೀಗೆ

ಇದರ ಮುಂದುವರೆದ ಭಾಗವೇ ಶ್ರೀಕಲಾ ಮಾಜಿ ರಾಷ್ಟ್ರಪತಿ ಡಾ.ಕಲಾಂರಿಗೆ ಪತ್ರ ಬರೆದ ಪ್ರಸಂಗವು.


ಶ್ರೀಕಲಾರ ಪೆದ್ದು ಪತ್ರ ಇಂತಿದೆ

ಮೊನ್ನೆ ಆಗಸ್ಟ್ 15ರಂದು ಚಿತ್ರದುರ್ಗದ ಬಸವೇಶ್ವರ ಕಾಲೇಜಿನ ಸಭಾಂಗಣದಲ್ಲಿ ಈ ಸಾಲಿನ 'ಬಸವಶ್ರೀ' ಪ್ರಶಸ್ತಿ ವಿತರಣಾ ಸಮಾರಂಭ ನಡೆಯಿತು. ಶ್ರೀಲಂಕಾದ ಗಾಂಧಿವಾದಿ, ಸರ್ವೋದಯ ಶ್ರಮದಾನ ಆಂದೋಲನದ ಹರಿಕಾರ ಎ.ಟಿ.ಆರ್ಯರತ್ನ ಪ್ರಶಸ್ತಿಗೆ ಆಯ್ಕೆಯಾಗಿದ್ದರು. ಪ್ರಶಸ್ತಿ ವಿತರಿಸಿ ಕಾಲೇಜಿನ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಲು ಮಾಜಿ ರಾಷ್ಟ್ರಪತಿ ಡಾ.ಅಬ್ದುಲ್ ಕಲಾಂರನ್ನು ಆಹ್ವಾನಿಸಲಾಗಿತ್ತು. ಬರುವನೆಂದು ಕಲಾಂ ಒಪ್ಪಿಕೊಂಡೂ ಆಗಿತ್ತು.

ಬ್ಯಾಂಕಿನ ಶ್ರೀಕಲಾ ಕಿವಿಗೂ ಈ ವಿಚಾರ ಬಿತ್ತು. 'ಈಗ ನೋಡಿ ನಿಮಗೆ ಏನ್ ಮಾಡ್ತೀನಿ' ಎನ್ನುವಂತೆ ಈಯಮ್ಮ ಪೆನ್ನೆತ್ತಿಕೊಂಡು ಡಾ.ಕಲಾಂರಿಗೆ ಒಂದು ಪತ್ರ ಬರೆದೇ ಬಿಟ್ಟರು.

Respected Sir,

Let me introduce myself as Sreekala L.K., Chief Manager, Union Bank of India, Bangalore...ಎಂದು ಶುರು ಮಾಡಿ ಒಂದೂವರೆ ಪುಟದಷ್ಟು ಹರಿಕತೆ ಹೇಳಿಕೊಂಡಿದ್ದಾರೆ ಈ ಶ್ರೀಕಲಾ.


ಎಸ್‌ಜೆಎಂ ವಿದ್ಯಾಪೀಠ.

Respected Sir,

Let me introduce myself as Sreekala L K, Chief Manager, Asset Recovery Branch, Union B India, Avenue Road, Bangalore.

Sir the purpose of this mail is that today I came to know that your goodself is visiting M/s S[JM] Vidyapeetha at Chitradurga on 15th instant. Sir , Shri Shivamurthy Niranjana Murugarajend[ra] swamiji who is the President of SJM Vidyapeetha availed credit facilities to the tune of Rs.4[2] crores from Union Bank of India, Gandhinagar branch in 2005, for construction of Basawes[hwara] Medical College, Engineering College, Dental College, Auditorium, Boys Hostel, Girls Hoste[l,] staff quarters.


ಶ್ರೀಕಲಾ ಡಾ. ಕಲಾಂರಿಗೆ ಬರೆದಿರುವ ಚಾಡಿ ಪತ್ರ

Sir, kindly help me in sorting out this issue since huge amount of public money is involved.

Sir, this is a major Non Performing account of Bangalore region. Sir, I requestyou to kindl[y help] me to sort out this issue so as to protect the interest of my Esteemed Institution.

Yours sincerely,

SREEKALA L K
CHIEF MANAGER
ARB BANGALORE.
Mob No 09902724757 off No 080-22958279





ಆದರಲ್ಲಿ ತಮ್ಮ ಬ್ಯಾಂಕು ಎಸ್‌ಜೆಎಂ ಸಂಸ್ಥೆಗೆ ಸಾಲಕೊಟ್ಟಿರ ವಿವಾದವಾಗಿದ್ದು, ಕೇಸ್ ನಡೆದದ್ದು- ತಾನು ಸಾಲ ವಸೂಲಾತಿಗ ಓಡಾಡಿದ್ದೆಲ್ಲವನ್ನೂ ಹೇಳಿದ್ದಲ್ಲದೆ 'ಇವರಿಗೆ ಸಾಲ ತೀರಿಸುವ ಶಕ್ತಿಯಿದ್ದ ತೀರಿಸುತ್ತಿಲ್ಲ ನೋಡಿ ಇವರೆ...' ಎನ್ನುವಂತೆ ಅಲವತ್ತುಕೊಂಡಿದ್ದಾರೆ.

ವಿಚಿತ್ರ ಅಂದರೆ ಯಡಿಯೂರಪ್ಪನೂ ಇವರಿಗೆ ಫಂಡ್ ಕೊಟ್ಟಿದ ಎಂದು ಉಡಾಫೆಯ ಮಾತನ್ನೂ ಸೇರಿಸಿದ್ದಾರೆ.

ಹೀಗೆ ತನ್ನ ಮನಸ್ಸಿಗೆ, ಕಲ್ಪನೆಗೆ ತೋಚಿದ್ದನ್ನೆಲ್ಲಾ ಹೇಳಿ ಕೊನೆಗೆ 'ತಾ ಆಗಸ್ಟ್ 15ರಂದು ಚಿತ್ರದುರ್ಗದ ಫಂಕ್ಷನ್‌ಗೆ ಬರುತ್ತಿದ್ದೀರಲ್ಲಾ ಆಗ ನ ಬ್ಯಾಂಕಿನ ಸಾಲ ಮರುಪಾವತಿ ಬಗ್ಗೆ ವಿಚಾರಿಸಿ ಬಗೆಹರಿಸಿಕೊಡಿ' ಅಂತ ಸೇರಿಸಿದ್ದಾರೆ.

ಇದು ನಿಜಕ್ಕೂ ತಮಾಷೆಯಾಗಿದೆ, ಅಸಹ್ಯಕರವೂ ಆಗಿದೆ.





ಡಾ. ಕಲಾಂರ ಸ್ಥಾನಮಾನವೇನು? ಯಾರ ಹ ಏನು ಮಾತನಾಡಬೇಕೆಂಬ ವಿವೇಚನೆಯೇ ಇ ಶ್ರೀಕಲಾರ ಉದ್ದೇಶ ಡಾ.ಕಲಾಂರನ್ನು 'ಬಸವಶ್ರೀ ಪ್ರಶಸ್ತಿ ಸಮಾರಂಭಕ್ಕೆ ಬರದಂತೆ ತಡೆಯುವುದೇ ಆಗಿ ಕಲಾಂ ಬಾರದಿದ್ದರೆ ಮಠದವರಿಗೆ ಮುಜುಗರವಾಗುತ್ ಹಾಗೆ ಆಗಲಿ ಎಂಬ ದುರುದ್ದೇಶ ಆಕೆಯದು. ಜೊತೆ ಬಸವಶ್ರೀ ಸಮಾರಂಭ ನಡೆಯುವ ಸಂದರ್ಭದ ಸಾಲ ವಸೂಲಾತಿ ಬಗ್ಗೆ ಪತ್ರಿಕಾ ಜಾಹೀರಾತ ಕೊಟ್ಟು ಡಾ. ಕಲಾಂರಿಗೂ ಮುಜುಗರವಾಗುವ ಸ್ಥಿತಿ ಸೃಷ್ಟಿಸಲು ನೋಡಿದ್ದಾರೆ. ಆದರೆ ಡಾ.ಕಲಾಂ ಶ್ರೀಕಲ ಚಾಡಿ ಮಾತಿಗೆ ಕಿವಿಗೊಡದೆ ಬಂದು ಸಮಾರ ನಡೆಸಿಕೊಟ್ಟರು.

ಇಲ್ಲಿನ ಪ್ರಶ್ನೆ ಏನೆಂದರೆ ಬ್ಯಾಂಕ್ ಅಧಿಕಾರಿ ಶ್ರೀಕಲಾ ಮಾಜಿ ರಾಷ್ಟ್ರಪತಿ ತರದ ಗಣ್ಯರೊಬ್ಬ ಈ ತರದ ಚಿಲ್ಲರೆ ಪತ್ರ ಬರೆದದ್ದು ಸರಿಯೇ? ಆಕೆ ಅಸಲಿ ಉದ್ದೇಶ ಸಾಲ ವಸೂಲಾತಿಯದ್ದೋ ಅಥ ಸಂಸ್ಥೆಗೆ ಕಿರುಕುಳ ನೀಡಿ ಮಸಿ ಹಚ್ಚುವುದೋ?

ಬ್ಯಾಂಕ್‌ನ ಸಾಲ ವಸೂಲಾತಿ ವಿಧಾನಗಳಲ್ಲಿ ತರದ ವಕ್ರಮಾರ್ಗ ಅನುಸರಿಸಲು ಅವಕಾಶವಿದೆಯೆ

ಇಲ್ಲಿ ಶ್ರೀಕಲಾ ಮಾಜಿ ರಾಷ್ಟ್ರಪತಿಗೆ ಕಳಿಸಿರುವ ಇ-ಮೇಲ್ ಪ್ರಕಟಿಸಲಾಗಿ ಡಾ. ಕಲಾಂರನ್ನೂ ಈಕೆ ಸಾಲ ವಸೂಲಾತಿ ಏಜೆಂಟ್ ಅಂತ ತಿಳಿದಿದ್ದಾ ಏನು? ಈ ಪ್ರಶ್ನೆಗಳಿಗೆ ಬ್ಯಾಂಕ್‌ನ ಹಿರಿಯ ಅಧಿಕಾರಿಗಳೇ ಉತ್ತರಿಸಬೇಕು

ಅಂದ ಹಾಗೆ

ಚಿತ್ರದುರ್ಗದ ಜೆಡಿಎಸ್ ಶಾಸಕ ಬಸವರಾಜನ್ ಈ ಪತ್ರ ಪಿತೂರಿ ಹಿಂದಿದ್ದಾರೆ ಎನ್ನುವ ಸುದ್ದಿ ಇದೆ.

ಇಂತಹ ಚಿಲ್ಲರೆ ಕೆಲಸಗಳು ಬಸವರಾಜನ್‌ಗೆ ಗೌರವ ತರುವು ಅಷ್ಟೇ.

• ಪಾರ್ವತಿ

ಸುವರ್ಣ ಗ್ರಾಮ

3ನೇ ಪುಟದಿಂದ...

ಪಡೆದರು. ಆದರೆ ಬಡತನದ ಬೇಗೆಯಿಂದ ಅವರು ಊರಲ್ಲಿ ಜೀವನ ಸಾಗಿಸಲಾಗದೇ ಹತ್ತಿರದ ನಗರಗಳಿಗೆ ವಲಸೆ ಹೋದರು. ಹೋಗುವ ಮುನ್ನ ತಮ್ಮ ಭೂಮಿಯ ಜವಾಬ್ದಾರಿಯನ್ನು ಬೇರೆಯವರಿಗೆ ವಹಿಸಿಕೊಟ್ಟಿದ್ದರು. ಆದರೆ ಅವರಿಗೂ ಅಲ್ಲಿ ಬೇಸಾಯ ಮಾಡಲಾಗಲಿಲ್ಲ. ಇದೆಲ್ಲದರಿಂದಾಗಿ ದಲಿತರು ಪಡೆದ ಸಾಲ ಮತ್ತು ಅದರ ಬಡ್ಡಿ ಬೆಳೆದು 75,000 ಕ್ಕೆ ಏರಿತು. ಕೊನೆಗೆ 1983 ರಲ್ಲಿ ಬ್ಯಾಂಕಿನವರು ದಲಿತರ ಭೂಮಿಯನ್ನು ಹರಾಜು ಹಾಕಿ ತಮ್ಮ ಸಾಲವನ್ನು ವಸೂಲಿ ಮಾಡಿಕೊಳ್ಳಲು ಮುಂದಾದರು. ಆಗ ಅಣ್ಣಾ ಆ ದಲಿತ ಕುಟುಂಬಗಳ ನೆರವಿಗೆ ಬಂದರು.

ಆಗ ಊರಿನ ಜನರನ್ನು ದಲಿತರ ಪರವಾಗಿ ಅಣ್ಣಾ ಸಂಘಟಿಸಿದರು. ತರುಣ ಮಂಡಳಿಯು ದಲಿತರ ಭೂಮಿಯ ಜವಾಬ್ದಾರಿಯನ್ನು ಹತ್ತು ವರ್ಷಗಳ ಅವಧಿಗೆ ವಹಿಸಿಕೊಂಡಿತು. ಅಣ್ಣಾ ಅವರು ಸ್ವತಃ 10,000 ರೂಪಾಯಿ ಸಾಲ ಪಡೆದು ದಲಿತರು ಪಾವತಿಸದಿದ್ದ ವಿದ್ಯುತ್ ಬಿಲ್ ಅನ್ನು ಕಟ್ಟಿದರು. ದಲಿತರ ಭೂಮಿಯಲ್ಲಿ ದುಡಿದ ತರುಣ ಮಂಡಳಿ ಮೂರು ವರ್ಷಗಳಲ್ಲಿ ಇಡೀ ಸಾಲವನ್ನು ತೀರಿಸಿ ಆ ಭೂಮಿಯನ್ನು ಮತ್ತೆ ದಲಿತರಿಗೆ ವಹಿಸಿತು.

ನಿಜಕ್ಕೂ ಅಣ್ಣಾ ಅವರಿಂದಾಗಿ ಇವತ್ತು ರಾಲೇಗಾಂವ್ ಸಿದ್ಧಿ ಸಮೃದ್ಧ ಗ್ರಾಮವಾಗಿದೆ. ಇದನ್ನು ಸಾಧಿಸಿದ್ದಕ್ಕೆ ಅಣ್ಣಾ ಅವರಿಗೆ ಪದ್ಮಶ್ರೀ, ಪದ್ಮ ಭೂಷಣ ಸೇರಿದಂತೆ ಹಲವಾರು ಪ್ರಶಸ್ತಿಗಳು ಸಂದಿವೆ.

ರಾಲೇಗಾಂವ್ ಸಿದ್ಧಿಯಲ್ಲಿ ಅಣ್ಣಾ ಅವರ ಮಾತೇ ಕೊನೆ. ಅವರ ಮಾತನ್ನು ಯಾರೂ ಮೀರುವುದಿಲ್ಲ. ಅದಕ್ಕೆ ಕಾರಣ ಅವರ ಪ್ರಜಾಸೇವಾಪರತೆ, ಪ್ರಾಮಾಣಿಕತೆ, ಸರಳತೆ ಮತ್ತು ಸಮುದಾಯದ ಉದ್ಧಾರಕ್ಕಾಗಿ ಅವರು ತಮ್ಮನ್ನು ಅರ್ಪಿಸಿಕೊಂಡಿರುವುದೇ ಆಗಿದೆ.

ಆದರೂ ಇಷ್ಟೆಲ್ಲ ಹೇಳಿದ ನಂತರ ಅಣ್ಣಾ ಅವರ ಕೆಲವು ಮಿತಿಗಳ ಬಗ್ಗೆಯೂ ಹೇಳಬೇಕಿದೆ. ಉದಾಹರಣೆಗೆ ಮಾಂಸಾಹಾರದ ಬಗೆಗಿನ ಅವರ ನಿಲುವು ಮತ್ತು ದಲಿತರು ಅದನ್ನು ಬಿಡುವಂತೆ ಅವರು ಪಾಲಿಸಿದ ಕ್ರಮವನ್ನು ಒಪ್ಪಿಕೊಳ್ಳಲಾಗುವುದಿಲ್ಲ.

ಅಣ್ಣಾ ಅವರಿಗೆ ಸಸ್ಯಹಾರದಲ್ಲಿ ಪರಮ ನಂಬಿಕೆ. ಅದಕ್ಕೆ ಕಾರಣ ಸಸ್ಯಾಹಾರಿಗಳು ಸಾಧು ಸ್ವಭಾವದವರಾಗಿ ತ್ತಾರೆಂದೂ ಮಾಂಸಾಹಾರಿಗಳು ಉಗ್ರವಾದಿಗಳಾಗು ತ್ತಾರೆಂದೂ ಅಣ್ಣಾ ನಂಬಿರುವುದು. ಈ ನಂಬಿಕೆಗೆ ಯಾವ ವೈಜ್ಞಾನಿಕ ಸಾಕ್ಷಿಗಳಿಲ್ಲ. ಆದರೂ ತಮ್ಮ ಈ ನಂಬಿಕೆಯ ಪ್ರಕಾರ ಊರಿನ ಜನರೆಲ್ಲ ಮಾಂಸಾಹಾರವನ್ನು ಬಿಡಬೇಕೆಂದು ಅಣ್ಣಾ ಒತ್ತಾಯಿಸಿದರು. ದಲಿತರನ್ನೂ ಒಪ್ಪಿಸಲು ಅಣ್ಣಾ ಮುಂದಾದರು. ಅವರೇ ಹೇಳಿರುವಂತೆ "ನಾವು ದಲಿತರ ಮನೆಗೆ ಹೋಗುತ್ತಿದ್ದೆವು. ಮೇಲುಜಾತಿಯವರು ತಮ್ಮವರ ಮನೆಗೆ ಬಂದಿದ್ದಾರೆಂದು ಅಲ್ಲಿ ದಲಿತರೆಲ್ಲ ಸೇರುತ್ತಿದ್ದರು. ನಾವು ಅವರು ಕೊಟ್ಟ ನೀರನ್ನು ಕುಡಿಯುತ್ತಿದ್ದೆವು ಮತ್ತು ಅವರೊಂದಿಗೆ ಊಟ ಮಾಡುತ್ತಿದ್ದೆವು. ಆ ಮೂಲಕ ನಮ್ಮ ನಡುವೆ ವಿಶ್ವಾಸ ಬೆಳೆಯಿತು. ಆಗ ಅವರನ್ನು ಜನ ಯಾಕೆ ದೂರವಿಟ್ಟಿದ್ದಾರೆ ಎಂದು ವಿವರಿಸಿ ನಿಮ್ಮ ಜೀವನ ಶೈಲಿ ಹೊಲಸು, ನಿಮ್ಮ ಆಹಾರ ಪದ್ಧತಿ ಹೊಲಸು, ನಿಮ್ಮ ಯೋಚನಾಕ್ರಮ ಹೊಲಸು; ನೀವು ಬದಲಾಗಬೇಕು ಎಂದು ಹೇಳುತ್ತಿದ್ದೆವು. ಹೀಗೆ ಮತ್ತೆಮತ್ತೆ ಹೇಳುವ ಮೂಲಕ ಅವರು ಮಾಂಸಾಹಾರವನ್ನು ತ್ಯಜಿಸುವಂತೆ ಮಾಡಿದೆವು." ಇವತ್ತು ರಾಲೇಗಾಂವ್ ಸಿದ್ಧಿಯಲ್ಲಿ ಯಾರೂ ಮಾಂಸಾ ಹಾರಿಗಳಿಲ್ಲ. ಆದರೆ ಆ ನಿಟ್ಟಿನಲ್ಲಿ ಯಶಸ್ವಿಯಾಗಲು ಅಣ್ಣಾ ಪಾಲಿಸಿದ ನಂಬಿಕೆಯನ್ನಾಗಲಿ, ಬಳಸಿದ ಪದಗಳನ್ನಾಗಲಿ ಒಪ್ಪಲಾಗುವುದಿಲ್ಲ.

ಹಾಗೆಯೇ ಅಣ್ಣಾ ಅವರು ದಲಿತರ ಬ ಗಾಂಧೀಜಿಯಂತೆಯೇ ಯೋಚಿಸುತ್ತಾರೆ; ಅವರೆಲ್ಲ ತ ಜಾತಿ ಕಸುಬನ್ನು ಮಾಡಿಕೊಂಡು ಹೋಗಬೇಕು ಎನ್ನುತ ಉದಾಹರಣೆಗೆ ಅಣ್ಣಾ ಅವರ ಎಲ್ಲ ಸಾಧನೆಗಳ ನಡುವೆ ಇವತ್ತಿಗೂ ರಾಲೇಗಾಂವ್‌ನಲ್ಲಿ ಹಲವು ಮಾದರು ತ ಜಾತಿ ಕಸುಬಾದ ಪರಕೆ ಮತ್ತು ಹಗ್ಗ ತಯಾರಿಸ ಕೆಲಸದಲ್ಲಿ ಮುಂದುವರೆದಿದ್ದಾರೆ.

ಇವತ್ತು ರಾಲೇಗಾಂವ್ ಸಿದ್ಧಿ ಜನರಿಗೆ ಅಣ್ಣಾ ಅವ ಸರ್ವಸ್ವ. ಅಲ್ಲಿ ವೈಯಕ್ತಿಕ ಹಕ್ಕು, ಆಯ್ಕೆಗಳಿಲ್ಲದಿದ್ದ ಗ್ರಾಮಸ್ಥರು "ನಾವೆಲ್ಲ ಸೈನಿಕರಿದ್ದಂತೆ, ಅಣ್ಣಾ ನ ನಾಯಕರಿದ್ದಂತೆ. ಅವರು ಹೇಳಿದ್ದನ್ನು ನಾವು ಪಾಲಿಸುತ್ತೇವ "ಅಣ್ಣಾಜಿ ನಮ್ಮ ದೇವರು", "ಅಣ್ಣಾಜಿ ಅವರಿಂದ ನಾವೆಲ್ಲ ಒಂದೇ ಹಳ್ಳಿಯವರಲ್ಲ, ಬದಲಾಗಿ ನಾವೆಲ್ಲ ಒಂ ಕುಟುಂಬ ದವರು" ಎಂದೆಲ್ಲ ಅಣ್ಣಾ ಹಜಾರೆ ಅವರ ಬಣ್ಣಿಸುತ್ತಾರೆ.

ಅಣ್ಣಾ ತಮ್ಮ ನಿಸ್ವಾರ್ಥ ಜನಸೇವೆಯಿಂದಾಗಿ ರಾ ಗಾಂವ್ ಸಿದ್ಧಿಯ ನಾಯಕರಾಗಿದ್ದಾರೆ ನಿಜ. ಆದರೆ ಇವ ಅಣ್ಣಾ ಅವರು ಉಪವಾಸ ಕೂತಿರುವುದನ್ನು ನೋಡಿದ ಅವರು ಎಲ್ಲೋ ತಮ್ಮ ಆಳದಲ್ಲಿ ಇಡೀ ಭಾ ರಾಲೇಗಾಂವ್ ಸಿದ್ಧಿಯ ಎಕ್ಸ್‌ಟೆಂಡೆಡ್ ಭಾಗವೆಂಬ ಭಾವಿಸಿದ್ದಾರೆಯೇ ಎಂಬ ಗುಮಾನಿ ಕಾಡಲಾರಂಭಿಸಿತು

• ಗೌರಿ ಲಂಕೇ

ನಾನು ಅಣ್ಣಾ ಆಗಲಾರೆ



• ಇಂಗ್ಲಿಷ್ ಮೂಲ: ಆರುಂಧತಿ ರಾಯ್

ಕನ್ನಡಕ್ಕೆ : ಕೆ.ಪಿ. ಸುರೇಶ್ ಮತ್ತು ಗೌರಿ ಲಂಕೇಶ್

...ಲೀವರ ಮಾರ್ಗ ಗಾಂಧೀಯ ಮಾರ್ಗ ಇರಬಹುದು, ...ರೆ ಅವರ ಬೇಡಿಕೆಗಳಂತೂ ಖಂಡಿತಾ ಅಲ್ಲ.

...ನಾವು ಟಿವಿಯಲ್ಲಿ ನೋಡುತ್ತಿರುವುದು ಕ್ರಾಂತಿಯೆಂದಾ... ಇದು ಇತ್ತೀಚಿಗಿನ ತೀರಾ ಮುಜುಗರದ ಮತ್ತು ...ಿ ಇಲ್ಲದ ಕ್ರಾಂತಿಯೇ ಸೈ. ಯಾಕೆಂದರೆ ಇವತ್ತು ...ಲೋಕಪಾಲ್ ಬಿಲ್ ಬಗ್ಗೆ ಯಾರನ್ನೇ ಪ್ರಶ್ನಿಸಿದರೂ ...ಗೆ ದೊರಕುವ ಉತ್ತರಗಳು ಹೀಗಿರುತ್ತವೆ: 1. ವಂದೇ ...ತರಂ 2. ಭಾರತ್ ಮಾತಾಕೀ ಜೈ 3. ಭಾರತ ...ದರೆ ಅಣ್ಣಾ, ಅಣ್ಣಾ ಅಂದರೆ ಭಾರತ 4. ಜೈ ಹಿಂದ್. ...ಗೆ ಬೇಕಾದ ಉತ್ತರವನ್ನು ಟಿಕ್ ಮಾಡಿ.

...ತೀರಾ ಭಿನ್ನ ಕಾರಣ ಮತ್ತು ಭಿನ್ನ ವಿಧಾನಗಳನ್ನು ...ದಿದ್ದರೂ ಮಾವೋವಾದಿಗಳಿಗೂ, ಜನಲೋಕಪಾಲ್ ...ದೆಗೆ ಒತ್ತಾಯಿಸುತ್ತಿರುವವರ ನಡುವೆ ಒಂದು ಸಾಮ್ಯತೆ ... ಇವೆರಡರ ಉದ್ದೇಶವೂ ಪ್ರಭುತ್ವವನ್ನು ಕಿತ್ತೊಗೆಯು... ಆಗಿದೆ. ಮಾವೋವಾದಿಗಳು ತಳಮಟ್ಟದಿಂದ ಸಶಸ್ತ್ರ ...ರಾಟದ ಮೂಲಕ ಕಡುಬಡವರಾದ ಆದಿವಾಸಿಗಳ...ನ್ನು ನೆಚ್ಚಿಕೊಂಡಿದ್ದರೆ, ಜನಲೋಕಪಾಲ್ ಮಸೂದೆಗೆ ...ಯಿಸುತ್ತಿರುವವರು ಮೇಲಿಂದ ಕೆಳಕ್ಕೆ ಓರ್ವ ಹೊಸ ... ಮತ್ತು ಸಮಾಜದ ಉಳ್ಳವರನ್ನು ಬೆನ್ನಿಗಿಟ್ಟುಕೊಂಡು ...ಹಿತ ಗಾಂಧಿ ಮಾರ್ಗದ ಮೂಲಕ ಇದನ್ನು ...ಸಹೊರಟಿದ್ದಾರೆ. (ತನ್ನನ್ನು ಕಿತ್ತೊಗೆಯಲು ಸರ್ಕಾರವೂ ...ಕೈಲಾಗಿದ್ದನ್ನು ಮಾಡುವ ಮೂಲಕ ಸಹಕರಿಸುತ್ತಿದೆ.)

...ಕಳೆದ ಏಪ್ರಿಲ್ ತಿಂಗಳಿನಲ್ಲಿ, ಅಂದರೆ ಅಣ್ಣಾ ತಮ್ಮ ...ವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದ ಕೆಲವು ದಿನಗಳ ...ಕ, ತನ್ನ ವಿಶ್ವಾಸಾರ್ಹತೆಯನ್ನು ಜಜ್ಜು ಮಾಡಿದ್ದ ಬೃಹತ್ ...ರಣಗಳಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ...ರವು ಅಣ್ಣಾ ಟೀಮ್‌ಅನ್ನು ಹೊಸ ಭ್ರಷ್ಟಾಚಾರ ...ಧ ಕಾನೂನಿನ ಕರಡು ಸಿದ್ಧಪಡಿಸುವ ಮಾತುಕತೆಗೆ ...ಹ್ವಾನಿಸಿತು. ಆದರೆ ಒಂದೆರಡು ತಿಂಗಳೊಳಗೆ ಸರ್ಕಾರ ...ಪಸರತ್ತಿಗೆ ಇತಿಶ್ರೀ ಹಾಡಿ ತನ್ನದೇ ಕರಡನ್ನು ಸಂಸತ್ತಿನಲ್ಲಿ ...ಡಿಸಿತು. ಈ ಕರಡು ಅದೆಷ್ಟು ದೋಷಪೂರಿತವಾಗಿದೆ ...ದರೆ ಯಾರೂ ಇದನ್ನು ಗಂಭೀರವಾಗಿ ಪರಿಗಣಿಸಲು ...ಧ್ಯವೇ ಇಲ್ಲ.

...ಅನಂತರ ಆಗಸ್ಟ್ 16ರಂದು, ತನ್ನ ಎರಡನೆ ಸುತ್ತಿನ ...ಮರಣಾಂತ ಉಪವಾಸಕ್ಕೆ' ಸಜ್ಜಾಗುತ್ತಿದ್ದ ಅಣ್ಣಾ ಯಾವುದೇ ...ರಾಧ ಎಸಗುವ ಮೊದಲೇ ಸರ್ಕಾರ ಅವರನ್ನು ಬಂಧಿಸಿ ...ಗೆ ತಳ್ಳಿತು. ಆಗ ಜನಲೋಕಪಾಲ್ ಮಸೂದೆಯ ...ೀಕಾರಕ್ಕೆ ಆಗ್ರಹಿಸಿ ಪ್ರಾರಂಭವಾದ ಪ್ರತಿಭಟನೆಯ ...ಸತ್ತಾತ್ಮಕ ಹಕ್ಕಿನ ಹೋರಾಟವಾಗಿ ರೂಪಾಂತರ ...ಂಡಿತು. ಈ 'ಎರಡನೇ ಸ್ವಾತಂತ್ರ್ಯ ಸಂಗ್ರಾಮ' ಆರಂಭ ...ರ ಕೆಲವೇ ಗಂಟೆಗಳಲ್ಲಿ ಸರ್ಕಾರ ಅಣ್ಣಾ ಅವರನ್ನು ...ಗಡೆಗೊಳಿಸಿತು. ಆದರೆ ಅಣ್ಣಾ ಜೈಲು ಬಿಡಲು ...ಕರಿಸಿದ್ದಷ್ಟೇ ಅಲ್ಲ, ಸಾರ್ವಜನಿಕ ಸ್ಥಳದಲ್ಲಿ ಉಪವಾಸ ...ಸುವ ಹಕ್ಕಿಗಾಗಿ ಉಪವಾಸ ಕೂತರು. ಮೂರು ದಿನಗಳ ... ಜನ ಮತ್ತು ಟಿವಿ ಕ್ಯಾಮರಾಗಳು ಜೈಲಿನ ಹೊರಗೆ ...ಸಿದಂತೆ, ಅಣ್ಣಾ ತಂಡದ ಸದಸ್ಯರು ಬಿಗಿಬಂದೋಬಸ್ತು ...ಂಧಿರುವ ಜೈಲನ್ನು ಸುಲಭವಾಗಿ ಹೊಕ್ಕು ಹೊರಗೆ ...ತ್ತಿದ್ದರಲ್ಲದೆ ಅಣ್ಣಾ ಅವರ ಸಂದೇಶಗಳನ್ನು ಕ್ಯಾಮರಾಗಳಲ್ಲಿ ... ಹಿಡಿದು ಅವು ಟಿವಿ ಚಾನೆಲ್‌ಗಳ ಮೂಲಕ ...ರಗೊಳ್ಳುವಹಾಗೆ ಮಾಡಿದರು. (ಬೇರೆ ಯಾವ ...ಗಾದರೂ ಈ ಸವಲತ್ತು ಲಭ್ಯವಾಗಿತ್ತೇ?)

...ಇದೆಲ್ಲ ನಡೆಯುತ್ತಿರುವಾಗಲೇ ದೆಹಲಿ ಮುನ್ಸಿ...ಟಿಯ 250 ಸಿಬ್ಬಂದಿಗಳು, 15 ಟ್ರಕ್ಕುಗಳು ಮತ್ತು ... ಬುಲ್‌ಡೋಜರುಗಳು ಹಗಲೂರಾತ್ರಿ ದುಡಿದು ...ಕ್ಷ್ಯವಾಗಿದ್ದ ರಾಮಲೀಲಾ ಮೈದಾನವನ್ನು ಈ ವಿಜೃಂಭಿತ ...ರ್ಶನಕ್ಕೆ ಅಣಿಗೊಳಿಸಿದರು. ಸಾವಿರಾರು ಜನರ ...ಸ್ಥಿತಿಯಲ್ಲಿ, ನೂರಾರು ಕ್ಯಾಮರಾಗಳ ಎದುರು, ಭಾರತದ ... ಜೈತ್ರದ ತಪಾಸಣೆಯೊಂದಿಗೆ ಅಣ್ಣಾ ಅವರ ಮೂರನೆ ...ಯ 'ಆಮರಣಾಂತ ಉಪವಾಸ ಸತ್ಯಾಗ್ರಹದ ಪ್ರದರ್ಶನ' ...ರಂಭವಾಯಿತು. "ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ...ಶ ಒಂದಾಗಿದೆ" ಎಂದು ಟಿವಿ ನಿರೂಪಕರು ನಮಗೆ ... ಪ್ರತಿ ದಿನ ಹೇಳುತ್ತಿದ್ದಾರೆ.

ಅಣ್ಣಾ ವಿಧಾನ ಗಾಂಧೀಯ ವಿಧಾನ ಇರಬಹುದು. ಆದರೆ ಅವರ ಬೇಡಿಕೆ ಖಂಡಿತಾ ಅಲ್ಲ, ಗಾಂಧೀಜಿಯವರ ವಿಕೇಂದ್ರೀಕರಣ ಸಿದ್ಧಾಂತದ ಬದಲು ಜನಲೋಕಪಾಲ್ ಮಸೂದೆಯು ಕೇಂದ್ರೀಕೃತ ಮಾತ್ರವಲ್ಲದೆ ಕಠೋರ ಕಾನೂನಾಗಿ ತೋರಿಬರುತ್ತಿದೆ. ಈ ಮಸೂದೆಯು ಕಾನೂನಾದರೆ ಕೆಲವೇ ಕೆಲವು ಆಯ್ದ ಮಂದಿ, ಸಾವಿರಾರು ಸಿಬ್ಬಂದಿಗಳನ್ನು ಪಡೆದು, ಪ್ರಧಾನಮಂತ್ರಿಯಿಂದ ಹಿಡಿದು, ನ್ಯಾಯಾಂಗ, ಸಂಸತ್ತು, ಸಂಸತ್ತಿನ ಸದಸ್ಯರು, ಆಡಳಿತಾಂಗದ ಕಟ್ಟಕಡೆಯ ನೌಕರನ ತನಕ – ಎಲ್ಲರ ಮೇಲೆ ಪೊಲೀಸರಂತೆ ನಿಗಾ ಇಡುವ ಅಧಿಕಾರವನ್ನು ಪಡೆಯುತ್ತಾರೆ. ಅಷ್ಟೇ ಅಲ್ಲ, ಲೋಕಪಾಲರಿಗೆ ಎಲ್ಲರನ್ನು ತನಿಖೆಗೆ ಒಳಪಡಿಸುವ, ಎಲ್ಲರ ಮೇಲೆ ಕಣ್ಣಿಡುವ ಮತ್ತು ಮೊಕದ್ದಮೆಯನ್ನೂ ಹೂಡುವ ಅಧಿಕಾರ ಇರುತ್ತದೆ. ಲೋಕಪಾಲ ಸಂಸ್ಥೆಗೆ ಸ್ವಂತ ಜೈಲು ಇರುವುದಿಲ್ಲ ಎಂಬುದೊಂದನ್ನು ಬಿಟ್ಟರೆ, ಅದು ಸ್ವತಂತ್ರ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ. ಈಗಾಗಲೇ ಬೊಜ್ಜು ಬೆಳೆದು ಕೆರಗಟ್ಟಿಹೋಗಿರುವ ಅಧಿಕಾರ ಯಂತ್ರದ ಮೇಲೆ ನಿಯಂತ್ರಣ ಹೊಂದಲಿರುವ ಇನ್ನೊಂದು ಆಡಳಿತ ಯಂತ್ರವಾಗಲಿದೆ ಈ ಜನಲೋಕಪಾಲ. ಅಂದರೆ ಈಗ ಇರುವುದರೊಂದಿಗೆ ಮತ್ತೊಂದು!!

ಇದು ಕೆಲಸ ಮಾಡುತ್ತದೋ ಇಲ್ಲವೋ ಎನ್ನುವುದು ಭ್ರಷ್ಟಾಚಾರವನ್ನು ನಾವು ನೋಡುವ ಕ್ರಮದ ಮೇಲೆ ನಿಂತಿದೆ. ಭ್ರಷ್ಟಾಚಾರವೆಂದರೆ ಹಣಕಾಸಿನ ಅವ್ಯವಹಾರ ಅಥವಾ ಲಂಚ ಕೊಡುವುದು ಮಾತ್ರವೇನು? ಅಥವಾ ಅದು ಹಿಡಿಮುಷ್ಟಿಯಷ್ಟಿರುವ ಮಂದಿಯ ಕೈಲಿ ಕೇಂದ್ರೀಕೃತವಾಗುವ ಅಧಿಕಾರದ ಚಲಾವಣೆಯೇ? ಉದಾಹರಣೆಗೆ, ಮಾಲ್‌ಗಳ ನಗರಿಯಲ್ಲಿ ಬೀದಿಬದಿ ಮಾರಾಟ ಪ್ರತಿಬಂಧಿತವಾಗಿದೆ ಅಂದಿಟ್ಟುಕೊಳ್ಳಿ. ಆಗ ಚಿಲ್ಲರೆ ವ್ಯಾಪಾರಿಯೊಬ್ಬಳು ಪೊಲೀಸಿಗೋ, ಮುನ್ಸಿಪಾಲಿಟಿ ನೌಕರನಿಗೋ ಲಂಚ ಕೊಟ್ಟು ಮಾಲ್‌ಗಳಲ್ಲಿ ದುಬಾರಿ ಬೆಲೆ ತೆತ್ತು ಕೊಂಡುಕೊಳ್ಳಲಾಗದವರಿಗೆ ರಸ್ತೆಬದಿಯಲ್ಲಿ ಕಾನೂನನ್ನು ಉಲ್ಲಂಘಿಸಿ ತನ್ನ ವ್ಯಾಪಾರ ಮುಂದುವರೆಸುತ್ತಾಳೆ ಎಂದಿಟ್ಟುಕೊಳ್ಳಿ. ಅದು ಭೀಕರ ಅಪರಾಧವಾಗುತ್ತದೆಯೇ? ಭವಿಷ್ಯದಲ್ಲಿ ಈ ರಸ್ತೆ ಬದಿಯ ವ್ಯಾಪಾರಿ ಜನಲೋಕಪಾಲ್ ಮಂದಿಗೂ ಹಫ್ತಾ ನೀಡಬೇಕಾದೀತೇ? ಜನಸಾಮಾನ್ಯರು ಅನುಭವಿಸುವ ಬವಣೆಗೆ ಪರಿಹಾರ ಈಗಿರುವ ವ್ಯವಸ್ಥೆಯನ್ನು ಸರಿಪಡಿಸುವುದಾಗಿದೆಯೇ ಹೊರತು ಇನ್ನೊಂದು ಶಕ್ತಿ ಕೇಂದ್ರವನ್ನು ಸೃಷ್ಟಿಸುವುದಲ್ಲವಲ್ಲ?

ಈ ಮಧ್ಯೆ ಅಣ್ಣಾ ಅವರ ಕ್ರಾಂತಿಯ ದಿರಿಸು, ಧ್ವಜ, ರಂಗಸಜ್ಜಿಕೆ, ಆಕ್ರಮಕಾರಿ ರಾಷ್ಟ್ರೀಯವಾದದ ಸ್ಲೋಗನ್‌ಗಳು ಎಲ್ಲವೂ ಮೀಸಲಾತಿ ವಿರೋಧಿ ಚಳವಳಿ, ವಿಶ್ವಕಪ್ ವಿಜಯೋತ್ಸವ ಮತ್ತು ಅಣು ಪರೀಕ್ಷೆಯ ಹರ್ಷಾಚರಣೆಗಳಿಂದ ಕಡ ಪಡೆದದ್ದೇ ಆಗಿವೆ. ಇದೆಲ್ಲವೂ ನೀಡುತ್ತಿರುವ ಸಂದೇಶ ಯಾವುದೆಂದರೆ ಈ ಉಪವಾಸವನ್ನು ನಾವು ಬೆಂಬಲಿಸದಿದ್ದರೆ ನಾವು 'ನಿಜವಾದ ಭಾರತೀಯ'ರೇ ಅಲ್ಲ ಎಂಬುದು. ಇನ್ನು 24 ಗಂಟೆ ನ್ಯೂಸ್ ಚಾನೆಲ್‌ಗಳಂತೂ ಇದನ್ನು ಬಿಟ್ಟರೆ ಈ ದೇಶದಲ್ಲಿ ವರದಿ ಮಾಡುವಂತಹದ್ದು ಬೇರೇನೂ ನಡೆಯುತ್ತಿಲ್ಲವೇನೋ ಎಂಬಂತೆ ವರ್ತಿಸುತ್ತಿವೆ.

ಇವತ್ತು 'ಉಪವಾಸ'ವೆಂದರೆ ಮಣಿಪುರದಲ್ಲಿ ಸೈನಿಕರಿಗೆ ಯಾರ ಮೇಲೆ ಶಂಕೆ ಬಂದರೂ ಸಾಕು ಅವರನ್ನು ಕೊಲ್ಲುವ ಹಕ್ಕಿರುವ 'ಆಫ್ಸಾ' ಕಾನೂನಿನ ವಿರುದ್ಧ ಕಳೆದ ಹತ್ತು ವರ್ಷಗಳಿಂದ ಉಪವಾಸ ಮಾಡುತ್ತಿರುವ ಇರೋಮ್ ಶರ್ಮಿಳಾಳ ಉಪವಾಸವಲ್ಲ, ಇದೀಗ ಕೂಡಂಕುಳಂನ ಅಣು ಸ್ಥಾವರದ ವಿರುದ್ಧ ಸಾವಿರಾರು ಮಂದಿ ಮಾಡುತ್ತಿರುವ ಸರದಿ ಉಪವಾಸವಲ್ಲ, ಹಾಗೆಯೇ 'ಜನತೆ' ಅಂದರೆ ಇರೋಮ್ ಶರ್ಮಿಳಾಳ ಉಪವಾಸವನ್ನು ಬೆಂಬಲಿಸುತ್ತಿರುವ ಮಣಿಪುರಿ ರಾಜ್ಯದ ಜನರಲ್ಲ, 'ಜನತೆ' ಅಂದರೆ ಗಣಿ ಮಾಫಿಯಾ ಮತ್ತು ಪೊಲೀಸರ ದಬ್ಬಾಳಿಕೆ ಎದುರಿಸುತ್ತಿರುವ ಜಗತ್‌ಸಿಂಗ್‌ನಗರ, ಕಳಿಂಗನಗರ, ನಿಯಾಮ್‌ಗಿರಿ, ಬಸ್ತಾರ್ ಅಥವಾ ಜೈತಾಪುರದ ಸಾವಿರಾರು ಬಡವರಲ್ಲ, ಭೋಪಾಲ್ ಅನಿಲ ದುರಂತದ ಬಲಿಪಶುಗಳೂ ಅಲ್ಲ, ನರ್ಮದಾ ಯೋಜನೆಯಿಂದಾಗಿ ನಿರಾಶ್ರಿತರಾಗಿರುವ ಜನರೂ ಅಲ್ಲ, ತಮ್ಮ ಭೂಮಿಯ ಕಬಳಿಕೆಯನ್ನು ವಿರೋಧಿಸುತ್ತಿರುವ ನೊಯಿಡಾ, ಪೂಣೆ, ಹರ್‍ಯಾಣಾದ ರೈತರೂ ಅಲ್ಲ,

ಬದಲಾಗಿ ಈಗ 'ಜನತೆ' ಅಂದರೆ ಸಂಸತ್ತು ತನ್ನ ಜನಲೋಕಪಾಲ್ ಮಸೂದೆಯನ್ನು ಅಂಗೀಕರಿಸದಿದ್ದರೆ ಉಪವಾಸ ಮಾಡಿ ಪ್ರಾಣಬಿಡುವುದಾಗಿ ಬೆದರಿಸುತ್ತಿರುವ 74 ರ ವೃದ್ಧನ ಎದುರು ಜಮಾಯಿಸಿರುವ ಪ್ರೇಕ್ಷಕರು ಮಾತ್ರ. 'ಜನತೆ' ಅಂದರೆ ಸಾವಿರಾರು ಜನರನ್ನು ಟಿವಿ ಚಾನೆಲ್‌ಗಳು ಪವಾಡ ಸದೃಶವಾಗಿ ಮಿಲಿಯನ್‌ಗಟ್ಟಲೆಗೆ ಗುಣಿಸಿರುವ ಮಂದಿ ಮಾತ್ರ. "ಶತಕೋಟಿ ದನಿಗಳು ಮಾತಾಡಿವೆ, ಭಾರತವೆಂದರೆ ಅಣ್ಣಾ" ಎಂದು ಇವರೆಲ್ಲ ನಮಗೆ ಹೇಳುತ್ತಿದ್ದಾರೆ.

ಯಾರು ಈ ಹೊಸ ಸಂತ? ಜನರ ದನಿಯಾಗಿರುವ ಈತ ನಿಜಕ್ಕೂ ಯಾರು? ವಿಚಿತ್ರವೆಂದರೆ, ತುರ್ತಿನ ಸಂಕಷ್ಟಗಳ ಬಗ್ಗೆ ಈತ ಮಾತನಾಡಿದ್ದನ್ನು ನಾವ್ಯಾರೂ ಕೇಳಿಯೇ ಇಲ್ಲ, ತನ್ನ ನೆರೆಯ ಪ್ರದೇಶದಲ್ಲಿ ಸಂಭವಿಸಿದ ರೈತರ ಆತ್ಮಹತ್ಯೆಗಳ ಬಗ್ಗೆಯಾಗಲಿ, ಅಲ್ಲಿಂದ ತುಸುದೂರ ನಡೆಯುತ್ತಿರುವ ಆಪರೇಶನ್ ಗ್ರೀನ್ ಹಂಟ್ ಬಗ್ಗೆಯಾಗಲಿ, ಸಿಂಗೂರ್, ನಂದಿಗ್ರಾಮ್ ಮತ್ತು ಲಾಲಗಢ್ ಬಗ್ಗೆಯಾಗಲಿ, ಪೊಸ್ಕೋ ಬಗ್ಗೆಯಾಗಲಿ, ಎಸ್‌ಈಜೆಡ್‌ಗಳ ವಿರುದ್ಧ ಹೋರಾಟ ನಡೆಸಿರುವ ರೈತರ ಬಗ್ಗೆಯಾಗಲಿ ಈತ ಎಂದೂ ಮಾತನಾಡಿದ್ದಿಲ್ಲ, ಮಧ್ಯ ಭಾರತದಲ್ಲಿ ಸರ್ಕಾರವು ಸೈನ್ಯವನ್ನು ನಿಯೋಜಿಸುವ ಕ್ರಮಗಳ ಬಗ್ಗೆಯಾಗಲಿ ಅಣ್ಣಾ ಅವರಲ್ಲಿ ಯಾವ ಅಭಿಪ್ರಾಯವೂ ಇದ್ದಂತಿಲ್ಲ.

ಆದರೆ ಅಣ್ಣಾ ಅವರು ರಾಜ್ ಠಾಕರೆಯ ಮರಾಠಿ ಮನೂಸ್ ಎಂಬ ಪರಕೀಯ ದ್ವೇಷವನ್ನು ಬೆಂಬಲಿಸುತ್ತಾರೆ; 2002ರಲ್ಲಿ ಮುಸಲ್ಮಾನರ ವಿರುದ್ಧ ಹತ್ಯಾಕಾಂಡವನ್ನು ನಡೆಸಿದ ಗುಜರಾತಿನ ಮುಖ್ಯಮಂತ್ರಿಯನ್ನು 'ಅಭಿವೃದ್ಧಿಯ ಮಾದರಿ' ಎಂದು ಹೊಗಳುತ್ತಾರೆ. (ಅಣ್ಣಾ ತಮ್ಮ ಈ ಹೇಳಿಕೆಯನ್ನು ಹಿಂಪಡೆದರೂ ಮೋದಿ ಬಗ್ಗೆ ಇರುವ ಮೆಚ್ಚುಗೆ ಸ್ಥಿರವಾಗಿರುವಂತಿದೆ.)

ಈ ಎಲ್ಲ ಗದ್ದಲದ ನಡುವೆಯೂ ಹಲವು ಸಮಚಿತ್ತದ ಪತ್ರಕರ್ತರು ತಮ್ಮ ಕೆಲಸವನ್ನು ಮುಂದುವರೆಸಿದ್ದಾರೆ. ಆರೆಸ್ಸೆಸ್‌ನೊಂದಿಗೆ ಅಣ್ಣಾ ಅವರಿಗಿರುವ ಸಂಬಂಧದ ಬಗ್ಗೆ



ಈಗ ಎಲ್ಲರಿಗೆ ಗೊತ್ತಾಗಿದೆ. ಅಣ್ಣಾ ಅವರ ರಾಲೆಗಾಂವ್ ಸಿದ್ದಿಯನ್ನು ಅಭ್ಯಸಿಸಿರುವ ಮುಕುಲ್ ಶರ್ಮಾ ಅವರು ಹೇಳಿರುವಂತೆ, ಆ ಪ್ರದೇಶದಲ್ಲಿ ಕಳೆದ 25 ವರ್ಷಗಳಿಂದ ಗ್ರಾಮ ಪಂಚಾಯತಿಗಾಗಲಿ ಅಥವಾ ಸಹಕಾರಿ ಸಂಘಕ್ಕಾಗಲಿ ಯಾವ ಚುನಾವಣೆಗಳೂ ನಡೆದಿಲ್ಲ, ಅಷ್ಟೇ ಅಲ್ಲ 'ಹರಿಜನ'ರ ಬಗ್ಗೆ ಅಣ್ಣಾ ಅವರ ನಿಲುವೇನು ಎಂಬುದೂ ಈಗ ಬಹಿರಂಗಗೊಂಡಿದೆ. "ಮಹಾತ್ಮಾ ಗಾಂಧೀಜೀ ಅವರ ಕನಸಿನ ಪ್ರಕಾರ ಪ್ರತಿ ಹಳ್ಳಿಯಲ್ಲಿ ಒಬ್ಬ ಚಮ್ಮಾರ, ಒಬ್ಬ ಕುಂಬಾರ, ಒಬ್ಬ ಝಾಡಮಾಲಿ, ಇತ್ಯಾದಿ ಇರಲೇಬೇಕು. ಅವರೆಲ್ಲ ತಮ್ಮ ಪಾತ್ರ ಮತ್ತು ಕಸುಬಿನಂತೆ ದುಡಿಯಬೇಕು. ಆಗ ಗ್ರಾಮಗಳು ಸ್ವಾವಲಂಬಿಯಾಗುತ್ತವೆ. ನಾವು ರಾಲೆಗಾಂವ್ ಸಿದ್ದಿಯಲ್ಲಿ ಅನುಷ್ಠಾನಗೊಳಿಸಿರುವುದು ಇದನ್ನೇ" ಎಂದು ಅಣ್ಣಾ ಹೇಳುತ್ತಾರೆ. ಮೀಸಲಾತಿ ವಿರೋಧಿ ವೇದಿಕೆಯಾದ 'ಸಮಾನತೆಗಾಗಿ ಯುವಕರು' ಸಂಘಟನೆಯೊಂದಿಗೆ ಅಣ್ಣಾ ತಂಡದ ಸದಸ್ಯರು ಗುರುತಿಸಿಕೊಂಡಿರುವುದು ಅಚ್ಚರಿಯೇನಲ್ಲ, ಈ ಹೋರಾಟಕ್ಕೆ ಧಾರಾಳವಾಗಿ ಹಣ ನೀಡುತ್ತಿರುವುದು ಕೊಕಕೋಲಾ ಮತ್ತು ಲೈಮನ್ ಬ್ರದರ್ಸ್‌ನಂತಹ ಸಂಸ್ಥೆಗಳಿಂದ ಅನುದಾನ ಪಡೆಯುತ್ತಿರುವ ಬೆರಳೆಣಿಕೆಯ ಎನ್‌ಜಿಓಗಳು. ಅಣ್ಣಾ ತಂಡದಲ್ಲಿ ಪ್ರಮುಖರಾದ ಅರವಿಂದ್ ಕೇಜ್ರಿವಾಲ್ ಮತ್ತು ಮನೀಷ್ ಸಿಸೋಡಿಯಾ ನಡೆಸುತ್ತಿರುವ 'ಕಬೀರ' ಎಂಬ ಸಂಸ್ಥೆಗೆ ಫೋರ್ಡ್ ಸಂಸ್ಥೆಯು ಕಳೆದ ಮೂರು ವರ್ಷಗಳಲ್ಲಿ ನಾಲ್ಕು ಲಕ್ಷ ಡಾಲರ್‌ಗಳಷ್ಟು ಅನುದಾನ ನೀಡಿದೆ. 'ಭ್ರಷ್ಟಾಚಾರ ವಿರುದ್ಧ ಭಾರತ' ಎಂದು ಕರೆಯಲ್ಪಡುತ್ತಿರುವ ಈ ಹೋರಾಟಕ್ಕೆ ದೇಣಿಗೆ ನೀಡಿರುವ ಕಂಪನಿ ಮತ್ತು ಸಂಘಟನೆಗಳಲ್ಲಿ ಅಲ್ಯೂಮಿನಿಯಂ ಕಂಪೆನಿಗಳಿವೆ, ಎಸ್‌ಈಜೆಡ್‌ಗಳನ್ನು ನಿರ್ಮಿಸುತ್ತಿರುವ ಕಂಪೆನಿಗಳಿವೆ, ಸಾವಿರಾರು ಕೋಟಿ ವ್ಯವಹಾರ ನಡೆಸುತ್ತಿರುವ ರಿಯಲ್ ಎಸ್ಟೇಟ್ ಕಂಪೆನಿಗಳೂ ಇವೆ. ಇಂತಹ ಕೆಲವು ಕಂಪನಿಗಳು ಕೆಲವು ರಾಜಕಾರಣಿಗಳೊಂದಿಗೆ ನಿಕಟಸಂಪರ್ಕಗಳನ್ನು ಹೊಂದಿವೆಯಲ್ಲದೆ ಈಗ ಇವುಗಳ ವಿರುದ್ಧ ಭ್ರಷ್ಟಾಚಾರ ಕುರಿತು ತನಿಖೆಗಳೂ ನಡೆಯುತ್ತಿವೆ. ಇವರೆಲ್ಲಾ ಈ ಹೋರಾಟದ ಬಗ್ಗೆ ಯಾಕಿಷ್ಟು ಉತ್ಸುಕರಾಗಿದ್ದಾರೆ?

ನೆನಪಿಡಿ: ವಿಕಿಲೀಕ್ಸ್ ಮುಜುಗರ ಹುಟ್ಟಿಸುವಂತಹ ಅಂಶಗಳನ್ನು ಬಯಲುಗೊಳಿಸಿದ್ದು ಮತ್ತು 2ಜಿ ತರಹದ ಹಗರಣಗಳು ಸರಣಿರೂಪದಲ್ಲಿ ಹೊರಬರಲಾರಂಭಿಸಿದಾಗ ಅವುಗಳಲ್ಲಿ ಪ್ರಮುಖ ಕಾರ್ಪೊರೇಟ್ ಕಂಪನಿಗಳು, ಹಿರಿಯ ಪತ್ರಕರ್ತರು, ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ಸಚಿವರು ಮತ್ತು ರಾಜಕಾರಣಿಗಳು ಭಾಗಿಯಾಗಿದ್ದು ಇವರೆಲ್ಲ ಖಜಾನೆಯಿಂದ ಸಾವಿರಾರು ಕೋಟಿ ರೂಪಾಯಿಗಳನ್ನು ಲೂಟಿ ಮಾಡಿದ್ದಾರೆಂದು ಗೊತ್ತಾಗುವ ಹೊತ್ತಿನಲ್ಲೇ ಜನಲೋಕಪಾಲ್ ಮಸೂದೆ ಜಾರಿಗೆ ಬರಬೇಕು ಎಂಬ ಹೋರಾಟವು ಕಾವು ಪಡೆದದ್ದು, ಆಗ ಹಲವಾರು ವರ್ಷಗಳ ನಂತರ ಪ್ರಥಮ ಬಾರಿಗೆ, ಪತ್ರಕರ್ತರು ಮತ್ತು ಕಂಪನಿಗಳ ಪರವಾಗಿ ಲಾಬಿ ಮಾಡುವವರು ಅಪಖ್ಯಾತಿ ಪಡೆದರು ಮತ್ತು ಕೆಲವು ಪ್ರಮುಖ ಕಾರ್ಪೊರೇಟ್ ಕಂಪನಿಗಳ ಮಾಲೀಕರು ಜೈಲುಪಾಲಾಗುವ ಸಾಧ್ಯತೆಯೂ ಕಂಡುಬಂದಿದ್ದವು. ಭ್ರಷ್ಟಾಚಾರದ ವಿರುದ್ಧ ಜನರ ಆಂದೋಲನಕ್ಕೆ ಇದು ಸಕಾಲವಾಗಿ ಅವರೆಲ್ಲರಿಗೆ ಕಂಡಿದ್ದರಲ್ಲಿ ಅಚ್ಚರಿ ಇಲ್ಲ.

ಸರ್ಕಾರ ಈಗ ತನ್ನ ಸಾಂಪ್ರದಾಯಿಕ ಕರ್ತವ್ಯಗಳಿಂದ ಕಳಚಿಕೊಳ್ಳುತ್ತಿದೆ; ಕಾರ್ಪೊರೇಟ್ ಕಂಪನಿ ಮತ್ತು ಎನ್‌ಜಿಓಗಳಿಗೆ ಸರ್ಕಾರವು ಕುಡಿಯುವ ನೀರು, ಸಂಪರ್ಕ, ವಿದ್ಯುತ್ ಪೂರೈಕೆಯಂತಹ ಕೆಲಸಗಳನ್ನು ಒಪ್ಪಿಸುತ್ತಿದೆ; ಕಾರ್ಪೊರೇಟ್‌ಗಳ ಹಿಡಿತದಲ್ಲಿರುವ ಮಾಧ್ಯಮಗಳು ತಮ್ಮ ಶಕ್ತಿ ಮತ್ತು ಸಂಪರ್ಕ ವ್ಯಾಪ್ತಿಯನ್ನು ಬಳಸಿಕೊಂಡು ಜನಮನದ ಮೇಲೆ ಹಿಡಿತವನ್ನು ಸಾಧಿಸುತ್ತಿರುವಾಗ ಈ ಕಾರ್ಪೊರೇಟ್‌ಗಳು, ಮಾಧ್ಯಮಗಳು ಮತ್ತು ಎನ್‌ಜಿಓಗಳೂ ಲೋಕಪಾಲ್ ಮಸೂದೆ ಅಡಿ ಸೇರಿರುತ್ತವೆಂದು ನಿರೀಕ್ಷಿಸಲಾಗಿತ್ತು. ಆದರೆ, ಈ ಮೂರು ವಲಯಗಳನ್ನು ಮಸೂದೆಯ ವ್ಯಾಪ್ತಿಯಿಂದ ಹೊರಗಿಡಲಾಗಿದೆ.

ಈಗ ಎಲ್ಲರಿಗಿಂತ ದೊಡ್ಡ ಗಂಟಲಲ್ಲಿ ದುಷ್ಟ ರಾಜಕಾರಣಿಗಳ ಮತ್ತು ಸರ್ಕಾರಿ ಭ್ರಷ್ಟಾಚಾರದ ವಿರುದ್ಧ ಅರಚುವ ಮೂಲಕ ಈ ಇಡೀ ಆಂದೋಲನದಿಂದ ಬುದ್ಧಿವಂತಿಕೆಯಿಂದ ಈ ಶಕ್ತಿಗಳು ತಮ್ಮನ್ನು ಮಾತ್ರ ಈ ಮಸೂದೆಯಿಂದಾಚೆ ಇಟ್ಟುಕೊಳ್ಳುವಲ್ಲಿ ಯಶಸ್ವಿಯಾಗಿವೆ. ಅದಕ್ಕಿಂತ ದುರದೃಷ್ಟಕರ ಸಂಗತಿ ಯಾವುದೆಂದರೆ, ಸರ್ಕಾರವನ್ನು ಮಾತ್ರ ರಾಕ್ಷಸೀ ರೂಪವೆಂದು ಬಿಂಬಿಸಲು ಒಂದು ವೇದಿಕೆಯನ್ನು ಸೃಷ್ಟಿಸಿಕೊಂಡಿರುವ ಈ ವಲಯ ಇನ್ನು ಮುಂದೆ ಸರ್ಕಾರ ಇನ್ನಷ್ಟು ಸಾರ್ವಜನಿಕ ಕ್ಷೇತ್ರಗಳಿಂದ ಹಿಂದೆ ಸರಿಯುವಂತೆ ಆಗ್ರಹಿಸುತ್ತಿದ್ದಾವಲ್ಲದೆ ಎರಡನೆ ಸುತ್ತಿನ ಸುಧಾರಣೆಗಳು ಜಾರಿಗೆ ಬರುವಂತೆ ಪರಿಸ್ಥಿತಿಯನ್ನು ಸಜ್ಜುಗೊಳಿಸುತ್ತಿದ್ದಾವೆ. ಅಂದರೆ ಮುಂದಿನ ದಿನಗಳಲ್ಲಿ ಇನ್ನಷ್ಟು ಖಾಸಗೀಕರಣಕ್ಕೆ ಇದು ನಾಂದಿಯಾಗಿ ನಮ್ಮ ಸಾರ್ವಜನಿಕ ವ್ಯವಸ್ಥೆಗಳ ಮತ್ತು ನೈಸರ್ಗಿಕ ಸಂಪನ್ಮೂಲಗಳ ಲೂಟಿಗೆ ಅನುವು ಮಾಡಿಕೊಡಲಿದೆ. ಇದೆಲ್ಲದರ ಪರಿಣಾಮವಾಗಿ ಸದ್ಯದಲ್ಲೇ ಕಾರ್ಪೋರೇಟ್ ಭ್ರಷ್ಟಾಚಾರವನ್ನೂ ಸಕ್ರಮಗೊಳಿಸಿ ಅದಕ್ಕೆ ಲಾಬ್ಬಿಯಿಂಗ್ ಫೀಸ್ ಎಂದು ನಾಮಕರಣಗೊಳಿಸಲೂಬಹುದು.

ದಿನವೊಂದಕ್ಕೆ ರೂ 20ರಲ್ಲಿ ಬದುಕುತ್ತಿರುವ 80 ಕೋಟಿ ಮಂದಿಯ ಬದುಕನ್ನು ದುರ್ಭರಗೊಳಿಸಿ ಈ ದೇಶವನ್ನು ಆಂತರಿಕ ಯುದ್ಧಕ್ಕೆ ದೂಡುತ್ತಿರುವ ನೀತಿಗಳನ್ನೇ ಇನ್ನಷ್ಟು ಸಶಕ್ತಗೊಳಿಸಿದರೆ ಈ ದೇಶದ ಬಡವರಿಗೇನೂ ಲಾಭವಾಗುವುದಿಲ್ಲ.

ಈ ಭೀಕರ ಸಮಸ್ಯೆ ಹುಟ್ಟಿರುವುದು ನಮ್ಮ ಪ್ರಾತಿನಿಧಿಕ ಪ್ರಜಾಸತ್ತೆಯ ವೈಫಲ್ಯದಿಂದ. ನಮ್ಮ ಶಾಸನಸಭೆಗಳಲ್ಲಿ ನಮ್ಮ ಜನರನ್ನು ಎಳ್ಳಷ್ಟೂ ಪ್ರತಿನಿಧಿಸದ ಕ್ರಿಮಿನಲ್‌ಗಳು, ಕೋಟ್ಯಾಧಿಪತಿ ರಾಜಕಾರಣಿಗಳು ತುಂಬಿದ್ದಾರೆ. ಇವತ್ತು ನಮ್ಮ ಯಾವ ಪ್ರಜಾಸತ್ತಾತ್ಮಕ ಸಂಸ್ಥೆಯೂ ಸಾಮಾನ್ಯ ಜನರ ಕೈಗೆಟಕುತ್ತಿಲ್ಲ. ಧ್ವಜ ಅಲ್ಲಾಡಿಸುತ್ತಿರುವವರಿಂದ ನಾವು ಮೋಸ ಹೋಗದಿರೋಣ. ಅಫ್ಘಾನಿಸ್ತಾನದ ತುಂಡುನಾಯಕರು ತಮ್ಮ ಪ್ರಾದೇಶಿಕ ನಿಯಂತ್ರಣಕ್ಕಾಗಿ ಮಾರಣಾಂತಿಕ ಆಂತರಿಕ ಯುದ್ಧದಲ್ಲಿ ತೊಡಗಿರುವಂತೆಯೇ ಇಲ್ಲೂ ತಮ್ಮ ಲಾಭಕ್ಕಾಗಿ ಭಾರತವನ್ನು ವಿಭಾಗಿಸಲಾಗುತ್ತಿದೆ. ಆದರೆ ಅಫಘಾನಿಸ್ತಾನಕ್ಕಿಂತ ಇಲ್ಲಿ ಇನ್ನೂ ಹೆಚ್ಚಿನದ್ದನ್ನು ಪಣಕ್ಕೊಡ್ಡಲಾಗಿದೆ.

'ಅಣ್ಣಾ'ಗೊಂದು ಕಿರಿಯ ತಮ್ಮನ ಪತ್ರ

-ಹೀಗೊಂದು ನಿಜರೂಪಕ

ಪ್ರೀತಿಯ 'ಅಣ್ಣಾ' ಹಜಾರೆಯವರಿಗೆ,

ನಿಮ್ಮ 'ಅತಿ' ಪರಿಚಯವಾಗಿದ್ದು ಇತ್ತೀಚೆಗೆ ಇದಕ್ಕೂ ಮುಂಚೆ ನಿಮ್ಮ ಹೆಸರು ಕೇಳಿದ್ದೆ; ನಿಮ್ಮ ಸರಳತನ, ಗಾಂಧಿಮಾರ್ಗದ ಬಗ್ಗೆಯೂ ತಿಳಿದಿದ್ದೆ.

ಅಂದಹಾಗೆ, ನಾನು ಹೀಗೊಬ್ಬ ಈ ದೇಶದ ಸಾಮಾನ್ಯ ಕೆಳಮಧ್ಯಮ ವರ್ಗದ ಹುಡುಗ; ನಿಮ್ಮ ಈಗಿನ ಕೋಟ್ಯಂತರ ಕಿರಿಯ ಸೋದರರಲ್ಲೊಬ್ಬ ಅಂದಿಟ್ಟುಕೊಳ್ಳಿ; ನಾನಿರುವುದು ಕರ್ನಾಟಕದ ಮೈಸೂರಿನಲ್ಲಿ.

ಅಣ್ಣಾ ಅವರೇ,

ನಿನ್ನೆ ಹಾಗೇ ಎಂದಿನಂತೆ ನನ್ನ ಮಗುವನ್ನು ಶಾಲೆಯಿಂದ ವಾಪಸ್ಸು ಕರೆದುಕೊಂಡು ಹೊರಟಿದ್ದೆ. ಅದೇ ಆಗ ನಿಮ್ಮದೇ ಹುರುಪು ದೇಶಾದ್ಯಂತ ತಟ್ಟಿ, ಅದು ನಾನಿರುವ ಮೈಸೂರಿಗೂ ಹಬ್ಬಿ, ಎಲ್ಲಾ ಕಾಲೇಜುಗಳ ಹುಡುಗ-ಹುಡುಗಿಯರು ರಾಷ್ಟ್ರಧ್ವಜಗಳನ್ನು ಸಿಕ್ಕಿಸಿಕೊಂಡು ರಸ್ತೆ ತುಂಬ ಬೈಕ್ ರ್‍ಯಾಲಿ ಹೊರಟಿದ್ದರು. ಹದಿಹರೆಯದ ಹುಮ್ಮಸ್ಸಿನಲ್ಲಿ ಬೈಕ್‌ನ ಹಿಂದೆ ಉಲ್ಟಾ-ಪಲ್ಟಾ ಕುಳಿತ ಹುಡುಗರು ಮೈಮರೆತು ತಮ್ಮ ತಮ್ಮ ಮೊಬೈಲ್‌ಗಳಲ್ಲಿ ಪರಸ್ಪರ ಫೋಟೋ ತೆಗೆಸಿಕೊಳ್ಳುತ್ತಿದ್ದರು. ಹುಡುಗಿಯರ ಮಿಂಚುವ ಕೆನ್ನೆಗಳಲ್ಲಿ ಕೇಸರಿ-ಬಿಳಿ-ಹಸಿರು ಬಣ್ಣಗಳಿದ್ದವು; ಮೊನ್ನೆ ವಿಶ್ವಕಪ್ ಕ್ರಿಕೆಟ್ ಸಂದರ್ಭದಲ್ಲಿ ಇತ್ತಲ್ಲ ಹಾಗೆ. ಎಲ್ಲವನ್ನೂ ನೋಡುತ್ತಾ ನನ್ನ ಮುಗ್ಧ ಕಂದ ಕೇಳಿದ: 'ಅಪ್ಪಾ ಇಷ್ಟೊಂದು ಬಾವುಟ ಯಾಕೆ?'

ನನಗೆ ಆ ಕ್ಷಣ ಹೇಳಲು ಏನೂ ತೋಚಲಿಲ್ಲ. ಆದರೆ ಆ ಗಳಿಗೆ ಅನ್ನಿಸಿದ್ದೇನೆಂದರೆ, ಹಾಗೆ ಮಿಂಚಿನ ವೇಗದಲ್ಲಿ ರ್‍ಯಾಲಿಯಲ್ಲಿ ಮುನ್ನುಗ್ಗಿ ಹೋಗುತ್ತಿದ್ದ ಅವರಲ್ಲಿ ಯಾರಾದರೂ ಒಂದಿಬ್ಬರನ್ನು ತಡೆದು ನಿಲ್ಲಿಸಿ, 'ನಿಮಗೆ ಈ ಲೋಕಪಾಲ್ ಅಥವಾ ಜನಲೋಕಪಾಲ್‌ನಲ್ಲಿ ಏನೇನಿದೆ, ಏನೇನಿರಬೇಕು ಎಂಬುದೇನಾದರೂ ಗೊತ್ತಿದೆಯೆ?' ಎಂದು ಕೇಳಬೇಕೆನ್ನಿಸಿತು. ಅವರು ಏನು ಹೇಳುತ್ತಿದ್ದರೊ? ಗೊತ್ತಿಲ್ಲ.



ನನ್ನ ಮಗುವನ್ನು ಮನೆಗೆ ಬಿಟ್ಟು ನನ್ನ ನಿತ್ಯದ ಕೆಲಸ ಕಾರ್ಯಗಳಿಗಾಗಿ ಸಿಟಿಗೆ ಬಂದೆ. ಬೆಳಗಿನ ರ್‍ಯಾಲಿಯಲ್ಲಿ ಹೊರಟುಬಂದಿದ್ದ ವಿವಿಧ ಸಂಘಟನೆಗಳವರು, ಕಾಲೇಜು ಹುಡುಗ-ಹುಡುಗಿಯರು ಮತ್ತು ಸಾಕಷ್ಟು ಜನರು ನಿತ್ಯ ಪ್ರತಿಭಟನೆಗೆಂದು ಸೇರುವ ಗಾಂಧಿ ಸ್ಕ್ವೇರ್‌ನಲ್ಲಿ 'ಭ್ರಷ್ಟಾಚಾರದ ವಿರುದ್ಧ ಮೈಸೂರು' ಬ್ಯಾನರ್‌ನಡಿಯಲ್ಲಿ ನೆರೆದಿದ್ದರು. ಇಡೀ ಸರ್ಕಲ್‌ನ ಸುತ್ತ ಸ್ಕೂಟರ್-ಬೈಕುಗಳನ್ನು ನಿಲ್ಲಿಸಿ ಗಿಜಿಗುಡುತ್ತಿದ್ದ ಜೀನ್ಸ್ ತೊಟ್ಟ ಹುಡುಗ-ಹುಡುಗಿಯರು ಮೊಬೈಲ್‌ಗಳ ಒಡನಾಟದಲ್ಲಿ ಮುಳುಗಿ ಹೋಗಿದ್ದರು, ಮುಖ್ಯ ಭಾಷಣಕಾರರು ಭಾಷಣದಲ್ಲಿ ನಿರತರಾಗಿದ್ದರು.

ಸುಮ್ಮನೆ ನೋಡಿದೆ ಅಣ್ಣಾ...

ಕಳೆದ ಇಪ್ಪತ್ತು ವರ್ಷಗಳಿಂದ ನಾನು ಕೇಳಿ ಬಲ್ಲ ಹಾಗೆ, ನನ್ನ ವಿದ್ಯಾರ್ಥಿ ಜೀವನದಿಂದ ಕಂಡ ಹಾಗೆ ಯಾವ ಚಳವಳಿಗಳಲ್ಲೇ ಆಗಲಿ, ಪ್ರತಿಭಟನೆಗಳಲ್ಲೇ ಆಗಲಿ, ರ್‍ಯಾಲಿಗಳಲ್ಲೇ ಆಗಲಿ, ಮಾನವ ಸರಪಳಿಗಳಲ್ಲೇ ಆಗಲಿ ಇಂತಹ ಹದಿಹರೆಯದ ಜನ, ಮಧ್ಯಮ, ಮೇಲ್ಮಧ್ಯಮ ವರ್ಗದ ಜನ ನೆರೆದಿದ್ದನ್ನು ನಾನು ಕಂಡಿರಲೇ ಇಲ್ಲ.

ಹಾಗೆಯೇ ನೆನಪಿಸಿಕೊಂಡೆ...

ಗುಜರಾತ್‌ನಲ್ಲಿ ನರಮೇಧ ನಡೆದಾಗ, ಕಂಬಾಲಪಲ್ಲಿಯಲ್ಲಿ ದಲಿತರನ್ನು ಸುಟ್ಟು ಹಾಕಿದಾಗ, ನಮ್ಮದೇ ಪಕ್ಕದ ಶ್ರೀರಂಗಪಟ್ಟಣದ ಹುಂಗರಹಳ್ಳಿಯಲ್ಲಿ ನಮ್ಮಂತಹವರೇ ಮನುಷ್ಯರ ಕಾಲುಗಳಿಗೆ ಸರಪಳಿ ಹಾಕಿ ಜೀತ ಮಾಡಿಸಿಕೊಳ್ಳುತ್ತಿದ್ದಾಗ, ದಲಿತರ ಕುತ್ತಿಗೆ ಹಿಚುಕಿ ಹೇಲು ತಿನ್ನಿಸಿದಾಗ, ಬದನವಾಳುವಿನಲ್ಲಿ ದಲಿತರನ್ನು ಕೊಚ್ಚಿ ಹಾಕಿದಾಗ, ಕಾರ್ಖಾನೆಗಳಿಗಾಗಿ, ಹೈವೇಗಳಿಗಾಗಿ ರೈತರ ಜಮೀನುಗಳನ್ನು ಸರ್ಕಾರಗಳು ಕಿತ್ತುಕೊಂಡಾಗ, ಕರ್ನಾಟಕದ ಯಡಿಯೂರಪ್ಪ ರೆಡ್ಡಿ ಗುಂಪು ಈ ನೆಲದ ಸಂಪತ್ತನ್ನು ತಮ್ಮದೇ ಸ್ವಂತ ಸ್ವತ್ತೆಂಬಂತೆ ನುಂಗಿ ನೊಣೆದಾಗ, ನರ್ಮದಾ ಅಣೆಕಟ್ಟಿನ ವಿರುದ್ಧ ಉಪವಾಸ ಕುಂತ ಮೇಧಾ ಪಾಟ್ಕರ್ ಅವರನ್ನು ಥಳಿಸಿ ತಳ್ಳಿದಾಗ-ನಡೆದ ರೊಚ್ಚಿನ, ಮಾನವೀಯ ಪ್ರತಿಭಟನೆಗಳಲ್ಲಿ ಎಂದೂ ಕಾಣಿಸಿಕೊಳ್ಳದೆ ಇದ್ದ ಈ ಎಲ್ಲಾ ಹದಿಹರೆಯದ ಹುಡುಗ-ಹುಡುಗಿಯರು, ದುಬಾರಿ ಬೆಲೆಯ ಜುಬ್ಬಾ-ಪೈಜಾಮಗಳ ಮೇಲ್ವರ್ಗದವರು ಇದೀಗ ನಿಮ್ಮ 'ದೇಶ ಜಾಗೃತಿ'ಯ ಹೋರಾಟದಲ್ಲಿ 'ಧುತ್ತನೆ' ಎಚ್ಚೆತ್ತುಕೊ[...] ಕಾರಣವಾದರೂ ಏನು?

ನಿಜವಾಗಿಯೂ ನನಗೆ ಗೊತ್ತಾಗಲಿಲ್ಲ ಅಣ್ಣಾ...

*****

ಮಧ್ಯಾಹ್ನದ ಊಟಕ್ಕೆಂದು ನಾನು ಎಂದಿನ[...] ಹೋಗುತ್ತಿದ್ದ ಫುಟ್‌ಪಾತಿನ ಹೋಟೆಲ್ಲಿಗೆ ಬಂದೆ. ಗಾಂ[...] ಸ್ಕ್ವೇರ್‌ನ ಬಳಿಯೇ ಇರುವ ಆ ಹೋಟೆಲ್ಲಿನಲ್ಲಿ ಎಂದಿನ[...] ಕೂಲಿಕಾರರು, ರೈತಾಪಿ ಜನ, ಹಳ್ಳಿಗಾಡಿನ ಮಂ[...] ಸ್ಲಂಗಳವರು, ಅರೆಬರೆ ಭಿಕ್ಷುಕರು, ವೇಶ್ಯೆಯರು ಹ[...] ನೀಗಿಸಿಕೊಳ್ಳುವ ಧಾವಂತದಲ್ಲಿದ್ದರು.

ಒಬ್ಬ ಹೇಳುತ್ತಿದ್ದ: 'ಯಾರು ಸಾರ್ ಹಜಾರೆ ಅಂ[...] ಅವರು ಯಾವ ಡಿಪಾರ್ಟ್‌ಮೆಂಟ್?'

ಹೋಟೆಲ್ ನೌಕರನ ಉತ್ತರ: 'ಅವರು ಸಮ[...] ಸೇವಕರು... ಸೇವೆ ಮಾಡೋರು ಇರ್ತಾರಲ್ಲ ಅಂಥವರು[...]'

ಮೊದಲಿನವ: 'ಸಮಾಜ ಸೇವಾ ಸಂಘ ಅಂ[...] ಇರ್ತಾವಲ್ಲ ಸಾರ್... ಅದರ ಅಧ್ಯಕ್ಷರಾ? ಗೊತ್ತಾಯ್ತು ಬಿ[...] ಏನಕ್ಕೆ ಅವರು ಹೋರಾಟ ಮಾಡ್ತಾ ಇರೋದು?'


ಹೋಟೆಲ್ ನೌಕರ: 'ಈಗ ಎಲ್ಲಾ ಲಂಚ ತಗೊ[...] ದ್ದಾರಲ್ಲ... ಅವರನ್ನೆಲ್ಲ ಹಿಡಿದು ಕೇಸ್ ನಡೆಸೋಕೆ ಸಪರೇ[...] ಕೋರ್ಟ್ ಮಾಡಬೇಕು ಅಂತ ಅವರು ಉಪವ[...] ಮಾಡ್ತಿದಾರೆ...'

ಮಧ್ಯದಲ್ಲೊಬ್ಬ: 'ಹದಿನೈದು ದಿನ ಉಪವಾಸ ಅ[...] ಹುಡುಗಾಟನಾ ಸಾರ್! ನಾವು ಒಂದು ದಿ[...] ಹಸಿದುಕೊಂಡಿದ್ರೆ, ಪ್ರಾಣನೇ ಹೊರಟುಹೋಗುತ್[...] ಹಸಿದುಕೊಂಡು ಸವತೆಕಾಯಿ ಗಾಡೀನಾ ಒಂದು ಹೆಜ್ಜೆ[...] ಮುಂದೆ ತಳ್ಳೋಕಾಗಲ್ಲ ಗೊತ್ತಾ ಸಾರ್...'

ಅಣ್ಣಾ ಹಜಾರೆ-ಬಾಬಾ ರಾಮ್‌ದೇವ್ ವಿದ್ಯಮಾನಗಳನ್ನು ಅವಲೋಕಿಸಿದಾಗ ಬೇರೆ ಕಾರಣಗಳ ಜೊತೆಗೆ ಮೂರು ಪ್ರಮುಖ ಅಂಶಗಳನ್ನು ಇಲ್ಲಿ ಗುರುತಿಸಬಹುದು. ರಾಜಕೀಯ ಸಂಸದೀಯ ಸಂಸ್ಥೆಗಳ ಕುಸಿತ; ರಾಜಕೀಯೇತರ ಸಂಕೇತಗಳ ಹುಡುಕಾಟ; ಪ್ರಜಾಪ್ರಭುತ್ವ ಸಂಸ್ಥೆಗಳ ಅವನತಿ.

ಸಂವಿಧಾನದ ಪ್ರಜಾಸತ್ತಾತ್ಮಕ ಸಂಸದೀಯ ರಾಜಕೀಯ ಸಂಸ್ಥೆಗಳ ಹೊಣೆಗಾರಿಕೆಯ ವಿಫಲತೆಯಿಂದ ಸೃಷ್ಟಿಯಾಗಿರುವ 'ರಾಜಕೀಯ ಶೂನ್ಯತೆ'ಯನ್ನು ಸಾಂಸ್ಕೃತಿಕ ಮತ್ತು ಧಾರ್ಮಿಕ ಸಂಕೇತಗಳು ತುಂಬಿಕೊಳ್ಳುತ್ತಿರುವುದನ್ನು ನಾವು ಗಮನಿಸಬಹುದು. ಚುನಾವಣಾ ಶಕ್ತಿ ರಾಜಕಾರಣ ಪ್ರಕ್ರಿಯೆಗಳ ಹೊರಗಿನ ನ್ಯಾಯಸಮ್ಮತಿಯ ಹುಡುಕಾಟದಲ್ಲಿ ಜನ ತೊಡಗಿದ್ದಾರೆ.

ರಾಷ್ಟ್ರ ಮತ್ತು ರಾಜ್ಯಕ್ಕೆ ಸಂಬಂಧಪಟ್ಟ, ಬಹುಸಂಖ್ಯಾತ ಜನಸಮುದಾಯಗಳಿಗೆ ಸಂಬಂಧಿಸಿದ ಅನೇಕ ವಿಚಾರಗಳು, ಕಾನೂನು ಕಾಯ್ದೆಗಳು, ನೀತಿನಿಯಮಗಳ ಕುರಿತು ಸಂಸತ್,



ಭ್ರಷ್ಟಾಚಾರದ ವಿರುದ್ಧ ಬಲವಾದ ಲೋಕಪಾಲ ವ್ಯವಸ್ಥೆ ಬೇಕು ಎಂದು ಆಗ್ರಹಿಸಿ ಶಾಂತಿಯುತ ಅನಿರ್ದಿಷ್ಟ ನಿರಶನ ಕೈಗೊಳ್ಳಲು ಮುಂದಾದ ಅಣ್ಣಾ ಹಜಾರೆಯವರ ಸಂವಿಧಾನದತ್ತ ಹಕ್ಕನ್ನು ಮೊಟಕುಗೊಳಿಸಿದ ಕೇಂದ್ರ ಸರ್ಕಾರದ ದಮನಕಾರಿ ವರ್ತನೆ ಖಂಡನೀಯವಾದರೂ, ಚರ್ಚೆ ಸಂವಾದಕ್ಕೆ ಆಸ್ಪದ ಕೊಡದಂತಹ ಅನಿರ್ದಿಷ್ಟ ಉಪವಾಸ ಸತ್ಯಾಗ್ರಹಗಳನ್ನೊಳಗೊಂಡ ತಂತ್ರಗಳು ಮೂಲತಃ ಪ್ರಜಾಸತ್ತಾತ್ಮಕ ಡೆಲಿಬರೇಟಿವ್ ಪ್ರಕ್ರಿಯೆಗಳಿಗೆ ವಿರುದ್ಧವಾದದು ಎಂಬ ವಾದಕ್ಕೆ ಅಂಬೇಡ್ಕರ್ ಅವರ ಹೇಳಿಕೆ ಪುಷ್ಠಿ ಕೊಡುತ್ತದೆ.

ಚುನಾವಣಾ ರಾಜಕಾರಣ, ಉಪವಾಸ ಮತ್ತು ಪ್ರಜಾಪ್ರಭುತ್ವ

ವಿಧಾನಮಂಡಲ ಅಥವಾ ಸಾರ್ವಜನಿಕ ವಲಯಗಳಲ್ಲಿ ಚರ್ಚೆಗೊಳಪಡದೆ ಸರ್ಕಾರಗಳು ಏಕಾಏಕಿ ತೀರ್ಮಾನ ಕೈಗೊಂಡಿರುವುದು ಕಳೆದೆರಡು ದಶಕಗಳಲ್ಲಿ ಸರ್ವೇಸಾಮಾನ್ಯ ಎನ್ನುವುದು ಜಗಜ್ಜಾಹೀರಾಗಿದೆ. ಚರ್ಚೆ ಸಂವಾದಗಳಿಗೆ ಒತ್ತಾಯಿಸಿ ನಡೆದಂತಹ ಜನಪರ ಚಳವಳಿಗಳಿಗೂ ಸರ್ಕಾರಗಳು ಮನ್ನಣೆ ಕೊಟ್ಟಿಲ್ಲ. ಅನೇಕ ಬಾರಿ ಶಾಸಕಾಂಗ ನಿರ್ವಹಿಸಬೇಕಾದ ಹೊಣೆಗಾರಿಕೆಯನ್ನು ನ್ಯಾಯಾಂಗದ ಮೇಲೆ ಹೇರುವ, ಕಾರ್ಯಾಂಗ ನಿರ್ವಹಿಸಬೇಕಾದ ಕೆಲಸಗಳಿಗೆ ಅಕೌಂಟೆಬಲಿಟಿ ಇಲ್ಲದಿರುವುದು ಇವತ್ತಿನ ಒಟ್ಟಾರೆ ಪ್ರಜಾಪ್ರಭುತ್ವ ವ್ಯವಸ್ಥೆಯ ಕುಸಿತಕ್ಕೆ ಕಾರಣವಾಗಿದೆ. ಖಾಸಗೀಕರಣ, ರಾಮಮಂದಿರ-ಬಾಬರಿ ಮಸೀದಿ ವಿವಾದ, ಪ್ರಾಕೃತಿಕ ಸಂಪತ್ತಿನ ಲೂಟಿ, ಭ್ರಷ್ಟಾಚಾರದ ಹಗರಣಗಳು ಇವೇ ಮೊದಲಾದ ಸಂಗತಿಗಳನ್ನು ಉದಾಹರಣೆಯಾಗಿ ಕೊಡಬಹುದು.

ಭ್ರಷ್ಟಾಚಾರ ಕುರಿತು ಯೋಚಿಸುವುದಾದರೆ ಇವತ್ತು ಚುನಾವಣಾ ರಾಜಕಾರಣ ಹಣದ ಸುತ್ತ ಸುತ್ತುತ್ತಿದೆ. ಯಾವುದೇ ರಾಜಕೀಯ ಪಕ್ಷ ಪ್ರಾಮಾಣಿಕತೆ(integrity)ಯನ್ನು ಉಳಿಸಿಕೊಂಡಿಲ್ಲ. ಓರ್ವ ಸಾಮಾನ್ಯ-ಪ್ರಾಮಾಣಿಕ ರಾಜಕಾರಣಿಯನ್ನೂ ಜನ ನಂಬುವಂತಹ ಪರಿಸ್ಥಿತಿಯಲ್ಲಿಲ್ಲ. ಆದ್ದರಿಂದ ರಾಜಕೀಯ ಪಕ್ಷಗಳು ಭ್ರಷ್ಟಾಚಾರವನ್ನು ಎದುರಿಸಲು ಆಗುತ್ತಿಲ್ಲ. ಚುನಾವಣಾ ರಾಜಕಾರಣದ ಪ್ರಕ್ರಿಯೆಗಳ ಆಚೆಗಿನ ಜನ ಹೆಚ್ಚು ಕಾನೂನು ಸಮ್ಮತಿ(ಲೆಜಿಟಿಮೆಸಿ)ಯನ್ನು ಹೊಂದಿರುವಂತೆ ತೋರುತ್ತಿದೆ. ರಾಜಕೀಯೇತರ ಜನ ಅಪಾರ ಹಣಗಳಿಸಿದ್ದರೂ ಸಮಾಜ ಅವರನ್ನು ಭ್ರಷ್ಟರನ್ನಾಗಿ ಕಾಣುವುದಿಲ್ಲ. ಇಂತಹ ವಾತಾವರಣದಲ್ಲಿ ಅಣ್ಣಾ ಹಜಾರೆ-ಬಾಬಾ ರಾಮ್‌ದೇವ್ ತರಹದವರು ಚುನಾವಣಾ ರಾಜಕಾರಣದ ಹೊರಗಡೆ ಇರುವ ಕಾನೂನು ಸಮ್ಮತಿಯ(ಲೆಜಿಟಿಮೇಟ್) ಸಂಕೇತಗಳಾಗಿ ಕಾಣುತ್ತಾರೆ. ಒಂದೆಡೆ ಅಣ್ಣಾ ಹಜಾರೆ ಒಬ್ಬ ಸರಳ ಸಜ್ಜನ, ಯಾವುದೇ ರಾಜಕೀಯ ಆಕಾಂಕ್ಷೆಗಳಿಲ್ಲದ ಪ್ರಾಮಾಣಿಕ ವ್ಯಕ್ತಿಯಂತೆ ಕಂಡರೆ ಮತ್ತೊಂದೆಡೆ ಜಾಗತಿಕ ಹಣ ಹಾಗೂ ಅಪಾರ ಜನ ಬೆಂಬಲ ಹೊಂದಿರುವ ಬಾಬಾ ರಾಮ್‌ದೇವ್ ತರಹದವರು ಹೋರಾಟದ ಭಾಗವಾಗಿ ಕಾಣಿಸಿಕೊಳ್ಳುತ್ತಾರೆ.

ಆದರೆ 'ಧಾರ್ಮಿಕ' ಸಂಕೇತವನ್ನು ಪ್ರತಿನಿಧಿಸುತ್ತಿರುವ ಬಾಬಾ ರಾಮ್‌ದೇವ್ ತರಹದವರು ತಾವು ಮಾತ್ರವೇ ನ್ಯಾಯಪರ ಎಂಬಂತೆ ಏಕಮುಖಿಯಾಗಿ ಕಾಣುತ್ತಿರುವುದು ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡುವ ಅಪಾಯವಿದೆ. ಯಾಕೆಂದರೆ ಇಂತಹ ನ್ಯಾಯಪರ ಎಂದು ಬಿಂಬಿಸಲಾಗುತ್ತಿರುವ ಶಕ್ತಿಗಳು ಜನರಿಂದ ನೇರವಾಗಿ ಬಂದದ್ದಲ್ಲ, ಸಮಾಜದಲ್ಲಿ ಒಬ್ಬ ವರ್ಚಸ್ಸುಳ್ಳ ವ್ಯಕ್ತಿ ಒಂದು ಅಜೆಂಡಾವನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳಲು ಸಾಧ್ಯ[...] ಒಬ್ಬ ವ್ಯಕ್ತಿಯನ್ನು ಅವಲಂಬಿಸಿರುವ ಯಾವು[...] ಹೋರಾಟಗಳು ಪ್ರಜಾತಂತ್ರಕ್ಕೆ ಪೂರಕವಾದದ್ದಲ್ಲ. ಯಾವು[...] ಪ್ರತಿಭಟನೆ ಚರ್ಚೆ ಸಂವಾದಕ್ಕೆ ಅವಕಾಶ ಕೊಡದಿ[...] ಅದು ಪ್ರಜಾಸತ್ತಾತ್ಮಕ್ಕೆ ವಿರುದ್ಧವಾಗಿರುತ್ತದೆ. ತಾ[...] ಹೇಳಿದಂತೆಯೇ ನಡೆಯಬೇಕು, ಇದಕ್ಕೆ ಯಾವು[...] ಪರ್ಯಾಯವಿಲ್ಲ ಎನ್ನುವಂತಹ ಅನಿರ್ದಿಷ್ಟ ಉಪವಾ[...] ಸತ್ಯಾಗ್ರಹಗಳೂ ಸಹ ಪ್ರಜಾಪ್ರಭುತ್ವದ ಮೌಲ್ಯಗ[...] ಮಾರಕವಾದದ್ದು. ಗಾಂಧೀಜಿ ಬ್ರಿಟಿಷರ ಆಳ್ವಿಕೆ[...] ಸಂದರ್ಭದಲ್ಲಿ ನಾಗರಿಕ ಅವಿಧೇಯತೆ ಚಳವಳಿಯ[...] ಹೂಡಿ ವಾಪಾಸು ತೆಗೆದುಕೊಂಡ ಸಂದರ್ಭ[...] ನೆಹರೂರವರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿ[...] ಇಲ್ಲಿ ಸ್ಮರಿಸಬಹುದು. ಬಹಳ ಮುಖ್ಯವಾಗಿ, ಅಂಬೇಡ[...] ದಲಿತರಿಗೆ ಪ್ರತ್ಯೇಕ ಚುನಾಯಕಗಳನ್ನು ಪ್ರತಿಪಾದಿ[...] ಅದನ್ನು ಬ್ರಿಟಿಷ್ ಸರ್ಕಾರ ಮನ್ನಣೆಮಾಡಿದ್ದರ ವಿರು[...] ಗಾಂಧೀಜಿ ಆಮರಣಾಂತ ಉಪವಾಸ ಸತ್ಯಾಗ್ರಹ ಹೂಡಿ[...] ಕಡೆಗೆ ಯಾವುದೇ ರೀತಿಯಲ್ಲಿ ಚರ್ಚೆ ಸಂವಾದವಿ[...] ಪೂನಾ ಒಡಂಬಡಿಕೆಯನ್ನು ಒತ್ತಾಯವೆಂಬಂತೆ ಅಂಬೇಡ[...] ಅವರ ಮೇಲೆ ಹೇರಿದ್ದನ್ನು ಇಲ್ಲಿ ನೆನೆಯೋಣ. ಗಾಂಧಿ[...] ಯವರ ಆಮರಣಾಂತ ಸತ್ಯಾಗ್ರಹದ ಕುರಿತು ಅಂಬೇಡ್ಕ[...] ಅನಿಸಿಕೆ ಹೀಗಿತ್ತು: 'ಗಾಂಧಿ ಅವರ ಸತ್ಯಾಗ್ರಹದ ಬೆದರಿ[...] ಸೊಪ್ಪು ಹಾಕದೇ ಸರ್ಕಾರ ನಿಮ್ಮ ವರ್ಗಗಳಿಗೆ ಪ್ರತ[...] ಮತ ಕ್ಷೇತ್ರಗಳನ್ನು 1932ರ ಮಾರ್ಚ್ 11ರ ಪತ[...] ಮೂಲಕ ನೀಡಿತು. ಆದರೆ ಗಾಂಧಿ ಅವರ ಉಪವ[...] ಸತ್ಯಾಗ್ರಹ ಸೃಷ್ಟಿಸಿದ ತುರ್ತು ಸ್ಥಿತಿಯ ಹಿನ್ನೆಲೆಯಲ್ಲಿ ಪ[...] ಒಪ್ಪಂದಕ್ಕೆ ಸಂಬಂಧಿಸಿದ ಎಲ್ಲವನ್ನು ಸರ್ಕಾರವು ಅವಸರ[...] ಒಪ್ಪಿಕೊಂಡಿತು. ಆಗ ನನ್ನೆದುರು ಎರಡು ಕ[...] ಆಯ್ಕೆಗಳಿದ್ದವು. ಒಂದು ಭಾರತದ ಅತಿ ಮಹತ್[...] ವ್ಯಕ್ತಿಯೊಬ್ಬರ ಜೀವ ಉಳಿಸುವುದು; ಇನ್ನೊಂದು ಯ[...] ಸಮುದಾಯದ ಸಲುವಾಗಿ ದುಂಡು ಮೇಜಿನ ಪರಿಷತ್ತಿ[...] ವಾದಿಸಿದ್ದೇನೋ ಅವರ ಹಿತಾಸಕ್ತಿಗಳನ್ನು ರಕ್ಷಿಸುವುದ[...]



ಇದೇ ವಿಚಾರ ಕುರಿತು ಡಾ.ಬಿ.ಆರ್.ಅಂಬೇಡ[...]

ಹೋಟೆಲ್ ನೌಕರ: 'ಇದೇನಾದ್ರೂ ರೂಲ್ಸ್ ಆಗೋಯ್ತು ಅಂದ್ರೆ ನೋಡ್ತಾ ಇರಿ... ಲಂಚ ತಿನ್ನೋರೆಲ್ಲ ಜೈಲಿಗೋಗ್ತಾರೆ...'

ಸುಮ್ಮನೆ ಎಲ್ಲರ ಮಾತುಗಳನ್ನೂ ಕೇಳಿಸಿಕೊಳ್ಳುತ್ತಿದ್ದ ನಾನು ಆ ಹೋಟೆಲ್ ನೌಕರನಿಗೆ 'ಈ ದೇಶದಲ್ಲಿ ಈಗ ಎಷ್ಟೆಲ್ಲ ಕಾನೂನುಗಳಿವೆಯಲ್ಲಾ ಅಣ್ಣಾ... ಅವುಗಳಿಂದ ಎಷ್ಟು ಜನ ಕಳ್ಳರೆಲ್ಲ ಜೈಲಿಗೆ ಹೋಗಿದ್ದಾರೆ?' ಎಂದು ಕೇಳಿದೆ.

ಅವನು ಮರುಮಾತನಾಡದೆ ವ್ಯಾಪಾರದಲ್ಲಿ ನಿರತನಾದ.

*****

ಊಟ ಮುಗಿಸಿ ಮತ್ತೆ ಗಾಂಧಿ ಸ್ಕ್ವೇರ್‌ನತ್ತ ಬಂದೆ ಅಣ್ಣಾ...

ಬೆಳಗಿನಿಂದ ಪ್ರತಿಭಟನೆ ನಡೆಸುತ್ತಿದ್ದವರಲ್ಲಿ ಮುಕ್ಕಾಲುಪಾಲು ಜನ ಕಣ್ಮರೆಯಾಗಿದ್ದರು. ವಿರಳ ಜನರ ನಡುವೆಯೇ ಭಾಷಣ, ಹಾಡು, ಚಪ್ಪಾಳೆ ಎಲ್ಲಾ ನಡೆದಿತ್ತು. ಕೆಲವರು ಊಟ ಮಾಡಿ ಬಂದು ನಿಧಾನವಾಗಿ ತೂಕಡಿಕೆ ಕಡೆ ವಾಲುತ್ತಿದ್ದರು. ನಿಂತಿದ್ದ ಗಾಂಧಿ ಪ್ರತಿಮೆಯ ಕೈಗೆ ರಾಷ್ಟ್ರ ಧ್ವಜ ಹಿಡಿಸಲಾಗಿತ್ತು. ಸಂಘಟನೆಯೊಂದರ ಹೆಣ್ಣುಮಗಳೊಬ್ಬಳು ಮೈಕ್ ಹಿಡಿದು ಹಾಡುತ್ತಿದ್ದಳು:

'ಎಳೆನೀರನ್ನು ನುಂಗಿ ಹಾಕಿತು
ಪೆಪ್ಸಿಕೋಲ ಕೇಕೆ ಹಾಕಿತು
....
ಪರಂಗಿಯವರು ಮತ್ತೆ ಬಂದರೆ
ಅಣ್ಣಾ!
ನಾವು ನೀವು ಎಲ್ಲಾ ಮಾಯ...!'

ಕೇಕೆ ಹಾಕಿದ ಕೋಕಾ ಕೋಲವನ್ನು ಕುಡಿದವರು, ಪರಂಗಿಯವರು ಬಂದು ಹೂಡಿದ ಬಂಡವಾಳದ ಕಂಪೆನಿಗಳಲ್ಲಿ ಕುಳಿತು ಲಕ್ಷ ಲಕ್ಷ ಸಂಬಳ ಎಣಿಸಿಕೊಳ್ಳುವ ಐಟಿ-ಬಿಟಿ ಹೈಕಳು ಹುಮ್ಮಸ್ಸಿನಿಂದ ಆ ಹಾಡಿಗೆ ಅಲ್ಲಿ ದನಿಗೂಡಿಸುತ್ತಿದ್ದರು.

*****

ಕೊನೆಗೆ ಅಣ್ಣಾ...

ಗಾಂಧಿ ಸ್ಕ್ವೇರ್‌ನ ಸುತ್ತಲೂ ಕಟ್ಟಿದ ಕಬ್ಬಿಣದ ಸರಳುಗಳ ಹಿಂದೆ ನೀವು ಸ್ಫೂರ್ತಿ ಪಡೆದ ಗಾಂಧೀಜಿಯ ಪ್ರತಿಮೆಯನ್ನೂ, ಆ ಸರಳುಗಳಿಗೆ ಕಟ್ಟಿದ್ದ ಬ್ಯಾನರ್‌ನಲ್ಲಿ ಗಾಂಧಿ ಟೋಪಿಗೆಯಲ್ಲಿದ್ದ ನಿಮ್ಮ ಫೋಟೋವನ್ನೂ ನೋಡಿದೆ...

ಅಲ್ಲಿ ಕಾಸ್ಟ್ಲೀ ಖಾದಿ ಜುಬ್ಬಾ-ಪೈಜಾಮ ತೊಟ್ಟ ದೇಶಭಕ್ತರೂ, ಐವತ್ತು-ಅರವತ್ತು ರೂಪಾಯಿಗಳ ಚೈನಾ ಮಾಲುಗಳ ಬಟ್ಟೆ ತೊಟ್ಟ ಕೂಲಿಗಳು-ಕಾರ್ಮಿಕರೂ, ಸಾವಿರಾರು ರೂಪಾಯಿಗಳ ಜೀನ್ಸ್ ತೊಟ್ಟ ಹುಡುಗ-ಹುಡುಗಿಯರೂ ಒಟ್ಟೊಟ್ಟಿಗೇ ನಿಮಗೆ ಜೈಕಾರ ಹಾಕುತ್ತಿದ್ದರು, 'ವಂದೇ ಮಾತರಂ' ಗುನುಗುನಿಸುತ್ತಿದ್ದರು...

ಅತ್ತ ಚಿಕ್ಕ ಗಡಿಯಾರ ಸರ್ಕಲ್‌ನ ಸುತ್ತಮುತ್ತ ದೇವರಾಜ ಮಾರ್ಕೆಟ್ಟಿನ ಆಸುಪಾಸುಗಳ ಅಂಗಡಿಯವರು ಐದಾರು ದಿನಗಳ ಹಿಂದೆ ಸ್ವಾತಂತ್ರ್ಯೋತ್ಸವದ ವ್ಯಾಪಾರ ಮುಗಿಸಿ ಒಳಗಿಟ್ಟಿದ್ದ ಬಾವುಟಗಳನ್ನೆಲ್ಲ ಹುಮ್ಮಸ್ಸಿನಿಂದ ಹೊರಗೆ ತೆಗೆದು ಜನಗಳಿಗೆ ಕಾಣಿಸುವಂತೆ ಅಚ್ಚುಕಟ್ಟಾಗಿ ಮುಂಗಟ್ಟುಗಳಿಗೆ ಜೋಡಿಸುತ್ತಿದ್ದರು...

ಈ ಎಲ್ಲವನ್ನೂ ನೋಡುತ್ತಾ ಕಣ್ತುಂಬಿಸಿಕೊಂಡ ನಾನು ಸುಸ್ತಾಗಿ ಹತ್ತಿರದ ಪುರಭವನದ ಮೈದಾನದೊಳಕ್ಕೆ ಬಂದೆ. ಪುರಭವನದ ಮುಂದೆ 'ಆಧಾರ್' ಗುರುತಿನ ಚೀಟಿಗೆ ಮುಗಿಬಿದ್ದ ಉದ್ದನೆಯ ಸಾಲಿನಲ್ಲಿ ಬುರ್ಖಾ ತೊಟ್ಟ ಮಹಿಳೆಯರೇ ಹೆಚ್ಚು ಇದ್ದರು. ಅವರೊಂದಿಗೆ ಬಂದು ಬೆಳಿಗ್ಗೆಯಿಂದ ದಣಿದಿದ್ದ ಪುಟ್ಟ ಮಕ್ಕಳು ಪಕ್ಕದ ಹುಲ್ಲುಹಾಸಿನಲ್ಲಿ ನಿದ್ದೆ ಹೋಗಿದ್ದರು; ಕೆಲವು ಕಂದಮ್ಮಗಳು ಆಟವಾಡಿಕೊಳ್ಳುತ್ತಿದ್ದವು. ಆ ಕಂದಮ್ಮಗಳ ಕಣ್ಣುಗಳಲ್ಲಿ ನನ್ನ ಮಗುವಿನ ಮುಖ ಕಂಡಂತಾಗಿ, ನಾನು ಉದ್ದಕ್ಕೂ ನೋಡಿಕೊಂಡು ಬಂದ ನೂರಾರು ಬಗೆಯ ಜನರು ಒಡಮೂಡಿದಂತಾಗಿ ಚಡಪಡಿಸಿದೆ...

ಅಲ್ಲಿ ನೀವು, ರಾಮ್‌ಲೀಲಾ ಮೈದಾನದಲ್ಲಿ, ಉಪವಾಸ ಕುಂತ ಗಳಿಗೆಯಲ್ಲಿ, ಇಂತಹವೇ ಸಾವಿರಾರು ಚಿತ್ರಗಳನ್ನು ನಿಮ್ಮ ಕಣ್ಣುಗಳಿಗೆ ತಂದುಕೊಳ್ಳಲಿ ಎಂದು ಬಯಸುತ್ತಾ ಈ ಪತ್ರ ಮುಗಿಸುತ್ತಿರುವೆ ಅಣ್ಣಾ...

ಇತಿ ನಿಮ್ಮ ಪ್ರೀತಿಯ ಕಿರಿಯ ತಮ್ಮ

• ಮಂಜುನಾಥ್ ಲತಾ

ಸಾಮಾಜಿಕ ಪ್ರಜಾಪ್ರಭುತ್ವ ಇಲ್ಲದಿರುವುದರ ಬಗ್ಗೆ ಅಸಹನೆ ವ್ಯಕ್ತಪಡಿಸಿ ಸ್ವಾತಂತ್ರ್ಯೋತ್ತರ ಭಾರತದಲ್ಲಿ ರಾಜಕೀಯ ಪ್ರಜಾತಂತ್ರ ಪ್ರಕ್ರಿಯೆಗಳ ಅನಿವಾರ್ಯತೆಯನ್ನು ನವೆಂಬರ್ 26, 1949ರಂದು ಸಂವಿಧಾನದ ಕರಡು ಪ್ರತಿಯನ್ನು ಮಂಡಿಸುವಾಗ ಈ ರೀತಿ ಪ್ರತಿಪಾದಿಸಿದ್ದಾರೆ: 'ಪ್ರಜಾಪ್ರಭುತ್ವವನ್ನು, ಅದರ ಸ್ವರೂಪವನ್ನಷ್ಟೇ ಅಲ್ಲದೇ, ಅದರ ತತ್ವವನ್ನು ಸತ್ವವನ್ನು ಉಳಿಸಿಕೊಳ್ಳಬೇಕಾದರೆ, ನಾವು ಏನು ಮಾಡಬೇಕು? ನನ್ನ ಅಭಿಪ್ರಾಯದ ಪ್ರಕಾರ, ನಮ್ಮ ಸಾಮಾಜಿಕ ಮತ್ತು ಆರ್ಥಿಕ ಧ್ಯೇಯಗಳನ್ನು ಈಡೇರಿಸಿಕೊಳ್ಳಲು ನಾವು ಸಂವೈಧಾನಿಕ ವಿಧಾನಗಳನ್ನೇ ಅನುಸರಿಸಬೇಕು. ಅಂದರೆ ರಕ್ತಪಾತದ ಮಾರ್ಗವನ್ನು ಸಂಪೂರ್ಣವಾಗಿ ತೊರೆಯಬೇಕು. ಅಂದರೆ ನಾವು ಕಾಯ್ದೆಭಂಗ, ಅಸಹಕಾರ, ಸತ್ಯಾಗ್ರಹ ಮುಂತಾದ ಮಾರ್ಗಗಳನ್ನು ಸಹ ಬಿಡಬೇಕಾಗುತ್ತದೆ. ಆರ್ಥಿಕ ಮತ್ತು ಸಾಮಾಜಿಕ ಆಶೋತ್ತರಗಳ ಈಡೇರಿಕೆಗೆ ಸಂವಿಧಾನ ಸಮ್ಮತವಾದ ಮಾರ್ಗಗಳನ್ನು ಅನುಸರಿಸಲು ಅವಕಾಶ ಇಲ್ಲದಿದ್ದ ಸಂದರ್ಭದಲ್ಲಿ, ಸಂವಿಧಾನಬಾಹಿರವಾದ ಮಾರ್ಗಗಳನ್ನು ಅನುಸರಿಸುವುದು ಒಂದು ದೃಷ್ಟಿಯಲ್ಲಿ ಸಮರ್ಥನೀಯವಾಗಿತ್ತು. ಆದರೆ ಎಲ್ಲಿ ಸಂವಿಧಾನ ಸಮ್ಮತವಾದ ಮಾರ್ಗಗಳಿಗೆ ಅವಕಾಶ ಇರುವುದೋ ಅಲ್ಲಿ ಸಂವಿಧಾನ ಬಾಹಿರವಾದ ಮಾರ್ಗಗಳಿಗೆ ಸಮರ್ಥನೆ ಇರುವುದಿಲ್ಲ, ಆ ಮಾರ್ಗಗಳೆಲ್ಲ ಅರಾಜಕತೆಯ ನೀತಿಸೂತ್ರಗಳಾಗಿದ್ದು, ಅವುಗಳನ್ನು ತೊರೆದಷ್ಟು, ಜನಸಮುದಾಯಕ್ಕೆ ಕ್ಷೇಮ, ರಾಷ್ಟ್ರಕ್ಕೆ ಕ್ಷೇಮ.'


ಭ್ರಷ್ಟಾಚಾರದ ವಿರುದ್ಧ ಬಲವಾದ ಲೋಕಪಾಲ ವ್ಯವಸ್ಥೆ ಬೇಕು ಎಂದು ಆಗ್ರಹಿಸಿ ಶಾಂತಿಯುತ ಅನಿರ್ದಿಷ್ಟ ಉಪವಾಸ ಕೈಗೊಳ್ಳಲು ಮುಂದಾದ ಅಣ್ಣಾ ಹಜಾರೆಯವರ ಸಂವಿಧಾನದತ್ತ ಹಕ್ಕನ್ನು ಮೊಟಕುಗೊಳಿಸಿದ ಕೇಂದ್ರ ಸರ್ಕಾರದ ದಮನಕಾರಿ ವರ್ತನೆ ಖಂಡನೀಯವಾದರೂ, ಚರ್ಚೆ ಸಂವಾದಕ್ಕೆ ಆಸ್ಪದ ಕೊಡದಂತಹ ಅನಿರ್ದಿಷ್ಟ ಉಪವಾಸ ಸತ್ಯಾಗ್ರಹಗಳನ್ನೊಳಗೊಂಡ ತಂತ್ರಗಳು ಮೂಲತಃ ಪ್ರಜಾಸತ್ತಾತ್ಮಕ ಡೆಲಿಬರೇಟಿವ್ ಪ್ರಕ್ರಿಯೆಗಳಿಗೆ ವಿರುದ್ಧವಾದದು ಎಂಬ ವಾದಕ್ಕೆ ಅಂಬೇಡ್ಕರ್ ಅವರ ಹೇಳಿಕೆ ಪುಷ್ಟಿ ಕೊಡುತ್ತದೆ. ಜನಲೋಕಪಾಲ್ ಸಮಿತಿ ಮಸೂದೆ ರಚನೆಗೆ ಸರ್ಕಾರದ ಮೇಲೆ ಹೇರಿದ ಒತ್ತಾಯ, ಸರ್ಕಾರ ಈಗ ಸಿದ್ಧಪಡಿಸಿ ಸಂಸತ್ತಿನ ಮುಂದೆ ಮಂಡಿಸಿರುವ ಕರಡು ಲೋಕಪಾಲ್ ಮಸೂದೆ ಕುರಿತು ವ್ಯಾಪಕ ಚರ್ಚೆಗೆ ಸೂಕ್ತ ರಾಜಕೀಯ ವಾತಾವರಣ ಸೃಷ್ಟಿಸುವ ಪ್ರಕ್ರಿಯೆಗಳನ್ನು ಮುಂದುವರಿಸದೆ ಇರುವ... ಬಾಬಾ ರಾಮ್‌ದೇವ್ ಬೇಡಿಕೆಗಳಾದ ಭ್ರಷ್ಟಾಚಾರಕ್ಕೆ ಗುರಿಯಾದವರಿಗೆ ಮರಣದಂಡನೆ ಶಿಕ್ಷೆಗೆ ಒಳಪಡಿಸುವುದು, ಉನ್ನತ ಶಿಕ್ಷಣವನ್ನು ಕಡ್ಡಾಯವಾಗಿ ಹಿಂದಿ ಮಾಧ್ಯಮದಲ್ಲಿ ನೀಡುವುದು... ಇತ್ಯಾದಿ ವಿಚಾರಗಳನ್ನು ನೋಡಿದರೆ ನಾವು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಇದ್ದೇವೆಯೇ ಎಂಬ ಅನುಮಾನ ಮೂಡುತ್ತದೆ. ಇಂತಹ ತಂತ್ರಗಳು ಒಂದು ಸಾಮೂಹಿಕ ರಾಜಕೀಯ ಇಚ್ಛಾಶಕ್ತಿಗೆ ಪರ್ಯಾಯ ಆಗಲು ಸಾಧ್ಯವೇ?

ಈ ದೇಶದ ರೈತಾಪಿ ವರ್ಗ, ಕಾರ್ಮಿಕರು, ದಲಿತರು, ದುಡಿಮೆ ಮಾಡುವ ಮಹಿಳೆಯರು, ಗಾರೆಕೆಲಸದವರು, ಶ್ರಮಿಕ ವರ್ಗದವರು, ಧಾರ್ಮಿಕ ಅಲ್ಪಸಂಖ್ಯಾತರು, ನೇಕಾರರು... ಮೊದಲಾದ ಶೇಕಡಾ 80ರಷ್ಟು ದುಡಿಯುವ ವರ್ಗದ ಜನರನ್ನು ಬಾಬಾ ರಾಮ್‌ದೇವ್ ತರಹದವರು ಅಥವಾ ಅಣ್ಣಾ ಹಜಾರೆ ಮತ್ತು ಅವರ ನಾಗರಿಕ ಸಮಾಜದ ತಂಡ ಪ್ರತಿನಿಧಿಸುತ್ತಿಲ್ಲ. ಮಾತ್ರವಲ್ಲ ಭ್ರಷ್ಟಾಚಾರದಂತಹ ಸಮಸ್ಯೆಯ ಬಗ್ಗೆ ನಿಜವಾದ ಹೋರಾಟವನ್ನು ರೂಪಿಸಲು ಎಲ್ಲಿಯೂ ಸಾಧ್ಯವಾಗುತ್ತಿಲ್ಲ. ಬಾಬಾ ರಾಮ್‌ದೇವ್ ಹಾಗೂ ಅಣ್ಣಾ ಹಜಾರೆ ಅವರ ಸುತ್ತಾ ಬೀಡುಬಿಟ್ಟಿರುವಂತಹ ಮಧ್ಯಮ ಹಾಗೂ ನಗರದ ಮೇಲ್ಮಧ್ಯಮ ವರ್ಗದ ಜನ, ತಳ ಸಮುದಾಯಗಳ ಜನತೆಯ ಜೊತೆ ಅಥವಾ ಅವರ ಹೋರಾಟಗಳಿಗೆ ಪೂರಕವಾಗಿ ಯಾವುದೇ ತರಹದ ಸಂಪರ್ಕ ಹೊಂದಿಲ್ಲ. ಆರ್ಥಿಕ ಮತ್ತು ಸಾಮಾಜಿಕ ಪ್ರಶ್ನೆಗಳನ್ನು ಹೊರತುಪಡಿಸಿ ಕೇವಲ ಧಾರ್ಮಿಕ ಹಾಗೂ ಸಾಂಸ್ಕೃತಿಕ ರಾಜಕಾರಣ ಮಾಡುವ ಪಕ್ಷಗಳು ಬಾಬಾ ರಾಮ್‌ದೇವ್ ಅಂತಹವರ ಬೆಂಬಲಕ್ಕೆ ನಿಂತಿರುವುದು ಮುಂದಿನ ರಾಜಕಾರಣದ ಟ್ರೆಂಡ್‌ಗಳನ್ನು ಸೂಚಿಸುತ್ತಿದೆಯೇ?


ಇವತ್ತಿನ ಮೂಲ ಸಮಸ್ಯೆಗಳಿಗೆ ಕಾರಣವಾಗಿರುವಂತಹ ಅಭಿವೃದ್ಧಿ ಮಾದರಿ ಅಥವಾ ಜಾಗತೀಕರಣದ ಪ್ರಕ್ರಿಯೆಗಳು ತಂದೊಡ್ಡಿರುವ ಅಪಾಯಗಳ ಬಗ್ಗೆ ಅಣ್ಣಾ ಹಜಾರೆ ಮತ್ತು ಬಾಬಾ ರಾಮ್‌ದೇವ್ ತರಹದವರು ಏಕೆ ಚಕಾರವೆತ್ತುತ್ತಿಲ್ಲ? ಇಂತಹ ಮೂಲಭೂತ ಪ್ರಶ್ನೆಗಳನ್ನು ಎತ್ತದೆ ಒಂದು ರಾಜಕೀಯ ಕಾನೂನು ಸಮ್ಮತಿಯನ್ನು ಗಟ್ಟಿಮಾಡುವಂತಹ ವಿರಾಟ್ ಹೋರಾಟವನ್ನು ರೂಪಿಸದೆ ಇದ್ದಲ್ಲಿ ಭ್ರಷ್ಟಾಚಾರವನ್ನು ಮತ್ತು ಇನ್ನ್ಯಾವುದೇ ವರ್ತಮಾನದ ಬಿಕ್ಕಟ್ಟುಗಳ ಕುರಿತು ನಿಜವಾದ ಬದಲಾವಣೆಯನ್ನು ತರಲು ಸಾಧ್ಯವಿಲ್ಲ. ಇದಲ್ಲದೆ ರಾಜಕೀಯೇತರ 'ಧಾರ್ಮಿಕ ಸಂಕೇತ'ಗಳನ್ನು ಮುಂದಿಟ್ಟು ಪ್ರತಿನಿಧಿಸುವಂತಹ ವ್ಯಕ್ತಿಗಳು ಹೋರಾಟದ ಭಾಗವಾಗಿ ತೊಡಗಿಕೊಳ್ಳಲು ಅನುವು ಮಾಡಿಕೊಟ್ಟಲ್ಲಿ ಪ್ರಜಾಪ್ರಭುತ್ವದ ಅವನತಿಗೆ ದಾರಿಮಾಡಿಕೊಟ್ಟಂತಾಗುತ್ತದೆ.

• ಡಾ.ಎಸ್.ಜಾಫೆಟ್

ಲೋಕಪಾಲ ಮತ್ತು ಮೂವರು ಮ್ಯಾಗ್ಸೆಸೆ ಸಿಪಾಯಿಗಳು



ಅಣ್ಣಾ ಹಜಾರೆ ಮತ್ತು ಅವರ ಸಹೋದ್ಯೋಗಿಗಳ ಅಲ್ಪಾವಧಿ ಬಂಧನವನ್ನು ಖಂಡಿಸುತ್ತಲೇ ಈ ಮ್ಯಾಗ್ಸೆಸೆ ಪ್ರಶಸ್ತಿಯ ಹಿಂದಿರುವ ಮಸಲತ್ತನ್ನು ಅರಿಯುವುದು ಅತ್ಯವಶ್ಯಕವಾಗಿದೆ. ಇದಕ್ಕೆ ಮುಖ್ಯ ಕಾರಣ ಪ್ರಸ್ತುತ ಭ್ರಷ್ಟಾಚಾರದ ವಿರುದ್ಧದ ಆಂದೋಲನದಲ್ಲಿ ತೊಡಗಿರುವ ಮೂವರು ಮ್ಯಾಗ್ಸೆಸೆ ಪ್ರಶಸ್ತಿ ವಿಜೇತರ (ಅಣ್ಣಾ ಹಜಾರೆ, ಕಿರಣ್ ಬೇಡಿ ಮತ್ತು ಅರವಿಂದ್ ಕೇಜ್ರಿವಾಲ್) ಪರವಾಗಿ ಅಮೆರಿಕದ ಸರ್ಕಾರ ತನ್ನ ಬೆಂಬಲವನ್ನು ಸೂಚಿಸಿರುವುದು.



ಅಮೆರಿಕ ಸರ್ಕಾರ ಎಂತಹದ್ದೆಂದರೆ ಜಗತ್ತಿನಾದ್ಯಂತ ಕಾರ್ಪೊರೇಟ್ ಭ್ರಷ್ಟಾಚಾರವನ್ನು ಪ್ರೋತ್ಸಾಹಿಸುವಂತಹದ್ದು ಮತ್ತು ಅದನ್ನು ರಕ್ಷಿಸುವಂತಹದ್ದು; ವಿಶ್ವದ ದಕ್ಷಿಣದಲ್ಲಿರುವ ಬಡ ರಾಷ್ಟ್ರಗಳ ವಿರುದ್ಧ ಸದಾಕಾಲ ಯುದ್ಧದಲ್ಲಿ ನಿರತವಾಗಿರುವ ಸೈನಿಕ ಯಂತ್ರವನ್ನು ಹೊಂದಿರುವಂತಹದ್ದು; ಭಾರತದ ಲೂಟಿಯಲ್ಲಿ ಭಾಗಿಯಾಗಿರುವ ಕಾರ್ಪೊರೇಟ್ ಕಂಪನಿಗಳ ಬೇರಿನಲ್ಲಿರುವಂತಹದ್ದು; ಇಡೀ ವಿಶ್ವವನ್ನೇ ಮನುಷ್ಯ ವಾಸಯೋಗ್ಯವಲ್ಲದ ಸ್ಥಿತಿಗೆ ದೂಡುತ್ತಿರುವಂತಹದ್ದು; ಮನಮೋಹನ್ ಸಿಂಗ್ ಅವರ ಸರ್ಕಾರ ಮನಸಾರೆ ವಿಧೇಯನಾಗಿರುವಂತಹದ್ದು.

ಈ ಆಟದ ಲೆಕ್ಕಾಚಾರಗಳು ಸುಲಭವಾಗಿ ಅರ್ಥವಾಗುವಂತಹದ್ದಲ್ಲ. ಯಾಕೆಂದರೆ ಮನಮೋಹನ್ ಸಿಂಗ್ ಕೂಡ ಅಮೆರಿಕದ ಆಪ್ತ ಸ್ನೇಹಿತನೇ. ಆದರೆ ಈ ಆಟದ ಹಿಂದಿರುವ ಲೆಕ್ಕಾಚಾರಗಳನ್ನು ಒಮ್ಮೆ ವೀಕ್ಷಿಸಿದರೆ ಈ ಆಟದ ಆಯಾಮಗಳು ಅರ್ಥವಾಗುತ್ತವೆ. ಉದಾಹರಣೆಗೆ ಅಮೆರಿಕದ ಸಿಐಎ ಮತ್ತು ಇಸ್ರೇಲಿನ ಮೊಸ್ಸಾದ್ ಏಕಕಾಲಕ್ಕೆ ಶ್ರೀಲಂಕಾದ ಸೈನ್ಯಕ್ಕೆ ಮತ್ತು ಅದರ ವಿರುದ್ಧ ಹೋರಾಡುತ್ತಿದ್ದ ಎಲ್‌ಟಿಟಿಇ ಸಂಘಟನೆಯ ಯೋಧರಿಗೆ ತರಬೇತಿ ನೀಡಿದ್ದವು. ಆನಂತರ ಇಬ್ಬರನ್ನೂ ಮಂಗಗಳು ಎಂದು ಎರಡೂ ದೇಶಗಳು ಬಣ್ಣಿಸಿದ್ದು ಬೇರೆ ವಿಚಾರ. ಇದಿಷ್ಟೇ ಅಲ್ಲದೆ, ರಷ್ಯಾ ವಿರುದ್ಧ ಅಫಘಾನಿಸ್ತಾನದಲ್ಲಿ ಜಿಹಾದಿ ಭಯೋತ್ಪಾದಕರನ್ನು ಹುಟ್ಟುಹಾಕಿದ ಅಮೆರಿಕ ಆನಂತರ ಅದೇ ಜಿಹಾದಿಗಳನ್ನೇ ನೆಪವಾಗಿಟ್ಟುಕೊಂಡು ಅವರ ದೇಶವನ್ನು ಆಕ್ರಮಿಸಿ ನಾಶಗೊಳಿಸಿತು.

ಈಗ ಮ್ಯಾಗ್ಸೆಸೆ ಪ್ರಶಸ್ತಿಯನ್ನು ಪಡೆದಿರುವ ಈ ಮೂವರ ಬಗ್ಗೆ ಬರುವ.

ದಿವಂಗತ ರಾಮೋನ್ ಮ್ಯಾಗ್ಸೆಸೆ ಫಿಲಿಪೀನ್ಸ್‌ನ ಅಧ್ಯಕ್ಷನಾಗಿದ್ದವನು. ಆದರೆ ಈತನ ಹೆಸರಲ್ಲಿ ಕೊಡಲಾಗುವ ಈ ಪ್ರತಿಷ್ಠಿತ ಪ್ರಶಸ್ತಿ ಫಿಲಿಪೀನ್ಸ್ ಸರ್ಕಾರ ಕೊಡುವ ಪ್ರಶಸ್ತಿಯಾಗಿಲ್ಲ. ಬದಲಾಗಿ ಮನಿಲಾ (ಫಿಲಿಪೀನ್ಸ್ ರಾಜಧಾನಿ)ದಲ್ಲಿ ರಾಕ್‌ಫೆಲ್ಲರ್ ಪ್ರತಿಷ್ಠಾನ - ಹಲವು ಸ್ಥಳೀಯರನ್ನು ತನ್ನೊಂದಿಗೆ ಸೇರಿಸಿಕೊಂಡು - ದತ್ತಿ ನೀಡಿ ನಡೆಸುತ್ತಿರುವ ಸಂಘಟನೆ ನೀಡುವ ಪ್ರಶಸ್ತಿ ಇದಾಗಿದೆ. ಅದು ಯುವ ಸಾಧಕರಿಗೆಂದು ಕೊಡುವ ಪ್ರಶಸ್ತಿಯನ್ನು (ಅದನ್ನು ಕೇಜ್ರಿವಾಲ್ ಪಡೆದಿದ್ದಾರೆ) ರಾಕ್‌ಫೆಲ್ಲರ್ ಕಂಪನಿ ಹೊಂದಿರುವ ಸ್ವಭಾವವನ್ನೇ ಹೊಂದಿರುವ ಫೋರ್ಡ್ ಫೌಂಡೇಷನ್ ದಯಪಾಲಿಸುತ್ತದೆ.



ಈ ಪ್ರಶಸ್ತಿಗಳ ದುರುದ್ದೇಶ ಮತ್ತು ದೂರುದ್ದೇಶವೇ ಅಮೆರಿಕ ಸರ್ಕಾರದ ಮೌಲ್ಯಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಬೆಂಬಲಿಸುವ ಸಾಮಾಜಿಕ ನಾಯಕರನ್ನು ಗುರುತಿಸಿ ಪ್ರೋತ್ಸಾಹಿಸುವುದು ಮತ್ತು ಜಗತ್ತಿನ ಹಲವಾರು ಸಮಸ್ಯೆಗಳಿಗೆ ಕಾರಣವಾಗಿರುವ ಅಮೆರಿಕದ ಅಧಿಪತ್ಯವನ್ನು ಪ್ರಶ್ನಿಸುವವರ ಸಾಮಾಜಿಕ ಸ್ಥಾನವನ್ನು ಕುಗ್ಗಿಸುವುದಾಗಿದೆ. ಕೆಲವೊಮ್ಮೆ ಇವುಗಳ ಅಲ್ಪಾವಧಿ ಗುರಿ ದೇಶೀಯ ಬಿಕ್ಕಟ್ಟನ್ನು ಸೃಷ್ಟಿಸುವುದೇ ಆಗಿರುತ್ತವೆ. (ಪ್ರಸ್ತುತ ರಾಮಲೀಲಾ ಮೈದಾನದಲ್ಲಿ ನಡೆಯುತ್ತಿರುವ ಗುದ್ದಾಟ ಹೀಗೆ ಸೃಷ್ಟಿಸಲ್ಪಟ್ಟಿರುವ ಒಂದು ವಿಷಮಸ್ಥಿತಿ ಎಂದು ಕರೆಯಬಹುದು.)

ಮ್ಯಾಗ್ಸೆಸೆ ಪ್ರಶಸ್ತಿಯನ್ನು ಅಮೆರಿಕದ ಹಿತಾಸಕ್ತಿಯನ್ನು ಕಾಪಾಡುವವರಿಗೆ ನೀಡಲಾಗುತ್ತದೆ. ಉದಾಹರಣೆಗೆ ಭಾರತದ ಕಟ್ಟಕ್‌ನಲ್ಲಿರುವ ರೈಸ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ಅಕ್ಕಿ ಸಂಶೋಧನಾ ಸಂಸ್ಥೆ) ಭಾರತದ ಅಕ್ಕಿಯ ಜೀವಧಾತುಗಳ ಬಗ್ಗೆ ಅಮೂಲ್ಯ ಸಂಶೋಧನೆಯನ್ನು ನಡೆಸಿತ್ತು. ಆದರೆ ಕೃಷಿ ಉದ್ಯಮದಲ್ಲಿ ತೊಡಗಿರುವ ಪಾಶ್ಚಿಮಾತ್ಯ ಕಂಪನಿಗಳು ಏಷಿಯಾದ ಅಕ್ಕಿ ಕೃಷಿ ಮೇಲೆ ಹಿಡಿತ ಹೊಂದಲೆಂದೇ ರಾಕ್‌ಫೆಲ್ಲರ್ ಸಂಸ್ಥೆ ಮನಿಲಾದ ಹತ್ತಿರ ಸ್ಥಾಪಿಸಿರುವ ಇಂಟರ್‌ನ್ಯಾಷನಲ್ ರೈಸ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ಐಆರ್‌ಆರ್‌ಐ) ಭಾರತದ ಅಕ್ಕಿ ಜೀವಧಾತುಗಳನ್ನು ತನ್ನ ವಶಕ್ಕೆ ಪಡೆದುಕೊಂಡಿತು. ಹೀಗೆ ಭಾರತದ ಆಸ್ತಿಯನ್ನು ಕಿತ್ತುಕೊಂಡು ಐಆರ್‌ಆರ್‌ಐ ಸಂಸ್ಥೆಗೆ ಕೊಟ್ಟ ವ್ಯಕ್ತಿಯನ್ನು ಅದೇ ಐಆರ್‌ಆರ್‌ಐಗೆ ಅಧ್ಯಕ್ಷನನ್ನಾಗಿ ಮಾಡಲಾಯಿತು. ಆನಂತರ ಆತನಿಗೆ ಮ್ಯಾಗ್ಸೆಸೆ ಪ್ರಶಸ್ತಿಯನ್ನೂ ನೀಡಲಾಯಿತು (ಪ್ರಶಸ್ತಿಯೊಂದಿಗೆ ಸಾಕಷ್ಟು ಹಣ ಕೂಡ ಸಿಗುತ್ತದೆ). ಕೊನೆಗೆ ಆತನನ್ನೇ ಪ್ರಶಸ್ತಿ ನೀಡುವ ಸಮಿತಿಯ ಅಧ್ಯಕ್ಷನನ್ನಾಗಿಸಲಾಯಿತು.

ಈ ಪ್ರಶಸ್ತಿಗೆ ರಾಮೋನ್ ಮ್ಯಾಗ್ಸೆಸೆ ಹೆಸರನ್ನು ಫೋರ್ಡ್ ಫೌಂಡೇಶನ್ ಆಯ್ಕೆ ಮಾಡಿಕೊಂಡಿದ್ದು ಆಕಸ್ಮಿಕವಾಗಲ್ಲ. ಅವರಿಗೆ ನಿಜವಾಗಲೂ ಜನರ ಸ್ವಾತಂತ್ರ ಮತ್ತು ಬದ್ಧತೆಯನ್ನು ಗುರುತಿಸಬೇಕೆನಿಸಿದ್ದರೆ ಅವರು ಫಿಲಿಪೀನಿನ ಅತಿ ಗೌರವಾನ್ವಿತ ನಾಯಕರಾಗಿದ್ದ ಜೋಸ್ ರಿಜಾಲ್ ಅವರ ಹೆಸರನ್ನು ಇಡಬಹುದಿತ್ತು. ಆದರೆ ಅವರು ಮ್ಯಾಗ್ಸೆಸೆ ಹೆಸರನ್ನು ಆಯ್ಕೆ ಮಾಡಿಕೊಂಡಿದ್ದಕ್ಕೆ ಕಾರಣ ಆತ ಫಿಲಿಪೀನ್ಸ್‌ನಲ್ಲಲ್ಲದೆ ಆಗ್ನೇಯ ಏಷಿಯಾದಲ್ಲಿ ಅಚಲವಾಗಿ ಅಮೆರಿಕದ ಹಿತಾಸಕ್ತಿಯನ್ನು ಕಾಪಾಡಿದವನು ಎಂಬುದು. 1953ರ ಅಧ್ಯಕ್ಷ ಚುನಾವಣೆಯಲ್ಲಿ ಅಮೆರಿಕದ ಸಿಐಎ ಕುತಂತ್ರ ಮಾಡುವ ಮೂಲಕ ಮ್ಯಾಗ್ಸೆಸೆಯನ್ನು ಗೆಲ್ಲಿಸಿತ್ತು. ಅವತ್ತು ಸಿಐಎ ನಡೆಸಿದ ಕುತಂತ್ರಗಳಲ್ಲಿ ಕಪ್ಪು ಹಣ, ಆಸ್ತಿದಹನ, ಬ್ಲಾಕ್ ಮೈಲ್, ಎಲ್ಲವೂ ಸೇರಿತ್ತು.

ಕಮ್ಯೂನಿಸ್ಟ್ ಚಳವಳಿಗಳ ವಿರುದ್ಧ ಮ್ಯಾಗ್ಸೆಸೆ ಅಮೆರಿಕದ ಪರ ಹೋರಾಡಿದ. ಅಷ್ಟೇ ಅಲ್ಲ, ಅಮೆರಿಕದ ಆದೇಶದಂತೆ ಅಪಾಯಕಾರಿ ಸಿಯಾಟೋ (ಸೌತ್‌ಈಸ್ಟ್ ಏಷಿಯಾ ಕಲೆಕ್ಟೀವ್ ಡಿಫೆನ್ಸ್ ಟ್ರೀಟಿ) ಎಂಬ ಸಂಘಟನೆಯನ್ನೂ ಸ್ಥಾಪಿಸಿದ. ಆದರೆ ಕೊನೆಗೂ ಈ ಸಂಘಟನೆಯನ್ನು ಸೇರಿದ್ದು ಥೈಲ್ಯಾಂಡ್‌ನ ರಾಜ ಮತ್ತು ಅಮೆರಿಕದ ಪಾಳೆಯಪಟ್ಟು ದೇಶವಾದ ಪಾಕಿಸ್ತಾನ ಮಾತ್ರ.

ಅಮೆರಿಕದ ಆದೇಶದಂತೆ ಮ್ಯಾಗ್ಸೆಸೆ ಬಾನ್‌ಡುಂಗ್ ಸಮಾವೇಶವನ್ನು ಹಾಳುಮಾಡಲು ಪ್ರಯತ್ನಿಸಿದ್ದ. ಆದರೆ ಅದರಲ್ಲಿ ಆತ ವಿಫಲನಾಗಿದ್ದರಿಂದಲೇ 1955ರಲ್ಲಿ ಅಲಿಪ್ತ ಚಳವಳಿ ಹುಟ್ಟಿಕೊಂಡಿದ್ದು. ಆತ ಬಾನ್‌ಡುಂಗ್ ಸಮಾವೇಶದಲ್ಲಿ ಅಮೆರಿಕದ ಇಚ್ಛೆಯಂತೆ ಭಾಗವಹಿಸದೇ ತನ್ನ ಪ್ರತಿನಿಧಿಯನ್ನು ಕಳುಹಿಸಿದ್ದ. ಆ ಪ್ರತಿನಿಧಿ ಅಮೆರಿಕದ ಹಿತಾಸಕ್ತಿಗಳನ್ನು ಕಾಪಾಡುವವನಂತೆ ಮಾತನಾಡಿದ್ದ. ಇವತ್ತು ಮ್ಯಾಗ್ಸೆಸೆ ಪ್ರಶಸ್ತಿ ಸಿಕ್ಕ ಕೂಡಲೇ ಹರ್ಷಭರಿತರಾಗುವ ನಮ್ಮ ಪತ್ರಕರ್ತರು ಮತ್ತು ಪ್ರಜಾಸಮಾಜದವರಿಗೆ ಇದೇ ಮ್ಯಾಗ್ಸೆಸೆ ನೆಹರೂ ಮತ್ತು ಅಲಿಪ್ತ ಸಂಘಟನೆಯನ್ನು "ಕಮ್ಯೂನಿಸ್ಟರಿಗೆ ಜಗಿ ಹಲಗೆ ಆಗುತ್ತದೆ" ಎಂದು ಟೀಕಿಸಿದ್ದರ ಅರಿವು ಇದ್ದಂತಿಲ್ಲ.

ಆಗ್ನೇಯ ಪ್ರದೇಶದಲ್ಲಿ ಕಮ್ಯೂನಿಸಂ ವಿರುದ್ಧ ಮ್ಯಾಗ್ಸೆಸೆ ನಿಂತಿದ್ದಕ್ಕೆ ಮಾತ್ರ ಆತನಿಗೆ ಅಮೆರಿಕ ಮಾನ್ಯತೆ ಕೊಡುತ್ತದೆ. ಆತನ ಹೆಸರಲ್ಲಿ ಪ್ರಶಸ್ತಿ ಕೊಡುವ ರಾಕ್‌ಫೆಲ್ಲರ್ ಮತ್ತು ಫೋರ್ಡ್ ಫೌಂಡೇಶನ್ ಕೂಡ ಅದೇ ಹಳೇ ಉದ್ದೇಶವನ್ನು ಸಮರ್ಥಿಸುವ ಕೆಲಸವನ್ನು ಬಹಳ ಜಾಗರೂಕತೆಯಿಂದ ಮುಂದುವರೆಸುತ್ತಿದೆಯಷ್ಟೇ.

ಮ್ಯಾಗ್ಸೆಸೆ ಪ್ರಶಸ್ತಿಯನ್ನು ಪಡೆದಿರುವ ಈ ಮೂವರು ಅಧಿಕ ಹಣಕಾಸನ್ನುಳ್ಳ ಹಲವಾರು ಎನ್‌ಜಿಓಗಳನ್ನು ನಡೆಸುತ್ತಿದ್ದಾರಲ್ಲದೆ ರಾಕ್‌ಫೆಲ್ಲರ್ ಮತ್ತು ಫೋರ್ಡ್ ಫೌಂಡೇಶನ್ನಿನ ನಿರೀಕ್ಷೆಗೆ ತಕ್ಕಂತೆ ಕಾರ್ಯ ವಹಿಸುತ್ತಿದ್ದಾರೆ. ಈಗ ಅವರೆಲ್ಲರಿಗೆ ಅಮೆರಿಕದ ಸರ್ಕಾರ ಸಮ್ಮತಿಯನ್ನು ಸೂಚಿಸಿದೆ. ಆದರೆ ನವದೆಹಲಿ ಇದಕ್ಕೆ ತೀವ್ರವಾಗಿ ಪ್ರತಿಕ್ರಿಯಿಸಿರುವುದರಿಂದ ಈಗ ಅಮೆರಿಕ ತನ್ನ ಹೇಳಿಕೆಯಿಂದ ಸ್ವಲ್ಪ ಹಿಂದೆ ಸರಿದಿದೆ.

ಭಾರತದ ನಿಜವಾದ ಪ್ರಜೆಗಳಾದ ನಾವು, ನಮ್ಮ ಗಣರಾಜ್ಯದ ಮಾಲೀಕರಾದ ಮತ್ತು ನಮ್ಮ ಸಂವಿಧಾನದ ಲೇಖಕರಾದ ನಾವು, ಈಗ ಅಮೆರಿಕದ ಆಪ್ತನಾಗಿರುವ ಮತ್ತು ವಸಾಹತು ಸಿದ್ಧಾಂತದ ಸಮರ್ಥಕನಾಗಿರುವ ಮನಮೋಹನ್ ಸಿಂಗ್ ಹಾಗೂ ಈ ಮೂವರು ಮ್ಯಾಗ್ಸೆಸೆ ಸಿಪಾಯಿಗಳ ನಡುವೆ ನಿಂತಿದ್ದೇವೆ.


ದೇವರು ಎಂಬುವವನಿದ್ದರೆ ಆತನೇ ಈ ದೇಶವನ್ನು ಉಳಿಸಬೇಕು.

• ಡಾ. ಎಸ್. ಫೈಜಿ

(ಫೈಜಿ ಅವರು ಅಂತರರಾಷ್ಟ್ರೀಯ ಖನಿಜ ತಜ್ಞರಾಗಿದ್ದಾರೆ)

ಕನ್ನಡಕ್ಕೆ: ಗೌರಿಲಂಕೇಶ್

ಈಗ ಸಂಸತ್‌ನಲ್ಲಿ ಲೋಕಪಾಲ್ ಮಸೂದೆಯ ಬಗ್ಗೆ ಚರ್ಚಿಸುವುದಾಗಿ ಹೇಳಿದ್ದಾರೆ. ಆದರೆ ಅಣ್ಣಾ ಹಜಾರೆ ಆಶಿಸುತ್ತಿರುವ ಎಲ್ಲಾ ಅಂಶಗಳೂ ಅದರಲ್ಲಿ ಅಡಕಗೊಳ್ಳುವ ಸಾಧ್ಯತೆಗಳು ಕಡಿಮೆ ಇದೆ. ಅಣ್ಣಾ ಹೋರಾಟಕ್ಕೆ ಒಳಗಿಂದೊಳಗೇ ಬೆಂಬಲಿಸಿ ಕಾಂಗ್ರೆಸ್‌ಗೆ ಇಕ್ಕಟ್ಟು ಸೃಷ್ಟಿಸಿ ಖುಷಿ ಪಟ್ಟ ಬಿಜೆಪಿಗಳಿಗೂ ಅಣ್ಣಾ ಪ್ರತಿಪಾದಿಸುತ್ತಿರುವ ಜನಲೋಕಪಾಲ್ ಬೇಡವಾಗಿದೆ. ಇನ್ನು ಕಾಂಗ್ರೆಸ್‌ನ ಜನ ವಿರೋಧಿ ನಿಲುವು ಎಲ್ಲರಿಗೂ ಗೊತ್ತಿರುವಂತದ್ದೇ. ಈ ಹಿನ್ನೆಲೆಯಲ್ಲಿ ಈ ಎರಡೂ ಗುಂಪುಗಳೂ ಅಣ್ಣಾ ಹಜಾರೆಗೆ ಬೆಣ್ಣೆಯನ್ನೆಲ್ಲ ಸುಣ್ಣ ಹಚ್ಚಿದ್ದಾರೆ.




ಅಣ್ಣನಿಗೆ ಸುಣ್ಣ

ಇಂಡಿಯಾ ದೇಶಕ್ಕೆ, ದೇಶದ ಜನರಿಗೆ ಒಳ್ಳೆಯದನ್ನು ಮಾಡಬಹುದಾಗಿದ್ದ ಒಂದು ಅಪರೂಪದ ಅವಕಾಶವನ್ನು ಹಾಳು ಮಾಡಲಾಗಿದೆ.

ಇದಕ್ಕೆ ನಮ್ಮ ರಾಜಕಾರಣಿಗಳು ಎಷ್ಟು ಕಾರಣರೊ ಅಣ್ಣಾ ಹಜಾರೆಯ ಟೀಮೂ ಅಷ್ಟೇ ಹೊಣೆಯಾಗಿದೆ. ಲೋಕಪಾಲ್ ಆಗಲಿ ಅಥವಾ ಜನಲೋಕಪಾಲ್ ಆಗಲಿ ಜಾರಿಗೆ ಬಂದೇ ಬಿಟ್ಟರೆ ಭಾರತ ದೇಶ ರಾತ್ರೋರಾತ್ರಿ ಉದ್ಧಾರವಾಗಿಬಿಡುವ ಸಾಧ್ಯತೆ ಅಷ್ಟರಲ್ಲೇ ಇದೆ. ಇನ್ನು ಲಂಚಗುಳಿತನದ ವಿಚಾರಕ್ಕೆ ಬಂದರೆ ಅದನ್ನು ಬೇರುಸಮೇತ ಕಿತ್ತು ಹಾಕಬೇಕೆಂಬುದೇನೋ ಸರಿ, ಆದರೆ ಲಂಚಕ್ಕೆ ಸಂಬಂಧಿಸಿದ ಹೊಸ ಹೊಸ ಕಾನೂನುಗಳು ಬಂದಷ್ಟು ಲಂಚಕೋರರು ಇನ್ನಷ್ಟು ಸ್ಮಾರ್ಟ್ ಆಗುತ್ತಾ ಹೋಗುತ್ತಾರೆ.

ಹಾಗಂತ ನಾವ್ಯಾರೂ ಎಲ್ಲದರ ಬಗ್ಗೆಯೂ ಸಿನಿಕರಾಗುವ ಅಗತ್ಯವೇನೂ ಇಲ್ಲ, ವ್ಯವಸ್ಥೆಯ ಅವ್ಯವಸ್ಥೆಯನ್ನು ರಿಪೇರಿ ಮಾಡುವ ಕೆಲಸ ಸದಾ ನಡೆಯುತ್ತಲೇ ಇರಬೇಕು.

ಆದರೆ ಒಂದು ಕಡೆ ಕಡುಭ್ರಷ್ಟ ಕಾಂಗ್ರೆ ಸರ್ಕಾರದ ಗುಂಪು. ಇನ್ನೊಂದೆಡೆ ಸತ್ಯ-ನ್ಯಾಯದ ಪ್ರತಿಪಾದಕ ಅಣ್ಣಾ ಹಜಾರೆ ಕದನಕ್ಕೆ ಇಳಿದಾಗ ಈ ಎರಡೂ ಬಣಗಳಲ್ಲೂ ಈ ವಿಚಾರ ನಿಭಾಯಿಸಲು ಬೇಕಾದಷ್ಟು ದೂರದೃಷ್ಟಿ ಹಾಗೂ ಪ್ರಬುದ್ಧತೆಗಳು ಕಾಣಲೇ ಇಲ್ಲ.



ಇದನ್ನು ಒಂದು ಉದಾಹರಣೆಯ ಮೂಲಕವೇ ನೋಡೋಣ.

ಈ ಅಣ್ಣಾ ಹಜಾರೆ ಕಳೆದ ಏಪ್ರಿಲ್ 5 ರಂದು ಮೊದಲ ಬಾರಿ ಆಮರಣಾಂತ ಉಪವಾಸ ಪ್ರದರ್ಶನ ನಡೆಸಿದರಲ್ಲವೆ. ಅವತ್ತು ಸರ್ಕಾರ ಒಂದು ಜಂಟಿ ಸಮಿತಿ ರಚಿಸಿ ಸಮಾನಾಭಿಪ್ರಾಯವುಳ್ಳ ಲೋಕಪಾಲ್ ಮಸೂದೆ ರೂಪಿಸುವ ಬಗ್ಗೆ ಹೇಳಿತ್ತು, ಆ ನಡುವೆಯೇ ಅಣ್ಣಾ ಟೀಂ ತಾವೇ ಒಂದು ಲೋಕಪಾಲ್ ಮಸೂದೆಯ ರೂಪುರೇಷೆ ರೆಡಿ ಮಾಡಿದರು. ಅದನ್ನು ಸರ್ಕಾರಕ್ಕೂ ಕೊಟ್ಟರು. ಆದರೆ ತಾವೇನು ಯೋಚಿಸುತ್ತಿದ್ದೇವೆ, ಹೊಸ ಮಸೂದೆಯಲ್ಲಿರಬೇಕಾದ ಅಂಶಗಳ ಯಾವುದೆಂಬ ಬಗ್ಗೆ ಬಹಿರಂಗ ಚರ್ಚೆ ನಡೆಸಲಿಲ್ಲ, ಅದು ಹಾಳಾಗಲಿ, ದೇಶದ ನಾಲ್ಕಾರು ಸ್ಥಳಗಳಿಗಾದರೂ ಹೋಗಿ ಮಸೂದೆಯ ಬಗ್ಗೆ ಜನಾಭಿಪ್ರಾಯ ಕೇಳುವ ಸಹನೆ ತೋರಲಿಲ್ಲ, ಕನಿಷ್ಠಪಕ್ಷ ಪ್ರಾತಿನಿಧಿಕವಾಗಿಯಾದರೂ ಇಂಡಿಯಾದ ವಿಭಿನ್ನ ಪ್ರದೇಶಗಳ ಬೇರೆಬೇರೆ ಜನಸಮುದಾಯಗಳ ಆಯ್ದ ಪ್ರತಿನಿಧಿಗಳನ್ನು ತಮ್ಮ ತಂಡದೊಳಗೆ ಸೇರಿಸಿಕೊಳ್ಳುವ ಬಗ್ಗೆ ಯೋಚಿಸಲೂ ಇಲ್ಲ, ಅದು ಹಾಳಾಗಿ ಹೋಗಲಿ, ಟೀಂ ಅಣ್ಣಾ ಜೊತೆಗಿರುವವರಾದರೂ ಯೋಗ್ಯರಾ, ನಂಬಿಕಸ್ಥರಾ ಅಂತ ನೋಡಿದರೆ ಅಲ್ಲೂ ನಿರಾಶೆಯೇ!

ಒಬ್ಬ ಕಿರಣ್ ಬೇಡಿ, ಇನ್ನೊಬ್ಬ ಸಂತೋಷ್ ಹೆಗ್ಡೆ ಹೊರತುಪಡಿಸಿದರೆ ಉಳಿದವರ ಹಿನ್ನೆಲೆ, ಚಟುವಟಿಕೆಗಳೆಲ್ಲಾ ಅನುಮಾನಾಸ್ಪದವಾಗಿದೆ.

ಈ ಅರವಿಂದ ಕೇಜ್ರಿವಾಲ ಯಾರು?

ಈತ 'ಕಬೀರ್' ಎನ್ನುವ ಒಂದು ಎನ್‌ಜಿಓ ನಡೆಸುತ್ತಿದ್ದಾರೆ. ಆಯಿತು ನಡೆಸಲಿ ಎಂದು ಸುಮ್ಮನಿರುವಂತೆಯೂ ಇಲ್ಲ, ಯಾಕೆ ಗೊತ್ತಾ? ಕಳೆದ ಎರಡು ವರ್ಷಗಳಲ್ಲಿ ಕೇಜ್ರಿವಾಲ್‌ನ 'ಕಬೀರ್'ಗೆ ಅಮೆರಿಕಾದ ಫೋರ್ಡ್, ಕೋಕಾಕೋಲಾ ಕಂಪನಿಗಳು ಮೂರು ಕೋಟಿ ರೂಪಾಯಿಗೂ ಜಾಸ್ತಿ ದೇಣಿಗೆ ಕೊಟ್ಟಿದೆ!

ಇಷ್ಟು ಹಣ ಕೇಜ್ರಿವಾಲ್‌ಗೆ ಅಮೆರಿಕನ್ನರು ಯಾಕೆ ಕೊಡುತ್ತಾರೆ? ಅವರ ಉದ್ದೇಶ ಏನು? ಅಸಲಿಗೆ ಆ ದುಡ್ಡು ಪ್ರಾಮಾಣಿಕ ದುಡಿಮೆಯಿಂದ ಬಂದದ್ದಾ?

ಈ ಪ್ರಶ್ನೆಯನ್ನು ಮೀಡಿಯಾಗಳಂತೂ ಕೇಳಲಿಲ್ಲ, ಅಲ್ಲೊಬ್ಬರು ಇಲ್ಲೊಬ್ಬರು ದನಿ ಎತ್ತಿದ್ದನ್ನು ಯಾರು ಪ್ರಕಟಿಸಲೂ ಇಲ್ಲ. ಕನಿಷ್ಠ ಪಕ್ಷ ಅಣ್ಣಾ ಹಜಾರೆಯೂ ತಲೆ ಕೆಡಿಸಿಕೊಳ್ಳಲಿಲ್ಲ ಅಂದರೆ ಏನನ್ನಬೇಕು?

ಅದು ಬಿಡಿ.

ಈ ಅಣ್ಣಾ ಟೀಂನಲ್ಲಿ ಆರ್ಟ್ ಆಫ್ ಲೀವಿಂಗ್‌ನ ರವಿಶಂಕರ್ ಕಾಣಿಸಿಕೊಳ್ಳುತ್ತಿದ್ದಾನೆ. ಇವನೆಂತಾ ಖದೀಮನೆಂಬುದು ಎಲ್ಲರಿಗೂ ಗೊತ್ತಿದೆ. ಭೂಗಳ್ಳ ಹಾಗೂ ಕೋಮುವಾದಿ ಇವನು. ಜೊತೆಗೆ ಇತ್ತೀಚೆಗೆ ತಾನೆ ಕರ್ನಾಟಕದ ಲಕ್ಷಾಂತರ ಸರ್ಕಾರಿ ನೌಕರರಿಗೆ ಯೋಗ ಕಲಿಸುತ್ತೇನೆಂದು ಹೇಳಿ ತಲೆಗೆ ಏಳುನೂರು ರೂಪಾಯಿಯಂತೆ ಬಿಜೆಪಿ ಸರ್ಕಾರದಿಂದ ಕೋಟ್ಯಂತರ ರೂಪಾಯಿ ಹಣ ಕಿತ್ತು ತಿಂದಿದ್ದಾನೆ. ಮೈಸೂರಿನಲ್ಲೂ ಈ ಕಳ್ಳ ಐದೆಕರೆ ಸರ್ಕಾರಿ ಜಮೀನಿಗೆ ಅಕ್ರಮವಾಗಿ ಬೇಲಿ ಹಾಕಿಕೊಂಡು ಸಿಕ್ಕಿಬಿದ್ದಿದ್ದಾನೆ. ಇವನ ಜೊತೆಗೆ ಹಗಲು ಕಳ್ಳ ಬಾಬಾ ರಾಮ್‌ದೇವ್ ಕೂಡಾ ಸೇರಿಕೊಂಡಿದ್ದಾನೆ. ಸರಿಯಾಗಿ ತನಿಖೆಯಾದರೆ ಇವರಿಬ್ಬರೂ ಜೈಲಿಗೆ ಹೋಗಬೇಕಾಗುತ್ತದೆ.



ಇಂಥ ಖದೀಮರು ಅಣ್ಣಾ ಗುಂಪಿನ ಮುಂಚೂಣಿಯಲ್ಲಿ ಕಾಣಿಸಿಕೊಂಡರೆ ಯಾವನಿಗೆ ತಾನೇ ನಂಬಿಕೆ ಬರುತ್ತದೆ?

ಬಂಡಾಯ ಬೆಂಬಲಾರ್ಹ, ಆದರೆ

ಒಂದು ಜನವಿರೋಧಿ ಸರ್ಕಾರದ ವಿರುದ್ಧ ಯಾರೇ ಜನರ ಗುಂಪು ಪ್ರತಿಭಟಿಸಿದರೆ, ದಂಗೆಯೆದ್ದರೆ ಅದು ಖಂಡಿತಾ ಬೆಂಬಲಾರ್ಹ ನಿಜ. ಇಲ್ಲಿ ಆಳುವ ಕಾಂಗ್ರೆಸ್ ಬಗ್ಗೆ ಯಾರೂ ಸಹಾನುಭೂತಿ ತೋರಿಸುವ ಅಗತ್ಯವಿಲ್ಲ, ಆದರೆ ಈಗಿನ ದಂಗೆಯ ಹಿಂದೆ ಇದ್ದವರು ಆರ್‌ಎಸ್‌ಎಸ್ ಗುಂಪು. ಒಂದು ಖಚಿತ ಮಾಹಿತಿಯ ಪ್ರಕಾರ ಕನಿಷ್ಠ ಒಂದೂವರೆ ಲಕ್ಷ ಚೆಡ್ಡಿಗಳು ದೇಶಾದ್ಯಂತ ಈ ಆಂದೋಲನ ಬೆಳೆಸಲು ಡೆಪ್ಯೂಟ್ ಮಾಡಲ್ಪಟ್ಟಿದ್ದಾರೆ. ಬೇಕಿದ್ದರೆ ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ನಡೆಯುತ್ತಿರುವ ಧರಣಿಯ ನಾಯಕರು, ಮಾರ್ಗದರ್ಶಕರು ಯಾರೆಂದು ಚೆಕ್ ಮಾಡಿ ನೋಡಿ.


ಅಲ್ಲಿರುವವರ್‍ಯಾರು ಈ ಹಿಂದೆ ಕರ್ನಾಟಕದ ಯಾವುದೇ ಹೋರಾಟಗಳಲ್ಲಿ ಭಾಗಿಯಾದವರಲ್ಲ, ಅವರಲ್ಲಿನ ಬಹುತೇಕ ನಾಯಕರು ಕರ್ನಾಟಕದವರು ಅಂತ ಖಚಿತವಾಗಿ ಹೇಳಲೂ ಆಗುತ್ತಿಲ್ಲ. ಬೆಳಗಿನ ಜಾವ ಹೆಚ್ಚು ಜನರಿರದ ವೇಳೆ ಅಲ್ಲಿಗೆ ಹೋಗಿ ಚೆಕ್ ಮಾಡಿದರೆ ಅವರೆಲ್ಲಾ ಹಿಂದಿಯಲ್ಲಿ ಮಾತನಾಡಿಕೊಳ್ಳುತ್ತಾ strategy ರೂಪಿಸುತ್ತಿರುತ್ತಾರೆ.

ಕರ್ನಾಟಕದ ಹಲವೆಡೆ ನಡೆದ ಪ್ರತಿಭಟನೆಗಳಲ್ಲಿ ಕಾಲು ಭಾಗದಷ್ಟು ಜನ ಪ್ರಾಮಾಣಿಕರಿದ್ದರೆ ಉಳಿದ ಮುಕ್ಕಾಲುವಾಸಿ ಜನ ಬಿಜೆಪಿಗಳಾಗಿದ್ದರು. ಇನ್ನು ಶಾಲಾ ಕಾಲೇಜ್ ಬಿಡಿಸಿ ವಿದ್ಯಾರ್ಥಿಗಳನ್ನು ಬೀದಿಗೆ ಕರೆತಂದದ್ದು ಎಬಿವಿಪಿ ಚೆಡ್ಡಿಗಳು. ಈ ಗುಂಪು ಮೀಸಲಾತಿ ವಿರೋಧಿ ಹೋರಾಟ, ರಾಮಮಂದಿರ, ದಲಿತ-ಮುಸ್ಲಿಂ ವಿರೋಧಿ ಕೆಲಸಗಳಲ್ಲಿ ಪಳಗಿರುವ ಗಲೀಜು ಮಂದಿ.

ಇಷ್ಟೆಲ್ಲಾ ಗದ್ದಲದ ನಡುವೆಯೂ ಒಳ್ಳೆಯದಾಯಿತೆಂದು ಹೇಳಬಹುದಾದ ಬೆಳವಣಿಗೆಗಳೂ ಆಗಿವೆ. ಸಿನಿಮಾ, ಕ್ರಿಕೆಟ್ ಬಿಟ್ಟು ಬೇರೆ ಮಾತೇ ಆಡಲು ಮರೆತಿದ್ದ ಲಕ್ಷಾಂತರ ಯುವ ಜನತೆ ಸಡನ್ನಾಗಿ ದೇಶದ ಬಗ್ಗೆ, ಭ್ರಷ್ಟಾಚಾರ, ಭ್ರಷ್ಟ ರಾಜಕಾರಣಿಗಳ ಬಗ್ಗೆ ಮಾತಾಡಿದ್ದಾರೆ. ವಿರೋಧದ ಮೆರವಣಿಗೆ ನಡೆಸಿ ಥ್ರಿಲ್ ಆಗಿದ್ದಾರೆ. ಇವರಲ್ಲಿ ಇದೇ ಧೋರಣೆ ಬೆಳೆಸುವ ಕೆಲಸ ಆದರೆ ಒಳ್ಳೆಯದೇ ತಾನೆ.

ಎರಡು ಕಣ್ಣಿಗೂ ಸುಣ್ಣ

ಅಣ್ಣಾ ಹಜಾರೆಯವರ ಈಗಿನ ಎರಡನೇ ಸುತ್ತಿನ ಹೋರಾಟದ ಬಗ್ಗೆ ಹೇಳಬೇಕೆಂದರೆ ಅದು ಭಾಗಶಃ ಯಶಸ್ವಿಯೂ ಇನ್ನೊಂದಂಶ ಮತ್ತೆ ಎಡವಿ ಬಿದ್ದಿರುವ ಗದ್ದಲವಾಗಿದೆ. ಟಿವಿ ಚಾನಲ್‌ಗಳ ಬೆಂಬಲ ಹಾಗೂ ಚೆಡ್ಡಿಗಳ ತೆರೆಮರೆಯ ಕೊಡುಗೆಗಳನ್ನು ಮೈನಸ್ ಮಾಡಿ ನೋಡಿದರೆ ಅಣ್ಣಾ ಟೀಂನ ನಿಜವಾದ ಶಕ್ತಿ ಈಗ ಕಾಣುವಷ್ಟಿಲ್ಲ, ಆದರೆ ಈ ತಂಡದ ತಂತ್ರಗಾರಿಕೆಯಿಂದ ಸರ್ಕಾರ ಕೆಲವೊಮ್ಮೆ ವಿಧೇಯವಾಗಿ ವರ್ತಿಸಬೇಕಾದ ಸ್ಥಿತಿ ನಿರ್ಮಾಣವಾಗಿತ್ತು.



ಕಾಂಗ್ರೆಸ್ ಎಂದಾದರೂ ಹೀಗೆ ಜನರೆದುರು ಕೈಕಟ್ಟಿ ನಿಂತಿದ್ದ ಉದಾಹರಣೆ ಇದೆಯಾ?

ಈಗ ಸಂಸತ್‌ನಲ್ಲಿ ಲೋಕಪಾಲ್ ಮಸೂದೆಯ ಬಗ್ಗೆ ಚರ್ಚಿಸುವುದಾಗಿ ಹೇಳಿದ್ದಾರೆ. ಆದರೆ ಅಣ್ಣಾ ಹಜಾರೆ ಆಶಿಸುತ್ತಿರುವ ಎಲ್ಲಾ ಅಂಶಗಳೂ ಅದರಲ್ಲಿ ಅಡಕಗೊಳ್ಳುವ ಸಾಧ್ಯತೆಗಳು ಕಡಿಮೆ ಇದೆ. ಅಣ್ಣಾ ಹೋರಾಟಕ್ಕೆ ಒಳಗಿಂದೊಳಗೇ ಬೆಂಬಲಿಸಿ ಕಾಂಗ್ರೆಸ್‌ಗೆ ಇಕ್ಕಟ್ಟು ಸೃಷ್ಟಿಸಿ ಖುಷಿ ಪಟ್ಟ ಬಿಜೆಪಿಗಳಿಗೂ ಅಣ್ಣಾ ಪ್ರತಿಪಾದಿಸುತ್ತಿರುವ ಜನಲೋಕಪಾಲ್ ಬೇಡವಾಗಿದೆ. ಇನ್ನು ಕಾಂಗ್ರೆಸ್‌ನ ಜನ ವಿರೋಧಿ ನಿಲುವು ಎಲ್ಲರಿಗೂ ಗೊತ್ತಿರುವಂತದ್ದೇ. ಈ ಹಿನ್ನೆಲೆಯಲ್ಲಿ ಈ ಎರಡೂ ಗುಂಪುಗಳೂ ಅಣ್ಣಾ ಹಜಾರೆಗೆ ಬೆಣ್ಣೆಯನ್ನೆಲ್ಲ ಸುಣ್ಣ ಹಚ್ಚಿದ್ದಾರೆ.

Anna Hazare means well ಆದರೆ ಅವರು ಮತ್ತವರ ತಂಡ ಇನ್ನಷ್ಟು ಪ್ರಜಾತಾಂತ್ರಿಕ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಿದೆ. ಅಣ್ಣಾ ಟೀಂನ ಐದು ಜನ ಅಥವಾ ಅವರು ಹೇಳಿದ ಹನ್ನೊಂದು ಮಂದಿ ಜನ ಲೋಕಪಾಲ್‌ನ ನ್ಯಾಯಾಧೀಶರು ಈ ದೇಶದ ಕಸವನ್ನೆಲ್ಲಾ ಗುಡಿಸಿ ಹಾಕಲಾಗದು.

ಹೋರಾಟದ ಹೆಸರಲ್ಲಿ ಸ್ವೇಚ್ಛಾಚಾರ

ಅಣ್ಣಾ ಹಜಾರೆ ಉಪವಾಸ ವ್ರತ ಹಿಡಿದು ಜನಲೋಕಪಾಲ್ ಮಸೂದೆಗಾಗಿ ಪಟ್ಟು ಹಿಡಿದಿದ್ದರೆ, ಕೆಲ ಅಡ್ನಾಡಿಗಳು ಈ ಹೋರಾಟವನ್ನೇ ಮೋಜಿಗೆ, ಸ್ವೇಚ್ಛಾಚಾರಕ್ಕೆ ಬಳಸಿಕೊಳ್ಳುತ್ತಿದ್ದಾರೆ.

ಕೆಲ ಮಂದಿಗೆ ಸದರಿ ಹೋರಾಟ ಹೀರೋಯಿಸಂನ ತೆವಲು ತೀರಿಸಿಕೊಳ್ಳುವ ಅಖಾಡವಾದರೆ ಮತ್ತೆ ಕೆಲವರು ವಾಹನಗಳಿಗೆ ಬಾವುಟ ತಗುಲಿಸಿ ಅಡ್ಡಾಡುವುದೇ ಹೋರಾಟವೆಂದುಕೊಂಡಂತಿದೆ. ಇದಕ್ಕಿಂತ ಅಪಾಯಕಾರಿಯೆಂದರೆ, ಕೆಲ ದುಷ್ಟರು ತಮ್ಮನ್ನು ತಾವು ಮಹಾನ್ ಹೋರಾಟಗಾರರೆಂದೂ, ತಮ್ಮನ್ನ ಯಾರೂ ತಡೆಯಕೂಡದೆಂದೂ ಅಂದುಕೊಂಡು ಅನಾಹುತ ಸೃಷ್ಟಿಸುತ್ತಿದ್ದಾರೆ. ದೆಹಲಿಯ ಸಿಎನ್‌ಎನ್ ಐಬಿಎನ್ ವಾಹಿನಿಯಲ್ಲಿ ಕೆಲಸ ಮಾಡುವ ಕನ್ನಡಿಗ ಪತ್ರಕರ್ತ ಡಿ.ಪಿ. ಸತೀಶ್ ಇಂತಹುದೇ ಸ್ವೇಚ್ಛಾಚಾರವೊಂದಕ್ಕೆ ಸಾಕ್ಷಿಯಾಗಿದ್ದಾರೆ.....



ಸಿ.ಡಿ.ಪಿ. ಸತೀಶ್ ಸಂಜೆ ಕೆಲಸ ಮುಗಿಸಿ ಕಾರಿನಲ್ಲಿ ಮನೆಯತ್ತ ಹೊರಟಿದ್ದರು. ಮುಖ್ಯರಸ್ತೆಯಲ್ಲಿ ಒಂದಷ್ಟು ದೂರ ಹೋಗುತ್ತಲೇ ಎದುರಿಗೆ ಇಬ್ಬರು ದ್ವಿಚಕ್ರ ವಾಹನದಲ್ಲಿ ಕೈಲೊಂದು ಬಾವುಟ ಹಿಡಿದು ಹೊರಟಿದ್ದರು. ಬೈಕ್‌ನ ಓಲಾಟ ಆ ಇಬ್ಬರೂ ಕುಡಿದು ಚಿತ್ತಾಗಿ ಹೋರಾಟಕ್ಕೆ ಧುಮುಕುತ್ತಿರುವುದನ್ನು ಸಾಕ್ಷೀಕರಿಸಿದಂತಿತ್ತು. ಕೆಲಸಮಯದ ಬಳಿಕ ಸತೀಶ್‌ರ ಕಾರು ಆ ಬೈಕ್ ಅನ್ನು ಹಿಂದಿಕ್ಕಿತು. ಇಷ್ಟಕ್ಕೆ ಕಾರನ್ನು ಹಿಂಬಾಲಿಸಿದ ಬೈಕ್ ಸವಾರರು ಕಾರನ್ನು ತಡೆದು ನಿಲ್ಲಿಸಿ ಸತೀಶರನ್ನು ಹೊರಗೆಳೆದು ಮನಬಂದಂತೆ ಹಲ್ಲೆ ನಡೆಸಿದರು. ಕಾರನ್ನೂ ಜಖಂಗೊಳಿಸಿದರು. ಸತೀಶ್ ಮೇಲೆ ಎಂಥ ಹಲ್ಲೆ ನಡೆಸಿದರೆಂದರೆ ತಲೆಗೆ ನಾಲ್ಕೈದು ಹೊಲಿಗೆ ಹಾಕಬೇಕಾಯಿತು. ಅವರ ಕಾಲಿನ ಮೂಳೆಯಂತೂ ಸಂಪೂರ್ಣ ಮುರಿದುಹೋಗಿ ಈಗ ಚಿಕಿತ್ಸೆ ಪಡೆಯುತ್ತುದ್ದಾರೆ. ಇಷ್ಟೆಲ್ಲಾ ಅನಾಹುತ ನಡೆಸಿದ ಬೈಕ್ ಸವಾರರನ್ನು ಟ್ರಾಫಿಕ್ ಪೋಲೀಸರು ದಬಾಯಿಸಿದರೆ,



'ನಾವು ಅಣ್ಣಾ ಬೆಂಬಲಿಗರು ಗೊತ್ತಾ?' ಅಂತ ಧಮಕಿ ಹಾಕಿದರು.

ಇದು ದೆಹಲಿಗೆ ಮಾತ್ರ ಸೀಮಿತವಾದ ಘಟನೆಯಲ್ಲ-ದೇಶದ ಮೂಲೆ ಮೂಲೆಯಲ್ಲೂ ಇಂತಹುದೊಂದು ಸ್ವೇಚ್ಛಾಚಾರ ವ್ಯಾಪಕವಾಗಿ ನಡೆಯುತ್ತಿದೆ. ಇದು ಹೋರಾಟದ ಗಂಧಗಾಳಿಯಿಲ್ಲದ, ದೇಶ-ಪ್ರಜಾಪ್ರಭುತ್ವ-ಸಂವಿಧಾನಗಳ ಅರಿವು, ನಂಬಿಕೆಯಿಲ್ಲದ ಪಡ್ಡೆಗಳ ಕೆಲಸ. ಆಯಾ ಭಾಗದ ಜನರೇ ಇಂಥವರನ್ನು ಹಿಡಿದು ಬಾರಿಸಿ ಬುದ್ಧಿ ಕಲಿಸದಿದ್ದರೆ ಜನಸಾಮಾನ್ಯರಲ್ಲಿ ಹೋರಾಟವೇ ರೇಜಿಗೆ ಹುಟ್ಟಿಸುವ ಅಪಾಯವಿದೆ.

ಸಂತೋಷ್ ಹೆಗ್ಡೆ ...ೋಚಿಸಿ ಮಾತನಾಡಲಿ

...ಂ ಅಣ್ಣಾದ ಸದಸ್ಯರಾಗಿರುವ ಮಾಜಿ ಲೋಕಾಯುಕ್ತ ...ಷ್ ಹೆಗ್ಡೆಯವರು ಮೊನ್ನೆ ಒಂದು ಹೇಳಿಕೆ ...ರೆ. 'ಭ್ರಷ್ಟಾಚಾರ ವಿರೋಧಿ ಹೋರಾಟದ ನಂತರ ...ಣಾ ಸುಧಾರಣೆಗಾಗಿ ಹೋರಾಟ ಶುರು ...ದ್ದೇವೆ' ಎಂದಿದ್ದಾರೆ ಹೆಗ್ಡೆಜೀ. ಇದು ಆಗಬೇಕಾದ ...ದು. ಆದರೆ ಹೇಗೆ? ಎಲ್ಲಿಂದ ಶುರುವಾಗಬೇಕು? ...ೋಷ್ ಹೆಗ್ಡೆ ಮತ್ತು ಟೀಂ ಇದಕ್ಕೂ ...ೇ ಉತ್ತರ ರೆಡಿ ...ಂಡಿರುವಂತಿದೆ.



...ಪ್ರಕಾರ ಚುನಾವಣಾ ...ನವೇ ಎಲೆಕ್ಷನ್‌ಗೆ ...ಅಭ್ಯರ್ಥಿಗಳ ... ಭರಿಸಬೇಕಂತೆ! ...ದನ್ನು ಒಂದು ...ಸಿಕೊಂಡು

...ನೂರಾ ನಲವತ್ತೈದು ಸಂಸತ್ ಸದಸ್ಯರು, ಎಲ್ಲಾ ...ಸ್ತ ರಾಜ್ಯಗಳ ಎಂಎಲ್‌ಎಗಳು ಅಂದರೆ ಹತ್ತಿರತ್ತಿರ ...ಸಾವಿರ ಶಾಸಕರು... ತಡೆಯಿರಿ ಇಷ್ಟೇ ಅಲ್ಲ ...ಐದು ಕ್ಷೇತ್ರದಲ್ಲೂ ಎಲೆಕ್ಷನ್‌ಗೆ ಐದೈದು ಮಂದಿ ...ಸ್ತಾರೆಂದಿಟ್ಟುಕೊಂಡರೂ ಎಲ್ಲಾ ಸೇರಿ ಒಂದು ...ಎಲೆಕ್ಷನ್‌ನಲ್ಲಿ ಕನಿಷ್ಠ ಐವತ್ತು ಸಾವಿರ ಮಂದಿ.....! ...ನ ಚುನಾವಣಾ ಆಯೋಗದ ಎಲೆಕ್ಷನ್ ಖರ್ಚಿನ ನಿಯಮದ ಪ್ರಕಾರ ಲೆಕ್ಕ ಹಾಕಿದರೂ ತಲೆಗೆ 5 ...ನಂತೆ ಎಷ್ಟಾಯಿತು? ...ದೂವರೆ ಸಾವಿರ ಕೋಟಿ ರೂಪಾಯಿಗಳು!! ... ಹೇಳಿ, ದೇಶವನ್ನು ಲೂಟಿ ಮಾಡಿ, ನಮ್ಮನ್ನೆಲ್ಲ ..., ಗೆದ್ದ ಮೇಲೆ ದುಡ್ಡು ಮಾಡಿಕೊಳ್ಳುವ ಈ ...ಕಳ್ಳರಿಗೆ ಜನರೇ ಯಾಕೆ ತಮ್ಮ ಹಣ ಖರ್ಚು ...ಗೆಲ್ಲಿಸಿ ಕಳಿಸಬೇಕು? ನಿಂತರೆ ತೆರಿಗೆ, ಕುಂತರೆ ...ಂದು ಟ್ಯಾಕ್ಸ್ ಕಟ್ಟಿ ಕಟ್ಟೀ ಪಾಪರ್ ಆಗುತ್ತಿರುವ ...ನ್ನು ಮುಂದೆ ಎಲೆಕ್ಷನ್ ಖರ್ಚನ್ನೂ ಹೊರಬೇಕೇಕೆ? ಆಹಾರದ ಸಬ್ಸಿಡಿ ಕಟ್, ಅಡುಗೆ ಅನಿಲ ಸಬ್ಸಿಡಿ ಕಟ್, ಅಭಿವೃದ್ಧಿ ಯೋಜನೆಗಳಿಗೆ ಅನು ...ಸ್.... ಹೀಗೆ ಜನರಿಗಾಗಿ ಹಣ ಖರ್ಚು ಮಾಡುವು ...ದನ್ನುವ ಸರ್ಕಾರವನ್ನು ಚುನಾಯಿಸಲು ಜನ ಯಾಕೆ ...ರಿಗೆ ಹಣ ಖರ್ಚು ಮಾಡಬೇಕು? ...ತೋಷ್ ಹೆಗ್ಡೆಯವರು ಇದೆಲ್ಲ ಅರ್ಥ ...ಳ್ಳಬೇಕು. ನಮ್ಮಲ್ಲಿ ಎಲೆಕ್ಷನ್ ಅಂದರೆ ಭ್ರಷ್ಟಾಚಾರ, ..., ಹಣಬಲದ ಪ್ರದರ್ಶನವೇ ಹೌದು ನಿಜ. ಆದರೆ ...ನಿಯಂತ್ರಿಸಲು ಇನ್ನಷ್ಟು ಕಠಿಣ ಕಾನೂನುಗಳನ್ನು .... ಅದು ಬಿಟ್ಟು ಸರ್ಕಾರಿ ಖಜಾನೆಯಿಂದಲೇ ...ರ್ಚು ಮಾಡಿ ಎಲೆಕ್ಷನ್ ನಡೆಸಲಿ ಅಂದರೆ ಅದು ...ಶದ ಪರಮಾವಧಿ ಅಷ್ಟೆ. ಸಂತೋಷ್ ಹೆಗ್ಡೆ ಮತ್ತು ...ಹಜಾರೆಯವರ ತಂಡಕ್ಕೆ ದೇಶದ ಬಗ್ಗೆ ಕಾಳಜಿ ...ಮು ನಿಜ. ಆದರೆ ತೆಳ್ಳಗೆ ಬೆಳ್ಳಗೆ ಯೋಚಿಸಿದರೆ ...ವರ ವಿರುದ್ಧವೇ ತಿರುಗಿಬೀಳುತ್ತಾರಷ್ಟೇ. ... ಲೋಕಪಾಲ್‌ಗಾಗಿನ ಹೋರಾಟದ ಸಂದರ್ಭದಲ್ಲೇ ...ಸಿ ಈ ಗುಂಪಿಗೆ ತಾಕಿದೆ. ಅದನ್ನವರು ಮರೆಯ

ಹಜಾರೆ ಬೆನ್ನಿಗಿರುವ ಭಾರತದಲ್ಲಿ ದಲಿತರು ಯಾಕಿಲ್ಲ?

ಅಣ್ಣಾ ಹಜಾರೆ ಹೋರಾಟವನ್ನು ಇಡೀ ಭಾರತವೇ ಬೆಂಬಲಿಸುತ್ತಿದೆಯೆಂಬ ಭಯಾನಕ ಭ್ರಮೆಯ ನಡುವೆ ಮೇಲ್ಕಂಡ ಪ್ರಶ್ನೆಯದ್ದು ಅನಾಥ ಸ್ಥಿತಿ. ಹೋರಾಟದ ಕೇಂದ್ರಬಿಂದುವಾದ ಜನಲೋಕಪಾಲ್ ಮಸೂದೆಯನ್ನೇ ಚರ್ಚಾಕೂಟಗಳಿಂದ ಹೊರಗೆಸೆದಿರುವ ಮಾಧ್ಯಮಗಳು ಈ ಪ್ರಶ್ನೆಯ ಬಗ್ಗೆ ತಲೆಕೆಡಿಸಿಕೊಳ್ಳುವುದು ದೂರದ ವಿಚಾರ. ಆದರೆ ದಲಿತರಲ್ಲೇ ಜಾಗೃತಿಯಂತಹುದೊಂದು ಪ್ರವಹಿಸಿ ಅಣ್ಣಾ ಹೋರಾಟದಿಂದ ದೂರ ಉಳಿಯುತ್ತಿರುವುದಂತೂ ಸತ್ಯ.

ಯಾರು ಗಮನಿಸಿದ್ದಾರೋ ಬಿಟ್ಟಿದ್ದಾರೋ ಗೊತ್ತಿಲ್ಲ, ಆದರೆ ಕರ್ನಾಟಕದಲ್ಲೂ ಈ ರೀತಿಯದ್ದೊಂದು ನಿರ್ಧಾರ ದಲಿತ ಸಮುದಾಯದಲ್ಲಿ ಗಟ್ಟಿಯಾದಂತಿದೆ. ಇತ್ತೀಚಿನ ದಿನಗಳಲ್ಲಿ ಅಣ್ಣಾ ಹೋರಾಟವನ್ನು ಬೆಂಬಲಿಸಕೂಡದೆಂಬ ಸಂದೇಶ ದಲಿತರಿಂದಲೇ ಹುಟ್ಟು ಪಡೆದು ನಾಡಿನಾದ್ಯಂತ ಆವರಿಸಿಕೊಳ್ಳುತ್ತಿದೆ. ಹಾಗಾದರೆ ದೇಶದ ದಲಿತ ಸಮುದಾಯ ಅಣ್ಣಾ ಹೋರಾಟದ ಬಗ್ಗೆ ಅಸಹನೆ ಹೊಂದಿರುವುದ್ಯಾಕೆ? ಭ್ರಷ್ಟಾಚಾರ ನಿರ್ಮೂಲನೆ ಮಾಡೇ ತೀರುತ್ತದೆಂಬಂತೆ ಬಿಂಬಿತವಾಗಿರುವ ಜನಲೋಕಪಾಲ್ ಮಸೂದೆಯ ಬಗೆಗೇ ಈ ಸಮುದಾಯಕ್ಕೆ ತಕರಾರುಗಳಿವೆಯೇ ಅಥವಾ ಅಣ್ಣಾ ಹಿಂದಿರುವ ಒಡ್ಡೋಲಗ ದಲಿತರ ಅಸಹನೆಗೆ ಕಾರಣವಾಗಿದೆಯೇ.... ಇವೆಲ್ಲ ಪ್ರಶ್ನೆಗಳನ್ನು.......... ಭಾವರ್ ಮೇಘವಂಶಿ ಸ್ಥೂಲವಾಗಿ ವಿಶ್ಲೇಷಿಸಿದ್ದಾರೆ. ಅದು ದಲಿತರ ನೈಜ ಅಸಹನೆಗೆ ಕನ್ನಡಿಯಂತಿದೆ.



ಸೂಕ್ಷ್ಮವಾಗಿ ಗಮನಿಸಿದರೆ ದಲಿತ ಸಮುದಾಯದ ಗೌರವಾನ್ವಿತ ವ್ಯಕ್ತಿಗಳು, ಸಾಮಾಜಿಕ ಕಾರ್ಯಕರ್ತರ್‍ಯಾರೂ ಮೊದಲಿಂದಲೂ ಅಣ್ಣಾ ಹೋರಾಟವನ್ನು ಬೆಂಬಲಿಸಿಲ್ಲ. ಇದು ಆದಿವಾಸಿಗಳ ವಿಚಾರಕ್ಕೂ ಅನ್ವಯಿಸುತ್ತದೆ. ಇನ್ನುಳಿದಂತೆ ಸಾಮಾನ್ಯ ದಲಿತರೂ ಸಹ ಆ ಬಗ್ಗೆ ಒಲವು ತೋರಿದಂತಿಲ್ಲ. ಇದಕ್ಕೆ ಕಾರಣ ಸ್ಪಷ್ಟ: ಈ ಸಮುದಾಯಗಳಿಗೆ ಇದು ತಮ್ಮನ್ನೂ ಒಳಗೊಂಡಿರುವ ಹೋರಾಟ ಅಂತನ್ನಿಸಿಲ್ಲ.

ಅಣ್ಣಾ ಹಜಾರೆ, ಅವರ ಹಿಂದಿರುವ ಮುಖಗಳು ಹಾಗೂ ಜನಲೋಕಪಾಲ್ ಮಸೂದೆ-ಇದೆಲ್ಲವನ್ನು ಒಟ್ಟಿಗಿಟ್ಟು ನೋಡಿದರೆ ದಲಿತರ ನಿಲುವು ಯಾವ ಆಶ್ಚರ್ಯವನ್ನೂ ಹುಟ್ಟಿಸುವುದಿಲ್ಲ. ಜನ ಲೋಕಪಾಲ್ ಸಮಿತಿಯ ಐದು ಮಂದಿ ಸದಸ್ಯರಲ್ಲಿ ಒಬ್ಬನೇ ಒಬ್ಬ ದಲಿತನಿಲ್ಲ. ಜಾತಿ-ಧರ್ಮ ಪ್ರಜ್ಞೆ ಅಂತಲ್ಲದಿದ್ದರೂ ಇಡೀ ದೇಶಕ್ಕೇ ಅನ್ವಯಿಸುವಂಥಾ ಈ ಕಮಿಟಿಯಲ್ಲಿ ಹೀಗೊಂದು ಪ್ರಾತಿನಿಧ್ಯ ಕೊಟ್ಟು ಎಲ್ಲರನ್ನೂ ಒಳಗೊಂಡಿರುವ ಸಂದೇಶ ರವಾನಿಸಬೇಕಿತ್ತು. ಆದರೆ ಇಂಥಾ ಯಾವುದೇ ಆಲೋಚನೆ ಮಾಡದ ಅರವಿಂದ ಕೇಜ್ರಿವಾಲ್ 'ಇಡೀ ಭಾರತ ಭ್ರಷ್ಟಾಚಾರದ ವಿರುದ್ಧ ಬಂಡೆದ್ದಿದೆ ಎಂಬರ್ಥದ ಮಾತುಗಳನ್ನಾಡುತ್ತಾರೆ! ಯಾಕೆ ಹೀಗೆ? ಜನಲೋಕಪಾಲ್‌ನಂಥ ಸಮಿತಿಯಲ್ಲಿರಲು ಅರ್ಹರಾದ ದಲಿತರ್‍ಯಾರೂ ದೇಶದಲ್ಲಿಲ್ಲವೆ? ಇಡೀ ದೇಶದ ಸಂವಿಧಾನವನ್ನೇ ಸಮರ್ಥವಾಗಿ ರಚಿಸಿದವರು ಅಂಬೇಡ್ಕರ್. ಇದಾಗಿ ಆರುದಶಕ ಕಳೆದ ಈ ದಿನಮಾನದಲ್ಲಿ ಜನ ಲೋಕಪಾಲ ಸಮಿತಿಯಲ್ಲಿರಲು ಅರ್ಹನೆನಿಸಿರುವ ಒಬ್ಬನೇ ಒಬ್ಬ ದಲಿತನಿಲ್ಲವೆ?

ಅಣ್ಣಾ ಹಜಾರೆ ಪ್ರಾಮಾಣಿಕರು, ಭ್ರಷ್ಟಾಚಾರ ನಿಗ್ರಹದ ಬಗೆಗಿನ ಅವರ ಹೋರಾಟದ ಕಾಳಜಿಯನ್ನು ಸಂಶಯಿಸುವುದು ತರವಲ್ಲ. ಆದರೆ ಈ ನೆಲದ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರ ಬದುಕು ತಲ್ಲಣಿಸಿದಾಗಿನ ಅವರ ಪ್ರತಿಕ್ರಿಯೆ, ಅವರ ಹಿಂದಿರುವವರ ನಿಲುವುಗಳು ಖಂಡಿತಾ ಚರ್ಚಾರ್ಹ ವಿಚಾರ. ಸ್ವಂತ ರಾಜ್ಯ ಮಹಾರಾಷ್ಟ್ರದ ಖೈರ್ಲಾಂಜಿಯಲ್ಲಿ ನಡೆದ ದಲಿತರ ನರಮೇಧ, ಗುಜರಾತ್‌ನಲ್ಲಿ ನಡೆದ ಪಾಪದ ಮುಸ್ಲಿಮರ ಹತ್ಯಾಕಾಂಡ-ಇಂಥ ವಿಚಾರಗಳ ಬಗ್ಗೆ ಅಣ್ಣಾ ಮತ್ತವರ ಹಿಂಬಾಲಕರ ನಿಲುವು, ಪ್ರತಿಕ್ರಿಯೆಗಳೇನೆಂಬ ವಿಚಾರ ಸೂಕ್ಷ್ಮವಾಗಿ ಜಾಹೀರಾಗಿದೆ. ಅಣ್ಣಾ ಹಜಾರೆ ಮೊದಲ ಹಂತದ ಸತ್ಯಾಗ್ರಹ ಮುಗಿಸೆದ್ದ ಕೂಡಲೇ ನರಹಂತಕ ನರೇಂದ್ರ ಮೋದಿಗೆ ಶಹಬ್ಬಾಸ್‌ಗಿರಿ ಕೊಟ್ಟರಲ್ಲಾ? ಆಗಲೇ ಈ ನೆಲದ ದಮನಿತರು, ಅಲ್ಪಸಂಖ್ಯಾತರಿಗೆ ಎಲ್ಲವೂ ಮನದಟ್ಟಾಗಿದೆ.

ಇನ್ನೊಂದು ಪ್ರಮುಖ ವಿಚಾರವಿದೆ. ಅದು ಅಣ್ಣಾರ ಸ್ವಂತ ಹಳ್ಳಿ ರಾಲೇಗಾಂವ್ ಸಿದ್ಧಿಯದ್ದು. ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದ ಅಣ್ಣಾ ಅಲ್ಲಿಂದ ಸೀದಾ ಸ್ವಂತ ಊರಿಗೆ ಆಗಮಿಸಿದಾಗ ಅಲ್ಲಿ ಬರಗಾಲ ತಾಂಡವವಾಡುತ್ತಿತ್ತು. ಇಡೀ ಊರಿಗೂರೇ ಬರಡು ನೆಲವಾಗಿ ರೂಪಾಂತರ ಹೊಂದಿತ್ತು. ಇಂಥಾ ನೆಲದಲ್ಲಿ ಕಾಡು ಬೆಳೆಸುವ ಮೂಲಕ, ಚೆಕ್‌ಡ್ಯಾಂ ನಿರ್ಮಾಣ ಮುಂತಾದ ಪ್ರಸಿದ್ಧ ಯೋಜನೆಗಳ ಮೂಲಕ ಹಸಿರುಕ್ಕಿಸಿದವರು ಅಣ್ಣಾ. ಇದು ನಿಜಕ್ಕೂ ಅದ್ಭುತ ವಿಚಾರ. ಜಾತಿ-ಧರ್ಮಗಳ ಪಿತ್ಥ ಮನುಷ್ಯ ಮನುಷ್ಯರ ನಡುವೆ ಅಂತಃಕರಣದ ಸೆಲೆ ಬತ್ತಿಸಿದೆಯಲ್ಲಾ? ಈ ವಿಚಾರ, ಅದರಿಂದಾಗುತ್ತಿರುವ ದುರಂತಗಳ ಬಗ್ಗೆ ಅಣ್ಣಾ ಆಸಕ್ತಿ ವಹಿಸಿದಂತಿಲ್ಲ.

ಇನ್ನು ಮೀಸಲಾತಿಯ ವಿಚಾರ. ಇದು ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರನ್ನು ಮುಖ್ಯ ಭೂಮಿಕೆಗೆ ತರುವ ಮಹತ್ವಾಕಾಂಕ್ಷೆಯೊಂದಿಗೆ ಜಾರಿಯಾದ ಯೋಜನೆ. ಆದರೆ ಈ ಸಮುದಾಯಗಳನ್ನು ಶತಮಾನಗಳಿಂದ ಹತ್ತಿಕ್ಕಿದ, ಅದಕ್ಕೆ ಸಹಾಯ ಮಾಡಿದ ಹಾಗೂ ಇಂದಿಗೂ ಮೀಸಲಾತಿಯನ್ನು ಭಿಕ್ಷೆ ಅಂತಲೇ ಮೂದಲಿಸುವ ಮಂದಿಯೇ ಅಣ್ಣಾ ಹಜಾರೆಯ ಹಿಂದೆ ನಿಂತು ಹಲ್ಕಿರಿಯುತ್ತಿದ್ದಾರೆ. ಜಾತಿಪದ್ಧತಿಯನ್ನೂ ಸಂಸ್ಕೃತಿ ಎಂದೇ ಬಿಂಬಿಸಲೆತ್ನಿಸುತ್ತಿರುವ ಸನಾತನ ಸಂತಾನಿಗರೂ ಅಲ್ಲಿ ಜಮಾಯಿಸಿ ಎಲ್ಲವನ್ನೂ ಸುಪರ್ದಿಗೆ ತೆಗೆದುಕೊಳ್ಳುತ್ತಿದ್ದಾರೆ.ಕಾಲಾಂತರಗಳಿಂದಲೂ ಹಿಂಸೆ, ದೌರ್ಜನ್ಯ ಆರ್ಥಿಕ ಸಂಕಷ್ಟಗಳ ಮಡುವಲ್ಲೇ ದಲಿತ, ಹಿಂದುಳಿದ ಸಮುದಾಯ ಬೇಯುತ್ತಿದೆ. ಯಾವುದೇ ಹೊಸ ಮಸೂದೆ, ಹೋರಾಟ ಹುಟ್ಟಿಕೊಂಡಾಗಲೂ ಆ ಸಂಕೋಲೆಯಿಂದ ಬಿಡುಗಡೆ ಸಿಗಬಹುದಾ ಅಂತೊಂದು ನಿರೀಕ್ಷೆ ಆ ಸಮುದಾಯದಲ್ಲಿ ಸಹಜವಾಗಿಯೇ ಮೊಳಕೆಯೊಡೆಯುತ್ತದೆ. ಸದ್ಯ ಜನಲೋಕಪಾಲ್ ಮಸೂದೆ ಜಾರಿಗಾಗಿನ ಭ್ರಷ್ಟಾಚಾರ ವಿರೋಧಿ ಹೋರಾಟ ಕೂಡ ಅಂತಹುವೇ ನಿರೀಕ್ಷೆಗೆ ಒಳಗಾಗಿದೆ.

ಆದರೆ ಸದರಿ ಹೋರಾಟದಲ್ಲಿ ತಮಗೆ ಜಾಗವಿಲ್ಲ ಎಂಬ ವಿಚಾರ ದಲಿತರಿಗೆ, ಹಿಂದುಳಿದವರಿಗೆ ಸ್ಪಷ್ಟವಾಗಿದೆ. ಭ್ರಷ್ಟಾಚಾರವನ್ನು ಹೊಡೆದೋಡಿಸುವ ಉಮೇದು ಈ ಜನರಿಗಿಲ್ಲ ಅಂತಲ್ಲ. ಆದರೆ ಅಪ್ಪಿತಪ್ಪಿ ಜನಲೋಕಪಾಲ್ ಮಸೂದೆ ಜಾರಿಯಾಗಿ ಭ್ರಷ್ಟಾಚಾರ ಪೂರ್ತಿ ತೊಲಗಿತೆಂದಿಟ್ಟುಕೊಳ್ಳಿ. ಅದರ ಫಲ ಊರ ಹೊರಗಿನ ದಲಿತರ ಗುಡಿಸಲುಗಳಿಗೆ ತಲುಪುವುದು ಖಂಡಿತಾ ಕಷ್ಟ.

ಜಾತಿ ಪದ್ಧತಿಯೆಂಬುದು ಭ್ರಷ್ಟಾಚಾರಕ್ಕಿಂತಲೂ ಕ್ರೂರ. ಜಾತಿಯ ಬೇರು ಭ್ರಷ್ಟಾಚಾರದ ಬೇರಿಗಿಂತಲೂ ಆಳವಾಗಿ ಪಸರಿಸಿದೆ. ಇಂದಿನ ಆರ್ಥಿಕ ಅಸಮಾನತೆಗೂ ಅದೇ ಕಾರಣ. ಇದಕ್ಕೆ ಜನಲೋಕಪಾಲ್ ಮದ್ದಾಗುವುದಿಲ್ಲ. ಆದುದರಿಂದಲೇ ಅಣ್ಣಾ ಹಜಾರೆ ಬೆನ್ನಿಗಿರುವ ಭಾರತದಲ್ಲಿ ದಲಿತರು ಕಾಣಿಸುತ್ತಿಲ್ಲ.

ದುರಂತವೆಂದರೆ, ಬರಗೆಟ್ಟ ಮಾಧ್ಯಮಗಳು ಹತ್ತಾರು ಕೋಟಿಯಷ್ಟಿರುವ ದಲಿತರು ಹೋರಾಟದಿಂದ ವಿಮುಖರಾಗಿದ್ದರೂ ಇಡೀ ಭಾರತ ಅಣ್ಣಾ ಬೆನ್ನಿಗಿದೆಯೆಂದು ಹಲುಬುತ್ತಿವೆ. ಈ ಅಜ್ಞಾನಕ್ಕೆ ಏನನ್ನಬೇಕು?

• ಸಂತೋಷ್ ಬಾಗಿಲಗದ್ದೆ

ದೃಶ್ಯ ಮಾಧ್ಯಮಗಳ ಸಮೂಹ ಸನ್ನಿ!

...ನ್ಯೇಷನಲ್ ನ್ಯೂಸ್..... ಇದೊಂದರ ಹೊರತಾಗಿ ...ಚಾನೆಲ್ ಪ್ರಭೃತಿಗಳು ಆಚೀಚೆ ದಿಟ್ಟಿಸುವ ...ಗಳು ಕಾಣಿಸುತ್ತಿಲ್ಲ. ಅಣ್ಣಾ ಹಜಾರೆಯ ಉಪವಾಸ ...ದ ಸುತ್ತಲಿನ ವಿದ್ಯಮಾನಗಳನ್ನು ಗಮನಿಸಿದರೆ ...ಚಾರ ಮತ್ತಷ್ಟು ಸ್ಪಷ್ಟವಾಗುತ್ತದೆ. ...ನಲೋಕಪಾಲ್ ಮಸೂದೆಗಾಗಿ ಅಣ್ಣಾ ...ತ್ತಿರುವ ಹೋರಾಟ ಕಡಿಮೆ ಅವಧಿಯಲ್ಲಿ ...ಷ್ಟಂತ ಪಸರಿಸಿದೆಯಲ್ಲಾ? ಇದರಲ್ಲಿ ದೃಶ್ಯ ...ಮಗಳ ಪಾಲು ಹೆಚ್ಚಿನದಿದೆ. ಆದರೆ ಈ ನೆಲದ ... ಚಾನೆಲ್‌ಗಳೂ ಜವಾಬ್ದಾರಿಯುತವಾಗಿ ...ಕೊಂಡ ಒಂದೇ ಒಂದು ಉದಾಹರಣೆಯೂ ...ವುದಿಲ್ಲ. ಅವುಗಳ ಕಾರ್ಯವೈಖರಿಯಲ್ಲಿ ...ಒಂದು ವಿಮರ್ಶೆ, ಆರೋಗ್ಯಪೂರ್ಣ ...ದೊಂದು ಚರ್ಚೆಯನ್ನು ನಿರೀಕ್ಷಿಸಿದರೆ ದಟ್ಟ ...ಮ ಹೊರತಾಗಿ ಬೇರೇನೂ ಸಿಕ್ಕುವುದಿಲ್ಲ. ಸದ್ಯ ...ಸ್ಥಿತಿ ದೃಶ್ಯ ಮಾಧ್ಯಮ ಜಗತ್ತನ್ನು ಸಮೂಹ ...ಂತೆ ಆವರಿಸಿದೆ. ...ಬರವಾಗಿ ಹೇಳಬೇಕೆಂದರೆ, ಟಿವಿ ಚಾನೆಲ್‌ಗಳು ... ಹೋರಾಟದ ಅಲೆಯ ಜೊತೆಯಾಗಿ ...ಕೊಳ್ಳುತ್ತಿವೆ. ನಿಜವಾಗಿಯಾದರೆ, ಎಲ್ಲಾ ಚಾನೆಲ್‌ಗಳ ...ಪೋಗಳಲ್ಲಿ ಜನಲೋಕಪಾಲ್ ಮಸೂದೆಯ ... ವಿಸ್ತೃತ ಚರ್ಚೆಗಳು ಕಾವೇರಬೇಕಿತ್ತು, ಅದರ ...ಅಂಶಗಳ ಬಗ್ಗೆ ಸಾಮಾನ್ಯರನ್ನೂ ಮುಟ್ಟುವಂಥಾ ವಿಚಾರಗಳು ಹೊರಬರಲು ವೇದಿಕೆ ಒದಗಿಸಬೇಕಿತ್ತು. ಹೋರಾಟದ ನಡುವೆ ಕಳ್ಳಕಾಕರು ತೂರಿಕೊಳ್ಳುವ ಅಪಾಯವನ್ನು ತಡೆಯಲು ಸದಾ ಕಣ್ಗಾವಲಿಡಬೇಕಿತ್ತು....

ಆದರೆ ಈ ಜನರ ಹಕೀಕತ್ತುಗಳೇ ಬೇರೆ. ಟಿವಿ ಚಾನೆಲ್‌ನ ಬಹುತೇಕ ನಿರೂಪಕರಿಗೇ ಜನಲೋಕಪಾಲ್ ಮಸೂದೆ ಅಂದರೇನೆಂಬ ವಿಚಾರ ಗೊತ್ತಿರದಿದ್ದರೂ ಆಶ್ಚರ್ಯವಿಲ್ಲ. ಇವರಲ್ಲನೇಕರಿಗೆ ಬಿರುಸಾಗಿ ಜನರ ನಡುವಿಂದಲೇ ಹುಟ್ಟುಪಡೆವ ಹೋರಾಟ ಜನವಿರೋಧಿಯಾಗಿ ದಿಕ್ಕು ಬದಲಿಸಬಲ್ಲ ಅಪಾಯ ಗ್ರಹಿಸುವಂಥ ಸೂಕ್ಷ್ಮತೆ ಎಳ್ಳಷ್ಟು ಇಲ್ಲ. ಆದುದರಿಂದಲೇ ಅದೆಂಥಾದ್ದೋ ಭಾವೋನ್ಮಾದಕ್ಕೆ ಬಿದ್ದು ಒದರಾಡುತ್ತಿದ್ದಾರೆ. ಅಣ್ಣಾ ಹಿಂದೆ ಇಡೀ ದೇಶವೇ ಇದೆ ಅಂತಲೇ ಬಿಂಬಿಸುತ್ತಿದ್ದಾರೆ. ಇವರೆಲ್ಲರ ಪ್ರಕಾರ ಅಣ್ಣಾ ಹೋರಾಟವನ್ನು ವಸ್ತುನಿಷ್ಠವಾಗಿ ವಿಮರ್ಶಿಸುವವರು ಭಾರತೀಯರಲ್ಲ!



ಹೀಗೆ ಅಣ್ಣಾ ಹೋರಾಟದ ಬೆನ್ನತ್ತಿ ಓಡುತ್ತಿರುವ ಮಾಧ್ಯಮಗಳು ಸೂಕ್ಷ್ಮತೆ ಕಳೆದುಕೊಂಡಿರುವುದಕ್ಕೆ ಮೊನ್ನೆ ನಡೆದೊಂದು ಘಟನೆ ಪಕ್ಕಾ ಉದಾಹರಣೆ. ಆರ್ಟ್ ಆಫ್ ಲಿವಿಂಗ್‌ನ ವಂಚಕ ರವಿಶಂಕರ್ ಗುರೂಜಿ ಮೈಸೂರಲ್ಲೊಂದು ಭೂಮಿ ನುಂಗಿರುವ ವಿಚಾರ ಭುಗಿಲೆದ್ದು ದಾಖಲೆ ಸಮೇತ ಒಂದು ಪತ್ರಿಕಾಗೋಷ್ಠಿ ಕರೆಯಲಾಗಿತ್ತು. ಇದರಲ್ಲಿ ಮಾಜಿ ಮುಖ್ಯಮಂತ್ರಿ ಕಮ್ ಹಾಲಿ ಕಳ್ಳ ಯಡಿಯೂರಪ್ಪ ಕೈಯಾಡಿಸಿರುವ ವಿಚಾರವೂ ಬಹಿರಂಗಗೊಂಡಿತ್ತು. ಆದರಿದು ಪ್ರಮುಖ ವಾಹಿನಿಗಳಲ್ಲಿ ಬಿತ್ತರವಾಗಲೇ ಇಲ್ಲ. ಅದಕ್ಕೆ ಸಿಗಬೇಕಾದ ಪ್ರಾಧಾನ್ಯತೆ ಸಿಗಲಿಲ್ಲ.

ಈ ಅವಘಡ ಯಾಕೆ ಸಂಭವಿಸಿತೆಂದರೆ, ಬಹುತೇಕ ವಾಹಿನಿಗಳು ಅಣ್ಣಾ ಹೋರಾಟದ ರೇಸ್‌ನಲ್ಲಿದ್ದವು. ಈ ಪಿತ್ಥ ಇಲ್ಲಿಗೇ ಸೀಮಿತವಾಗಿದ್ದರೆ ಸಹಿಸಿಕೊಳ್ಳಬಹುದಿತ್ತು. ಆದರೆ ಮೈಸೂರಲ್ಲಿ ಭೂಮಿ ನುಂಗಿದ ಆರೋಪ ಹೊತ್ತ ರವಿಶಂಕರ್ ದಿನದೊಪ್ಪತ್ತಲ್ಲೇ ಡೆಲ್ಲಿಗೆ ಹಾರಿ ಅಣ್ಣಾ ಹಾಗೂ ಸರ್ಕಾರದ ನಡುವೆ ಸಂಧಾನ ನಡೆಸುವುದಾಗಿ ಪ್ರಚಾರ ಗಿಟ್ಟಿಸಿಕೊಂಡ. ಈ ಸಂದರ್ಭದಲ್ಲಾದರೂ ಚಾನೆಲ್ ಮಂದಿ ಎಚ್ಚೆತ್ತುಕೊಳ್ಳಬಹುದಿತ್ತಲ್ಲಾ? ಈತ ಭೂಮಿ ನುಂಗುವ ವಂಚಕ, ಭ್ರಷ್ಟಾಚಾರದಲ್ಲಿ ಖುದ್ದು ಭಾಗಿಯಾದ ಎಂಬ ಸತ್ಯವನ್ನು ಬಹಿರಂಗಗೊಳಿಸಬಹುದಿತ್ತಲ್ಲಾ? ಆದರೆ ಯಾರೂ ಕೂಡಾ ಆ ಕೆಲಸ ಮಾಡಲ್ಲ. ಆದುದರಿಂದಲೇ ರವಿಶಂಕರನಂಥ ಅಡ್ನಾಡಿಗಳೆಲ್ಲ ಹೋರಾಟಗಾರರ ಪೋಸು ಕೊಡುತ್ತಿದ್ದಾರೆ.

ಹೀಗೆ ಮಾಧ್ಯಮಗಳನ್ನಾವರಿಸಿದ್ದ ಸಮೂಹ ಸನ್ನಿ ಸಹಜವಾಗಿಯೇ ಜನಸಮುದಾಯಕ್ಕೆ ವರ್ಗಾವಣೆಯಾಗಿದೆ. ಇದರಿಂದಾಗಿ ಈಗ ನಾಲ್ಕು ಜನ ಜಮಾಯಿಸಿದರೆ ಹೋರಾಟ, ಬಾವುಟ ಹಿಡಿದು ಬೀದಿಗಿಳಿದವರೇ ಹೋರಾಟಗಾರರೆಂಬ ಪರಿಸ್ಥಿತಿ ಎದುರಾಗಿದೆ. ಇಂಥವರನ್ನು ನಿಲ್ಲಿಸಿಕೊಂಡು ಜನಲೋಕಪಾಲ್ ಅಂದ್ರೇನು ಅಂತ ಕೇಳಿನೋಡಿ. ಬಹುತೇಕ ಉತ್ತರ ಬೆಬ್ಬೆಬ್ಬೆ!

ಇದು ಮಾಧ್ಯಮಗಳ ಸಮೂಹಸನ್ನಿಯ ಪರಿಣಾಮವಲ್ಲದೆ ಬೇರಿನ್ನೇನು?

ವಿದೇಶಿ ಡ್ರಗ್ ಗರ್ಲ್-ಲೋಕಲ್ ಕ್ರಿಮಿನಲ್
ಥೈಲ್ಯಾಂಡ್ ಹುಡುಗಿ ಜೊತೆ ಜೆಸಿಬಿ ನಾರಾಯಣ

ಹೋಗುವ ಮುನ್ನ ತಮ್ಮ ಪಾಲಿನ ಕೊನೆಯ ಎನ್‌ಕೌಂಟರ್ ಒಂದನ್ನು ಮುಗಿಸಿಹೋಗುವ ಜಂಟಿ ಪೊಲೀಸ್ ಕಮೀಷನರ್ ಅಲೋಕ್‌ಕುಮಾರ್ ಲೆಕ್ಕಾಚಾರದಲ್ಲಿ ಏನೋ ಯಡವಟ್ಟಾಗಿದೆ!

ಇಲ್ಲದಿದ್ದರೆ ಈ ಹೊತ್ತಿಗಾಗಲೇ ಜೆಸಿಬಿ ನಾರಾಯಣನ ಹೆಣ ಬೀಳಬೇಕಿತ್ತು. ಪೊಲೀಸರ 'ಪಾಲಿಗೆ ದೊಡ್ಡ ತಲೆನೋವಾಗಿದ್ದ, ಒಂದಲ್ಲ ಮೂರು ಬಾರಿ ಪೊಲೀಸ್ ಕಪಿಮುಷ್ಟಿಯಿಂದ ಎಸ್ಕೇಪಾದ, ಐದು ಅನಾಹುತಕಾರಿ ಕೊಲೆಗಳನ್ನೆಸಗಿದ, ಮೂರು ಕೊಲೆಯತ್ನಗಳನ್ನೆಸಗಿ ರಕ್ತಹರಿಸಿದ್ದ, ಒಟ್ಟು 28 ಕ್ರಿಮಿನಲ್ ಕೃತ್ಯಗಳಲ್ಲಿ ಭಾಗಿಯಾಗಿದ್ದ ಜೆಸಿಬಿ ನಾರಾಯಣನನ್ನು ಮುಗಿಸಿಯೇ ಜಂಟಿ ಕಮಿಷನರ್ ಹುದ್ದೆಯಿಂದಿಳಿಯುವ ಅಲೋಕ್‌ಕುಮಾರ್ ಲೆಕ್ಕಾಚಾರ ಹೇಗೆ, ಎಲ್ಲಿ ಉಲ್ಟಾ ಹೊಡೆಯಿತೋ ಗೊತ್ತಿಲ್ಲ.

ಕಳೆದ ಪಾಲಿಕೆ ಚುನಾವಣೆಗೂ ಮೊದಲೇ ಕಮೀಷನರ್ ಬಿದರಿ ಮತ್ತು ಅಲೋಕ್‌ಕುಮಾರ್ ಸೇರಿಕೊಂಡು ಜೆಸಿಬಿಯ ವಿರುದ್ಧ ಗೂಂಡಾ ಕಾಯ್ದೆ ಹಾಕಿ ಜೈಲಿಗೆ ದಬ್ಬಿದ್ದರು. ತನ್ನ ದುಷ್ಮನ್ ಪರಪ್ಪನ ಅಗ್ರಹಾರದ ಆಟೋ ಚಂದ್ರನನ್ನು ಜೆಸಿಬಿ ನಡುರಸ್ತೆಯಲ್ಲೇ ಕೊಚ್ಚಿ ಹಾಕಿದ್ದ. ಏನೇ ಅಂದರೂ ಗೂಂಡಾ ಕಾಯ್ದೆಯ ತಾಕತ್ತಿರುವುದು ಕೇವಲ ಒಂದು ವರ್ಷ ಜೈಲು ಶಿಕ್ಷೆಯ ಮಟ್ಟಿಗೆ ಮಾತ್ರ.

ಹಾಗೇ ಗುಂಡಾ ಕಾಯ್ದೆಯಡಿ ಪರಪ್ಪನ ಅಗ್ರಹಾರ ಜೈಲುಪಾಲಾದ ಜೆಸಿಬಿ ವಿಲಕ್ಷಣ ಪ್ರೇಮ ಪ್ರಕರಣವೊಂದರಲ್ಲಿ ಸಿಲುಕಿಬಿದ್ದ. ಆಕೆ ಥಾಯ್ ಹುಡುಗಿ. ಥೈಲ್ಯಾಂಡ್ ದೇಶದಿಂದ ಚೆನ್ನೈಗೆ ಬಂದಿಳಿದ ಆಕೆಯ ಹೆಸರು ಥಿಟಾರಿ ಕೀಕ್‌ಥೇಟ್ (Thitraree Keakthet). ಬೆಂಗಳೂರಿನ ಏರ್‌ಪೋರ್ಟ್‌ನಲ್ಲಿ ಆಕೆ 2007 ರಲ್ಲಿ ವಿಯೆಟ್ನಾಮ್‌ಗೆ ಹೋಗುವ ವಿಮಾನಕ್ಕಾಗಿ ಕಾಯುತ್ತಾ ಕೂತಿದ್ದಾಗಲೇ ಸಿಸಿಬಿಯ ಮಾದಕ ವಸ್ತು ನಿರೋಧಕ ದಳ ಆಕೆಯನ್ನು ರೆಡ್‌ಹ್ಯಾಂಡಾಗಿ ಹಿಡಿದಿತ್ತು. ಎರಡು ಕೆ.ಜಿ. ಹೆರಾಯಿನ್ ಸಮೇತ ಕೀಕ್‌ಥೇಟ್ ಸಿಕ್ಕುಬಿದ್ದಳು. 25 ವರ್ಷ ವಯಸ್ಸಿನ ಆ ಥೈಲ್ಯಾಂಡ್ ಹುಡುಗಿಯನ್ನು ಪೊಲೀಸರು ಪರಪ್ಪನ ಅಗ್ರಹಾರ ಜೈಲಿಗೆ ಹಾಕಿದ್ದು ಡ್ರಗ್ ಟ್ರಾಫಿಕ್‌ನಂಥ ಗುರುತರ ಆರೋಪದ ಮೇಲೆ.

ಹಾಗೆ ಪರಪ್ಪನ ಅಗ್ರಹಾರ ಜೈಲಿಗೆ ಬಂದ ಥಾಯ್ ಹುಡುಗಿಯ ಮೇಲೆ ಅದೇ ಜೈಲಲ್ಲಿದ್ದ ಜೆಸಿಬಿ ನಾರಾಯಣ ಕಣ್ಣು ಹಾಕಿದ್ದಾನೆ. ಆಕೆಗೆ ಕನ್ನಡ ಬಾರದು. ಈತನಿಗೆ ಇಂಗ್ಲಿಷ್, ಹಿಂದಿ ಏನೊಂದೂ ಗೊತ್ತಿಲ್ಲ. ಜೈಲಲ್ಲಿ ಮೊದಲೇ ಅಲ್ಲಿನ ಸಿಬ್ಬಂದಿಗಳ ಜೊತೆ ನಂಟಿತ್ತಲ್ಲ, ಜೆಸಿಬಿ ಆಕೆಗೊಂದು ವಿಶೇಷ ಕೋಣೆ, ಅದರಲ್ಲಿ ಐಷಾರಾಮಿ ಟೀವಿ, ಪ್ರತಿನಿತ್ಯ ಥಾಯ್ ಊಟ ಎಲ್ಲವನ್ನೂ ಈತನೇ ನಿಂತು ಕಲ್ಪಿಸಿದ. ಇದಕ್ಕೆ ಜೈಲು ಅಧಿಕಾರಿಗಳಿಗೆ ಬೇಕಾಬಿಟ್ಟಿ ರೊಕ್ಕವನ್ನು ತಿನ್ನಿಸಿದ. ಬರುಬರುತ್ತಾ ಜೆಸಿಬಿಗೆ ಗೊತ್ತಾಗಿದ್ದು ಆಕೆಗೊಬ್ಬ ಆಫ್ರಿಕನ್ ಗೆಳೆಯನಿದ್ದಾನೆಂಬುದು. ಬಹುಶಃ ಥಿಟಾರಿ ಕೀಕ್‌ಥೇಟ್‌ಳನ್ನು ಮದುವೆಯಾಗುವ ಆಶೆಯಿತ್ತೋ ಅಥವಾ ಆಕೆಯನ್ನು ಮೋಹಿಸುವ ಉದ್ದೇಶವಿತ್ತೋ ಗೊತ್ತಿಲ್ಲ, ಜೈಲಿನಲ್ಲಿ ಆಕೆಗೆ ಅಷ್ಟೆಲ್ಲಾ ಅನುಕೂಲ ಮಾಡಿಕೊಟ್ಟ ಜೆಸಿಬಿ ಪದೇಪದೇ ಆಫ್ರಿಕನ್ ಗೆಳೆಯನನ್ನು ಬಿಟ್ಟುಬಿಡುವಂತೆ ಪೀಡಿಸುತ್ತಿದ್ದ.


ಈ ಮಧ್ಯೆ 2010 ರಲ್ಲಿ ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಕೀಕ್‌ಥೇಟ್ ಜೈಲಿನಿಂದ ಬಿಡುಗಡೆಯಾದಳು. ಆದರೆ ಜೆಸಿಬಿ ಆಕೆಯ ಮೇಲೆ ಕಣ್ಣು ಹಾಕಿದ್ದನಲ್ಲ ತನಗೆ ದಕ್ಕದೆ ಆಕೆ ಯಾರೋ ಆಫ್ರಿಕನ್ ಯುವಕನ ಪಾಲಾಗುತ್ತಾಳಲ್ಲ ಎಂದು ತಾನೇ ಪೊಲೀಸರಿಗೆ ಟಿಪ್ಸ್ ಕೊಟ್ಟು 2010 ರ ಡಿಸೆಂಬರ್‌ನಲ್ಲಿ ಮತ್ತೆ ಎರಡನೇ ಬಾರಿ ಹಿಡಿಸಿಬಿಟ್ಟ. ಈ ಬಾರಿ ಕೀಕ್‌ಥೇಟ್ ಮೂವರು ಆಫ್ರಿಕನ್ ಹುಡುಗರ ಜೊತೆ 20 ಕೆ.ಜಿ. ಹೆರಾಯಿನ್ ಸಮೇತ ಸಿಕ್ಕಿಬಿದ್ದಳು.

ನಿಜಕ್ಕೂ ಕೀಕ್‌ಥೇಟ್ ಈ ಬಾರಿ ಹೆರಾಯಿನ್ ಜೊತೆಗೆ ಸಿಕ್ಕಿಬಿದ್ದಳೋ ಅಥವಾ ಜೆಸಿಬಿಯೇ ಆಕೆಯನ್ನು ಪೊಲೀಸರ ಮೂಲಕ ಸಿಕ್ಕಿಬಿದ್ದಳೋ, ನೀಗ್ರೋ ಡ್ರಗ್ ಪೆಡ್ಲರ್‌ಗಳ ಜೊತೆ ಕೇಸಿಗೆ ಸಿಲುಕಿಸಿದನೋ, ಆಕೆ ಮತ್ತೆ ಜೈಲಿಗೆ



ಬಂದರೆ ಆಕೆ ಶಾಶ್ವತವಾಗಿ ತನ್ನವಳಾಗುತ್ತಾಳೆಂಬ ದುರಾಶೆಯಿತ್ತೋ ಗೊತಿಲ್ಲ. ತಾನು ತನ್ನ ಪಾಸ್‌ಪೋರ್ಟ್ ಪಡೆಯಲೆಂದು ಬೆಂಗಳೂರಿಗೆ ಬಂದಾಗ ಜೆಸಿಬಿ ಪೊಲೀಸರಿಗೆ ಲಂಚ ತಿನ್ನಿಸಿ ತನ್ನನ್ನು ಅನ್ಯಾಯವಾಗಿ ಹೆರಾಯಿನ್ ಕೇಸಿಗೆ ಸಿಲುಕಿಸಿದ್ದಾನೆಂದೂ ಆತನಿಂದ ತನ್ನ ಪ್ರಾಣಕ್ಕೆ ಅಪಾಯವೆಂದೂ ಕೀಕ್‌ಥೇಟ್ ಚೆನ್ನೈನ ಥೈಲ್ಯಾಂಡ್ ರಾಯಭಾರ ಕಚೇರಿಗೆ ದೂರು ಕೊಟ್ಟಳು.

ಕೀಕ್‌ಥೇಟ್‌ಳ ದೂರು ಹಿಡಿದು ಬೆಂಗಳೂರು ಜೈಲಿಗೆ ಬಂದ ಥೈಲ್ಯಾಂಡ್ ಕಾನ್ಸುಲೇಟ್ ಅಧಿಕಾರಿಯೊಬ್ಬಳು ಆಕೆಯನ್ನು ಮಾತಾಡಿಸಿದ್ದೂ ಅಲ್ಲದೆ ಅದೇ ಜೈಲಲ್ಲಿದ್ದ ಜೆಸಿಬಿ ನಾರಾಯಣನನ್ನೂ ಮಾತಾಡಿಸಿದ್ದಾರೆ. ಆಗ ನಾರಾಯಣ ಆಕೆ ತನ್ನ ಜೊತೆ ಅಶ್ಲೀಲವಾಗಿ ವರ್ತಿಸುತ್ತಾಳೆಂದೂ, ತನ್ನನ್ನು ಮದುವೆಯಾಗುವಂತೆ ಆಕೆಯೇ ಕೇಳಿಕೊಂಡಿದ್ದರಿಂದ ತಾನು ಆಕೆಗೋಸ್ಕರ ಸಿಕ್ಕಾಪಟ್ಟೆ ದುಡ್ಡು ಖರ್ಚು ಮಾಡಿದ್ದೇನೆಂದೂ ಆಕೆಗೆ ಆಫ್ರಿಕಾದ ಕಪ್ಪು ಯುವಕನೊಬ್ಬನ ಜೊತೆ ಅನೈತಿಕ ಸಂಬಂಧವಿದೆ ಎಂದೂ, ಕೆಟ್ಟ ಸಹವಾಸ ಮಾಡಬೇಡ ಎಂದು ನಾನು ಆಕೆಯನ್ನು ತಿದ್ದಲು ಯತ್ನಿಸಿದ್ದೇ ತಪ್ಪಾ? ಎಂದು ಚಿತ್ರವಿಚಿತ್ರವಾಗಿ ಪ್ರಶ್ನೆಯಿಟ್ಟ.



ಅಲ್ಲಿಗೆ ಥೈಲ್ಯಾಂಡ್ ರಾಯಭಾರ ಕಚೇರಿಯ ಅಧಿಕಾರಿಗೆ ಜೆಸಿಬಿ ಎಂಥಾ ಕ್ರಿಮಿನಲ್ ಮತ್ತು ಹೆಣ್ಣುಬಾಕ ಎಂಬುದು ಅರ್ಥವಾಗಿತ್ತು. ಅವರು ನೇರವಾಗಿ ಪೊಲೀಸ್ ಕಮೀಷನರ್ ಶಂಕರ್ ಬಿದರಿಗೇ ಪತ್ರ ಬರೆದು ಕೀಕ್‌ಥೇಟ್‌ಳಿಗೆ ರಕ್ಷಣೆ ನೀಡುವಂತೆ ಮನವಿ ಮಾಡಿಕೊಂಡರು. ಅಷ್ಟಾಗ್ಯೂ ಜೆಸಿಬಿಗೆ ಆಕೆಯ ಹುಚ್ಚು ಬಿಡಲಿಲ್ಲ. ಈ ಮಧ್ಯೆ 2011 ರ ಜನವರಿಯಲ್ಲಿ ಕೀಕ್‌ಥೇಟ್ ಜೈಲಿಂದ ಹೊರಬಿದ್ದಳು. ಇದಾಗಿ ಕೆಲ ದಿನಕ್ಕೇ ಜೆಸಿಬಿ ಕೂಡ ಜಾಮೀನು ಗಿಟ್ಟಿಸಿ ಹೊರಬಿದ್ದ. ಈ ಹೊತ್ತಿಗಾಗಲೇ ಆಟೋ ಚಂದ್ರನ ಕೊಲೆ ಕೇಸಿನಲ್ಲಿದ್ದ ಆತನ ಬಲಗೈ ಬಂಟ ಬೇಗೂರು ಅನಿಲನನ್ನು ಆತನ ಜೊತೆಗೇ ಇದ್ದ ಸುನೀಲ ಕೊಂದು ಹಾಕಿದ್ದ.

ಅಷ್ಟಕ್ಕೂ ಕೊಂದ ಸುನೀಲ ಮತ್ತು ಕೊಲೆಯಾದ ಅನೀಲ ಇಬ್ಬರೂ ಜೆಸಿಬಿಯ ಶಿಷ್ಯರೆ. ಅದೇನಾಯಿತೋ ತನ್ನ ಬಂಟನನ್ನೇ ಜೆಸಿಬಿ ಜೈಲಲ್ಲಿದ್ದು ಕೊಲ್ಲಿಸಿದ್ದ. ಸೊಣ್ಣ ಅಲಿಯಾಸ್ ಸುನೀಲನ ಜೊತೆ ಸಂತೋಷ್ ಉರ್ಫ್ ಗಲಾಟಾ, ಆಸ್ಕರ್ ಉರ್ಫ್ ದೋಸೆ, ಆನಂದ ಅಲಿಯಾಸ್ ಕುಂಬಾರ ಮುಂತಾದವರು ಸೇರಿ 2011 ರ ಜೂನ್ 20 ರಂದು ವರ್ತೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅನಿಲನನ್ನು ಕೊಚ್ಚಿ ಹಾಕಿದ್ದರು. ಅಲ್ಲಿಗೆ ಎರಡು ಡಬ್ಬಲ್ ಮರ್ಡರ್ ಸೇರಿದಂತೆ ಜೆಸಿಬಿ ವಿರುದ್ಧ ಆಟೋ ಚಂದ್ರನ ಕೊಲೆಯೂ ಸೇರಿದಂತೆ ಐದೂ ಕೊಲೆ ಕೇಸುಗಳು ಬಿದ್ದಿದ್ದವು. ರಾಜಕೀಯವಾಗಿ ಜೆಸಿಬಿ ಎಂಥಾ ಅಪಾಯಕಾರಿಯೆಂಬುದು ಬಹುಶಃ ಬೊಮ್ಮನಹಳ್ಳಿ ಬಿಜೆಪಿ ಶಾಸಕ ಸತೀಶ್ ರೆಡ್ಡಿಗೆ ಅರ್ಥವಾಗಿರಬೇಕು. ಶತಗತಾಯ ಜೆಸಿಬಿಯನ್ನು ಮಟ್ಟ ಹಾಕಲೇಬೇಕೆಂದು ಸತೀಶ್ ರೆಡ್ಡಿ ಗೃಹಮಂತ್ರಿ ಅಶೋಕ್‌ಗೆ ದುಂಬಾಲುಬಿದ್ದಿದ್ದ.

ಇದು ಹೇಗೋ ಜೆಸಿಬಿಗೆ ಗೊತ್ತಾಗಿದೆ. ಜೈಲಿಂದ ಹೊರಬಿದ್ದರೆ ಎಮ್ಮೆಲ್ಲೇ ಸತೀಶ್ ರೆಡ್ಡಿ ತನ್ನ ವಿರುದ್ಧ ಪೊಲೀಸರನ್ನು ಬಿಟ್ಟೇ ಎನ್‌ಕೌಂಟರ್ ಮಾಡಿಸುತ... ನೇರವಾಗಿ ಆಂಧ್ರದ ತಿರುಪತಿಗೆ ಬಂದಿದ್ದಾನೆ. ಅಲ... ತನ್ನ ಜೈಲಿನ ಗೆಳತಿ ಕೀಕ್‌ಥೇಟ್‌ಳನ್ನು ಜ... ಸಂಪರ್ಕಿಸಿದ್ದಾನೆ. ಆಕೆ ಜೆಸಿಬಿಯನ್ನು ಚೆನ್ನೈಗೆ ಕರೆಸಿ... ದ್ದಾಳೆ. ಒಂದಷ್ಟು ದಿನ ಆಕೆಯ ಜೊತೆ ಚೆ... ಪ್ರತ್ಯೇಕ ಮನೆ ಮಾಡಿ ವಾಸಿಸಿದ ಜೆಸಿಬಿಗೆ ಆಕೆಯ... ವಿಯೆಟ್ನಾಮ್‌ಗೆ ಪರಾರಿಯಾಗುವ ಆಸೆಯಿತ್ತೇನೊ ... ವಿಯೆಟ್ನಾಮ್‌ಗೆ ಹೋಗಿ ಅಲ್ಲಿಂದ ಥೈಲ್ಯಾಂಡ್‌ನ ಬ... ಹಾರಲು ಯತ್ನಿಸಿದ್ದನೋ ಏನೋ ಅಥವಾ ಆ... ಜೊತೆಗಿದ್ದು ಬೆಂಗಳೂರು ಪೊಲೀಸರಿಗೆ ವ... ಕೊಟ್ಟಳೋ ಗೊತ್ತಿಲ್ಲ.

ಆಗಸ್ಟ್ 15 ರ ಹೊತ್ತಿಗೆ ಸಿಸಿಬಿಯ ಎಸ್.ಐ. ... ಗೌಡ ಐವರು ಪೇದೆಗಳ ಸ... ತಿರುಪತಿಗೆ ಬಂದಾಗಿತ್ತು. ... ತಿರುಪತಿಯಲ್ಲೇ ಬಲೆಗೆ ಬಿ... ಅಥವಾ ಅಲ್ಲಿಂದ ಆತನನ್ನು ... ಳೂರಿನ ತನಕ ಹಿಂಬಾಲಿಸಿ ... ಪರಪ್ಪನ ಅಗ್ರಹಾರ ಲಿಮಿ... ಹಿಡಿದರೋ ಬಲ್ಲವರಿಲ್ಲ. ... ರಿವಾಲ್ವರ್, ಲಾಂಗು, ಗಾಡಿ ಎಲ್ಲ... ಸಿಸಿಬಿ ಪೊಲೀಸರು ವಶ... ಕೊಂಡಿದ್ದಾರೆ.

ಆದರೆ ಆತನನ್ನು ಎನ್‌ಕೌ... ಮಾಡಿ ಮುಗಿಸುವ ಅಲ... ಕುಮಾರ್ ಉದ್ದೇಶವಂತೂ ... ಗೊಂಡಿದೆ. ಹಿಂದೊಮ್ಮೆ ಆತನನ್ನು ಇದೇ ರೀತಿ ಹಿ... ಎನ್‌ಕೌಂಟರ್ ಮಾಡಲು ಯತ್ನಿಸಿದ ಅಲೋಕ್ ಉ... ಟೀವಿಯ ಕ್ರಿಮಿನಲ್ ರಿಪೋರ್ಟರ್ ಒಬ್ಬ ಭಂಗ ತ... ಎನ್‌ಕೌಂಟರ್‌ಗೂ ಮೊದಲೇ ಆತನನ್ನು ಪೊಲಿ... ಬಂಧಿಸಿದ ಸುದ್ದಿಯನ್ನು ಬಿತ್ತರಿಸಿಬಿಟ್ಟ. ಈಗ ನಡೆ... ಅದೇ. ತನ್ನನ್ನು ಸಿಸಿಬಿಯ ನಾಗಣ್ಣಗೌಡರು ಹಿ... ಹಾಕಿದ ಸುದ್ದಿಯನ್ನು ಜೆಸಿಬಿ ಟೀವಿ ವರದಿಗಾರನ... ಮೂಲಕ ಮೊದಲೇ ಸುದ್ದಿ ಮಾಡಿಸಿಬಿಟ್ಟ. ಒಮ್ಮೆ ಬಂ... ಸುದ್ದಿ ಬಯಲಾ ಯಿತೆಂದರೆ ಎನ್‌ಕೌಂಟರ್ ಮಾ... ಧೈರ್ಯವನ್ನು ಯಾವ ಪೊಲೀಸ್ ಅಧಿಕಾರಿ... ತೋರುವುದಿಲ್ಲ.

ಇನ್ನೇನು ಜಂಟಿ ಕಮೀಷನರ್ ಹುದ್ದೆಯಿ... ಎತ್ತಂಗಡಿಯಾಗುವ ಕೊನೇ ಗಳಿಗೆಯಲ್ಲಿ ಅಲೋಕ್‌ಕು... ಇಲ್ಲದ ರಿಸ್ಕಿಗೆ ಏಕೆ ಕೈಹಾಕುತ್ತಾರೆ? ಎರಡನೇ ಬಾರಿ... ಎನ್‌ಕೌಂಟರ್ ಕುಣಿಕೆ ಮಿಸ್ಸಾಗಿದೆ. ಥೈಲ್ಯಾಂಡ್ ಹು... ಕೀಕ್‌ಥೇಟ್‌ನ ಅದೃಷ್ಟ ಚೆನ್ನಾಗಿತ್ತಾ? ಆಕೆಯ ... ಬ್ಯಾಂಕಾಕ್ ಸೇರಿಕೊಳ್ಳುವ ಜೆಸಿಬಿಯ ... ಮುಂದ್ಯಾವತ್ತಾದರೂ ಫಲಿಸುತ್ತಾ?

ಅಥವಾ ಇದಕ್ಕೂ ಮೊದಲೇ ಶಾಸಕ ಸತೀಶ್ ... ಆತನಿಗೊಂದು ಗತಿ ಕಾಣಿಸುತ್ತಾರಾ?

• ರಾ. ಸೋಮನಾ...

ಹುಣಸೂರು: ಮಾತು ಕೇಳದ ಮಡದಿಯನ್ನು ನಡುಬೀದಿಯಲ್ಲಿ ಕೊಂದ...

'ಅವಳಿಗೆ ತುಂಬಾ ಸಲ ಎಚ್ಚರಿಕೆ ಕೊಟ್ಟಿದ್ದೆ. ಆದರೂ ಆಕೆ ಕಂಡಕಂಡವರೊಂದಿಗೆ ಓಡಾಡುವ ಚಾಳಿ ಬಿಡಲಿಲ್ಲ. ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ. ಹಠಕ್ಕೆ ಬಿದ್ದವಳಂತೆ ನನ್ನಿಚ್ಛೆಗೆ ವಿರುದ್ಧವಾಗಿ ಇದ್ದಳು. ಇದರಿಂದ ರೋಸತ್ತು ಅವಳನ್ನು ಕೊಲೆ ಮಾಡಿದೆ'- ಇದು ಹುಣಸೂರಿನ ಜನನಿಬಿಡ ಸ್ಥಳದಲ್ಲಿ ಹೆಂಡತಿಯನ್ನೇ ಕೊಚ್ಚಿ ಕೊಲೆ ಮಾಡಿದ ದಿನೇಶ್ ಎಂಬಾತ ಪೊಲೀಸರೆದುರು ಅಲವತ್ತುಕೊಂಡ ಪರಿ.

ಇಪ್ಪತ್ತಾಲ್ಕನೇ ತಾರೀಖಿನ ಬುಧವಾರ ದಿನೇಶ್ ತನ್ನ ಹೆಂಡತಿ ಭಾಗ್ಯಮ್ಮಳನ್ನು ನಡುರಸ್ತೆಯಲ್ಲೇ ಅಟ್ಟಾಡಿಸಿ ಕೊಂದಿದ್ದ. ಹುಣಸೂರಿನ ಕಲ್ಪತರು ರಸ್ತೆಯ ಚಿಕನ್ ಪ್ಯಾರಡೈಸ್ ಎದುರಿನ ರಸ್ತೆ ರಕ್ತದಿಂದ ತೊಯ್ದುಹೋಗಿತ್ತು. ಕಣ್ಣೆದುರೇ ನಡೆದ ಈ ಭೀಕರ ಘಟನೆಗೆ ಸುತ್ತ ನೆರೆದಿದ್ದ ಜನತೆ ಮೂಕಪ್ರೇಕ್ಷಕರಾಗಿದ್ದರು. ತದನಂತರ ಸತ್ತವರು ಯಾರು, ಕೊಂದವರು ಯಾರೆಂಬುದೇ ತಿಳಿಯದ ಗೊಂದಲಮಯ ವಾತಾವರಣವೊಂದು ಸೃಷ್ಟಿಯಾಗಿತ್ತು. ಇಂತಹುದೊಂದು ಕೃತ್ಯ ನಡೆಸಿ ಬೈಕ್ ಹತ್ತಿ ಪರಾರಿಯಾಗಿದ್ದ ದಿನೇಶ್‌ನನ್ನು ಪೊಲೀಸರು ಹಿಡಿದು ತಂದು ವಿಚಾರಿಸಿದಾಗಲೇ ಅಸಲಿಯತ್ತು ಸಂಪೂರ್ಣವಾಗಿ ಹೊರಬಂದಿತ್ತು.



ಭಾಗ್ಯಮ್ಮ

ಇದು ಅಪ್ಪಟ ಸಾಂಸಾರಿಕ ಕಲಹ. ಗಂಡಹೆಂಡಿರ ನಡುವಿನ ಕಲಹವು ಹೇಗೆ ದ್ವೇಷವಾಗಿ ಪರಿವರ್ತನೆಗೊಂಡು ಕೊಲೆಯಂಥ ಅಮಾನವೀಯ ಕೆಲಸಕ್ಕೂ ಕೈ ಹಾಕಿಸಬಲ್ಲದೆಂಬುದಕ್ಕೆ ಪಕ್ಕಾ ಉದಾಹರಣೆಯಂಥ ಘಟನೆ.

ಹುಣಸೂರು ತಾಲ್ಲೂಕಿನ ಸಿಂಗರಮಾರನಹಳ್ಳಿ ಗ್ರಾಮದ ಲಿಂಗರಾಜೇಗೌಡರ ಮಗ ದಿನೇಶ ಈಗೊಂದು ಹದಿನೈದು ವರ್ಷದ ಹಿಂದೆ ಭಾಗ್ಯಮ್ಮಳನ್ನು ಮದುವೆಯಾಗಿದ್ದ. ಈ ದಂಪತಿಗೆ ಮೂವರು ಹೆಣ್ಣುಮಕ್ಕಳೂ ಆದವು. ಆದರೆ ಮೆಲ್ಲಗೆ ಇವರಿಬ್ಬರ ನಡುವೆ ವಿರಸವೊಂದು ಮೊಳಕೆಯೊಡೆಯಲಾರಂಭಿಸಿತ್ತು. ಬರಬರುತ್ತಾ ಪರಸ್ಪರ ಗಲಾಟೆಗಳು ದಿನನಿತ್ಯದ ವಿಚಾರವಾಗಿ ಹೋಯ್ತು. ಈಗೊಂದು ಆರು ವರ್ಷದ ಹಿಂದೆ ಸಂಬಂಧ ತೀರಾ ಬಿಗಡಾಯಿಸಿದ್ದರಿಂದಾಗಿ ಇವರಿಬ್ಬರೂ ವಿಚ್ಛೇದನಕ್ಕೆ ಅರ್ಜಿ ಹಾಕಿದರು. ಇತ್ತೀಚೆಗೆ ಬೇರೆಬೇರೆಯಾಗಿ ಬದುಕಲಾರಂಭಿಸಿದ್ದರು. ಭಾಗ್ಯಮ್ಮ ಮೂವರು ಮಕ್ಕಳನ್ನು ತನ್ನ ಸುಪರ್ದಿನಲ್ಲೇ ಇಟ್ಟುಕೊಂಡು ದೊಡ್ಡ ಮಗಳನ್ನು ಬೆಂಗಳೂರಿನಲ್ಲಿರುವ ತನ್ನಣ್ಣನ ಮನೆಯಲ್ಲೇ ಬಿಟ್ಟಿದ್ದಳು.

ಹೀಗೆ ಪತಿಯಿಂದ ದೂರಾದ ಭಾಗ್ಯಮ್ಮ ತನ್ನದೇ ಹಾದಿಯಲ್ಲಿ ಬದುಕಲಾರಂಭಿಸಿದ್ದಳು. ತೀರಾ ಒಟ್ಟಿಗೆ ಬದುಕುವುದು ಸಾಧ್ಯವೇ ಇಲ್ಲವೆಂದು ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದರೂ ದಿನೇಶ ಆಕೆಯ ನಡವಳಿಕೆಯ ಮೇಲೊಂದು ನಿಗಾ ಇರಿಸಿದ್ದ. ಈ ಬಗ್ಗೆ ವಿಪರೀತ ಪೊಸೆಸಿವ್ ಆಗಿಯೂ ನಡೆದುಕೊಳ್ಳುತ್ತಿದ್ದ. ಇಂಥವನೆದುರು ಭಾಗ್ಯಮ್ಮ ಪರಿಚಿತ ಗಂಡಸರೊಂದಿಗೆ ಓಡಾಡಲಾರಂಭಿಸಿದ್ದಳು. ಈ ಬಗ್ಗೆ ಆಕೆ ಹೇಗಿದ್ದಳೋ, ದಿನೇಶ ಏನೇನು ಕಲ್ಪಿಸಿಕೊಂಡನೋ? ಈ ವಿಚಾರದಲ್ಲೇ ಮತ್ತೆ ಮತ್ತೆ ಜಗಳಾಡಿಕೊಂಡಿದ್ದಂತೂ ನಿಜ. ಈ ಬಗ್ಗೆ ಭಾಗ್ಯಮ್ಮ ಪೊಲೀಸರಿಗೆ ದೂರು ನೀಡಿದ ಪರಿಣಾಮ ದಿನೇಶ ಜೈಲಿಗೂ ಹೋಗಿ ಬಂದಿದ್ದ.

ಈ ನಡುವೆಯೇ ರಾಜಕೀಯ ಹುಚ್ಚು ಹತ್ತಿಸಿಕೊಂಡಿದ್ದ ಭಾಗ್ಯಮ್ಮ ಯಾವಾಗಲೂ ಹೊರಗೇ ಅಡ್ಡಾಡುತ್ತಿದ್ದಳು. ದಿನೇಶನ ಪ್ರಕಾರ ಆಕೆ ಜೊತೆಗಿಟ್ಟುಕೊಂಡಿದ್ದ ಇಬ್ಬರು ಹೆಣ್ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ. ನೋಡನೋಡುತ್ತಲೇ ಕಾಂಗ್ರೆಸ್ ಪಾಳೆಯದಲ್ಲಿ ಕಾಣಿಸಿಕೊಳ್ಳಲಾರಂಭಿಸಿದ ಭಾಗ್ಯಮ್ಮ 15 ತಿಂಗಳ ಹಿಂದೆ ನಡೆದ ಗ್ರಾ.ಪಂ. ಚುನಾವಣೆಗೆ ಸ್ಪರ್ಧಿಸಿ ಆರಿಸಿ ಬಂದಳು. ಇದು ದಿನೇಶನಿಗೆ ಇಷ್ಟವಿರಲಿಲ್ಲ. ಈ ಬಗ್ಗೆ ವಿರೋಧ ವ್ಯಕ್ತಪಡಿಸಿದಾಗ ಭಾಗ್ಯಮ್ಮ ಮತ್ತೊಮ್ಮೆ ಪೊಲೀಸರಿಗೆ ದೂರು ನೀಡಿದ್ದಳು. ದಿನೇಶ್ ಮತ್ತೊಮ್ಮೆ ಜೈಲು ಸೇರಿ ವಾಪಸಾಗಿದ್ದ.

ಭಾಗ್ಯಮ್ಮಳನ್ನು ಹತ್ತಿರದಿಂದ ಬಲ್ಲವರೇ ಹೇಳುವ ಪ್ರಕಾರ ಆಕೆ ಹೈಫೈ ಜೀವನ ಬಯಸುತ್ತಿದ್ದಳು. ಇತ್ತೀಚೆಗಂತೂ ತನ್ನಣ್ಣನಂತೆ ತಾನೂ ರಿಯಲ್ ಎಸ್ಟೇಟ್ ದಂಧೆಗೆ ಕೈಹಾಕಿದ್ದಳೆಂದು ಹೇಳುವವರೂ ಇದ್ದಾರೆ. ಇದರಿಂದ ಸ್ವಲ್ಪ ಕಾಸು ಹುಟ್ಟುತ್ತಲೇ ಹಳ್ಳಿ ಜೀವನದತ್ತ ಬೇಸರ ಹುಟ್ಟಿಸಿಕೊಂಡ ಭಾಗ್ಯಮ್ಮ ಒಂದು ವಾರದ ಹಿಂದಷ್ಟೇ ಹುಣಸೂರು ಪಟ್ಟಣದ ಮೂರೂರಮ್ಮ ಬಡಾವಣೆಯಲ್ಲಿ ಬಾಡಿಗೆ ಮನೆಯೊಂದನ್ನು ಹಿಡಿದು ಅಲ್ಲೇ ವಾಸಿಸುತ್ತಿದ್ದಳು.



ಇದೆಲ್ಲದರಿಂದಾಗಿ ದಿನೇಶ್ ಒಂದಷ್ಟು ರೋಸಿಹೋಗಿದ್ದ. ಈ ನಡುವೆಯೇ ಮೊನ್ನೆ ವಿಚ್ಛೇದನ ಪ್ರಕರಣದ ಸಂಬಂಧ ನ್ಯಾಯಾಲಯದಲ್ಲಿ ರಾಜಿ ಇತ್ಯರ್ಥ ಗೊತ್ತುಪಡಿಸಲಾಗಿತ್ತು. ಇದಕ್ಕೆ ದಿನೇಶ್-ಭಾಗ್ಯಮ್ಮ ಇಬ್ಬರೂ ಹಾಜರಾಗಿದ್ದರು. ಆದರೆ ಒಮ್ಮತ ಮೂಡದೆ ವಿಚಾರಣೆ ಮುಂದೂಡಲ್ಪಟ್ಟಿತ್ತು. ಇನ್ನೊಂದು ಕೆಲವೇ ತಿಂಗಳಲ್ಲಿ ಸರಿಯಾದುದೊಂದು ತೀರ್ಪು ಹೊರಬಿದ್ದು-ಅವರ ಪಾಡಿಗವರು ನೆಮ್ಮದಿಯಾಗಿರಬಹುದಿತ್ತು.

ಆದರೆ ದಿನೇಶ್ ಅಂದು ಕೋರ್ಟಿಗೆ ಹಾಜರಾಗಲು ಮನೆ ಬಿಡುವಾಗಲೇ ಬಲವಾದುದೊಂದು ನಿರ್ಧಾ... ಬಂದಿದ್ದ. ಕೋರ್ಟು ಮುಗಿದ ಬಳಿಕ ಭಾಗ್ಯಮ್ಮ ... ನಿಲ್ದಾಣದತ್ತ ನಡೆದುಹೋಗುತ್ತಿರಬೇಕಾದರೆ ಮಚ್ಚಿ... ಆಕೆಯ ಎರಡೂ ಕೈ ತುಂಡರಿಸಿ, ಕುತ್ತಿಗೆಗೂ ... ಹಾಕಿ ಅಮಾನವೀಯವಾಗಿ ಕೊಂದು ಕೆಡವಿದ್ದಾನೆ. ಭಯಾನಕ ಕೃತ್ಯ ನಡೆಸಿ ಬೈಕ್ ಹತ್ತಿ ಪರಾರಿಯಾ... ದಿನೇಶ್‌ನನ್ನು ಪಿಎಸ್‌ಐ ಥಾಮಸ್ ಮತ್ತು ಸಿಬ... ಎಳೆತಂದು ಜೈಲಿಗೆ ಗದುಮಿದ್ದಾರೆ.


ಆನಂತರದ ತನಿಖೆಯ ಸಂದರ್ಭದಲ್ಲಿ ಮಹತ್ವದ ವಿಚಾರವೊಂದು ಬಯಲಾಗಿದೆ. ದಿನೇಶ್ ಆರು ತಿಂಗಳ ಹಿಂದ... ಮೈಸೂರಿನ ಕನ್ನೇಗೌಡನ ಕೊಪ್ಪಲಿನ ಹುಡುಗಿಯೊಬ್ಬಳನ್ನು ಮದುವೆಯಾಗಿದ್ದಾನೆ. ಆದರೂ ಸಹ ಯಾಕೆ ಮೊದಲ ಹೆಂಡತಿ ಭಾಗ್ಯಳ ಮೇಲೆ ನಿಯಂತ್ರಣ ಹೊಂದಲು ಹವಣಿಸುತ್ತಿದ್ದ. ಇದ... ಹಕೀಕತ್ತುಗಳೇನೆಂಬುದು ವಿಸ್ತೃತ ತನಿಖೆಯಿಂದಷ್ಟೇ ಹೊರಬರಬೇಕಿ...

ತಕರಾರು, ಕಿರಿಕಿರಿಗಳೆಲ್ಲಾ ಏ... ಇದ್ದರೂ ತೀರಾ ಬದುಕನ್ನೇ ಕಿತ್ತುಕೊಳ್ಳುವುದು ಅಮಾನವೀಯ... ಇಷ್ಟವಿಲ್ಲದಿದ್ದರೆ ಆಕೆಯ ಪಾಡಿಗೆ ಬಿಟ್ಟುಬಿಡಬಹುದಿತ್ತು. ಆದರೆ ದಿನೇಶ್ ಅನಾಹುತ ಮಾಡಿಮುಗಿಸಿದ್ದಾನೆ. ತೀರಾ ಕಣ್ಣೆದುರೇ ಇಂಥ ಭೀಕ... ಘಟನೆ ಕಂಡ ಹುಣಸೂರಿನ ಜನ ಮಾತ್ರ ಬೆಚ್ಚಿಬಿದ್ದಿದ್ದಾರೆ.

• ಕೆ.ಕೃಷ್ಣ ಹುಣಸೂ...

ಹುಬ್ಬಳ್ಳಿ

ಶಿಕ್ಷಕಿ ಸಲೋಮಿ ವೇಶ್ಯಾ ದಂಧೆಯ ಹೆಡ್‌ಮಿಸ್!



ಸಲೋಮಿ


ಹೆಣ್ಣುಮಕ್ಕಳಿಗೆ ಎಲ್ಲ ರೀತಿಯಲ್ಲೂ ಸುರಕ್ಷಿತವಾಗಿರುವ ವಿದ್ಯಾ ಸಂಸ್ಥೆ ಸಿಕ್ಕರೆ ಅವರ ಶೈಕ್ಷಣಿಕ ಜೀವನದಲ್ಲಿ ಚಿಂತೆ ಇರುವುದಿಲ್ಲ ಎಂಬುದು ಹೆತ್ತವರ ನಂಬಿಕೆ. ಆದರೆ ಅಂತಹುದೇ ವಿದ್ಯಾ ಸಂಸ್ಥೆಯ ಶಿಕ್ಷಕಿ ಸಲೋಮಿ ಆ ನಂಬಿಕೆಗೆ ದ್ರೋಹ ಮಾಡಿದ್ದಾಳೆ. ತನ್ನದೇ ಕಾಲೇಜ್ ಹುಡುಗಿಯರನ್ನು ಇಟ್ಟುಕೊಂಡು ಹೈಟೆಕ್ ವೇಶ್ಯಾವಾಟಿಕೆಗೆ ನೀರು ಹಾಕಿ ಬೆಳೆಸಿದ್ದಾಳೆ. ಹುಬ್ಬಳ್ಳಿಯ ಕಾಂ ಆ್ಯಂಡ್ ಕೂಲ್ ಏರಿಯಾದಲ್ಲಿ ಬಂಗಲೆ ರೂಪದ ಒಂಟಿ ಮನೆಯಲ್ಲಿ ಕಾಮಪಿಪಾಸುಗಳಿಗೆ ಉಣಬಡಿಸಿದ್ದಾಳೆ.


ಖಾಲಿ ಮೆದುಳಿಗೆ ಅಕ್ಷರ ತುಂಬಿ ಉಜ್ವಲ ಭವಿಷ್ಯ ...ಪಿಸಲು ಅಡಿಪಾಯ ಹಾಕಿದ ಶಿಕ್ಷಕರನ್ನು ವಿದ್ಯಾರ್ಥಿ ...ಜೀವನದಲ್ಲಿ ಎಂದೂ ಮರೆಯಲಾರ. ಇಲ್ಲೊಬ್ಬಳು ...ಕಿ ಆ ಸ್ಥಾನದ ಪಾವಿತ್ರ್ಯವನ್ನೇ ಹಾಳುಗೆಡವಿದ್ದಾಳೆ. ಈಕೆ ...ಗ್ಗ ವಿದ್ಯಾರ್ಥಿನಿಯರ ಬಡತನವನ್ನೇ ಬಂಡವಾಳವನ್ನಾಗಿಸಿ ...ಂಡು ಅವರನ್ನು ವೇಶ್ಯಾದಂಧೆಗೆ ತಳ್ಳಿ ಕೈತುಂಬ ...ಗಳಿಸುತ್ತಿದ್ದಳು. ವಿದ್ಯಾನಗರಿ ಹುಬ್ಬಳ್ಳಿಯ ಪ್ರತಿಷ್ಠಿತ ...ದಾರ ವೀರನಗೌಡ ಪಾಟೀಲ ಮಹಿಳಾ ವಿದ್ಯಾಪೀಠದ, ...ಮತಿ ಸುಧಾತಾಯಿ ಆರ್.ಶೆಟ್ಟಿ ಪ್ರಾಥಮಿಕ ಶಾಲೆಯ ...ಡ್‌ಮಿಸ್ ಸಲೋಮಿ ವಿಜಯಕುಮಾರ್ ಝುಂಡೆ ...ಲಿಯಾಸ್ ಕುರಿ ಎಂಬಾಕೆ ಈ ದುಷ್ಟತನದ ಪರಿಚಾರಕಿ. ...ಥ ಪ್ರಳಯಾಂತಕಿ ಸಲೋಮಿಯನ್ನು ಸಾಕ್ಷಿಸಮೇತ ...ಹ್ಯಾಂಡ್ ಆಗಿ ಹಿಡಿದ ಎ.ಸಿ.ಪಿ. ಬಡಿಗೇರ್ ಜೈಲಿಗಟ್ಟಿ ...ರು. ಇವಳ ಪ್ರವರ ತಿಳಿದ ಮಂದಿ ನಿಜಕ್ಕೂ ಕಂಗಾಲಾಗಿ ...ರೆ.

ಯಾರೀ ಸಲೋಮಿ?

ಹುಬ್ಬಳ್ಳಿಯ ಹೊಸೂರು ಭಾಗದ ಭಾಸ್ಕರ್ ಕುರಿ ...ಬುವರ ಏಳು ಮಕ್ಕಳಲ್ಲಿ ಕೊನೆಯವಳಾದ ಸಲೋಮಿ ...ಸ್ಕೂಲ್ ಹಂತದಲ್ಲೇ ಹಾದಿಬಿಟ್ಟವಳು. ಸದಾ ಗಂಡುಬೀರಿ ...ಂತೆ ಅಲೆದಾಡುತ್ತಾ ತನ್ನ ಹೈಸ್ಕೂಲ್ ಜಮಾನದಲ್ಲೇ ...ಡುಗರ. ತಲೆ ಕೆಡಿಸಿ ಊರು ಬಿಡಿಸಿದ ಕುಖ್ಯಾತಿ ...ಸಿದ್ದಳು. ಇವಳಿಗೆ ನಾಲ್ಕು ಜನ ಅಕ್ಕಂದಿರು, ಇಬ್ಬರು ...ಣ್ಣಂದಿರು. ಅದರಲ್ಲಿ ಹಿರೇ ಅಕ್ಕ ಚಂದಾ ಎಂಬುವವಳದ್ದು ...ಸೇ ಚಾಳಿ. ಅದನ್ನೇ ಆವಾಹಿಸಿಕೊಂಡು ಬೆಳೆದ ಸಲೋಮಿ ...ಡು ತನ್ನ ಐವತ್ತೈದನೇ ...ಯಸ್ಸಿನಲ್ಲೂ ತೆವಲು ಬಿಟ್ಟಿಲ್ಲ. ...ಲೇಜು ಹುಡುಗಿಯರನ್ನು ವೇಶ್ಯಾ ...ಧೆಗೆ ಹಚ್ಚುವ ಅಡ್ನಾಡಿ ಕೆಲಸಕ್ಕೆ ...ತಿದ್ದಾಳೆ.







ಧಾರವಾಡದ ಭಾಷಲ್ ...ಷನ್ ಆಂಗ್ಲ ಮಾಧ್ಯಮ ...ಲೆಯಲ್ಲಿ ಕಲಿತ ಸಲೋಮಿ ...ಂದೆ ಅದೇ ಆಂಗಳದಲ್ಲಿರುವ ...ಷ್ಟಸರ್ಜನ ವ್ಯಾಯಾಮ ...ಲೆಯಲ್ಲಿ ಸಿ.ಪಿ.ಎಡ್ ಮುಗಿಸಿ ...ಲ್ಲೇ ಪಿ.ಟಿ. ಟೀಚರ್ ಆಗಿ ಕೆಲಸ ...ಡಿ ಕೆಲಕಾಲ ಅನುಭವ ...ದಳು. ನಂತರ ಅಲ್ಲಿಂದ ಈಕೆ ...89ರಲ್ಲಿ ಹುಬ್ಬಳ್ಳಿಯ ಪ್ರತಿಷ್ಠಿತ ...ದಾರ ವೀರನಗೌಡ ಪಾಟೀಲ ...ಹಿಳಾ ವಿದ್ಯಾಪೀಠದ, ಶ್ರೀಮತಿ ...ಧಾತಾಯಿ ಆರ್.ಶೆಟ್ಟಿ ಪ್ರಾಥಮಿಕ ...ಲೆಯಲ್ಲಿ ದೈಹಿಕ ಶಿಕ್ಷಕಿಯಾಗಿ ...ಮಕವಾದಳು. ಮುಂದೆ 1991 ...ಇವಳ ಸೇವೆಯನ್ನು ಕಾಯಂ ...ಳಿಸಲಾಯಿತು. ಸೇವಾ ಹಿರಿತ ... ಆಧಾರದ ಮೇಲೆ 200...ರಲ್ಲಿ ...ಥಮಿಕ ಶಾಲೆಯ ಹೆಡ್‌ಮಿಸ್ ...ತ ಈಕೆಗೆ ಬಡ್ತಿ ನೀಡ ...ಯಿತು.

ಸಲೋಮಿ ತನ್ನ ವೈಯಕ್ತಿಕ, ...ಸಾರಿಕ ಜೀವನದಲ್ಲೂ ಗಂಡ ...ಂದಿಗೆ ದಿನದ ಲೆಕ್ಕದಲ್ಲಿ ಬದುಕಿ ...ರವಾದವಳು. ಉದ್ಯೋಗದಲ್ಲಿ ...ಶೀಲ್ದಾರರಾಗಿರುವ ವಿಜಯ ...ಮಾರ ಝುಂಡೆಯನ್ನು ಮದುವೆಯಾದ ಸಲೋಮಿ ...ೇ ತಿಂಗಳಲ್ಲಿ ಸಾಂಸಾರಿಕ ಜೀವನಕ್ಕೆ ಗುಡ್‌ಬೈ ಹೇಳಿದಳು. ...ಾಗಲೇ ಗರ್ಭಿಣಿಯಾಗಿದ್ದ ಸಲೋಮಿ ಗಂಡು ಮಗುವಿಗೆ ...ಂದೆ ಜನ್ಮ ನೀಡಿದಳು. ಇದೀಗ ಆಕೆಯ ಮಗ ...ಸಿಯೂ ಅನೇಕ ಪಿಕ್‌ಪಾಕೆಟು, ಕಳುವಿನ ಪ್ರಕರಣದಲ್ಲಿ ...ಖ್ಯಾತನಾಗಿದ್ದಾನೆ.

ದಶಕಗಳ ದಂಧೆ

ಹುಬ್ಬಳ್ಳಿ ವಿದ್ಯಾನಗರದ ಹತ್ತಿರದ ಜಯನಗರ ...ಕ್ಸ್‌ಟೆನ್ಷನ್ ಏರಿಯಾದಲ್ಲಿ ಬಂಗಲೆ ರೂಪದ ಒಂಟಿ ...ನೆಯನ್ನು ಲೀಸ್ ಹಾಕಿಕೊಂಡಿರುವ ಸಲೋಮಿ ಝುಂಡೆ ...ಕ್ಷಕಿ ವೃತ್ತಿಯ ಜೊತೆಜೊತೆಗೇ ವೇಶ್ಯಾ ದಂಧೆಯನ್ನು ...ಮಾಣಿಕವಾಗಿ ನಡೆಸಿಕೊಂಡು ಬಂದಿದ್ದಾಳೆ. ಅಖಂಡ ...ರಡು ದಶಕದ ಇತಿಹಾಸವಿರುವ ಈಕೆಯ ದಂಧೆಗೆ ...ಬ್ಬಳ್ಳಿಯ ಬಹುತೇಕ ಪ್ರಭಾವಿ ವ್ಯಕ್ತಿಗಳ ಬೆಂಬಲವೂ ...ದೆ. ಅವಳಿನಗರದ ಖಾಕಿ ಅಧಿಕಾರಿಗಳೇ ಇವಳು ...ಸೇರಿಸಿದ ಯುವತಿಯರ ಮುಂದೆ ಶರ್ಟ್ ಬಿಚ್ಚಿ ...ಗಾನಾಚ್ ಮಾಡಿದ್ದೂ ಉಂಟು. ಹೀಗಾಗಿ ಈ ದಂಧೆ ...ಸೂತ್ರವಾಗಿ ನಡೆಯುತ್ತಿತ್ತು.

ವಿಚಿತ್ರ ಅಂದರೆ ಸಲೋಮಿ ಕ್ಲಿಂಪ್‌ಗಳನ್ನು ಇಟ್ಟು ...ಕೊಂಡಿರಲಿಲ್ಲ, ಇವಳದ್ದು ಚೈನ್ ಸಿಸ್ಟಮ್ ದಂಧೆ. ಒಮ್ಮೆ ...ಚಯವಾದ ಗಿರಾಕಿ ಮತ್ತೊಮ್ಮೆ ಬೇರೊಬ್ಬನನ್ನು ಪರಿಚಯಿಸಿದರೆ ಮಾತ್ರ ಇವಳ ಬಳಿ ಪ್ರವೇಶ ಸಿಗುತ್ತಿತ್ತು. ದುರಂತವೆಂದರೆ, ಈಕೆ ತನ್ನ ದಂಧೆಯ ಅಡಿಪಾಯ ಹಾಕಿದ್ದೆ ಮಹಿಳಾ ವಿದ್ಯಾಪೀಠದ ಪ್ರಾಥಮಿಕ ಶಾಲೆಯಲ್ಲಿದ್ದುಕೊಂಡು. ಪ್ರಾರಂಭದಲ್ಲಿ ವಿದ್ಯಾಪೀಠದ ಪಿ.ಯು., ಡಿಗ್ರಿ ವಿದ್ಯಾರ್ಥಿನಿಯರ ವಸತಿನಿಲಯದ ವಾರ್ಡನ್‌ಗಳ ಸಹಾಯದೊಂದಿಗೆ ಹುಡುಗಿಯರ ಇತಿಹಾಸ ಅರಿತು ತನ್ನ ಬುಟ್ಟಿಗೆ ಕೆಡವಿಕೊಳ್ಳುತ್ತಿದ್ದಳು. ಸದ್ಯ ಇವಳ ಕಾಂಟ್ಯಾಕ್ಟ್ ಪಕ್ಕದ ಆಂಧ್ರ, ಗೋವಾ, ಮಹಾರಾಷ್ಟ್ರ ರಾಜ್ಯದವರೆಗೂ ವಿಸ್ತಾರವಾಗಿದೆ. ಗಿರಾಕಿಗಳ ರೇಟಿಗೆ ತಕ್ಕಂತೆ ಹುಡಗಿಯರನ್ನು ಕರೆತರುವ ವ್ಯವಸ್ಥೆ ಒಂದೇ ದಿನದಲ್ಲಿ ಮಾಡಿಮುಗಿಸುತ್ತಾಳೆ. ಅಷ್ಟರಮಟ್ಟಿಗೆ ನಂಬಿಗಸ್ಥ ಘರವಾಲಿ ಈ ಸಲೋಮಿ.

ಬೆಳಗ್ಗೆ ಶಾಲೆಗೆ ಬಂದು ಪ್ರೇಯರ್ ಮುಗಿಸಿ ತನ್ನ ಛೇಂಬರನ್ನೇ ಪಕ್ಕಾ ಮಾಂಸದಡ್ಡೆಯ ಕಾಲ್‌ಸೆಂಟರನ್ನಾಗಿ ಪರಿವರ್ತಿಸುತ್ತಿದ್ದ ಸಲೋಮಿ ಯಾರಿಗೂ ಸಂಶಯ ಬಾರದ ಹಾಗೆ ಫೋನಿನಲ್ಲೆ ವ್ಯವಹಾರ ಕುದುರಿಸುತ್ತಿದ್ದಳು. ಕೆಲವರಂತೂ ಖುದ್ದು ಇವಳನ್ನು ಶಾಲೆಯಲ್ಲಿ ಭೇಟಿಯಾಗಿ ಫೋಟೋ ನೋಡಿಯೇ ಫಿಕ್ಸ್ ಮಾಡಿಕೊಳ್ಳುತ್ತಿದ್ದರು. ಡೀಲ್ ಮುಗಿದ ಮೇಲೆ ಹುಡುಗಿಯರನ್ನು ಅವರ ಜೊತೆ ಕಳುಹಿಸುತ್ತಿದ್ದಳು. ಇವಳು ಈ ರೀತಿ ಹೈಟೆಕ್ ವೇಶ್ಯಾವಾಟಿಕೆ ನಡೆಸುತ್ತಿದ್ದುದು ಮಹಿಳಾ ವಿದ್ಯಾಪೀಠದ ಸೆಕ್ರೆಟರಿ ಎಸ್.ಆರ್. ಪಾಟೀಲ ಮತ್ತು ನಿರ್ದೇಶಕಿಯೊಬ್ಬಳಿಗೆ ಮೊದಲಿಂದಲೂ ಗೊತ್ತಿತ್ತು ಎಂಬ ಸತ್ಯ ಈಗ ಹೊರಬರುತ್ತಿದೆ. ಸಲೋಮಿಯೊಂದಿಗೆ ಪಕ್ಕಾ ಡೀಲ್ ಕುದುರಿಸಿಕೊಂಡಿದ್ದ ಪಾಟೀಲ ಇವಳ ಎಲ್ಲಾ ಹಾದರಗಳಿಗೆ ಬೆನ್ನೆಲುಬಾಗಿ ನಿಂತಿದ್ದ. ಸಲೋಮಿಯ ದಂಧೆ-ದರ್ಪಗಳಿಗೆ ಹೆದರಿ ಕೆಲವರು ತಾವೇ ನೌಕರಿ ಬಿಟ್ಟಿದ್ದುಂಟು. ಒಂದು ರೀತಿಯಲ್ಲಿ ತನ್ನ ಹೆಡ್ ಮಿಸ್‌ಗಿರಿಯನ್ನ ದಾದಾಗಿರಿಗಾಗಿ ಬಳಸಿಕೊಂಡಿದ್ದ ಸಲೋಮಿ ಝುಂಡೆ ಮೀಟರ್ ಬಡ್ಡಿ ದಂಧೆಯನ್ನೂ ನಡೆಸುತ್ತಿದ್ದಳು. 10 ಸಾವಿರದಿಂದ ಹಿಡಿದು ಲಕ್ಷದವರೆಗೂ ಮೀಟರ್ ಬಡ್ಡಿಯಲ್ಲಿ ಸಾಲ ನೀಡುತ್ತಿದ್ದ ಸಲೋಮಿ ಹಿಂತಿರುಗಿಸದ ಸಾಲಗಾರರ ಮೇಲೆ ತಾನೇ ಸಾಕಿದ್ದ ಪುಡಿ ರೌಡಿಗಳನ್ನು ಛೂಬಿಟ್ಟು ಹೊಡೆಸಿದ್ದ ಪ್ರಕರಣಗಳು ಈಗ ಬಯಲಾಗಿವೆ.

ಇವಳ ಅಟ್ಟಹಾಸದಿಂದ ನೊಂದ ಕೆಲವರು ಪೊಲೀಸ್ ಆಯುಕ್ತ ಕೆ. ರಾಮಚಂದ್ರರಾವ್‌ಗೆ ಮೌಖಿಕವಾಗಿ ದೂರು ನೀಡಿದ್ದರು. ಕೆಲವರಂತೂ ವಿದ್ಯಾನಗರ ಪೊಲೀಸ್ ಠಾಣೆಯ ಎಸ್.ಐ. ಪುಟ್ಟಸ್ವಾಮಿಗೆ ಇವಳನ್ನು ನೀವು ಬಡಿತೀರೋ ಇಲ್ಲ ನಾವ್ ಬಡಿಬೇಕೋ ಅಂತಾ ಆವಾಜ್ ಹಾಕಿ ಬಂದಿದ್ದರಂತೆ. ಸ್ವತಃ ಕಮೀಷನರ್ ರಾಮಚಂದ್ರರಾವ್ ಮತ್ತು ಎಸ್.ಐ ಪುಟ್ಟಸ್ವಾಮಿ ಆಕೆಯನ್ನು ಠಾಣೆಗೆ ಕರೆಸಿ ಹಲ್ಕಾ ದಂಧೆ ಬಿಟ್ಟು ನಿಯತ್ತಾಗಿ ನೌಕರಿ ಮಾಡಿಕೊಂಡು ಹೋಗು ಅಂತ ಬುದ್ಧಿವಾದ ಹೇಳಿದ್ದರಂತೆ. ಆದರಾಕೆ ಠಾಣೆಯಿಂದ ಹೋದವಳೇ ಯಥಾಪ್ರಕಾರ ದಂಧೆ ಮುಂದುವರೆಸುತ್ತಿದಳು. ಇದರಿಂದ ರೊಚ್ಚಿಗೆದ್ದ ಖಾಕಿಗಳು ಸಲೋಮಿ ಮನೆಯ ಮೇಲೆ ನಿಗಾ ಇಡತೊಡಗಿದರು. ಈ ಬಗ್ಗೆ ತನಿಖೆ ನಡೆಸಿದರೆ ಸಲೋಮಿಯ ಭಯಾನಕ ದಂಧೆ ಪದರುಪದರಾಗಿ ಬಿಚ್ಚಿಕೊಳ್ಳಲಾರಂಭಿಸಿತು.

ರೇಡ್ ಬಿತ್ತು

ಹೆಣ್ಣು ಮಕ್ಕಳಿಗೆ ಎಲ್ಲ ರೀತಿಯಲ್ಲೂ ಸುರಕ್ಷಿತವಾಗಿರುವ ವಿದ್ಯಾ ಸಂಸ್ಥೆ ಸಿಕ್ಕರೆ ಅವರ ಶೈಕ್ಷಣಿಕ ಜೀವನದಲ್ಲಿ ಚಿಂತೆ ಇರುವುದಿಲ್ಲ ಎಂಬುದು ಹೆತ್ತವರ ನಂಬಿಕೆ. ಆದರೆ ಅಂತಹುದೇ ವಿದ್ಯಾ ಸಂಸ್ಥೆಯ ಶಿಕ್ಷಕಿ ಸಲೋಮಿ ಆ ನಂಬಿಕೆಗೆ ದ್ರೋಹ ಮಾಡಿದ್ದಾಳೆ. ತನ್ನದೇ ಕಾಲೇಜ್ ಹುಡುಗಿಯರನ್ನು ಇಟ್ಟುಕೊಂಡು ಹೈಟೆಕ್ ವೇಶ್ಯಾವಾಟಿಕೆಗೆ ನೀರು ಹಾಕಿ ಬೆಳೆಸಿದ್ದಾಳೆ. ಹುಬ್ಬಳ್ಳಿಯ ಕಾಂ ಆ್ಯಂಡ್ ಕೂಲ್ ಏರಿಯಾದಲ್ಲಿ ಬಂಗಲೆ ರೂಪದ ಒಂಟಿ ಮನೆಯಲ್ಲಿ ಕಾಮಪಿಪಾಸುಗಳಿಗೆ ಉಣಬಡಿಸಿದ್ದಾಳೆ.

ತನ್ನ ಮನೆಗೆ ದಂಧೆಗೆ ತಕ್ಕಂತೆ ಹೈಟೆಕ್ ಟಚ್ ನೀಡಿದ್ದ ಸಲೋಮಿ ಬೆಡ್ ರೂಂಗೆ ಲೈವ್ ಬ್ಯಾಂಡ್ ರೂಪ ಕೊಟ್ಟಿದ್ದಳು. ಇದನ್ನೆಲ್ಲಾ ಕಂಡು ರೇಡ್‌ಗೆ ಹೋದ ಖಾಕಿಗಳೇ ಬೆಚ್ಚಿ ಬಿದ್ದಿದ್ದಾರೆ. ಪೂರ್ಣ ತಯಾರಿ ಮಾಡಿಕೊಂಡಿದ್ದ ಎಸಿಪಿ ಬಡಿಗೇರರ ತಂಡ ಸಲೋಮಿ ಮನೆ ಮೇಲೆ ದಾಳಿ ಇಟ್ಟಾಗ ಇಬ್ಬರು ಕಾಲೇಜ್ ಯುವತಿಯರು ಸೇರಿದಂತೆ ಕಾಮಪಿಪಾಸುಗಳು ಸಿಕ್ಕಿಬಿದ್ದಿದ್ದಾರೆ.

ಇವಳ ಮರುಳು ಮಾತಿಗೆ ದಾರಿ ಬಿಟ್ಟ ಕಾಲೇಜ್ ಹುಡುಗಿಯರಿಗೆ ಈಕೆ ಕೊಡುವುದು ಐದನೂರದಿಂದ ಸಾವಿರ ರೂಪಾಯಿ ಮಾತ್ರ. ಉತ್ತರ ಕರ್ನಾಟಕ ಭಾಗದ ದೊಡ್ಡ ದೊಡ್ಡ ಉದ್ಯಮಿಗಳು, ರಾಜಕಾರಣಿಗಳಿಗೆಲ್ಲಾ ಹುಡುಗಿಯರನ್ನು ಪೂರೈಸಿ ಲಕ್ಷ ಲಕ್ಷ ಸುಲಿದಿರುವ ಸಲೋಮಿ ತನ್ನ ಮನೆಕೆಲಸದವಳನ್ನೂ ಬಿಟ್ಟಿಲ್ಲ. ಅವಳಿಗೂ 200 ರೂ. ಫಿಕ್ಸ್ ಮಾಡಿ ದಂಧೆಗೆ ಹಚ್ಚಿದ್ದಾಳೆ. ರಾತ್ರಿ ಆಗುತ್ತಿದಂತೆ ಇವಳ ಮನಗೆ ಗಂಡಸರು ಬಂದುಹೋಗುವುದು ಸಾಮಾನ್ಯವಾಗಿತ್ತಾದರೂ ಆಸುಪಾಸಿನ ಜನರ್‍ಯಾರಿಗೂ ಇವಳ ಈ ಕಾಮದ ಪ್ರಪಂಚದ ಬಗ್ಗೆ ಅರಿವಾಗಿರಲಿಲ್ಲ. ಪೊಲೀಸರು ರೇಡ್ ಮಾಡಿದ ನಂತರವಷ್ಟೇ ಮುಖ್ಯ ಶಿಕ್ಷಕಿಯ ವೇಶ್ಯಾ ದಂಧೆಯ ಚಿತ್ರಣ ಗೊತ್ತಾಗಿದ್ದು.

ಮಾಸಿಕ 18 ಸಾವಿರ ಸಂಬಳ ಪಡೆಯುವ ಸಲೋಮಿ ಮರ್ಯಾದೆಯಿಂದ ಬದುಕಲು ಯಾವುದೇ ತೊಂದರೆಯಿರಲಿಲ್ಲ. ಆಕೆಯ ವಂಚಕ ಪ್ರವೃತ್ತಿಯೇ ಹಲವು ಯುವತಿಯರ ಬದುಕನ್ನು ಬಲಿ ಬೇಳಿಸಿದೆ. ಈ ವಿಚಾರ ಬಹಿರಂಗಗೊಳ್ಳುತ್ತಲೇ ದಂಗಾಗಿರುವ ಮಹಿಳಾ ವಿದ್ಯಾಪಿಠದ ಆಡಳಿತ ಮಂಡಳಿ ಇವಳನ್ನು ಸದ್ಯಕ್ಕೆ ಸಸ್ಪೆಂಡ್ ಮಾಡಿದೆ. ಆದರೆ ಸೇವೆಯಿಂದ ವಜಾ ಮಾಡಿಲ್ಲ. ಸಲೋಮಿಯ ಮನೆಮುರುಕ ದಂಧೆಗೆ ಈ ಶಿಕ್ಷೆ ಏನೇನೂ ಅಲ್ಲ. ಈಕೆಯ ಹಳೇ ದೋಸ್ತಿಗಳನ್ನು ಹದ್ದುಬಸ್ತಲ್ಲಿಟ್ಟರೆ ಕಾನೂನೆಂಬುದು ಸರಿಯಾಗಿ ಚಾಟಿ ಬೀಸುವುದು ಖಚಿತ.

ಸದ್ಯ ಜನರ ನಿರೀಕ್ಷೆಯೂ ಅದೇ.

• ಹುರಳಿಕುಪ್ಪಿ ವಿನಯ


ಪ್ರತಿಷ್ಠಿತ ವಿದ್ಯಾಸಂಸ್ಥೆಗೆ ಮಸಿ ಬಳಿದ ವಂಚಕಿ

ಹುಬ್ಬಳ್ಳಿ-ಧಾರವಾಡ ಅವಳಿ ನಗರದಲ್ಲಿ ಶತಮಾನದ ಇತಿಹಾಸವುಳ್ಳ ಶಿಕ್ಷಣ ಸಂಸ್ಥೆಯಾಗಿ ಗುರುತಿಸಿಕೊಂಡಿರುವ ಹುಬ್ಬಳ್ಳಿಯ ಹೊಸೂರು ಸರ್ಕಲ್‌ನ ಸರದಾರ ವೀರನಗೌಡ ಪಾಟೀಲ ಮಹಿಳಾ ವಿದ್ಯಾಪೀಠ ಹೆಣ್ಣುಮಕ್ಕಳ ಶಿಕ್ಷಣಕ್ಕಾಗೇ ಕಟಿಬದ್ಧವಾಗಿ ಸೇವೆ ಸಲ್ಲಿಸುತ್ತ ಬಂದಿರುವ ಪ್ರಸಿದ್ಧ ಸಂಸ್ಥೆ. ಈ ಸಂಸ್ಥೆಗೆ ಸ್ವಾತಂತ್ರ್ಯ ಪೂರ್ವದ ಇತಿಹಾಸವಿದೆ. ಮಹಾತ್ಮ ಗಾಂಧಿ, ವಿನೋಬಾ ಭಾವೆ ಸೇರಿದಂತೆ ಅನೇಕ ಜನ ಮಹನೀಯರು ಇಲ್ಲಿ ಕಾಲಿಟ್ಟು ಹೋಗಿದ್ದಾರೆ. ಇದೇ ಮಹಿಳಾ ವಿದ್ಯಾಪೀಠದಲ್ಲಿ ಗಾಂಧಿ ಚಿತಾಭಸ್ಮ ಕೂಡ ಇದೆ.



ಪ್ರಾಥಮಿಕ ಶಾಲೆಯಿಂದ ಹಿಡಿದು, ಎಲ್ಲಾ ವಿಭಾಗದ ಪದವಿ ಕಾಲೇಜು, ಶಿಕ್ಷಕರ ತರಬೇತಿ ಕೇಂದ್ರ, ನರ್ಸಿಂಗ್ ಕೋರ್ಸ್, ಡಿಪ್ಲೊಮಾ ತರಬೇತಿ ಕೇಂದ್ರಗಳ ಮೂಲಕ ಅನೇಕ ಗ್ರಾಮೀಣ ವಿದ್ಯಾರ್ಥಿನಿಯರಿಗೆ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಶಿಕ್ಷಣ ಒದಗಿಸುವ ವ್ಯವಸ್ಥೆಯನ್ನು ಈ ಸಂಸ್ಥೆ ಹೊಂದಿದೆ. ಪಾಲಕರು ತಮ್ಮ ಹೆಣ್ಣು ಮಕ್ಕಳನ್ನು ನಿಶ್ಚಿಂತೆಯಾಗಿ ಇಲ್ಲಿ ದಾಖಲಿಸುತ್ತಾರೆ.

ವಿಶೇಷವಾಗಿ ಉತ್ತರ ಕರ್ನಾಟಕ ಭಾಗದ ಬಡ ಗ್ರಾಮೀಣ ವಿದ್ಯಾರ್ಥಿನಿಯರು ಈ ಸಂಸ್ಥೆಯ ಸೇವೆಯನ್ನು ನಂಬಿ ಬರುತ್ತಾರೆ. ಇವರ ಆಸರೆಗೆಂದೇ ಇಲ್ಲಿ ಕಸ್ತೂರ ಬಾ, ಪರಿಶಿಷ್ಟ ಜಾತಿ ಮತ್ತು ಪಂಗಡ, ಗ್ರಾಮೀಣ ಮಹಿಳಾ ಸೇರಿದಂತೆ ಒಟ್ಟು ನಾಲ್ಕು ದೊಡ್ಡ ಪ್ರಮಾಣದ ಹಾಸ್ಟೆಲ್‌ಗಳನ್ನು ನಿರ್ಮಿಸಲಾಗಿದೆ. ಇಂತಹ ಸಂಸ್ಥೆಯ ಆಡಳಿತ ಮಂಡಳಿ ಚುಕ್ಕಾಣಿ ಹಿಡಿಯುವುದಕ್ಕೂ ಸಾಕಷ್ಟು ಪೈಪೋಟಿ ನಡೆಯುತ್ತೆ. ಒಂದು ಬಾರಿ ಈ ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ಒಳಹೊಕ್ಕು ಹೊರಬಂದರೆ ಅವರಿಗೆ ಸಿಗುವ ಗೌರವವೇ ಬೇರೆ. ಆದರೆ ಇದೇ ಸಂಸ್ಥೆಯ ಪ್ರಾಥಮಿಕ ಶಾಲೆಯ ಹೆಡ್‌ಮಿಸ್ ಸಲೋಮಿ ತನ್ನ ದುಷ್ಟ ದಂಧೆಗೆ ಇಲ್ಲಿಯ ವಸತಿ ನಿಲಯಗಳ ವಿದ್ಯಾರ್ಥಿನಿಯರನ್ನು ಬಳಸಿಕೊಂಡಿದ್ದಳು ಎಂದರೆ, ಅದು ದುರಂತವಲ್ಲದೆ ಮತ್ತೇನು..?



ದೇಶಭಕ್ತಿಯ ಮುಖವಾಡದೊಂದಿಗೆ ಬಾಂಬ್ ಬ್ಲಾಸ್ಟ್, ಸುಪಾರಿ ಹತ್ಯೆ, ಅಪಹರಣ, ದರೋಡೆಗಳಂತಹ ಹೀನಕೃತ್ಯಗಳನ್ನು ನಡೆಸುತ್ತಿದ್ದ ಪ್ರಮೋದ್ ಮುತಾಲಿಕ್‌ನ ಹಂತಕ ಶಿಷ್ಯರು ಜೈಲಿನಿಂದ ಶೀಘ್ರ ಹೊರಬಂದು ಮತ್ತೆ ಫೀಲ್ಡಿಗಿಳಿಯುವ ಎಲ್ಲ ತಯಾರಿಗಳು ಸದ್ದಿಲ್ಲದೆ ನಡೆದಿವೆ. ಎರಡೂವರೆ ವರ್ಷಗಳ ಹಿಂದೆ ನಡೆದ ಸಾಲುಸಾಲು ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಗಲ ಕೋಟೆ ಪೊಲೀಸರು ಇವರನ್ನು ಬಂಧಿಸಿ ಕಂಬಿ ಹಿಂದೆ ದಬ್ಬಿದಾಗ ಇವರಿಗೆ ಶಿಕ್ಷೆ ಗ್ಯಾರಂಟಿ ಎಂಬ ಮಾತುಗಳು ಕೇಳಿಬಂದಿದ್ದವು. ಆದರೆ ಇವರ ವಿರುದ್ಧ ಸಾಕ್ಷಿಗಳು ಸತ್ಯ ಹೇಳಲು ಹಿಂಜರಿದರು.


ಮೊದಮೊದಲು ಗ್ರಾಮೀಣ ಮಟ್ಟದಲ್ಲಿ ಹಿಂದೂ ಯುವಕರನ್ನು ಒಂದೆಡೆ ಸೇರಿಸಿ ಅವರ ತಲೆಯಲ್ಲಿ ಜಾತಿಯ ದ್ವೇಷ, ಅಖಂಡ ಹಿಂದೂ ರಾಷ್ಟ್ರ ಎಂದೆಲ್ಲಾ ಹೊಸ ಹೊಸ ಅಜೆಂಡಾಗಳನ್ನು ತುರುಕುವ ಕೆಲಸವನ್ನು ಇವರಿಗೆ ಹಚ್ಚಿದ್ದ ಮುತಾಲಿಕ ಮುಂದೆ ಟೈಗರ್ ಗ್ಯಾಂಗಿನ ಹೆಸರಲ್ಲಿ ದರೋಡೆ, ಅಪಹರಣ, ಸುಪಾರಿ ಹತ್ಯೆ ಬಾಂಬ್ ತಯಾರಿಕೆಗಳಂತಹ ಪೈಶಾಚಿಕ ಕೃತ್ಯಗಳ ತರಬೇತಿ ನೀಡಿ ಅಖಾಡಕ್ಕಿಳಿಸಿದ್ದ. ಹೆಚ್ಚು ಓದಿಕೊಳ್ಳದ ತೀರಾ ಬಡತನದಿಂದ ಬಳಲುತ್ತಿದ್ದ ಬಾಗಲಕೋಟೆಯ ನಾಗರಾಜ ಜಂಬಗಿ ಇವನ ಅಖಾಡದಲ್ಲಿ ಪಳಗಿದ ಪ್ರಥಮ ಶಿಷ್ಯ. ಇವನ ಸಾರಥ್ಯದಲ್ಲಿ ದೀಪಕ್ ಗೋವಿಂದಕರ್ ಮತ್ತು ಶ್ರೀಕಾಂತ ಗೌಡ ಜಾಮೀನಿನ ಮೇಲೆ ಹೊರಬಂದು ಎಲ್ಲೋ ಜೀವನೋಪಾಯಕ್ಕಾಗಿ ಕೆಲಸಕ್ಕೆ ಸೇರಿಕೊಂಡಿದ್ದಾರೆ.

ಸಾಕ್ಷಿಗಳೇ ಥಂಡಾ

ಅತ್ಯಂತ ಹೀನ ಕೆಲಸಗಳ ಮೂಲಕ ಜೈಲಿಗೆ ಗದುಮಿಸಿಕೊಂಡ ಮುತಾಲಿಕನ ಹಂತಕ ಪಡೆ ಇನ್ನು ನಾಲ್ಕಾರು ತಿಂಗಳಲ್ಲಿ ಹೊರಬರಲು ಹವಣಿಸುತ್ತಿದೆ. ಬಿಜಾಪುರ ಆಯಿಲ್ ಮಿಲ್‌ನ ಕ್ಯಾಷಿಯರ್ ಹತ್ಯೆ ಹಾಗೂ ಬಾಗಲಕೋಟೆಯ ರಾಜು ದಂಪತಿಗಳ ಕೊಲೆ ಪ್ರಕರಣಗಳು ಬಿದ್ದು ಹೋಗುವ ಹಂತ ತಲುಪಿವೆ. ಈ ಕೇಸಿನಲ್ಲಿ ಸಾಕ್ಷಿ ಹೇಳಲು ಕಟಕಟೆ ಹತ್ತಿದ ಅಷ್ಟೂ ಜನ ನಮಗೇನೂ ಗೊತ್ತಿಲ್ಲ ಎಂದು ಹೇಳಿ ನ್ಯಾಯಾಲಯದಿಂದ ಹೊರನಡೆದಿದ್ದಾರೆ. ಯಡ್ಡಿ ಸರ್ಕಾರದ ಒತ್ತಡ ಪೊಲೀಸ್ ಇಲಾಖೆಯ ಮುಖಾಂತರ ನೇರವಾಗಿ ಸಾಕ್ಷಿದಾರರ ಮೇಲೆ ಪ್ರಭಾವ ಬೀರಿದ್ದು ಅದಕ್ಕೆ ಕಾರಣ. ಹೀಗಾಗೇ ಈ ಎರಡೂ ಕೊಲೆ ಪ್ರಕರಣಗಳು ಮಕಾಡೆ ಮಲಗುವುದು ನಿಶ್ಚಿತವಾಗಿದೆ. ಇನ್ನು ಸಹಚರ ಲಕ್ಷ್ಮಣ ಬಂಡಿವಡ್ಡರ ಹತ್ಯೆ ಕೇಸಿನ ವಿಚಾರಣೆ ಬರುವ ಸೆಪ್ಟೆಂಬರ್ 14-15ರಂದು ಬಾಗಲಕೋಟೆಯ ಜಿಲ್ಲಾ ನ್ಯಾಯಾಲಯದಲ್ಲಿ ನಡೆಯಬೇಕಿದೆ. ಇಲ್ಲೂ ಕೂಡ ಸಾಕ್ಷಿಗಳು ನಿಲ್ಲುವುದು ಕಷ್ಟವಾಗಿದೆ. ಅಲ್ಲದೆ, ಹುಬ್ಬಳ್ಳಿ ಕೋರ್ಟ್ ಬ್ಲಾಸ್ಟ್ ಪ್ರಕರಣದಲ್ಲಿ ಯಾವೊಂದು ಪ್ರತ್ಯಕ್ಷ ಸಾಕ್ಷಿಗಳೂ ಸತ್ಯ ಹೇಳದೆ, ರಕ್ಕಸರ ಉಳಿವಿಗೆ ಬೆಂಬಲವಾಗಿ ನಿಂತಿವೆ. ಇನ್ನು ಉಳಿದಿರುವುದು ಪೊಲೀಸರ ಸಾಕ್ಷ್ಯ. ಇದರಿಂದ ಇವರಿಗೆ ಶಿಕ್ಷೆಯಾಗುವುದಂತೂ ದೂರದ ಮಾತು.

ಹೀಗಾಗೇ ಜೈಲಿನಲ್ಲಿರುವ ಏಳು ಮಂದಿ ಮತ್ತು ಹೊರಗಿರುವ ಇಬ್ಬರು ಪ್ರಕರಣದಿಂದ ಖುಲಾಸೆಯಾಗಿ ಹೊರಬಂದು ಮುಂದೇನು ಮಾಡಬೇಕೆಂಬ ಯೋಚನೆಯಲ್ಲಿದ್ದಾರೆ.

ಸುಮಾರು ಮೂರು ವರ್ಷದಿಂದ ಇವರಿಂದ ದೂರವಿರುವ ಇವರ ತಂದೆ ತಾಯಿ ಸಂಬಂಧಿಗಳು ಹಿಂದಿನ ಜೀವನ ಮರೆತು ನೀವೆಲ್ಲಾ ಬೆವರು ಸುರಿಸಿ ಪ್ರಾಮಾಣಿಕವಾಗಿ ದುಡಿಯಲು ಸಿದ್ಧರಾದರೆ, ನಾವೆಲ್ಲಾ ನಿಮ್ಮ ಜೊತೆಗಿರುತ್ತೇವೆ ಎಂದು ಭರವಸೆ ನೀಡಿದ್ದಾರೆ. ಆದರೆ, ಇವರನ್ನ ಹೊರತಂದು ಮತ್ತೆ ಹೀನ ಕೃತ್ಯಕ್ಕೆ ಬಳಸಿಕೊಳ್ಳಲೆಂದೇ ನ್ಯಾಯಾಲಯದ ಖರ್ಚನ್ನು ಭರಿಸಿರುವ ಆರ್.ಎಸ್.ಎಸ್, ಭಜರಂಗದಳದ



ನಾಗರಾಜ ಜಂಬಗಿ-ಮುತಾಲಿಕ್

ಪ್ರಮೋದ್ ಮುತಾಲಿಕನ ಹಂತಕ ಪಡೆ ಮತ್ತೆ ಫೀಲ್ಡಿಗೆ!

ಇದರಿಂದಾಗಿ ಬಹುತೇಕ ಪ್ರಕರಣಗಳು ಮಕಾಡೆ ಮಲಗುವಂತಾಗಿದೆ.

ಮುತಾಲಿಕನ ಬಲೆಗೆ ಬಿದ್ದಿದ್ದ ಬಾಗಲಕೋಟೆಯ ನಾಗರಾಜ ಜಂಬಗಿ ಮತ್ತವನ ಹನ್ನೊಂದು ಜನ ಸಹಚರರು ಸುಮಾರು ನಾಲ್ಕೈದು ವರ್ಷಗಳ ಕಾಲ ಕರ್ನಾಟಕ, ಆಂಧ್ರ, ಮಹಾರಾಷ್ಟ್ರದಲ್ಲಿ ಅಪಹರಣ, ದರೋಡೆ, ಸುಪಾರಿ ಹತ್ಯೆಗಳಂತಹ ಕೃತ್ಯಗಳನ್ನು ಮುತಾಲಿಕನ ಇಶಾರೆಯಂತೆ ಮಾಡಿಮುಗಿಸುತ್ತಿದ್ದರು. ದೋಚಿದ ಹಣದಲ್ಲಿ ಸಮ ಅರ್ಧ ಲೆಕ್ಕದಲ್ಲಿ ಹುಡುಗರನ್ನು ಫೀಲ್ಡಿಗಿಳಿಸುತ್ತಿದ್ದ ಮುತಾಲಿಕ್ ಕಳೆದ ಎರಡೂವರೆ ವರ್ಷದಿಂದ ನಂಬಿಗಸ್ಥ ಶಿಷ್ಯರಿಲ್ಲದೆ ದಂಧೆಗೆ ಫುಲ್‌ಸ್ಟಾಪ್ ಹಾಕಿದ್ದ. ಆದರೆ ತನ್ನ ಶಿಷ್ಯರ ಮೇಲಿನ ಒಂದೊಂದೇ ಪ್ರಕರಣಗಳ ಸಾಕ್ಷಿಗಳನ್ನು ಥಂಡಾ ಹೊಡೆಸಿ ಕೇಸ್‌ಗಳನ್ನು ಮಕಾಡೆ ಮಲಗಿಸಿ ಮತ್ತೆ ಫೀಲ್ಡಿಗಿಳಿಸುವ ತಯಾರಿ ನಡೆಸುತ್ತಿದ್ದ ಅದೀಗ ಫಲ ಕೊಡುವ ಹಂತದಲ್ಲಿದೆ...

ರಚನೆಯಾದ ಹನ್ನೊಂದು ಜನರ ತಂಡ ನಾಲ್ಕೈದು ವರ್ಷಗಳಲ್ಲಿ ಮಾಡದ ಅನಾಹುತಗಳಿಲ್ಲ. ಇದರಲ್ಲಿ ಲಕ್ಷ್ಮಣ ಬಂಡಿವಡ್ಡರ, ಬಾಗಲಕೋಟೆಯ ರಮೇಶ ಪವಾರ, ಬಸವರಾಜ ಡಿಗ್ಗಿ, ಬೆಳಗಾಂವ್‌ನ ಚನ್ನಬಸಪ್ಪ ಹುಣಸನಗಿ, ಇಂಡಿ ತಾಲೂಕಿನ ಹಿರೇಗೋಗಿಯ ಹನುಮಂತ ಸಾಕಳೆ, ಗೋಕಾಕ ತಾಲೂಕಿನ ಹೊನಕುಪ್ಪಿಯ ಬಸವರಾಜ ರೂಗಿ, ಮಂಜುನಾಥ ಬಿಂಜೂರಗಿ, ಬಸವರಾಜ ಡಿಗ್ಗಿ, ಲಿಂಗರಾಜ ಜಾಲಗಾರ, ದೀಪಕ ಗೋವಿಂದಕರ, ಶ್ರೀಕಾಂತ ಗೌಡರ ಎಂಬ ಯುವಕರು ಮುತಾಲಿಕನ ಮುಸ್ಲಿಂ ವಿರೋಧಿ ಭಾಷಣಕ್ಕೆ ಮರುಳಾಗಿ ಪಾತಕ ಕೃತ್ಯಕ್ಕೆ ಕೈಹಾಕಿದ್ದರು. ಈ ಹಂತಕರ ಮೇಲೆ ಐದು ಕೊಲೆ, ಎರಡು ಬಾಂಬ್‌ಬ್ಲಾಸ್ಟ್ ಸೇರಿದಂತೆ ಒಂದು ಕಿಡ್ನಾಪ್ ಪ್ರಕರಣ ದಾಖಲಾಗಿದೆ. ಆದರೆ ಅಸಲಿ ಲೆಕ್ಕ ತೆಗೆದರೆ ಮುಂಬೈ ಭೂಗತ ಲೋಕ ಕೂಡಾ ಇವರ ಪೈಶಾಚಿಕ ಕೃತ್ಯದ ಪರಿಗೆ ಬೆಚ್ಚಿ ಬಿದ್ದರೂ ಆಶ್ಚರ್ಯವಿಲ್ಲ. ಯಾವ ಸುಳಿವೂ ಸಿಗದ ಹಾಗೆ ಎಲ್ಲ ಕೆಲಸ ಮುಗಿಸಿ ಮತ್ತೂ ದೇಶ ಭಕ್ತರಂತೆ ಪೋಜು ಕೊಡುತ್ತಿದ್ದ ಇವರನ್ನು ಆಗಿನ ಬೆಳಗಾವಿ ಡಿಐಜಿ ಎನ್. ಶಿವಕುಮಾರ್ ನೇತೃತ್ವದಲ್ಲಿ ಸರ್ಕಲ್ ಇನ್‌ಸ್ಪೆಕ್ಟರ್ ರವೀಂದ್ರ ಶಿರೂರ ತಂಡ ಕೊನೆಗೂ ಖೆಡ್ಡಾಕ್ಕೆ ಕೆಡವಿತ್ತು.



ಸಿಪಿಐ ರವೀಂದ್ರ



ಬಸವರಾಜ್ ಡಿಗ್ಗಿ



ಬಸವರಾಜ್ ರೂಗಿ

ಮುತಾಲಿಕನೇ ಮಾಡೆಲ್

ಅಸಲಿಗೆ ಮುತಾಲಿಕನ ಈ ಹನ್ನೊಂದು ಜನರ ಹಂತಕ ತಂಡ ಹಣಕ್ಕಾಗಿ ಏನನ್ನಾದರೂ ಮಾಡುವಂತಹದ್ದು. ಕರ್ನಾಟಕದ ಕರಾವಳಿ ಮತ್ತು ಉತ್ತರ ಕರ್ನಾಟಕದ ಬೆಳಗಾವಿ, ಬಾಗಲಕೋಟೆ, ಧಾರವಾಡ, ಬಿಜಾಪುರ ಭಾಗಗಳಲ್ಲಿ ಈ ತಂಡ ರಕ್ತದೋಕುಳಿಯಾಡಿದೆ. ಹಣ ನೀಡದಿದ್ದಕ್ಕೆ ಶ್ರೀಮಂತ ಮುಸ್ಲಿಮರನ್ನು ಹಾಡುಹಗಲೇ ಕತ್ತರಿಸಿ ಹಾಕಿದ ಇವರುಗಳು ಗಡಿ ಭಾಗದ ಸಾಂಗ್ಲಿ, ಕೊಲ್ಹಾಪುರ, ಸೊಲ್ಲಾಪುರಗಳಲ್ಲಿ ಅಪಹರಣ, ದರೋಡೆ ಪ್ರಕರಣಗಳಿಂದ ಲಕ್ಷಾಂತರ ಹಣವನ್ನು ಲೂಟಿ ಮಾಡಿ ಮುತಾಲಿಕನೊಂದಿಗೆ ಐಷಾರಾಮಿ ಜೀವನ ಸಾಗಿಸುತ್ತಿದ್ದರು.


ಆಗ ಅರೆಸ್ಟ್ ಆಗಿದ್ದ ಹನ್ನೊಂದು ಜನರಲ್ಲಿ ಟೀಂ ಲೀಡರ್ ಆಗಿದ್ದಾತ ನಾಗರಾಜ ಜಂಬಗಿ. ಈತ ಹಣಕಾಸಿನ ವಿಚಾರಕ್ಕೆ ಸಂಬಂಧಿಸಿದಂತೆ ತನ್ನ ಸಹಚರರಿಂದಲೇ ಹಲ್ಲೆಗೊಳಗಾಗಿ ಕಸ್ಟಡಿಯಲ್ಲಿರುವಾಗಲೇ ಸತ್ತು ಹೋದ. ಲಕ್ಷ್ಮಣ ಬಂಡಿವಡ್ಡರ ಕೂಡಾ ಪ್ರಾಣ ಬಿಟ್ಟಿದ್ದಾನೆ. ಉಳಿದ ಒಂಬತ್ತು ಜನ ಕಳೆದ ಎರಡು ವರ್ಷ ಏಳು ತಿಂಗಳಿಂದ ಜೈಲಿನಲ್ಲಿ ಮುದ್ದೆ ಮುರಿದಿದ್ದಾರೆ. ಅವರಲ್ಲಿ ಹನುಮಂತ ಸೈನಸಾಕುಳೆ, ರಮೇಶ ಹವಾರ, ಚನ್ನಬಸಪ್ಪ ಹುಣಸಗಿ ಧಾರವಾಡದ ಸಬ್‌ಜೈಲಿನಲ್ಲಿದ್ದಾರೆ. ಬಸವರಾಜ ರೂಗಿ, ಬಸವರಾಜ ಡಿಗ್ಗಿ ಮಂಜುನಾಥ ಬಿಂಜೂರಗಿ ಮತ್ತು ಲಿಂಗರಾಜ ಜಾಲಗಾರ ವಿಜಾಪುರದ ದರ್ಗಾ ಜೈಲಿನಿಂದ ಹೊರಬಂದು ಹೊಸ ಬದುಕಿನ ಕನಸು ಕಾಣುತ್ತಿದ್ದಾರೆ.

ಮುಖಂಡರುಗಳು ಭಾರೀ ತಂತ್ರಗಳನ್ನ ಹೆಣೆಯುತ್ತಿದ್ದಾರೆ. ಬೆಳಗಾವಿಯ ಕೆ.ಬಿ.ನಾಯಕ್, ಹುಬ್ಬಳ್ಳಿಯ ಗೌರಿಶಂಕರ, ನ್ಯಾಯವಾದಿ ಸಂಜಯ ಬಡಸ್ಕರ, ಬಾಗಲಕೋಟೆಯ ಸುಭಾಷ ತೇಲ್ಕರ್ ಮುಂತಾದವರು ಅನ್ಯಾಯಕ್ಕೆ ನೆರವಾಗಲು ಬೆವರು ಹರಿಸುತ್ತಿದ್ದಾರೆ. ಮುತಾಲಿಕನ ಭಂಟರು ಬಿಡುಗಡೆಯಾದ ಬಳಿಕ ಮನೆಯವರ ಮಾತಿಗೆ ಮರ್ಯಾದೆ ಕೊಡುತ್ತಾರೋ ಅಥವಾ ಪರಮಗುರು, ಕೇಸರಿ ಉಗ್ರ ಪ್ರಮೋದ ಮುತಾಲಿಕನ ಕಟ್ಟಾಜ್ಞೆಗೆ ಬಿದ್ದು ಮತ್ತೆ ಫೀಲ್ಡಿಗಿಳಿಯುತ್ತಾರೋ...? ಈ ವಿವೇಚನೆಯಲ್ಲೇ ಅವರ ಭವಿಷ್ಯ, ಸಮಾಜದ ನೆಮ್ಮದಿ ಅಡಗಿದೆ.

• ಹುರಳಿಕುಪ್ಪಿ ವಿನಯ

ಸಹಚರರೆ ಸಮಾಧಿ ತೋಡಿದರು

ಬಾಗಲಕೋಟೆಯ ಬಸ್‌ಸ್ಟ್ಯಾಂಡ್ ಏರಿಯಾದಲ್ಲಿ ಮಟ್ಕಾ-ಮಂತಕ್ಕೆ ಮಾಡುತ್ತಿದ್ದ ಜಂಬಗಿ ಅದೇನು ಸಾಧಿಸಲು ಈ ಗುಂಪಿಗೆ ಸೇರಿದನೋ ಏನೋ... ಒಟ್ಟನಲ್ಲಿ ತನ್ನ ಹಂತಕ ಸಹಚರರೊಂದಿಗೆ ಸೇರಿಕೊಂಡು ಒಬ್ಬರೊಬ್ಬರಿ ಐದು ಬರ್ಬರ ಕೊಲೆಗಳನ್ನು ಮಾಡಿ ಮುಗಿಸಿದ್ದ. ಅದರಲ್ಲಿ ಬಾಗಲಕೋಟೆಯ ಹಳೇ ನಿರೀಕ್ಷಣ ಮಂದಿರ ರಸ್ತೆಯ ಗರ್ಲ್ಸ್ ಹೈಸ್ಕೂಲ್ ಎದುರಿಗೆ ಮಾಡಿದ ರಾಜ ದಂಪತಿಗಳ ಹತ್ಯೆ, ನಂತರ ಹಾಡ್ಯಾಗ ಬಿಜಾಪುರ ಆಯಿಲ್ ಮಿಲ್‌ನ ಕ್ಯಾಷಿಯರ್‌ನನ್ನು ನಡುರಸ್ತೆಯಲ್ಲಿ ಅಟ್ಟಾಡಿಸಿ ಕತ್ತರಿಸಿ ಹಾಕಿ ಹಣ ದೋಚಿ ಪರಾರಿಯಾಗಿದ್ದು, ಹಿಂದೂ ಹುಡುಗಿಯನ್ನು ಪ್ರೀತಿಸಿದ್ದ ಎಂಬ ಕಾರಣಕ್ಕೆ ಗೋಕಾಕದ ರಿಯಾಜ್ ಎಂಬಾತನ ಗುಪ್ತಾಂಗವನ್ನು ಕತ್ತರಿಸಿ ಕೊಲೆಮಾಡಿದ್ದು ಜಂಬಗಿಯ ಅಮಾನುಷತೆಗೆ ಸ್ಪಷ್ಟ ಸಾಕ್ಷಿ. ಆದರೆ ಜೊತೆಯಲ್ಲಿರುವವರೇ ಮುಂದೊಂದು ದಿನ ತನಗೆ ಚೂರಿ ಹಾಕುತ್ತಾರೆಂದು ಜಂಬಗಿ ಅಪ್ಪಿತಪ್ಪಿಯೂ ಅಂದುಕೊಂಡಿರಲಿಕ್ಕಿಲ್ಲ.



ಈ ಕೊಲೆಗಳಿಗಾಗಿ ಪಡೆದಿದ್ದ ಸುಪಾರಿ ಹಾಗೂ ದೋಚಿದ್ದ ಅಷ್ಟೂ ಹಣ ತಂಡದ ನಾಗರಾಜ ಜಂಬಗಿ ಬಳಿ ಇತ್ತು. ಅದನ್ನು ಹೇಗಾದರೂ ಮಾಡಿ ದೋಚಿ ಪರಾರಿಯಾಗಲು ಸಂಚು ರೂಪಿಸಿದ ತಂಡದ ಇನ್ನೊಬ್ಬ ಸದಸ್ಯ ಲಕ್ಷ್ಮಣ ಬಂಡಿವಡ್ಡರನನ್ನು ಜಂಬಗಿ ಮುಲಾಜಿಲ್ಲದೆ ಮುಗಿಸಿಬಿಟ್ಟಿದ್ದ. ಬೆಳಗಾವಿಯಿಂದ ಹುಬ್ಬಳ್ಳಿ ಕೋರ್ಟಿಗೆ ವಿಚಾರಣೆಗೆ ಬರುತ್ತಿದ್ದ ಹದಿನೆಂಟು ಜನ ಸಿಮಿ ಕಾರ್ಯಕರ್ತರನ್ನು ಮುಗಿಸಲು ಬಾಂಬ್ ಸ್ಫೋಟದ ಸಂಚು ರೂಪಿಸಿ ವಿಫಲರಾದ ಜಂಬಗಿ ಮತ್ತವನ ಸಹಚರರು ಈ ಪ್ರಕರಣದಲ್ಲಿ ಪೊಲೀಸರ ಕೈಗೆ ಸಿಕ್ಕು ಜೈಲು ಸೇರಿದಾಗಿನಿಂದ ತಮ್ಮೊಳಗೇ ಜಗಳವಾಡಿಕೊಳ್ಳುವ ಹಂತ ತಲುಪಿದ್ದರು.


65 ಲಕ್ಷ ಹಣವನ್ನು ಸಹೋದರನ ಕೈಗೆ ಕೊಟ್ಟು ಗುಳುಂ ಮಾಡುವ ಜಂಬಗಿಯ ಇರಾದೆಯನ್ನು ಗಮನಿಸುತ್ತಿದ್ದ ಸಹಚರರು ಅದೊಂದು ದಿನ ಜೈಲಿನಲ್ಲಿ ತೋಟದ ಕೆಲಸಕ್ಕೆಂದು ಬಯಲಿಗೆ ಬಿಟ್ಟಾಗ ನಾಗರಾಜ ಜಂಬಗಿಯನ್ನು ಹಿಗ್ಗಾ-ಮುಗ್ಗಾ ಕೊಚ್ಚಿ ಹಾಕಿ ತಮ್ಮ ಸೇಡು ತೀರಿಸಿಕೊಂಡರು. ಆದರೆ ಜಂಬಗಿ ಜೊತೆಗೇ ಸಾಕಷ್ಟು ರಹಸ್ಯಗಳು ಸತ್ತುಹೋದವು. ಸೇಫ್ ಆದದ್ದು ಮುತಾಲಿಕ್!

ಮೂಡಿಗೆರೆ ಎಂಪಿಕೆ ಚಿತ್ತ ಜೆಡಿಎಸ್‌ನತ್ತ

ಮೂಡಿಗೆರೆಯ ಶಾಸಕ ಎಂ.ಪಿ.ಕುಮಾರಸ್ವಾಮಿ ಜೆಡಿಎಸ್‌ನತ್ತ ಮುಖ ಮಾಡಿದ್ದಾರೆ. ಹೀಗೊಂದು ಸುದ್ದಿ ಬಿಜೆಪಿ ಮತ್ತು ಜೆಡಿಎಸ್ ಪಾಳೆಯದಲ್ಲಿ ಸಂಚಲನ ಸೃಷ್ಟಿಸುತ್ತಿದೆ. ಕಳಂಕಿತ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಜೊತೆ ನಿಕಟ ಸಂಪರ್ಕವಿರುವ ಈ ಶಾಸಕನ ಮುಂದಿನ ರಾಜಕೀಯ ಭವಿಷ್ಯ ಇದರೊಂದಿಗೆ ಚರ್ಚೆಗೀಡಾಗುತ್ತಿದೆ. ಸಿದ್ಧವಾಗಿದ್ದ ದುಡ್ಡು ಬಾಚಿಕೊಂಡಿದ್ದನ್ನು ಬಿಟ್ಟರೆ ಕುಮಾರಸ್ವಾಮಿಯ ಕೆಲಸ ಅಷ್ಟಕ್ಕಷ್ಟೇ. ಒಂದೆಡೆ ಮೂಡಿಗೆರೆಯ ಅಷ್ಟೂ ಬಿಜೆಪಿ ಮುಖಂಡರು ಎಂಪಿಕೆಯ ವಿರುದ್ಧ ದಿಕ್ಕಿಗೆ ಮುಖ ಮಾಡಿದ್ದಾರೆ. ಮತ್ತೊಂದೆಡೆ ಶಾಸಕ ಸಿ.ಟಿ.ರವಿ, ಡಿ.ಎನ್.ಜೀವರಾಜ್ ಜೊತೆಗಿನ ಬಾಂಧವ್ಯವೂ ಸರಿಯಿಲ್ಲ. ಜಿಲ್ಲೆಯಲ್ಲಿನ ಕಮಲದ ಕರಾಮತ್ತುಗಳು ಮುಂಬರುವ ವಿಧಾನಸಭಾ ಚುನಾವಣೆಯ ವೇಳೆಗೆ ಕುಮಾರಸ್ವಾಮಿಯನ್ನು ತೆರೆಮರೆಗೆ ಸರಿಸುವ ಆಲೋಚನೆಯಲ್ಲಿರುವುದು ಮಾತ್ರ ಸ್ಪಷ್ಟವಾಗಿದೆ.

ಅಸಲಿ ಸಂಗತಿ ಎಂದರೆ ಮೂಡಿಗೆರೆ ವಿಧಾನಸಭಾ ಮೀಸಲು ಕ್ಷೇತ್ರದಲ್ಲಿ ಎಂ.ಪಿ.ಕುಮಾರಸ್ವಾಮಿ ಹೆಸರಿಗೆ ಮಾತ್ರ ಶಾಸಕ. ವಿವಿಧ ಕೆಲಸಗಳಿಗೆ, ಅಧಿಕಾರಿಗಳ ವರ್ಗಾವಣೆಗೆ, ನೌಕರರ ಸಸ್ಪೆಂಡ್‌ಗೆ, ಶಿಫಾರಸ್ಸು ಪತ್ರಗಳಿಗೆ ಹಾಕುವ ಸಹಿಗಳಲ್ಲಿ ಎಂಪಿಕೆ ಪಾತ್ರವಿದೆ. ಉಳಿದ ದರ್ಬಾರಿಗೆ ಚಿಡ್ಡಿ ಪಡೆಯ ಬೇರೆ ದಂಡನಾಯಕರಿದ್ದಾರೆ. ಹಿಂದೆ ಅಕ್ರಮ ಮರಳು ಗಣಿಗಾರಿಕೆ ನಡೆಯುತ್ತಿದ್ದಾಗ ಚಿಕ್ಕಮಗಳೂರಿನ ಕುಖ್ಯಾತ ಸುದರ್ಶನ್ ಪಾತ್ರವಿತ್ತಲ್ಲ, ಆತ ಚಿಕ್ಕಮಗಳೂರಿನಲ್ಲಿ ಕುಳಿತು ಮೂಡಿಗೆರೆಯ ಹೇಮಾವತಿ ನದಿಯನ್ನು ಬರಿದುಗೊಳಿಸುತ್ತಿದ್ದರೆ ಶಾಸಕ ಕುಮಾರಸ್ವಾಮಿ ಚಕಾರವೆತ್ತಲಿಕ್ಕೂ ಸಾಧ್ಯವಾಗುತ್ತಿರಲಿಲ್ಲ. ಇದೇ ಕಾರಣಕ್ಕಾಗಿ ಸಿ.ಟಿ.ರವಿ ಮತ್ತು ಕುಮಾರಸ್ವಾಮಿ ನಡುವೆ ರಂಪಾಟವೇರ್ಪಟ್ಟಿತ್ತು. ಮುಗುಳುವಳ್ಳಿ ವಿದ್ಯುತ್ ಸ್ಥಾವರ ನಿರ್ಮಾಣ ಸಂಬಂಧ ಕೆ.ಎಸ್.ಈಶ್ವರಪ್ಪ ಸಮ್ಮುಖದಲ್ಲಿ ಇವರಿಬ್ಬರೂ ಕೈಕೈ ಮಿಲಾಯಿಸಿದ್ದರು.

ಇನ್ನು ಬಿಜೆಪಿ ಜಿಲ್ಲಾಧ್ಯಕ್ಷ ಎಂ.ಕೆ.ಪ್ರಾಣೇಶ್‌ಗೂ ಶಾಸಕ ಕುಮಾರಸ್ವಾಮಿಗೂ ಸರಿ ಹೊಂದುತ್ತಿಲ್ಲ. ಸಂಸದ ಅನಂತಕುಮಾರ್‌ನೊಂದಿಗೆ ಪ್ರಾಣೇಶ್‌ಗಿರುವ ಸಖ್ಯ ಕುಮಾರಸ್ವಾಮಿಯನ್ನು ಕಾಲೆಳೆದು ಖೆಡ್ಡಾದೊಳಗೆ ಕೆಡವುವಂತೆ ಮಾಡಿದೆ. ಈ ಮನುಷ್ಯ ಮೀಸಲು ಕ್ಷೇತ್ರದಲ್ಲಿ ವರ್ಚಸ್ಸು ಗಿಟ್ಟಿಸಿಕೊಳ್ಳುತ್ತಿರುವುದು ಮತ್ತೊಂದು ಬಣಕ್ಕೆ ನುಂಗಲಾರದ ತುತ್ತಾಗುತ್ತಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಬಿ.ಫಾರಂ ಕುಮಾರಸ್ವಾಮಿಗೆ ಸಿಗದಿರಲು ವರಿಷ್ಠರೆದುರು ಒತ್ತಡ ತಂದವರಿದ್ದಾರೆ. ಯಡ್ಡಿಯೊಂದಿಗಿನ ನಿಕಟಸಂಪರ್ಕ ಕುಮಾರಸ್ವಾಮಿಯನ್ನು ಅವತ್ತಿನ ಮಟ್ಟಿಗೆ ಬಚಾವುಗೊಳಿಸಿತ್ತು. ಆದರೂ ಸತತ ಎರಡು ಸಲ ಶಾಸಕನಾಗಿರುವ ಕುಮಾರಸ್ವಾಮಿಗೆ ಮೂಗುದಾರ ಹಾಕುವ ತಯಾರಿ ಬಿರುಸಿನಿಂದ ಸಾಗುತ್ತಿದ್ದು ಈ ಬಾರಿ ಆತನ ರಕ್ಷಣೆಗೆ ಯಡ್ಡಿ ಇಲ್ಲ.



ಕುಮಾರಸ್ವಾಮಿ

ಇನ್ನೊಂದೆಡೆ ಕಳಂಕಿತ ಯಡ್ಡಿ ತೆರೆಮರೆಗೆ ಸರಿದಂತೆ

ಸಿಸಿಯ ಈಗಿನ ಆಡಳಿತ ಮಂಡಳಿಯ ಬಹುತೇಕರಿಗೆ ಸಹಕಾರಿ ತತ್ವದ ಗಂಧಗಾಳಿಯೇ ಇಲ್ಲ. ಸಹಕಾರಿ ಜ್ಞಾನವಿರುವ ಎನ್.ಪಿ.ಗಾಂವ್ಕರ್‌ನಂಥವರು ಗುಂಪಿನಲ್ಲಿ ಗೋವಿಂದ ಆಗಿದ್ದಾರೆ. ಶಿರಸಿಯ ಪ್ರತಿಷ್ಠಿತ ಅಡಿಕೆಬೆಳೆಗಾರರ ಟಿಎಸ್‌ಎಸ್‌ನಲ್ಲಿ ಬರೋಬ್ಬರಿ ನೂರಾಒಂದು ಕೋಟಿ ಅವ್ಯವಹಾರ ಮಾಡಿ ಗೋಲ್‌ಮಾಲ್‌ನಲ್ಲಿ ಪಳಗಿರುವ ಶಾಂತಾರಾಮ ಹೆಗಡೆ ಎಂಬ ಹ್ಯಗರಮಾಣಿ ಈ ಕೆಡಿಸಿಸಿ ಬ್ಯಾಂಕಿನ ಅಧ್ಯಕ್ಷನಾಗಿ ಅವಾಂತರ ಮಾಡುತ್ತಿದ್ದಾನೆ. ಕೆಡಿಸಿಸಿ ಸಂಪೂರ್ಣ ಮುಳುಗಿತೋ? ತೇಲಿತೋ? ಕೆಡಿಸಿಸಿ ಗ್ರಾಹಕರು ಎಚ್ಚೆತ್ತು ಬೀದಿಗಿಳಿದು ಚೋರ ಆಡಳಿತಗಾರರ ಮೂತಿಗೆ ಇಕ್ಕದೇ ಬೇರೆ ಗತಿಯಿಲ್ಲ. ಹಾಗಂತ ಕೆಡಿಸಿಸಿ ಕರ್ಮಕಾಂಡ ಬಲ್ಲ ಒಳಗಿನವರೇ ಹೊರಗೆ ಪಿಸುಗುಡುತ್ತಿದ್ದಾರೆ.

ಉತ್ತರ ಕನ್ನಡ ಬಕಾಸುರರ ಬಾಯಲ್ಲಿ ಕೆಡಿಸಿಸಿ ಬ್ಯಾಂಕ್!

ಉತ್ತರ ಕನ್ನಡ ಜಿಲ್ಲಾ ಮಧ್ಯವರ್ತಿ ಸಹಕಾರಿ ಬ್ಯಾಂಕ್ .ಸಿಸಿ) ಅಧಃಪತನದ ಅಂಚಿಗೆ ಬಂದು ನಿಂತಿದೆ! ಒಂದು ದಲ್ಲಿ ಈ ಕೆಡಿಸಿಸಿ ಬ್ಯಾಂಕಿನದ್ದು ಸಹಕಾರಿ ರಂಗದಲ್ಲಿ ಷ್ಠ ಹೆಸರು. ಇವತ್ತು ರಣಹದ್ದುಗಳ ಅಡ್ಡೆಯೆಂದೇ ಸಿಸಿ ಕುಖ್ಯಾತಿಯಾಗಿ ಹೋಗಿದೆ! ಬರೋಬ್ಬರಿ 91 ಇತಿಹಾಸದ ಕೆಡಿಸಿಸಿಯನ್ನು ಸಹಕಾರಿ ತಪಸ್ವಿಗಳಂತಿದ್ದ ಥ ಹಿಂದಿನ ಆಡಳಿತಗಾರರು ಸದೃಢವಾಗಿ ಕಟ್ಟಿದ್ದರು. ಕ ಸಹಕಾರ ಕೊಟ್ಟು ದುರ್ಬಲರಿಗೆ ನೆರವಾಗುವ ಮೋದ್ದೇಶ ಅವರಲ್ಲಿತ್ತು. ಆದರೆ ಯಾವಾಗ ತಾಗುಂಡಿ ಪುಢಾರಿಗಳಾದ ಶಾಂತಾರಾಮ ಡೆ ಮತ್ತು ಶ್ರೀಕಾಂತ ಘೋಟನೇಕರ್‌ನಂಥ ಕೀಯ ಲಾಲಸೆಯ ಲುಚ್ಚರ ಕೈಗೆ ಕೆಡಿಸಿಸಿ ಯಿತ್ತೋ ಆಗದರ ಅವಸಾನವೂ ಆರಂಭ ಹೋಯ್ತು...


ಕೆಡಿಸಿಸಿಯ ಈಗಿನ ಆಡಳಿತ ಮಂಡಳಿಯ ಹುತೇಕರಿಗೆ ಸಹಕಾರಿ ತತ್ವದ ಗಂಧಗಾಳಿಯೇ ಸಹಕಾರಿ ಜ್ಞಾನವಿರುವ ಎನ್.ಪಿ.ಗಾಂವ್ಕರ್ ವರು ಗುಂಪಿನಲ್ಲಿ ಗೋವಿಂದ ಆಗಿದ್ದಾರೆ. ಸಿಯ ಪ್ರತಿಷ್ಠಿತ ಅಡಿಕೆಬೆಳೆಗಾರರ ಸ್‌ಎಸ್‌ನಲ್ಲಿ ಬರೋಬ್ಬರಿ ನೂರಾಒಂದು ಟಿ ಅವ್ಯವಹಾರ ಮಾಡಿ ಗೋಲ್‌ಮಾಲ್ ಪಳಗಿರುವ ಶಾಂತಾರಾಮ ಹೆಗಡೆ ಎಂಬ ಮಾಣಿ ಈ ಕೆಡಿಸಿಸಿ ಬ್ಯಾಂಕಿನ ಅಧ್ಯಕ್ಷನಾಗಿ ಂತರ ಮಾಡುತ್ತಿದ್ದಾನೆ. ಜುಜುಬಿ ಗ್ರಾಮ ಚಾಯತಿ ಮೆಂಬರಿಕೆಗೂ ಅಯೋಗ್ಯನಾದ ಮುಕು ಕಳ್ಳ' ಶಿವಾನಂದ ಹೆಗಡೆಯಂಥವರು ಹರಿಸಿ ಕೆಡಿಸಿಸಿ ಬ್ಯಾಂಕ್ ಡೈರೆಕ್ಟರಿಕೆ ದಿಸಿದ್ದಾರೆ. ಇಂಥ ಸ್ವಯಂಘೋಷಿತ ಸಹಕಾರಿ ಣರದೇ ಹಾವಳಿ ಕೆಡಿಸಿಸಿ ಬ್ಯಾಂಕಲ್ಲಿ.

ಉತ್ತರ ಕನ್ನಡದ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿ ಎಂದರೆ ಸಹಕಾರಿ ಸಂಸ್ಥೆ ಸುವ ಕ್ಯಾಲಿಬರ್ ಇಲ್ಲದ ವಿಲಾಸಿ ತಲುಬು-ಸ್ವಾಹಾ ಕಪಿ-ಒಣ ರುಬಾಬಿನ ರಾಜಕೀಯದವರ ಕೂಟದಂತಾ! ಇಂಥ ಜೋಭದ್ರಗೇಡಿಗಳ ಯಜಮಾನಿಕೆಗೆ ಸಿಕ್ಕಿರುವ ಬ್ಯಾಂಕ್ ದಿವಾಳಿಯಾಗದೆ ಇನ್ನೇನಾದೀತು? ಈ ಅಡ್ನಾಡಿ ಳಿತಗಾರರು ಕೆಡಿಸಿಸಿ ಮೇಲೆ ಅವಲಂಬಿಸಿರುವ ಗ್ರಾಮಡಿನ ನೂರಾರು ಸಹಕಾರಿ ಸೊಸೈಟಿಗಳ, ಸಾವಿರಾರು ಸುದಾರ-ಠೇವಣಿದಾರ ಮತ್ತು ನೌಕರರ ಭವಿಷ್ಯ ಕೊಟ್ಟು ಸಂಸ್ಥೆಯನ್ನು ಮೋಜಿನ ಕ್ಲಬ್ ಮಾಡಿಕೊಂಡು ದ್ದಾರೆ. ಕೆಲವರಂತೂ ಕೆಡಿಸಿಸಿ ಖಜಾನೆಯನ್ನೇ ತಮ್ಮ ಸಗಿ ಬಿಸಿನೆಸ್‌ಗೆ ಬಂಡವಾಳ ಮಾಡಿಕೊಂಡು ಯ್ದಾಗಿದ್ದಾರೆ.


ಸ್ವಾರ್ಥ-ದುರಾಡಳಿತ-ಮೋಜು-ಮಸ್ತಿಯ ದುರಾಡಳಿ ಕೆಡಿಸಿಸಿ ಬ್ಯಾಂಕ್ ಗ್ರಾಹಕರು ಕಂಗಾಲಾಗಿಹೋಗಿದ್ದಾರೆ. ಳಿತಗಾರರ ದಗಾ-ದಗಲ್ಬಾಜಿ ವ್ಯವಹಾರ ಸಹಕಾರಿ ಖೆ ನಡೆಸಿದ 64ನೇ ವಿಧಿ ವಿಚಾರಣೆಯಲ್ಲಿ ಶಯವಾಗಿ ಸಾಬೀತಾಗಿದೆ! ತಮ್ಮ ಪಾಪ ಪಾತಕ ರಬೀಳುವ ಭಯದಿಂದ ಆಡಳಿತ ಮಂಡಳಿ ಕಳ್ಳರು ಸಹಕಾರಿ ಕಾನೂನಿನ ವಿಧಿ 68ರ ವಿಚಾರಣೆ ನಡೆಯದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದುಕೊಂಡಿದ್ದಾರೆ. ಹಾಗೊಮ್ಮೆ ಸಿಕೆಸ್ಟಿ ಎಟ್ ಎನ್‌ಕ್ವಯರಿ ಏನಾದರೂ ನಡೆದರೆ ಬ್ಯಾಂಕ್ ಸೂಪರ್ ಸೀಡ್ ಆಗಿ ತಮ್ಮ ಪುಗಸಟ್ಟೆ ವಿಲಾಸಕ್ಕೆ ಧಕ್ಕೆ ಬರುತ್ತದೆಂಬ ದೂ(ದು)ರಾಲೋಚನೆ ಈ ಕರ್ಮಗೇಡಿ ಕೊಳಕರಿಗೆ!

ಕೋಟ್ಯಂತರ ರೂಪಾಯಿಗಳ ಕೆಡಿಸಿಸಿಗೆ ಕೇಡುಗಾಲ ಶುರವಾಗಿದ್ದೇ ದೇಶಪಾಂಡೆಯ ಖಾಸಾ ಶಿಷ್ಯ ಕಂ ಹಾಲಿ ವಿಧಾನಪರಿಷತ್ ಸದಸ್ಯ ಶ್ರೀಕಾಂತ ಘೋಟನೇಕರ್‌ನ ಕಾಲಾವಧಿಯಲ್ಲಿ, ಆ ನಂತರ ಕೆಡಿಸಿಸಿ ಅಧ್ಯಕ್ಷ ಪೀಠಕ್ಕೆ ವಕ್ಕರಿಸಿದ ಸೋಗಲಾಡಿ ಶಾಂತಾರಾಂ ಹೆಗಡೆ ಪರ್ವದಲ್ಲಿ ಈ ಪತನ ಹಾಗೇ ಮುಂದುವರೆದಿದೆ. ಘೋಟನೇಕರ್ ಬೇಕಾಬಿಟ್ಟಿಯಾಗಿ ಕೋಟ್ಯಂತರ ರೂ. ಸಾಲ ಕೊಟ್ಟು ಲಕ್ಷಾಂತರ ಕಮಿಷನ್ ಪಡೆದರೆ, ಶಾಂತಾರಾಂ ಹೆಗಡೆ ಟಿಎಸ್‌ಎಸ್‌ನಲ್ಲಿ ಜಾರಿಗೆ ತಂದಿರುವ ಗೋಲ್‌ಮಾಲ್ ಪಾರುಪತ್ಯ ಇಲ್ಲೂ ಇಂಪ್ಲಿಮೆಂಟ್ ಮಾಡಿದ್ದಾನೆ. ಯಾವ ಸಂಸ್ಥೆ-ಬ್ಯಾಂಕ್ ದಿವಾಳಿಯಾದರೇನು? ತಾನೊಮ್ಮೆ ಎಮ್ಮೆಲ್ಲೆಯಾಗಬೇಕು; ಸಂಸ್ಥೆಯ ದುಡ್ಡಲ್ಲಿ ದೊಡ್ಡ ಮನುಷ್ಯನಾಗಿ ಮೆರೆಯಬೇಕೆಂಬ ಎರಡಂಶದ ಕಾರ್ಯಕ್ರಮ ಶಾಂತಣ್ಣನದು!!

ರೈತರಿಗೆ-ತೋಟಿಗರಿಗೆ ಹತ್ತಿಪ್ಪತ್ತು ಸಾವಿರ ಸಾಲ ಶೇ.16 ಬಡ್ಡಿ ದರದಲ್ಲಿ ಕೊಡುವಾಗಲೂ ಸತಾಯಿಸುವ ಕೆಡಿಸಿಸಿ ಪ್ರಭೃತಿಗಳು ತಮ್ಮ ಡೈರೆಕ್ಟರ್ ದೊರೆಗಳಿಗೆ ಬರೀ ಶೇ.10ರ ಬಡ್ಡಿಯಲ್ಲಿ ಕಣ್ಮುಚ್ಚಿ ಕೋಟಿಕೋಟಿ ಸಾಲ ಕೊಟ್ಟಿದ್ದಾರೆ. ಅವ್ಯವಹಾರಿ ಆಡಳಿತಗಾರರ ಹಿಡನ್ ಬೈಲಾನೇ ಹಾಗಿದೆ! ಕೆಡಿಸಿಸಿ ದಿವಾಳಿ ಎಬ್ಬಿಸಿರುವ ಕೆಲವು ಸ್ಯಾಂಪಲ್‌ಗಳಂತೂ ಕುತೂಹಲಕರವಾಗಿದೆ. ದಾಂಡೇಲಿಯ ಪ್ಯಾರಾ ಮ್ಯಾಂಗನೀಸ್ ಕಂಪೆನಿಗೆ ಕೋಟ್ಯಂತರ ರೂ.ಸಾಲ ಕೊಡಲಾಗಿತ್ತು, ಆದರೆ ಕಂಪೆನಿ ಖಳರು ಸಾಲ ತುಂಬಲೇ ಇಲ್ಲ, ಆಗ ಘೋಟನೇಕರ್, ಶಾಂತಾರಾಮ ಹೆಗಡೆ, ವಗೈರೆ ಡೈರೆಕ್ಟರ್‌ಗಳೆಲ್ಲ ಸೇರಿ ಆ ಕಂಪೆನಿಯ ಸಾಲಮನ್ನಾಕ್ಕೆ ಸ್ಕೆಚ್ ಹಾಕಿದ್ದರು. ಈ ಮನ್ನಾ ಮಸಲತ್ತಲ್ಲಿ ಬ್ಯಾಂಕಿಗೆ ಹಾನಿ ಮಾಡಿ ಘೋಟನೇಕರ್ ಪಟಾಲಂ ಲಾಭ ಮಾಡಿಕೊಂಡಿತೆಂಬುದು ಕೆಡಿಸಿಸಿ ಕಂಬ-ಕಂಬಗಳೂ ಪಿಸುಗುಡುತ್ತವೆ!


ಹೆಗಡೆ

ಹೊನ್ನಾವರದ 'ಶಶಾಂಕ' ಎಂಬ ಸಿಗಡಿ ಉದ್ಯಮಕ್ಕೆ ಕೋಟಿಕೋಟಿ ಸಾಲ ಕೆಡಿಸಿಸಿ ಕೊಟ್ಟಿತ್ತು. ಈ ಸಿಗಡಿ ರಫ್ತು ಕಂಪೆನಿ ಕಿಂಗ್ ಆರ್.ಎನ್.ಶೆಟ್ಟಿ ಎಂಬ ದಗಲ್ಬಾಜಿ ಉದ್ಯಮಿ. ಈಗ ಯಡ್ಡಿಗೆ ಉರುಳಾಗಿರುವ ಭದ್ರಾ ಮೇಲ್ದಂಡೆ ಯೋಜನೆಯ ಕುಖ್ಯಾತ ಕಂಟ್ರಾಕ್ಟರ್ ಈ ಶೆಟ್ಟಿ. ಇಂಥ ಸರ್ಕಾರ-ಸಂಸ್ಥೆಗೆಲ್ಲ ದೋಖಾ ಹಾಕಿ ಪ್ರತಿಷ್ಠಿತನಂತೆ ಮೆರೆವ ಕಲೆ ಶೆಟ್ಟಿಗೆ ಕರಗತವಾಗಿ ಹೋಗಿದೆ! 'ಶಶಾಂಕ'ಕ್ಕೆ ಪಡೆದ ಸಾಲ ಶೆಟ್ಟಿ ತುಂಬಲೇ ಇಲ್ಲ, ಅಡವಿಟ್ಟ ಮಿಷನರಿಗಳನ್ನು ಕೆಡಿಸಿಸಿ ಸೀಜ್ ಮಾಡಿತು. ಕೇಸು ನ್ಯಾಯಾಲಯದ ಕಟ್ಟೆ ಏರಿತು. ಕೋಟ್ಯಂತರ ರೂ. ಮಿಷನರಿ ಯಾರಿಗೂ ಇಲ್ಲದೆ ತುಕ್ಕುಹಿಡಿದು ಸಮುದ್ರ ತಟದ ಹೊಯಿಗೆಯಲ್ಲಿ ಕರಗುತ್ತಿದೆ. ಈ ಪಕಂವಾಟನಲ್ಲಿ ನಿವ್ವಳ ಹಾನಿಯಾಗಿದ್ದು ಮಾತ್ರ ಕೆಡಿಸಿಸಿಗೆ. ಆ ಸಾಲ ತುಂಬಿಸಿಕೊಳ್ಳಲಾಗದ ಹೇತ್ಲಾಂಡಿಗಳು ಆಡಳಿತಗಾರರು. ಸಾಲ ಕೊಡುವಾಗಲೂ ಸರಿಯಾದ ಭದ್ರತೆ-ಜಾಮೀನು ಕೆಡಿಸಿಸಿ ಪಡೆದಿರಲಿಲ್ಲ ಎಂಬುದೀಗ ಟಾಕ್ ಆಫ್ ದಿ ಡಿಸ್ಟ್ರಿಕ್ಟ್ ಸಮಾಚಾರ.


ಘೋಟನೇಕರ್

ಹಾಗೆಯೇ ಆಸಾಮಿ ಸಾಲದ ಲಫಡಾ! ಆಸಾಮಿ ಸಾಲವೆಂದರೆ ರೈತರ ಕೃಷಿ ಚಟುವಟಿಕೆ-ಕೃಷಿ ಉಪಕರಣ ಖರೀದಿಗೆ ಹಳ್ಳಿಗಾಡಿನ ಸೊಸೈಟಿಗಳು ಕೊಡುವ ಕೈಗಡದಂಥ ಲೋನ್. ಸೊಸೈಟಿಗಳು ಈ ಆಸಾಮಿ ಸಾಲವನ್ನು ಕಾರು-ಬೈಕು-ಫ್ರಿಜ್‌ನಂಥ ಐಷಾರಾಮಿ ಸಾಧನಗಳನ್ನು ಕೊಳ್ಳಲು ನೀಡಿವೆ. ಹೀಗೆ ಕೊಟ್ಟ ಸಾಲ ಬರೋಬ್ಬರಿ 172 ಕೋಟಿ. ಇದೆಲ್ಲ ಕೆಡಿಸಿಸಿಯ ಕೇಂದ್ರ ಕಚೇರಿ ಇರುವ ಶಿರಸಿಯ ಸುತ್ತಲಿನ ಘಟ್ಟದ ಮೇಲಿನ ಏರಿಯಾದಲ್ಲೇ ಹೆಚ್ಚಿದೆ. ಈ ಸಾಲ ತುಂಬಿಸಿಕೊಳ್ಳಲಾಗದೆ ಸೊಸೈಟಿಗಳು ಮಕಾಡೆ ಮಲಗಿಬಿದ್ದಿವೆ. ಈ ಆಸಾಮಿ ಸಾಲ ಔಟ್ ಸ್ಟ್ಯಾಂಡಿಂಗ್ ಹಿಂದೆ ಶಾಂತಾರಾಂ ಹೆಗಡೆಯಂಥ ಹರಾಮಿ ಹ್ಯೆಗರ ಮುಖಂಡರ ರಾಜಕಾರಣ, ಸೋಂದಾ ಸ್ವರ್ಣವಲ್ಲಿ ಸ್ವಾಮಿಗಳ ಧರ್ಮಕಾರಣ ಅಡಗಿದೆ. ಈ ಸಾಲ ವಸೂಲಿ ಮಾಡಲಾಗದಿರುವುದು ಕೆಡಿಸಿಸಿ ಬ್ಯಾಂಕ್ ಮೇಲೆ ಅಡ್ಡಪರಿಣಾಮ ಬೀರಿದೆ. ಕೆಡಿಸಿಸಿ ಆರ್ಥಿಕ ಸ್ಥಿತಿಗೆ ದೊಡ್ಡ ಹೊಡೆತ ಕೊಟ್ಟಿದೆ. ಇದಕ್ಕೆಲ್ಲ ಘೋಟನೇಕರ್-ಶಾಂತಾರಾಮ ಹೆಗಡೆ ಟೀಮಿನ ದುರಾಡಳಿತವೇ ಕಾರಣ.

ಬ್ಯಾಂಕಲ್ಲಿ ಇಷ್ಟೆಲ್ಲ ಅವಾಂತರ-ಆರ್ಥಿಕ ಅಧೋಗತಿ ಹಗರಣಗಳು ನಡೆದರೂ ಆಡಳಿತ ಮಂಡಳಿ ಮಾತ್ರ ತಲೆಯೇ ಕೆಡಿಸಿಕೊಂಡಿಲ್ಲ; ಕೆಡಿಸಿಸಿಯ ಆರ್ಥಿಕ ಸುಧಾರಣೆಗೆಂದೂ ಯೋಚಿಸಿಲ್ಲ, ಬದಲಿಗೆ ಅಳಿದುಳಿದ ಫಂಡ್ ಹೇಗೆ ತಮ್ಮ ಮೋಜು-ಮಸ್ತಿಗೆ ಬಳಸಿಕೊಂಡು ಚಟ ತೀರಿಸಿಕೊಳ್ಳಬಹುದೆಂಬ ಚಿಂತನ-ಮಂಥನಗಳೇ ಕೆಡಿಸಿಸಿ ಆಡಳಿತಗಾರರಲ್ಲಿ ಆಗಾಗ ನಡೆಯುತ್ತಿರುತ್ತದೆ. ಬ್ಯಾಂಕಿನ ಹಣದಲ್ಲಿ ವಿದೇಶಕ್ಕೆ ಜಾಲಿ ಟ್ರಿಪ್ ಹೋಗುವ ಹವ್ಯಾಸ ಕೆಡಿಸಿಸಿಯ ನಾಲಾಯಕ್ ನಿರ್ದೇಶಕರಿಗೆ ಅಂಟಿಕೊಂಡಿದೆ. ಕಳೆದ ಅವಧಿಯಲ್ಲಿ ಡೈರೆಕ್ಟರ್‌ಗಳು ಯೂರೋಪ್‌ಗೆ ಹೋಗಿದ್ದರು. ಅದೆಂಥದೋ ಸುಡುಗಾಡು ಅಧ್ಯಯನವಂತೆ. ಈ ಹೆಡ್ಡ ನಿರ್ದೇಶಕರಿಗೆ ಸರಿಯಾಗಿ ಶಿರಸಿ-ಕಾರವಾರದಲ್ಲೇ ಓಡಾಡಿ ಒಂದು ರೂ. ಠೇವಣಿ ಸಂಗ್ರಹಿಸುವ ಅಥವಾ ಬ್ಯಾಂಕ್ ಬೆಳೆಸುವ ಯೋಗ್ಯತೆ ಇಲ್ಲ, ಅಂಥದ್ದರಲ್ಲಿ ವಿದೇಶಕ್ಕೆ ಹೋಗುವುದು ದೊಡ್ಡ ದೋಖಾಬಾಜಿಯಲ್ಲದೇ ಮತ್ತೇನೂ ಅಲ್ಲ!

ಈ ಬಾರಿ ಅಂದರೆ ಕಳೆದ ವಾರ ಕೆಡಿಸಿಸಿಯ ಸೋಗಲಾಡಿ ನಿರ್ದೇಶಕರು ಚೀನಾ, ಹಾಂಕಾಂಗ್, ಮಕಾವೋ ಮತ್ತು ಬೀಜಿಂಗ್‌ಗೆ ಮಜಾ ಟೂರ್ ಹೋಗಿದ್ದರು. ಬ್ಯಾಂಕಿನ ಹಣ ಹಾಳು ಮಾಡಿ ಬಿಟ್ಟಿ 'ಸುಖ' ಅನುಭವಿಸುವ ಈ ವಿದೇಶ ಯಾತ್ರೆಗೆ ಕೆಡಿಸಿಸಿ ಬ್ಯಾಂಕಿನ ಖುರ್ನಾಸ್ ಆಡಳಿತಗಾರರು ಕೊಟ್ಟ ಹೆಸರು 'ಸಹಕಾರಿ ಮತ್ತು ಕೃಷಿ ಅಧ್ಯಯನ ಪ್ರವಾಸ' ಎಂದಾಗಿತ್ತು. ಈ ಖಾಲಿ ಬುರುಡೆಯ ಬೋಗಸ್ ಡೈರೆಕ್ಟರ್‌ಗಳು ಮುಳುಗುತ್ತಿರುವ ಕೆಡಿಸಿಸಿ ಬ್ಯಾಂಕಿನ ಉದ್ಧಾರಕ್ಕೆ ವಿದೇಶದಿಂದ ಅದೇನು ಜಾದೂ ಕಲಿತು ಬಂದಿದ್ದಾರೋ? ಅವರಿಗೇ ಗೊತ್ತು. ಇದನ್ನು ಸಹಕಾರಿ ಇಲಾಖೆ ಆಡಳಿತಗಾರರಿಗೆ ಕೇಳಬೇಕಾಗಿದೆ. ಬೋಗಸ್ ಟೂರ್ ಮಾಡಿದ ಮನೆಮುರುಕರಿಂದ ಆ ಹಣ ವಸೂಲಿ ಮಾಡಿ ಬ್ಯಾಂಕಿಗೆ ತುಂಬಿಸುವ ಹೊಣೆ ಸಹಕಾರಿ ಇಲಾಖೆಯ ಅಧಿಕಾರಿಗಳ ಮೇಲಿದೆ.

ಬ್ಯಾಂಕ್ ಲೂಟಿ ಮಾಡುವ ಈ ವಿದೇಶಿ ಪ್ರವಾಸ ಪ್ರಹಸನ ನಿಷ್ಠೂರ ತನಿಖೆಗೆ ಒಳಪಡಿಸಬೇಕಿದೆ. ಆ ತಾಕತ್ತು ಕೆಡಿಸಿಸಿ ಅಧ್ಯಕ್ಷ ಶಾಂತಾರಾಮ ಹೆಗ್ಡೇರ 'ರಾತ್ರಿ ಮಿತ್ರ' ಮಂತ್ರಿ ಕಾಗೇರಿ ಮಾಣಿಗಂತೂ ಇಲ್ಲ ಬಿಡಿ. ಕಾಂಗ್ರೆಸ್‌ನ ದೇಶಪಾಂಡೆಯ ಆಪ್ತ ಆದ್ಮಿ ಶಾಂತಣ್ಣ-ಘೋಟನೇಕರ್, ಗಾಂವ್ಕರ್... ಇತ್ಯಾದಿ ನಿರ್ದೇಶಕ ಶಿಖಾಮಣಿಗಳು. ಇದು ಕಾಂಗ್ರೆಸ್ ಆಡಳಿತ. ಬಿಜೆಪಿ ಸಹಕಾರ ಹೀಗಾಗಿ ಲೋಕಾಯುಕ್ತವೇ ಕೆಡಿಸಿಸಿಯ ನಿರ್ದೇಶಕ ಮಂಡಳಿಯ ಅವಾಂತರ ಅವ್ಯವಹಾರ- ಫಾರಿನ್ ಟೂರ್ ಬಗ್ಗೆಲ್ಲ ಸ್ವಯಂಪ್ರೇರಣೆಯಿಂದ ತನಿಖೆ ಮಾಡಬೇಕಿದೆ. ಏಕೆಂದರೆ ಸಹಕಾರಿ ಇಲಾಖೆಯ ಅಧಿಕಾರಿಗಳೂ ಕೆಡಿಸಿಸಿ ಕಳ್ಳರೊಂದಿಗೆ ಶಾಮೀಲಾಗಿದ್ದಾರೆ.

ಕೆಡಿಸಿಸಿ ಸಂಪೂರ್ಣ ಮುಳುಗಿತೋ? ತೇಲಿತೋ? ಕೆಡಿಸಿಸಿ ಗ್ರಾಹಕರು ಎಚ್ಚೆತ್ತು ಬೀದಿಗಿಳಿದು ಚೋರ ಆಡಳಿತಗಾರರ ಮೂತಿಗೆ ಇಕ್ಕದೇ ಬೇರೆ ಗತಿಯಿಲ್ಲ. ಹಾಗಂತ ಕೆಡಿಸಿಸಿ ಕರ್ಮಕಾಂಡ ಬಲ್ಲ ಒಳಗಿನವರೇ ಹೊರಗೆ ಪಿಸುಗುಡುತ್ತಿದ್ದಾರೆ.

• ನಹುಷ

ಪಿ.ಕುಮಾರಸ್ವಾಮಿ ಬಿಜೆಪಿಯಲ್ಲಿ ಥವಾಗಲಿರುವುದು ಸತ್ಯ. ಸಿ.ಟಿ.ರವಿ ಮತ್ತು ವರಾಜ್ ಮಂತ್ರಿ ಪದವಿಗಾಗಿ ಲಾಬಿ ನಡೆಸುತ್ತಿದ್ದರೆ ಪಿ.ಕುಮಾರಸ್ವಾಮಿಗೆ ಮನದಿಂಗಿತ ರಹಾಕಲೂ ದಿಕ್ಕಿಲ್ಲದಂತಾಗಿದೆ. ಲಿಗ ಹಾಗೂ ಲಿಂಗಾಯತ ಬಲ್ಯ ಹೊಂದಿರುವ ಮಗಳೂರು ಜಿಲ್ಲೆಯಲ್ಲಿ ಪಿಯಂತಹ ಪಕ್ಷದೊಳಗೆ ದಲಿತ ಸಕನಿಗೆ ಸ್ಥಾನಮಾನ ಸಿಗುವುದು ನ ಮಾತೇ ಸರಿ. ಈ ಲೆಯಲ್ಲಿ ಕುಮಾರಸ್ವಾಮಿ ಪಿಯಿಂದ ನಿರ್ಗಮಿಸುವ ಣೆಯಲ್ಲಿದ್ದಾರೆ. ಅಂದುಕೊಂಡಂತೆ ದರೆ ಮುಂಬರುವ ನಾವಣೆಯಲ್ಲಿ ಜೆಡಿಎಸ್ ಪಕ್ಷದ ಉಮೇದುವಾರಿಕೆ ಪಿ.ಕುಮಾರಸ್ವಾಮಿ ಮುಡಿಗೇರಲಿದೆ.

ಇದಕ್ಕೊಂದು ಪೂರಕ ಉದಾಹರಣೆ ಇಲ್ಲಿದೆ ನೋಡಿ. ದೆ ಸಾಗರಬಾವಿಯಲ್ಲಿ ರಾಮಸ್ವಾಮಿಯೆಂಬ ಉದ್ಯಮಿಯೋರ್ವನಿಗೆ ಜಮೀನು ಡಿನೋಟಿಫೈಗಾಗಿ ಶಾಸಕ ಎಂ.ಪಿ.ಕುಮಾರಸ್ವಾಮಿ ಶಿಫಾರಸ್ಸು ಮಾಡಿರುವ ಪತ್ರ ಜೆಡಿಎಸ್ಸಿಗರ ಕೈಗೆ ಸಿಕ್ಕಿತ್ತು. ಇದು ಬಹಿರಂಗವಾಗದಂತೆ ತಡೆಯಲು ಈತ ಮಾಡದ ಕಸರತ್ತುಗಳಿಲ್ಲ, ಅಂತಿಮವಾಗಿ ಜೆಡಿಎಸ್ ವರಿಷ್ಠ ಎಚ್‌ಡಿಕೆ ಕಾಲಿಗೆ ಅಡ್ಡಡ್ಡ ಬಿದ್ದು ಪಾರಾಗಿದ್ದ. ತದನಂತರ ಯಡಿಯೂರಪ್ಪ ವಿರುದ್ಧ ಬಂಡೆದ್ದಿದ್ದ ರೇಣುಕಾಚಾರ್ಯನಿಗೆ ಗಾಳ ಹಾಕಿ ಎಚ್‌ಡಿಕೆ ಕಸರತ್ತು ನಡೆಸಿದ್ದರಲ್ಲ, ಆ ಸಂದರ್ಭದಲ್ಲಿ ಎಂ.ಪಿ.ಕುಮಾರಸ್ವಾಮಿಯನ್ನು ಸಂಪರ್ಕಿಸಿದ್ದ ಎಚ್‌ಡಿಕೆ, ರೇಣುಕಾ ಜೊತೆ ಸೇರಿ ಪಕ್ಷಕ್ಕೆ ಬರುವಂತೆ ಆಹ್ವಾನವಿತ್ತಿದ್ದು ರಹಸ್ಯವಾಗಿ ಉಳಿದಿಲ್ಲ, ಯಡ್ಡಿಯ ಸಂಘ ಬಿಡದ ಎಂ.ಪಿ.ಕುಮಾರಸ್ವಾಮಿ ಮುಂದಿನ ಚುನಾವಣೆ ಸಮಯದಲ್ಲಿ ಬರುವುದಾಗಿ ಭರವಸೆ ನೀಡಿದ್ದರು.



ತಮಾಷೆಯ ಸಂಗತಿ ಎಂದರೆ, ಜೆಡಿಎಸ್ ಪಕ್ಷವು ಕ್ಷೇತ್ರದ ಮುಂದಿನ ಅಭ್ಯರ್ಥಿಯನ್ನು ಆಯ್ಕೆ ಮಾಡಿದೆ. ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಕೆ.ಪಿ.ರಾಜಣ್ಣನಿಗೆ ಮಣೆ ಹಾಕಿದೆ. ಕೋಟ್ಯಾಧೀಶ ಉದ್ಯಮಿಯಾಗಿರುವ ರಾಜಣ್ಣ ಮೂಡಿಗೆರೆಗೆ ಹೊಸಬ. ಇಲ್ಲಿನ ಜನರಿಗೆ ಆತ ಯಾರು ಅಂತಲೂ ಗೊತ್ತಿಲ್ಲ, ಹಿಂದೊಮ್ಮೆ ಹೊರನಾಡು ಅನ್ನಪೂರ್ಣೇಶ್ವರಿ ದೇವಸ್ಥಾನಕ್ಕೆ ಪ್ರವಾಸ ಬಂದಿದ್ದ ರಾಜಣ್ಣನಿಗೆ ಬಾಳೂರು ಎಂಬಲ್ಲಿನ ನಾಗೇಂದ್ರನೆಂಬ ಜೆಡಿಎಸ್ಸಿಗನ ಪರಿಚಯವಾಗಿತ್ತು, ಅದೊಂದು ಪರಿಚಯ ಇವತ್ತಿಗೆ ರಾಜಣ್ಣನನ್ನು ಮೂಡಿಗೆರೆ ಮೀಸಲು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯ ಪಟ್ಟಿಗೆ ಸೇರಿಸಿದೆ.

ಬಿಜೆಪಿ ಶಾಸಕ ಎಂ.ಪಿ.ಕುಮಾರಸ್ವಾಮಿಯ ಆಗಮನದ ನಿರೀಕ್ಷೆಯಲ್ಲಿರುವ ಜೆಡಿಎಸ್ ಮುಖಂಡರು ನಾಲಗೆ ತುದಿ ಚಪ್ಪರಿಸುತ್ತಿದ್ದಾರೆ. ಸ್ಥಳೀಯರನ್ನು ಆಯ್ಕೆ ಮಾಡಿಟ್ಟರೆ ಮುಂಬರುವ ಚುನಾವಣೆ ಸಮಯದಲ್ಲಿ ಹೊರದಬ್ಬಲು ಕಷ್ಟವಾಗುತ್ತದೆ. ಪಕ್ಷ ಒಡೆಯುವ ಅಪಾಯಕಾರಿ ಸನ್ನಿವೇಶ ನಿರ್ಮಾಣವಾಗುತ್ತದೆ. ಇನ್ನೊಂದೆಡೆ ಅಭ್ಯರ್ಥಿಯ ಆಯ್ಕೆ ಮಾಡದಿದ್ದರೆ ಆಕಾಂಕ್ಷಿಗಳ ಪಟ್ಟಿ ಹನುಮಂತನ ಬಾಲದಂತೆ ಬೆಳೆಯುವ ಅಪಾಯವಿದೆ. ಈ ಕಾರಣದಿಂದ ಜೆಡಿಎಸ್ ಹೊರಗಿನ ಅಭ್ಯರ್ಥಿಗೆ ಮಣೆ ಹಾಕಿದೆ ಎನ್ನುವುದು ಜಗಜ್ಜಾಹೀರಾಗಿದೆ. ಅಂದಹಾಗೆ ಮೊನ್ನೆ ತಾನೆ ಕಲಾಕುಂಜದಲ್ಲಿ ನಡೆದ ಜೆಡಿಎಸ್ ಸಮಾವೇಶದಲ್ಲಿ ರಾಜಣ್ಣ ತಿರುಪತಿ ಲಾಡು ಹಂಚಿದ್ದರು. ಅಲ್ಲಿದ್ದವರೆಲ್ಲಾ ಇದನ್ನು ಕಂಡು ಮುಸಿಮುಸಿ ನಗುತ್ತಿದ್ದರು. ಕೋಟ್ಯಾಧೀಶ ಉದ್ಯಮಿ ಮಳವಳ್ಳಿ ರಾಜಣ್ಣನಿಗೆ ಮೂಡಿಗೆರೆಯ ಜೆಡಿಎಸ್ ಮುಖಂಡರು ತಿರುಪತಿ ಉಂಡೇನಾಮ ತಿಕ್ಕಲಿದ್ದಾರೆಂಬುದನ್ನು ಯಾರೂ ಅಲ್ಲಗಳೆಯುತ್ತಿಲ್ಲ.



• ಅಜೀಜ್ ಕಿರುಗುಂದ

ಉಡುಪಿ ಗೋಸಂರಕ್ಷಕರ ಅನೈತಿಕ ಪೊಲೀಸುಗಿರಿ

ಈಗೀಗ ಸರ್ಕಾರಿ ಅಧಿಕಾರಿಗಳು ಮತ್ತು ಸೆಕ್ಯೂಲರ್ ಪಕ್ಷಗಳ ರಾಜಕಾರಣಿಗಳು ಕೂಡ ಈ ಮುಸ್ಲಿಮರನ್ನು ಪ್ರಜೆಗಳು ಎಂದು ಪರಿಗಣಿಸುವುದಿಲ್ಲ. ಇಂತಹ ಸನ್ನಿವೇಶದಲ್ಲಿ ಪೆಟ್ಟು ತಿಂದು ಉಡುಪಿಯ ಸರ್ಕಾರಿ ಆಸ್ಪತ್ರೆಯಲ್ಲಿ ಮಲಗಿರುವ ತನ್ನ ತಂದೆಯನ್ನು ನೋಡಿ ಅವರ ಕಿರಿಯ ಮಗ ಅಶ್ರಫ್‌ನಿಗೆ ಏನು ಅನ್ನಿಸಬಹುದು? ಅವನು ದೊಡ್ಡವನಾದಾಗ ಭಾರತ ಅವನನ್ನು ಪ್ರಜೆ ಎಂದು ಪರಿಗಣಿಸುತ್ತದೆಯೇ?



ಸ್ಕೂಲ್ ಅಡ್ಮಿಷನ್, ಉದ್ಯೋಗ ನೇಮಕಾತಿ ಅಥವಾ ಮದುವೆಗೆ ಇರುವ ಹಾಗೆ ದೇಶದ ಪ್ರಜೆಯಾಗಲು ಸಹ ವಯೋಮಿತಿ ಇದೆಯೆ? ಮನುಷ್ಯ ಜೀವವೊಂದು 'ಪ್ರಜೆ' ಎನ್ನಿಸಿಕೊಳ್ಳುವುದು ಯಾವ ವಯಸ್ಸಿನಿಂದ? ಚಿಕ್ಕ ಮಕ್ಕಳು ಪ್ರಜೆಗಳೋ? ಈ ಸಂದೇಹವನ್ನು ಗೂಗಲ್ಲಿದಾಗ ನಮಗೆ ದೊರೆತ ಮಾಹಿತಿ ಸ್ವಾರಸ್ಯಕರವಾಗಿದೆ. ಭಾರತದಲ್ಲಿ ಇನ್‌ಕಮ್ ಟ್ಯಾಕ್ಸ್ ಪ್ಯಾನ್‌ಕಾರ್ಡ್ ಮಾಡಿಸಲು ವಯೋಮಿತಿ ಇಲ್ಲ. ತೊಟ್ಟಿಲಲ್ಲಿ ಆಡುತ್ತಿರುವ ಮಗುವಿನ ಹೆಸರಲ್ಲೂ ಪ್ಯಾನ್ ಕಾರ್ಡ್ ಮಾಡಿಸಿದ ದಾಖಲೆ ಇದೆ. ಆದರೆ ಪ್ರಜೆ ಎನ್ನಿಸಿಕೊಳ್ಳಲು ಮೂಲಾಧಾರ ದಾಖಲೆ ಎಂದು ಸರ್ಕಾರವೇ ಘೋಷಿಸಿರುವ ಆಧಾರ್ ಕಾರ್ಡನ್ನು ಮೂರು ವರ್ಷಗಳಿಗಿಂತ ಕೆಳಗಿನ ಪ್ರಾಯದ ಮಕ್ಕಳಿಗೆ ಮಾಡಲು ಬರುವುದಿಲ್ಲ. ಅಷ್ಟೇ ಯಾಕೆ 15 ವರ್ಷಗಳವರೆಗಿನ ಪ್ರಾಯದ ಮಕ್ಕಳಿಗೆ ಈಗ ಮಾಡಿಸುವ ಆಧಾರ್ ಕಾರ್ಡನ್ನು ಮತ್ತೊಮ್ಮೆ 15 ದಾಟಿದ ಮೇಲೆ ನವೀಕರಿಸಬೇಕಂತೆ. ಯಾಕೆಂದರೆ ಆಧಾರ್ ಕಾರ್ಡಿನಲ್ಲಿ ನಮೂದಾಗುವ ಬಯೋ ಮೆಟ್ರಿಕ್ ಚಹರೆಗಳು (ಅಂಗೈರೇಖೆ, ಕಣ್ಣಿನ ಪಾಪೆ ಇತ್ಯಾದಿ ಜೈವಿಕ ಗುಣಲಕ್ಷಣಗಳು) ಮೂರು ವರ್ಷಕ್ಕಿಂತ ಕಮ್ಮಿ ಪ್ರಾಯದ ಮಕ್ಕಳಲ್ಲಿ ಸ್ಫುಟವಾಗಿ ಮೂಡಿರುವುದಿಲ್ಲ; ಮತ್ತು 3 ರಿಂದ 15 ವರ್ಷಗಳ ಅವಧಿಯಲ್ಲಿ ಅವು ಬದಲಾಗುತ್ತವೆ. ಹಾಗಾದರೆ, 5 ರಿಂದ 15 ವರ್ಷಗಳವರೆಗಿನ ಪ್ರಾಯದ ಮಕ್ಕಳನ್ನು ಪೂರ್ಣ ಪ್ರಮಾಣದ ಪ್ರಜೆಗಳು ಎಂದು ಭಾವಿಸಬಹುದೋ?

ನಮಗೆ ಈ ಸಂದೇಹ ತಲೆದೋರಿದ್ದು, ಉಡುಪಿಯ ಸರ್ಕಾರಿ ಆಸ್ಪತ್ರೆಯಲ್ಲಿ ಏಳು ವರ್ಷ ಪ್ರಾಯದ ಹುಡುಗ ಮೊಹ್ಮದ್ ಅಶ್ರಫ್‌ನನ್ನು ಕಂಡಾಗ. ಅವನ ತಂದೆಯೂ ನಿಸ್ಸಂದೇಹವಾಗಿ ಭಾರತದ ಪ್ರಜೆಯೂ ಆಗಿರುವ ಉಮರಬ್ಬ ಯಾವ ತಪ್ಪೂ ಮಾಡದೆ, ಏಟು ತಿಂದು, ಮೈ ಇಡೀ ಎಲ್ಲೆಂದರೆ ಅಲ್ಲಿ ಗಾಯ ಮಾಡಿಕೊಂಡು ಬ್ಯಾಂಡೇಜುಧಾರಿಯಾಗಿ ಆಸ್ಪತ್ರೆಯ ಜನರಲ್ ವಾರ್ಡಿನ ಬೆಡ್ಡಿನಲ್ಲಿ ಮಲಗಿದ್ದರು. ಪಕ್ಕದಲ್ಲಿ ಅವರ ಪತ್ನಿ ಬತೀಜಮ್ಮ ಮತ್ತು ಅಕ್ಕ ಐಸಮ್ಮ (ಆಯಿಷಾ) ಏನೂ ತೋಚದೆ ಕೂತಿದ್ದರು. ನಾವು ಉಮರಬ್ಬ ಅವರನ್ನು ನೋಡಲು ಆಸ್ಪತ್ರೆಗೆ ಹೋದ ಹಿಂದಿನ ದಿನ ಅಂದರೆ ಕಳೆದ ಗುರುವಾರ (18.8.11) ಬೆಳಗಿನ ಜಾವ, ಉಡುಪಿ ಜಿಲ್ಲೆ ಹಿರಿಯಡಕ ಪೊಲೀಸು ಠಾಣೆಯ ವ್ಯಾಪ್ತಿಯಲ್ಲಿ ಬರುವ ಕಣಜಾರು ಎಂಬ ಹಳ್ಳಿಯಲ್ಲಿ ಅವರ ಮೇಲೆ ಭೀಕರವಾದ ಗುಂಪು ಹಲ್ಲೆ ನಡೆದಿತ್ತು.

ಉಮರಬ್ಬ ಕಣಜಾರಿನ ಜಗದೀಶ ಶೆಟ್ಟಿ ಎಂಬವರಿಂದ ಒಂದು ಸಿಂಧಿ ದನ ಮತ್ತು ಕರುವನ್ನು 3000 ರೂಪಾಯಿಗೆ ಖರೀದಿಸಿ, ತನ್ನ ಮಹೀಂದ್ರ ಪಿಕ್‌ಅಪ್‌ನಲ್ಲಿ ಸಾಗಿಸುತ್ತಿದ್ದರು. ಜಗದೀಶ್ ಶೆಟ್ಟರ ಮನೆಯಿಂದ ಎರಡು ಕಿ.ಮೀ.ನಷ್ಟು ದೂರದಲ್ಲಿ ಕಣಜಾರಿನ ಲೂರ್ದು ಮಾತೆಯ ಚರ್ಚ್ ಸಮೀಪ ಉಮರಬ್ಬ ಹೇಳುವ ಪ್ರಕಾರ ಸುಮಾರು 20 ಜನ ಮತ್ತು ಹಿರಿಯಡಕ ಪೊಲೀಸು ಠಾಣೆಯವರ ಪ್ರಕಾರ 7 ಜನರ ಗುಂಪು ಇವರ ಗಾಡಿಯನ್ನು ತಡೆದು, ಅದರ ಗಾಜುಗಳನ್ನು ಒಡೆದು ಮರದ ರಿಪೀಸುಗಳಿಂದ ಗಾಡಿಯ ಒಳಗಿದ್ದವರಿಗೆ ಬಾರಿಸಿದರು; ಉಮರಬ್ಬರ ಜೊತೆ ಗಾಡಿಯನ್ನು ಡ್ರೈವ್ ಮಾಡುತ್ತಿದ್ದ ಇಬ್ರಾಹಿಂ ಮತ್ತು ಗಾಡಿಯಲ್ಲಿ ಅವರೊಟ್ಟಿಗಿದ್ದ ರಂಜಿತ್ ಎಂಬ ಅವರ ನೆರೆಕರೆಯ ಯುವಕನ ಮೇಲೂ ಹಲ್ಲೆ ನಡೆಯಿತು. ಇಬ್ರಾಹಿಂ ಅವರ ಬಲಕಾಲಿನ ಎಲುಬು ಮುರಿದಿದೆ. ಅವರ ಕಣ್ಣು, ಮೂಗು ಮತ್ತು ಬಲಗೈಗಳಿಗೂ ಚೆನ್ನಾಗಿ ಏಟುಬಿದ್ದಿದ್ದು ಅವರು ಇನ್ನು ಕೆಲವು ತಿಂಗಳು ಹಾಸಿಗೆಯಲ್ಲೇ ಮಲಗಿರಬೇಕಾಗಬಹುದು. ಅವರಿಗೆ ಈಗ 38 ರ ಪ್ರಾಯ. ಉಮರಬ್ಬ ಮತ್ತು ಇಬ್ರಾಹಿಂಗೆ ಹೋಲಿಸಿದರೆ ರಂಜಿತ್‌ಗೆ ಬಿದ್ದ ಹೊಡೆತ ಗಂಭೀರ ಸ್ವರೂಪದ್ದಲ್ಲ. ಅವರು ಸ್ವಲ್ಪದರಲ್ಲೇ ತಪ್ಪಿಸಿಕೊಂಡು ಸ್ಥಳದಿಂದ ಪಲಾಯನ ಮಾಡಿದರೂ ಬಿದ್ದ ಏಟಿಗೆ ಮೈ ಬಾತುಕೊಂಡು, ಎರಡು ದಿನಗಳ ನಂತರ ಆಸ್ಪತ್ರೆಗೆ ದಾಖಲಾದರು. ಉಮರಬ್ಬ ಮತ್ತು ಇಬ್ರಾಹಿಂ ಇಬ್ಬರೂ ಪ್ರಜ್ಞೆ ಕಳೆದುಕೊಂಡು ರಸ್ತೆಯ ಬದಿಯಲ್ಲೇ ಬಿದ್ದಿದ್ದರು. ಹಲ್ಲೆ ನಡೆದ ಹಲವು ಗಂಟೆಗಳ ಬಳಿಕ ಯಾರೋ ಪೊಲೀಸು ಠಾಣೆಗೆ ಸುದ್ದಿ ಮುಟ್ಟಿಸಿ, ಅಲ್ಲಿನ ಸಿಬ್ಬಂದಿ ಬಂದು ಪಿಕ್‌ಅಪ್ ಗಾಡಿ ಮತ್ತು ದನಕರುಗಳನ್ನು ವಶಕ್ಕೆ ತೆಗೆದುಕೊಂಡರು. ಉಮರಬ್ಬ ಮತ್ತು ಅವರ ಜೊತೆಗಿದ್ದವರ ಮೇಲೆ ಅಕ್ರಮ ಜಾನುವಾರು ಸಾಗಾಟದ, ಸುಮೋಟೋ ಕೇಸು ಹಾಕುವುದಾಗಿ ಠಾಣೆಯ ಎಸ್.ಐ. ತಿಳಿಸಿದರು.

ಉಮರಬ್ಬ ಕಳೆದ 20–25 ವರ್ಷಗಳಿಂದ ಜಾನುವಾರು ಮಾರಾಟದ ಕಸುಬು ಮಾಡುತ್ತಿದ್ದಾರೆ. ಇದರ ಹೊರತಾಗಿ ಜೀವನ ನಿರ್ವಹಣೆಗೆ ಅವರಿಗೆ ಬೇರೆ ಯಾವ ಸಂಪನ್ಮೂಲವೂ ಇಲ್ಲ. ಅವರು ನಮಗೆ ಹೇಳಿದ ಪ್ರಕಾರ, ಅವರ ತಂದೆ ಮತ್ತು ಅವರ ಅಜ್ಜ ಕೂಡಾ ಇದೇ ಕಸುಬು ಮಾಡಿಕೊಂಡಿದ್ದವರು. "ಕೈಕಾಲು ಗಟ್ಟಿ ಇದ್ದಾಗ, ಘಟ್ಟದ ಮೇಲೆ ಶಿವಮೊಗ್ಗ ಕೊಪ್ಪ ತೀರ್ಥಹಳ್ಳಿ, ಬಸರಿಕಟ್ಟೆಗಳಲ್ಲೂ ನಾನು ವ್ಯಾಪಾರ ಮಾಡಿದವನು. ಈಗ ಹೊರಗೆ ಎಲ್ಲೂ ಹೋಗುವುದಿಲ್ಲ. ಇಷ್ಟು ವರ್ಷದಿಂದ ನಾನು ಈ ಕಸುಬು ಮಾಡುತ್ತಿದ್ದರೂ ನನಗೆ ಈವರೆಗೆ ಹೀಗೆ ಆದದ್ದಿಲ್ಲ" ಎಂದು ಉಮರಬ್ಬ ಹೇಳಿದರು. ಅವರ ಮೇಲೆ ಹಲ್ಲೆ ಮಾಡಿದವರಲ್ಲಿ ತಮಗೆ ಪರಿಚಯವಿರುವ ಸುಮಿತ್, ಅಶೋಕ, ಸಂತು, ಪ್ರಸನ್ನ, ಸುರೇಶ, ಪ್ರಕಾಶ–ಹೀಗೆ ಕೆಲವು ಹೆಸರುಗಳನ್ನು ಅವರು ಪೊಲೀಸರಿಗೂ ತಿಳಿಸಿದ್ದಾರೆ. ಆ ಪೈಕಿ ಇದುವರೆಗೆ ಒಬ್ಬನನ್ನು ಮಾತ್ರ ಬಂಧಿಸಲಾಗಿದೆ; ಅಥವಾ ಆ ಶಾಸ್ತ್ರವನ್ನು ಮಾಡಲಾಗಿದೆ. ಉಳಿದ ಅಪಾದಿತರು ಪೊಲೀಸರು ಹೇಳುವಂತೆ "ಆಬ್‌ಸ್ಕಾಂಡಿಂಗ್" (ತಲೆಮರೆಸಿಕೊಂಡವರು). ಉಮರಬ್ಬ ಮತ್ತು ಅವರ ಸಂಗಡಿಗರ ಮೇಲೆ ಹಲ್ಲೆ ನಡೆಸಿದವರು ಅಷ್ಟಕ್ಕೇ ತೃಪ್ತರಾಗದೆ ಅವರ ಬಳಿ ಇದ್ದ ನಗದು ಹಣ ಮತ್ತು ಮೊಬೈಲುಗಳನ್ನೂ ದೋಚಿದ್ದಾರೆ. ರಂಜಿತ್‌ನ ಕಿಸೆಯಲ್ಲಿದ್ದ 12 ರೂಪಾಯಿಯನ್ನೂ ಅವರು ಬಿಡಲಿಲ್ಲವಂತೆ. ರಂಜಿತ್ ದಲಿತರ ತರುಣ. "ನಮ್ಮ ಜಾತಿಯ ಹೆಸರು ತೆಗೆದು ಬೈದು, ನನಗೆ ಹೊಡೆಯುತ್ತ ನನ್ನ ಕಿಸೆಗೆ ಕೈ ಹಾಕಿ ತೆಗೆದರು" ಎಂದು ಅವರು ಹೇಳಿದರು. ತಮಗೆ ಹೊಡೆದವರು ಎಲ್ಲರೂ ಭಜರಂಗದಳದವರಾಗಿದ್ದು 18–20 ವರ್ಷಗಳ ಪ್ರಾಯದವರು; ಹೆಚ್ಚಿನವರು ಬಿಲ್ಲವ, ಮೊಗವೀರ ಮುಂತಾದ ಕೆಳಜಾತಿಯವರು; ಅವರಲ್ಲಿ ಬ್ರಾಹ್ಮಣರು ಯಾರೂ ಇರಲಿಲ್ಲ ಎಂದು ಉಮರಬ್ಬ ನಮಗೆ ತಿಳಿಸಿದರು.

ಉಮರಬ್ಬ ತಮಗೆ ಈಗ 49 ನಡೆಯುತ್ತಿದೆ ಎಂದರು. ಆ ವಯಸ್ಸಿನಲ್ಲಿ ಹತ್ತಾರು ಜನಗಳಿಂದ ಹೊಡೆಸಿಕೊಂಡು, ಇದ್ದದನ್ನೆಲ್ಲ ಕಳೆದುಕೊಂಡು, ಮುಂದೆ ಸಂಸಾರ ನಿರ್ವಹಣೆಗೆ ಏನು ಮಾಡಬೇಕು ಎಂದೂ ತೋಚದೆ ಸರ್ಕಾರಿ ಆಸ್ಪತ್ರೆಯ ಬೆಡ್ಡಿನಲ್ಲಿ ಮಲಗುವುದು–ಉಮರಬ್ಬ ಮತ್ತು ಇಬ್ರಾಹಿಂ ಅವರಿಗೆ ಬಂದೊದಗಿದ ಈ ದುರವಸ್ಥೆ ನಮ್ಮ ಗ್ರಹಿಕೆಗೆ ಮೀರಿದ್ದು. ಇನ್ನು ಸಹಾನುಭೂತಿಯ ಮಾತೆಲ್ಲಿಯದು? ಉಮರಬ್ಬ ಮತ್ತು ಇಬ್ರಾಹಿಂ ಹುಟ್ಟನಿಂದ ಮುಸ್ಲಿಮರು. ರಂಜಿತ್ 'ಹಿಂದೂ' ಎಂದು ಭಾವಿಸಿದರೂ ಜಾತಿಯಲ್ಲಿ ದಲಿತ. ಆದರೆ ಈ ಮೂವರಿಗೂ ಸಮಾನವಾಗಿರುವುದು ಅವರ ಬಡತನ. ಅವರ ಜಾತಿ, ಮತ ಮತ್ತು ಬಡತನಗಳು ಒಟ್ಟಾಗಿ ಅವರು ಈಗ ಎದುರಿಸುತ್ತಿರುವ ಕಷ್ಟಕ್ಕೆ ಕಾರಣವಾಗಿದೆ. ಈಗ ಈ ಸರಳ ಸತ್ಯವನ್ನು ಕೂಡಾ ಈ, ಸಮಾಜ ಒಪ್ಪಿಕೊಳ್ಳಲು ನಿರಾಕರಿಸುತ್ತಿದೆ. ಉಮರಬ್ಬ, ಇಬ್ರಾಹಿಂ ಮತ್ತು ರಂಜಿತ್‌ರ ಮೇಲೆ ನಡೆದ ಹಲ್ಲೆ ಸ್ಪಷ್ಟವಾಗಿ ಹಿಂದೂತ್ವದ ರಾಜಕೀಯ ಸಿದ್ಧಾಂತಕ್ಕಾಗಿ ನಡೆದಿರುವಂತಹದ್ದು. ಆದಾಗ್ಯೂ ಹಲ್ಲೆಗೊಳಗಾದ ಸಂತ್ರಸ್ತರ ಬಗ್ಗೆ ಜಿಲ್ಲೆಯ ಯಾವ 'ಸೆಕ್ಯೂಲರ್ ಪಕ್ಷ'ವೂ ಸಹಾನುಭೂತಿ ತೋರಲಿಲ್ಲ; ಘಟನೆಯನ್ನು ಖಂಡಿಸಲೂ ಇಲ್ಲ. ಅವರ ಮನೆಯವರನ್ನು ಬಿಟ್ಟರೆ ಯಾರೂ ಅವರನ್ನು ನೋಡಲು ಆಸ್ಪತ್ರೆಗೆ ಬರಲೂ ಇಲ್ಲ. ಸ್ವತಃ ಉಮರಬ್ಬ ಅವರೇ ನಮಗೆ ಇದನ್ನು ಖಾತರಿಪಡಿಸಿದರು. ಜಾನುವಾರು ವ್ಯಾಪಾರ ಉಮರಬ್ಬರಂತಹ ಬಡ ಮುಸ್ಲಿಮರ ಏಕೈಕ ಜೀವನೋಪಾಯವೇ ಹೊರತು ಕ್ರಿಮಿನಲ್ ಕೃತ್ಯವಲ್ಲ. ಈಗ ಸಂಘ ಪರಿವಾರವೇ ಏಕೆ, ಈ ದೇಶದ ತಥಾಕಥಿತ ಸೆಕ್ಯೂಲರ್‌ವಾದಿಗಳು ಸಹ ಹೀಗೆ ಭಾವಿಸುವುದಿಲ್ಲ. ಈ ಹಿನ್ನೆಲೆಯಲ್ಲಿ ಆಸ್ಪತ್ರೆಯಲ್ಲಿ ಮಲಗಿರುವ ಉಮರಬ್ಬರ ಪಾಡನ್ನು ಹೇಗೆ ವಿವರಿಸುವುದು?

ಜಾನುವಾರು ವ್ಯಾಪಾರಿಗಳ ಮೇಲೆ ಕರಾವಳಿಯ ಊರುಗಳಲ್ಲಿ ನಡೆಯುತ್ತಿರುವ ಈ ಬಗೆಯ ಹಲ್ಲೆಗಳಲ್ಲಿ ಪೆಟ್ಟು ಕೊಟ್ಟವರೇ ನಂತರ ಪೊಲೀಸು ಠಾಣೆಗೆ ಹೋಗಿ ಪೆಟ್ಟು ತಿಂದವರ ವಿರುದ್ಧ ಜಾನುವಾರು ಕಳ್ಳತನದ ದೂರು ದಾಖಲಿಸುವುದು ಲಾಗಾಯ್ತಿನಿಂದಲೂ ನಡೆದು ಬಂದ ಪದ್ಧತಿ. ಕರಾವಳಿಯ ಪತ್ರಿಕೆಗಳು ಮುಸ್ಲಿಮರ ವಿರುದ್ಧ ದ್ವೇಷ ಕೆರಳಿಸಲು ಜಾನುವಾರು ಕಳ್ಳತನದ ಸುದ್ದಿಗಳನ್ನು, ಅವುಗಳ ಸತ್ಯಾಸತ್ಯತೆಯನ್ನು ಅರಿಯುವ ಗೋಜಿಗೆ ಹೋಗದೆ, ಅತಿರಂಜಿತವಾಗಿ ಪ್ರಕಟಿಸುವುದು ಸಹ ಒಂದು ಮಾಮೂಲು ವಿದ್ಯಮಾನ. ಆದರೆ ಉಮರಬ್ಬರ ಮೇಲೆ ನಡೆದ ಹಲ್ಲೆಯಲ್ಲಂತೂ ಕಳ್ಳತನದ ಸಂದೇಹಕ್ಕೆ ಕೂಡ ಕಾರಣವಿರಲಿಲ್ಲ, ಉಮರಬ್ಬ, ಕಣಜಾರಿನ ಜಗದೀಶ ಶೆಟ್ಟರಿಂದ ಜಾನುವಾರು ಖರೀದಿಸಿದ್ದನ್ನು ಹಿರಿಯಡಕ ಠಾಣೆಯ ಎಸ್‌ಐ ಅವರೇ ನಮಗೆ ದೃಢಪಡಿಸಿದರು. ನಾವು ಜಗದೀಶ್ ಶೆಟ್ಟರನ್ನೇ ಆ ಕುರಿತು ವಿಚಾರಿಸಿದಾಗ, ಹಲ್ಲೆ ನಡೆದ ದಿನ ಉಮರಬ್ಬರ ಗಾಡಿಯಲ್ಲಿದ್ದ ಜಾನುವಾರುಗಳನ್ನು ತಾನೇ ಅವರಿಗೆ 3000 ರೂಪಾಯಿಗಳಿಗೆ ಮಾರಿದ್ದಾಗಿ ಅವರು ಹೇಳಿದರು. "ಯಾಕೆ ಅವನ್ನು ಮಾರಿದಿರಿ?" ಎಂದು ನಾವು ಅವರನ್ನು ಕೇಳಿದಾಗ ಅವರು ಕೊಟ್ಟ ಉತ್ತರ ಈ ನಾಡಿನ ಯಾವುದೇ ಬಡರೈತನಿಂದಲಾದರೂ ನಾವು ನಿರೀಕ್ಷಿಸಬಹುದಾದದ್ದು. "ಅದು ಒಂದು ಜೆರ್ಸಿ ಕ್ರಾಸ್ ದನ; ಹೆಚ್ಚು ಪ್ರಾಯವಾಗಿರಲಿಲ್ಲ, ಆದರೆ ಗರ್ಭ ನಿಲ್ಲುತ್ತಿರಲಿಲ್ಲ. ಮೂರುನಾಲ್ಕು ಇಂಜೆಕ್ಷನ್ ಕೊಡಿಸಿದರೂ ಪ್ರಯೋಜನಕ್ಕೆ ಬರಲಿಲ್ಲ. ಇನ್ನು ಅದನ್ನು ಇಟ್ಟುಕೊಂಡು ಏನು ಮಾಡುವುದು? ಅದನ್ನು ಸಾಕುವ ತ್ರಾಣ ನನಗೆ ಇಲ್ಲ, ನಮ್ಮ ಕೊಟ್ಟಿಗೆಯಲ್ಲಿ ಜಾಗವೂ ಇಲ್ಲ, ಹಾಗಾಗಿ ಅದನ್ನು ಮಾರದೇ ನಿರ್ವಾಹವೇ ಇರಲಿಲ್ಲ" ಎಂದು ಶೆಟ್ಟರು ಹೇಳಿದರು.

ಸುಮಾರು ಮೂರು ಎಕರೆಯಷ್ಟು ಬತ್ತದ ಒಂದು ಬೆಳೆ ಜಮೀನಿನ ಕೃಷಿಕರಾದ ಜಗದೀಶ್ ಶೆಟ್ಟರು, ಅನುಕೂ ವಂತರಲ್ಲ ಎಂಬುದನ್ನು ಅವರ ಚೊಕ್ಕವಾದರೂ ಚಿಕ್ಕದಾಗಿ ಮನೆ ಮತ್ತು ಕೊಟ್ಟಿಗೆಗಳೇ ಹೇಳುತ್ತಿದ್ದವು. ತಪ ದನಕರುಗಳನ್ನು ಮಾರಬೇಕಾಗಿ ಬಂದದ್ದರ ಬಗ್ಗೆ ಅವ ಸಂತಾಪವೂ ಇತ್ತು, ಶೆಟ್ಟರು ದೈವಭೀರು; ಆದರೆ ಜಾ ವಾರು ಸಾಕುವುದು ಅವರಿಗೆ ಧಾರ್ಮಿಕ ವ್ರತವಲ್ಲ; ಬದ ಲಾಭನಷ್ಟಗಳ ಕುರಿತು ಯೋಚಿಸಲೇಬೇಕಾದ ಕಸುಬ ಮತ್ತು ವ್ಯವಹಾರ. ಕರ್ನಾಟಕದ ಪ್ರಸ್ತಾಪಿತ ಸಂಪೂರ್ಣ ಜಾನುವಾರು ಹತ್ಯಾ ನಿಷೇಧ ಕಾಯ್ದೆಯ ಬಗ್ಗೆ ಅವರೊಡ ಪ್ರಸ್ತಾಪಿಸಿದಾಗ ಅವರು ಆ ಕಾಯ್ದೆ ಜಾರಿಗೆ ಬಂದ ಜಾನುವಾರುಗಳನ್ನು ಸಾಕುವುದೇ ಅಸಾಧ್ಯವಾಗಿಬಿಡಬಹುದ "ಸರ್ಕಾರ ಆ ಕಾನೂನು ಜಾರಿಗೆ ತರಲಿ; ನಮ್ಮ ಹಟ್ಟಿಯ ನಾವು ಸಾಕಿದ ದನ ಕರು ಮಾರಲು ನನಗೂ ಇಷ್ಟವಿ ಆದರೆ ಸರ್ಕಾರ ನಮಗೆ ಸಾಕುವ ಬಾಬ್ತು ಪರಿಹಾ ಕೊಡಬೇಕು" ಎಂದು ಹೇಳಿದರು. ಆದ ಜಾನುವಾರು ವ್ಯಾಪಾರಿಗಳ ಮೇಲೆ ಹಲ್ಲೆ ನಡೆಸು ಭಜರಂಗಿಗಳು ಮಾತ್ರ ಜಾನುವಾರು ಸಾಕುವುದ ಮತ್ತು ಮಾರುವುದು–ಎರಡು ಸಹ ಹೊಟ್ಟೆಪಾ ಗಾಗಿ ಮಾಡುವ ವೃತ್ತಿಗಳೇ ಹೊರತು ಪವಿ ವಿಧಿಗಳಲ್ಲ ಎಂಬ ಅತ್ಯಂತ ಪ್ರಾಥಮಿಕ ಸತ್ಯವ ಅಲ್ಲಗಳೆಯುತ್ತಿದ್ದಾರೆ.

ಉಮರಬ್ಬ ಮತ್ತು ಇಬ್ರಾಹಿಂ ಮುಸ್ಲಿ ರಾದರೆ ಏನಂತೆ? ಅವರಿಗೆ ಜಾನುವಾರು ಮಾ ದವರು ಬಂಟ ಸಮುದಾಯದ ಓರ್ವ ಹಿಂದು ಜಗದೀಶ್ ಶೆಟ್ಟಿ. ಉಮರಬ್ಬ ಮತ್ತು ಇಬ್ರಾಹಿಂರ ಸಹಾಯಕರಾಗಿದ್ದ ರಂಜಿತ್ ದಲಿತ ಮ ಹಿಂದೂ. (ಆದರೆ ದಲಿತರಲ್ಲಿ ಹಲವರು ತಮ್ಮ ಹಿಂದೂ ಧರ್ಮದ ಜೊತೆ ಗುರುತಿಸಿಕೊಳ್ಳ ನಿರಾಕರಿಸುತ್ತಾರೆ. ಅದು ಬೇರೆ ಮಾತು). ಅದೂ ಅಲ್ಲ ಇದುವರೆಗೆ ಯಾರೂ ಉಮರಬ್ಬ ಮತ್ತು ಇಬ್ರಾ ಮಾಡುವ ಉದ್ಯೋಗದ ಕಾರಣಕ್ಕೆ ಅವರನ್ನು ಹೊಡ ಬಡಿದು ಲೂಟಿ ಮಾಡುವುದು ಬಿಡಿ, ಪ್ರಶ್ನೆ ಮಾಡಿ ಸಹ ಇಲ್ಲ. ಆದರೆ ಕರಾವಳಿಯಲ್ಲಿ ಈಗ ಅವರು ಹೊ ಪಾಡಿಗಾಗಿ ಮಾಡುವ ಜಾನುವಾರು ವ್ಯಾಪಾರ ಪಾಪಕ ಮತ್ತು ಕ್ರಿಮಿನಲ್ ಅಪರಾಧವೆಂದು ಪರಿಗಣಿಸಲ್ಪಟ್ಟ ಉಮರಬ್ಬರ ಮೇಲೆ ಈಗಾಗಲೇ ಅಕ್ರಮ ಜಾನುವಾ ಸಾಗಾಟದ (ಅಂದರೆ ಪೊಲೀಸರ ಪೂರ್ವಭಾವಿ ಅನುಮ ಸಾರಿಗೆ ಅಧಿಕಾರಿಗಳ ಪರವಾನಗಿ ಮತ್ತು ಪಶುವೈ ಇಲಾಖೆಯ ಶಿಫಾರಸ್ಸು ಜೊತೆಗೆ ಅದನ್ನು ಮಾರಿದ ಬಾ ಜಾನುವಾರು ಮಾಲೀಕರ ಹಿಂಬರಹ, ಈ ಕಾಗ ಪತ್ರಗಳಿಲ್ಲದೆ ಜಾನುವಾರು ಸಾಗಿಸುವುದು!) ಮೂ ಕೇಸುಗಳಿವೆ. ಈಗ ಕಣಜಾರಿನ ಘಟನೆಯಿಂದಾಗಿ ಅ ಮೇಲೆ ಇನ್ನೊಂದು ಕೇಸು ದಾಖಲಾಗಲಿದೆ. ಕರ್ನಾಟ ಸರ್ಕಾರದ ಪ್ರಸ್ತಾಪಿತ ಸಂಪೂರ್ಣ ಜಾನುವಾರು ಹ ನಿಷೇಧ ಕಾಯ್ದೆ ಜಾರಿಗೆ ಬಂದರೆ ಉಮರಬ್ಬರ ಜೊತೆ ಅವರಿಗೆ ದನಕರು ಮಾರಿದ ಜಗದೀಶ್ ಶೆಟ್ಟರ ಅಪರಾಧಿಗಳಾಗುತ್ತಾರೆ. ಕರಾವಳಿಯ ಭಜರ ಗೋಸಂರಕ್ಷಕರ ಅನೈತಿಕ ಪೊಲೀಸುಗಿರಿಗೆ ಈಗಾಗ ಹಲವು ಜಾನುವಾರು ವ್ಯಾಪಾರಿಗಳು ಬಲಿಯಾಗಿದ್ದು ಅವ ಮುಸ್ಲಿಮರ ಜೊತೆಗೆ ಹಿಂದೂಗಳೂ ಇದ್ದಾರೆ. ಉದ 2006 ರಲ್ಲಿ ಭಜರಂಗಿಗಳಿಂದ ಕೊಲೆಯಾದ ಬಾರಕೂ ಸಮೀಪದ ಕಾವ್ರಾಡಿಯ ಪಾಟಾಳಿ ಕೃಷ್ಣಯ್ಯ, 20 ರಲ್ಲಿ ಕೊಲೆಯಾದ ಕುಂದಾಪುರ–ಕಂಡ್ಲೂರಿನ ಕರಾ ಮತೀನ್ ಹಾಗೂ 2011 ಏಪ್ರಿಲ್‌ನಲ್ಲಿ ಕೊಲೆಯಾ ಹೆಬ್ರಿ ಸಮೀಪದ ಆರ್ಡಿ ಗ್ರಾಮದ ದಯಾನಂದ ಶೆ ಹೀಗೆ ಜೀವ ಕಳೆದುಕೊಂಡವರ ಜೊತೆ ಭಜರಂಗಿ ದ ಗಳಿಂದ ಗಂಭೀರರಾಗಿ ಗಾಯಗೊಂ ಅಂಗಾಂಗ ಊನವಾದವರಂತೂ ಎಣಿಕೆ ಸಿಗದಷ್ಟು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಆದ ಇವರ ನೋವು ಈಗ ಯಾರನ್ನೂ ತಟ್ಟು ದಿಲ್ಲ. ಈ ಬಡಪಾಯಿ ಮುಸ್ಲಿಮರಿಗೆ ಈ ನಮ್ಮ ಊರುಗಳಲ್ಲಿ ರಾಜಕೀಯ ಮಾತ್ರವ ಸಾಂಸ್ಕೃತಿಕ ಮತ್ತು ಸಾಮಾಜಿಕ ಪ್ರಾತಿನಿಧಿ ಕೂಡ ಇಲ್ಲ; ಅವರು ಇದ್ದಾರೆ ಎಂಬುದ ಯಾರೂ ಗುರುತಿಸುವುದಿಲ್ಲ. ಈಗೀಗ ಸರ್ಕಾ ಅಧಿಕಾರಿಗಳು ಮತ್ತು ಸೆಕ್ಯೂಲರ್ ಪಕ್ಷ ರಾಜಕಾರಣಿಗಳು ಕೂಡ ಈ ಮುಸ್ಲಿಮರ ಪ್ರಜೆಗಳು ಎಂದು ಪರಿಗಣಿಸುವುದಿಲ್ಲ. ಇಂತ ಸನ್ನಿವೇಶದಲ್ಲಿ ಪೆಟ್ಟು ತಿಂದು ಉಡುಪಿ ಸರ್ಕಾರಿ ಆಸ್ಪತ್ರೆಯಲ್ಲಿ ಮಲಗಿರುವ ತ ತಂದೆಯನ್ನು ನೋಡಿ ಅವರ ಕಿರಿಯಮ ಅಶ್ರಫ್‌ನಿಗೆ ಏನು ಅನ್ನಿಸಬಹುದು? ಅವ ದೊಡ್ಡವನಾದಾಗ ಭಾರತ ಅವನನ್ನು ಪ್ರ ಎಂದು ಪರಿಗಣಿಸುತ್ತದೆಯೇ? ಅವನು ಭಾ ವನ್ನು ಹೇಗೆ ಪರಿಭಾವಿಸಬೇಕು ಎಂದು ನಾ ಬಯಸುತ್ತೇವೆ? ಸದ್ಯಕ್ಕೆ ಇವು ಉತ್ತರವಿಲ್ಲ ಪ್ರಶ್ನೆಗಳು.

• ಜೆ. ರಾಜಶೇಖರ ಮ
ಕೆ. ಫಣಿರಾಜ


ಮಳೆ

ಸೆಂಡೂರಿನಲ್ಲಿ
ಸುರಿಯುತ್ತಿದೆ
ಕಾಡು–ಬೆಟ್ಟ
ಸವೆದರೂ.....

ಬಹುಶಃ
ಯಾರೋ ರೋದಿಸುತ್ತಿರಬೇಕು

ಊರ ಹೆಣ

ಊರವರೆಲ್ಲ ಸೇರಿ
ಹೊತ್ತು ನಡೆದಿದ್ದಾರೆ
ಹತ್ತಿರ ಹೋಗಿ ನೋಡಿದೆ
'ಊರಿನದ್ದೇ ಹೆಣ!!
....
....
ಯಾರ ಕಂಗಳಲ್ಲೂ
ನೀರಿಲ್ಲ
ಪರದೇಸಿಗಳಾದ
ಭೀತಿಯಿದೆ



• ಬಿ. ಶ್ರೀನಿವಾಸ

...ೃಷ್ಣ ಚಮಚದಲ್ಲಿ ತಿಂದ, ಕುಮಾರ ಸೌಟು, ಎಡೂರ ಹಂಡಿಗೆ ಬಾಯ್ಹಾಕಿದ!

"ಲೋ ಚಡ್ಡಿಮಂಜಾ" ಎಂದು ಕೂಗಿದ ಉಗ್ರಿ. ...ದನಿಗೆ ಬ್ರೇಕ್ ಹೊಡೆದ ಚಡ್ಡಿಮಂಜ ಇಷ್ಟವಿಲ್ಲದಿದ್ದರೂ ...ತ್ತರ ಬಂದ.

"ಅಣ್ಣಾ ಹಜಾರೆ ಹೋರಾಟಕೆ ನೀನು ಹೋಗಿ ...ತಲ್ಲಾ?" ಎಂದ ಉಗ್ರಿ.

"ಊ ಕಣೊ ಉಗ್ರಿ. ಏನು ಜನ ಅಂತೀ. ಜಾಸ್ತಿ ...ಡುಗ್ರು ಇದ್ದಿದ್ದು."

ಯ ಲು ಸೀ ಮೆ

ಕಟ್ಟೆಪುರಾಣ

▶ಬಿ. ಚಂದ್ರೇಗೌಡ

"ಮೊಬೈಲು, ದುಡ್ಡು ಕಳ್ಳತನಾಯ್ತಂತಲ್ಲಾ, ಯಾರು ...ತ ಗೊತ್ತಾಗಲಿಲ್ಲವೆ?"

"ಅವ್ಯಲ್ಲ ಕಾಮನ್ನು. ಸಮಂಧಿಕರು ಸೇರಿ ಮದುವೆ ...ಡೋ ಜಾಗದಲ್ಲೇ ವಡವೆ, ದುಡ್ಡು ಹೋಯ್ತದೆ ಜಾತ್ರೆಲೋಗದಿಲವೆ."

"ಜಾತ್ರೆ ಅಂದ್ರೆ ಅದು ಭ್ರಷ್ಟಾಚಾರದ ವಿರೋಧಿ ...ತ್ರೆ ಕಣೊ. ಅಲ್ಲಿಗೆ ಬರೊ ಜನಗಳು ಪ್ರಾಮಾಣಿಕರು, ...ಕವಾಗಿ ನ್ಯಡವಳಕೆ ನ್ಯಟ್ಟಗಿಟಗಂಡೋರು, ಲಂಚ ಕೊಡದೆ ಮಾಡೋರು ಸೇರೊ ಜಾಗ ಅದು. ಅಲ್ಲಿಗೆ ನೀವ್ಯಲ್ಲ ...ೀದಾಗ ಮೊಬೈಲು, ಕಾಸು ಹೋಗದು ಕಾಮನ್ನು."

"ಆ ಮಾತ ವಾಪಸ್ ತಗೊ ಉಗ್ರಿ."

"ತಮಾಸಿಗಂದೆ ಕಣೊ. ಅಂತೂ ಬರೀಕೈಲಿ ಬಂದೆ ...ು."

"ತಿರಗ ಅದ್ನೆ ಹೇಳ್ತಿಯಲ್ಲೊ. ಅಂತ ಕಸುಬನ್ಯಲ್ಲ ...ಮ್ಮಂಥೋರಿಗೆ ಹೇಳಿಕಳಿ. ನಾವಂತ ಕ್ಯಲಸ ...ಡೋರಲ್ಲ."

"ನಾನ್ಯಾಕಂಗಂದೆ ಗೊತ್ತೇನೊ? ಸಾಮಾನ್ಯವಾಗಿ ...ಪಿಸ್ನಲ್ಲಿರೊ ಬ್ರಾಂಬ್ರು ಹುಡುಗ್ರು ಕ್ಯೆಯಿ ಬಾಯಿ ...ಗಿಟಗಂಡಿರತವೆ. ಆದ್ರೆ ಕಳೆದ ಮೂರು ನಾಕು ...ಷದಲ್ಲಿ ಆರೆಸ್ಸೆಸ್ಸು, ಬಿಜೆಪಿ ಸೇರಿರೊ ಶೂದ್ರು ಮುಂಡೆವು ...ರನೂ ನ್ಯಟ್ಟಗಿಟಗಂಡಿಲ್ಲ ಅನ್ನದು ಸಾಬೀತಾಗ್ಯದೆ. ಅಂಗಂದೆ. ಅದೋಗ್ಲಿ ಅಂತೂ ಭ್ರಷ್ಟಾಚಾರದ ವಿರುದ್ಧ ...ದ್ಧ ಮಾಡಕ್ಕೆ ಹೊಂಟದ್ದಿರಿ."

"ಊ ಮತ್ತೆ."

"ಸ್ವಲುಪ ಲೇಟಾಯ್ತಲ್ಲಾ ಯಾಕೆ?"

"ಅಣ್ಣಾ ಹಜಾರೆಯವರು ಸುರು ಮಾಡಿದಾಗ್ಲೆ ...ೀಗಬೇಕಾಗಿತ್ತು. ಆದ್ರೆ ಸುಮಾರು ಕ್ಯಲಸ ಇದ್ದೊ ಲೇಟಾಯ್ತು ಕಣೊ."

"ಅದಲ್ಲಲೇ, ಎಡೂರಪ್ಪ ಮುಖ್ಯಮಂತ್ರಿಯಾದ ಕ್ಷಣದಿಂದ ಇಳಿಯವರಿಗೂ ಕೇಳಿಬಂದ ಸುದ್ದಿ ಯಾವುದು ಅಂದ್ರೇ ಭ್ರಷ್ಟತೆದು. ಅದೆಷ್ಟು ಅಂತ ಹೇಳಕ್ಕೋದ್ರೆ ಇವತ್ಯೆಲ್ಲ ಹೇಳಬವುದು. ಅವಾಗ್ಯಲ್ಲ ಏನು ಮಾಡತಿದ್ರಿ ನೀವು?"

"ಏನು ಮಾಡಬೇಕಾಗಿತ್ತಪ್ಪ?"

"ಇವತ್ತಿನ ತರಾನೆ ಹೋರಾಡಬೇಕಾಗಿತ್ತು ಕಂಡ್ಯ. ಅವುನು ರೈತರ ಮ್ಯಾಲೆ ಗೋಲಿಬಾರು ಮಾಡಿದಾಗ, ರೈತರ ಬೆನ್ನಿಗೆ ಬೂಟುಕಾಲಲ್ಲಿ ಒದ್ದಾಗ, ಮಕ್ಕಳು ಅಳಿಯಂದ್ರಿಗ್ಯಲ್ಲ ಸೈಟು ಮನೆ ಕೊಂಡಾಗ, ಗಣಿಕಪ್ಪ ತಗಂಡಾಗ ನಿಮ್ಮ ಗಂಟ್ಲೇನು ಸೇದ್ಹೋಗಿತ್ತೆ? ಪ್ರತಿ ದಿನ ಆಸ್ತಿಕೊಂಡು ರಿಜಿಸ್ಟ್ರೇಷನ್ ಮಾಡಿಸಿದಾಗ ಏನು ಮಾಡತಿದ್ರೊ ನೀವು?"

"ಅವರು ಬೈಠಕ್ ಮಾಡ್ತಯಿದ್ರು ಬುಡೋ ಉಗ್ರಿ. ಪಾಪ ಆ ಚೆಡ್ಡಿ ಮಂಜ ಮದ್ಲು ನಮ್ಮ ಜೊತೆಲಿ ಇದ್ದೋನು. ಇದ್ದಕ್ಕಿದ್ದಂಗೆ ಸಂಘ ಸೇರಿಕಂಡು ಹಿಂಗಾದ. ಅವುನತ್ರ ನೀನು ತುಂಬ ಬುದ್ಧಿವಂತಿಕೆಯಿಂದ ಮಾತನಾಡಬ್ಯಾಡ. ಭಾಳ ಸೀಮಿತವಾಗಿ, ಮತೀಯವನಾಗಿ, ಆದಷ್ಟು ಸಾಬರು ದಲಿತ್ರ ವಿರುದ್ಧವಾಗಿ ಮಾತಾಡಿದ್ರೆ, ಸಾಧ್ಯವಾದ್ರೆ ಸಂತೆ ಶಿವರದ ಬ್ಯೆರಪ್ಪನಂಗೆ ನೆಹರೂ ಕುಟುಂಬದ ವಿರುದ್ಧ ಮಾತಾಡಿದ್ರೆ ಕೇಳಿಸಿಗತ್ತನೆ. ಇಲ್ಲ ಅಂದ್ರೆ ಅವನು ಕಿವಿ ಕ್ಲೋಸ್ ಮಾಡಿಕೊಂಡು ಸುಮ್ಮನಾಯ್ತನೆ. ಅಲವೇನೊ ಮಂಜ?" ಎಂದು ವಾಟಿಸ್ಸೆ ಕನಿಕರವಾಗಿ ನಕ್ಕ.

"ಉಗ್ರಿ ಕೇಳದ್ರಲ್ಲೂ ನ್ಯಾಯದೆ. ಆದ್ರೆ ಯಾವುದುಕ್ಕೋರಾಡಬೇಕು, ಯಾವಾಗ ಸುಮ್ಮನಿರಬೇಕು, ಯಾವ......"

"ಗೊತ್ತಾಯ್ತು ಬುಡೊ ಮಂಜ ನಿನ್ನ ಕಷ್ಟ. ನೀನು ಸೇರಿರೊ ಸಂಘದಲ್ಲಿ ನಿನ್ನ ಕತೆ ಏನಾಗ್ಯದೆ ಅಂದ್ರೇ ನಾವು ಹೇಳದನ್ನ ನೀನು ಕೇಳಬೇಕು, ನೀನೇನೂ ಹೇಳಂಗಿಲ್ಲ, ಹೇಳದಿದ್ರೆ ನಾವು ಹೇಳದನ್ನ ಮುಚ್ಚಕಂಡು ಹೇಳಬೇಕು. ಇದೇ ಅಲವೇನೊ ನಿನ್ನ ಪ್ರಾಬ್ಲಮ್ಮು?" ಎಂದು ವಾಟಿಸ್ಸೆ ಚೆಡ್ಡಿ ಮಂಜನನ್ನು ಆಟ ಆಡಿಸುವಾಗ ಕಾಳಮಾವ,

"ಲೇ ಬುಟ್ಬು ಕಳುಸ್ಲ ಅತ್ತಗೆ. ಆ ಹುಡುಗುಂತ ಅದೇನು ಮಾತಾಡ್ತಿ ನೀನು?" ಎಂದು ಗದರಿದ. ಕೂಡಲೇ ಚೆಡ್ಡಿಮಂಜ ಜಾಗ ಖಾಲಿಮಾಡಿದ.

"ಈ ಮಂಜ ನೀನು ತಿಳಕಂಡರಗಿಲ್ಲ ದೊಡಪ್ಪ, ರೇಣುಕಾಚಾರಿ ಜೊತೆಲಿ ಇರಬೇಕಾದೋನು ಅದೇನೊ ನಮ್ಮೂರಲ್ಲವುನೆ."

"ವಬ್ಬನೆ ಇದ್ದಾಗ ಅದ್ಯಾಕೆದ್ರಿಕತ್ತನವುನು?" ಎಂದ ಉಗ್ರಿ.



"ಅದಕೆ ಆಲವೇನೊ ಅವುನು ಸಂಘ ಸೇರಿದ್ದೂ, ಪಾಪ ದಳದೋರು ಕಾಂಗ್ರೆಸ್ಸಿನೋರ್ಯಲ್ಲ ಬಿಜೆಪಿಗೆ ನುಗ್ಗಿ ಬೇಕಾದಷ್ಟು ನುಂಗಿ ನೀರು ಕುಡೀತಯಿರುವಾಗ, ಪಾಪ ಇದು ಸಂಘ ಸೇರಿ ಪೂಜೆ, ಪುರಸ್ಕಾರದ ಪಾಂಪ್ಲೆಟ್ ಹಾಕಿಗಂಡು ಮಾಚಗ ಮಾಡ್ತದಲ್ಲಾ, ನಮ್ಮ ಜಾತಿಲಿ ಹುಟ್ಟಿದ್ದೇ ಅಲ್ಲ ಇವುನು."

"ನೀನಂಗಂತಿ. ಸದಾನಂದ ಮುಖ್ಯಮಂತ್ರಿಯಾದಾಗ್ಲಿಂದ ಅವುರ ಸೋದರಮಾಮಾನೆ ಆದಂಗೆ ಓಡಾಡ್ತ ಅವುನೆ ಗೊತ್ತೆ?" ಎಂದ ಉಗ್ರಿ.

"ಫೂಲಿಷ್ ಫೆಲೊ. ಆ ಸದಾನಂದನ್ನ ಯಾವನೂ ನನ್ನ ಸಮಂಧಿ ನಮ್ಮ ಜಾತಿಯೋನು ಅನ್ನಕ್ಕೆ ಸಾಧ್ಯವೇಯಿಲ್ಲ, ಅಂಗೆ ನೋಡಿದ್ರೆ ಎಡೂರಪ್ಪನ್ನ ಮುಖ್ಯಮಂತ್ರಿ ಸೀಟಿಂದ ಸಂತೋಷ್ ಹೆಗಡೆ ಇಳಿಸಿದಾಗ್ಲಿಂದ ಅದು ಖಾಲಿ ಬಿದ್ದದೆ ಕಣೊ ಉಗ್ರಿ."

"ನಿಜ ಕಣೊ ವಾಟಿಸ್ಸೆ. ಎಡೂರ ಇನ್ನ ಇದ್ದಿದ್ರೆ ಅದೇನೇನೊ, ಕೊಂಡು ಬಿಸಾಕನೊ ಏನೊ."

"ಅದ್ಯಾಕ್ಲ ಅಂಗೆ ಕೊಂಡ ಅವುನು" ಎಂದಳು ಜುಮ್ಮಿ.

"ಒಳ್ಳೆ ಕೊಸ್ನೆ ಕಣಕ್ಕ ನಿಂದು. ಪರೆಗ್‌ಜಾಂಪಲ್ ನಿನ್ನೆ ತಗೊ. ಪಾರ್ ಫಸ್ಟೈಮ್ ನೀನು ಮೆಂಬರಾದಾಗ ಮೂರು ಸೀರೆಯಿದ್ದೊ. ಈಗ ಮೂರಡಜನ್ನವೆ. ಚಿನ್ನದ ಸರ ಮಾಡಿಸಿದ್ದಿ. ಮಗಳಿಗೂ ಮಾಡಿಸಿದ್ದಿ. ನಮ್ಮ ನಂಜುಂಡಣ್ಣನಿಗೆ ಒಳ್ಳೆ ಬಟ್ಟೆ ವಲಿಸಿದ್ದಿ. ಅಂಗೆ ಈ ಯವಸ್ಥೆವಳಗಡೆ ಪ್ರತಿಯೊಬ್ಬರೂ ತಮ್ಮ ತಮಗೆ ಎಷ್ಟು ಸಿಗತದೊ ಅಷ್ಟ ಗುಂಜಕೊತ್ತಾ ಅವುರೆ ಕಣಕ್ಕ. ಈ ಎಡೂರಪ್ಪ ಯಾಕಿಂಗೆ ಬಿಡ್ತಿ ಕೊಡದಂಗೆ ತಿಂದು ಅಜೀರ್ಣಾಗಿ ಆಸುಪತ್ರೆ ಸೇರಿದಾ ಅಂದ್ರೇ....."

"ಇನ್ನ ಆಸುಪತ್ರೆಲೇ ಇದ್ದನೆ?"

"ಅರೆಸ್ಟಾಗೊವರಿಗೂ ಅಲ್ಲೇ ಇರಂಗೆ ಕಾಣ್ತನೆ."

"ಅದ್ಯಾಕಾಸುಪತ್ರೆ ಸೇರಿದಾ ಏನು ಕಾಯ್ಲ?" ಎಂದ ಕಾಳಮಾವ.

"ಸುಗರು, ಜಾಸ್ತಿಯಾಗ್ಯದಂತೆ ಕಣದೊಡಪ್ಪ."

"ಜಾಸ್ತಿಯಾದ್ರೆ ಮಾತ್ರೆ ತಗಬೇಕು ಕಂಡ್ಯ. ಈಗ ನನಿಗೂ ಸುಗರ್‌ರ್ಯದೆ ಅಂತ ಗೊತ್ತಾಯ್ತು, ಕಂಟ್ರೋಲ್ ಮಾಡಿಕಂಡು ಅಂಗೆ ಇದ್ದಿನೆವರತು ಆಸುಪತ್ರಿಗೋಗಿಲ್ಲ" ಎಂದ ಸೀರ ಉಪಾಯವಾಗಿ ಬದುಕುತ್ತಿರುವವನಂತೆ ಕಣ್ಣುಬಿಟ್ಟ.

"ನೀನಾಸುಪತ್ರಿಗೋಗೊ ದರ್ದಿಲ್ಲ ಚಿಗಪ್ಪ, ಆದ್ರೆ ಎಡೂರಪ್ಪ ಅರೆಸ್ಟಾಗದಕೆ ಹೆದ್ರಿಕಂಡು ಅಡ್ವಾನ್ಸಾಗಿ ಅಡಮಿಟ್ಟಾಗ್ಯವುನೆ."

"ಎಲ್ಲಿಗೆ ಬತ್ತಯ್ಯ ಅವುನ ಕತೇ" ಎಂದು ಕಾಳಮಾವ ಲೊಚಗರಿದ.

"ನೋಡು ದ್ವಡಪ್ಪ ಇವತ್ತು ಆಸ್ತಿ ಭೌಸ್ಥಿತಿ ಮಾಡಿರದನ್ಯಲ್ಲ ಬುಟ್ಟು ಸುಳ್ಳು ಕಾಯಲ ಹೇಳಿಕೊಂಡು ಆಸುಪತ್ರೆಲೋಗಿ ಮನಿಗಿದ್ನಲ್ಲಾ, ಅದೇ ನಾವು ನೋಡು ಇಲ್ಲೇ ಇದ್ದಿವಿ. ಅದೂ ಚನ್ನಾಗಿದ್ದಿವಿ. ಎಡೂರಪ್ಪನಂಗೆ ದುರಾಸೆಯಿದ್ರೆ ಇಷ್ಟೊತ್ತಿಗೆ ಏನೇನಾಯ್ತಿದ್ದೊ ಗೊತ್ತೆ?"

"ಅದ್ಯಾಕ್ಲ ಅಂಗಾಸ್ತಿ ಮಾಡಿದ ಅವುನು?"

"ಅದೊಂತರ ಸೈಕಾಲಜಿ ಯಪೆಕ್ಟು ದ್ವಡಪ್ಪ ಸಾಯ್ತಿವಿ ಅಂತ ಗೊತ್ತಾದಾಗ ಕೆಲುವುರಿಗೆ ವೈರಾಗ್ಯ ಬತ್ತದೆ. ಕೆಲುವುರು ವಳ್ಳೆ ಜನಾಯ್ತರೆ. ಲೋಬಿಗಳು ಮಜ ಮಾಡಿ ಸತ್ತೋಯ್ತರೆ. ಅದೇ ತರ ಈ ಎಡೂರಪ್ಪ ಅಧಿಕಾರದಿಂದ ಇನ್ನೇನು ಇಳಿಸಿಬುಡ್ತರೆ ಇಳಿಸಿಬುಡ್ತರೆ ಅಂದ ಮೂರು ನಾಕ ಸತಿ ಜನಾರ್ದನ ತಡಕಂಡ. ಆ ಟೈಮಲ್ಯಲ್ಲ ಇನ್ನೇನು ಇಳಿತಿನಿ ಅಂತ ಬೇಕಾದೋಟ ಗ್ಯಬರಿಕಂಡು ಬುಟ್ಟ. ಪರಿಣಾಮ ಅಡ್ವಾನ್ಸಾಗಿ ಆಸುಪತ್ರೆ ಪೇಶಂಟು."

"ಕುಮಾರಸ್ವಾಮಿ ಅನಿತಕ್ಯನೂ ಅರೆಸ್ಟಾದರಂತಲ್ಲಾ?" ಎಂದಳು ಜುಮ್ಮಿ.

"ಅವುರೂ ಆಗಲೇಬೇಕು ಕಣಕ್ಕ. ಅವುರಿಗಿಂತ ಮೊದಲಿದ್ನಲ್ಲ ಯಸ್ಸೆಂ ಕೃಷ್ಣ ಅನ್ನೊ ಕೃಪ್ಪ. ಅವುನೇನು ಮಾಡಿದ ಅಂದ್ರೇ ಸೂಟು ಬೂಟಾಯ್ಕಂಡು, ಟೈಕಟಿಗಂಡು, ಸ್ಪೂನಲ್ಲಿ ತಿಂದು ಬಾಯಿ ವರಿಸಿಗಂಡೋದ. ಅವುನೇಟು ತಿಂದ ಅನ್ನದು ಯಾರಿಗೂ ಗೊತ್ತಾಗಲಿಲ್ಲ. ಅದೇ ಕುಮಾರಣ್ಣ ಕಾಲ ಸಂದಿಗೆ ಪಾತ್ರೆ ಮಡಿಕಂಡು ಸೌಟಲ್ಲಿ ತಿಂದ. ವಸಿಯ ಅಕ್ಕಪಕ್ಕದವರಿಗೂ ತಿನ್ನಿಸಿದ. ಸೌಟಲ್ಲಿ ತಿಂದಿದ್ರಿಂದ ಬಾಯಿಗೆ ವರಕಂಡಿದ್ಯಲ್ಲ ಕಾಣ್ತು, ಕೇಸಾಯ್ತು. ಆದ್ರೆ ಈ ಎಡೂರಪ್ಪ ಬೋಗಣಿನೆ ಎತ್ತಿ ಬಾಯಾಕಿದ. ಬೋಗುಣಿವಳಿಕೆ ತಲೆ ಸಿಗಾಯ್ಕತ್ತು. ಆದ್ರು ನೆಕ್ತಾ ಕೂತಿದ್ದ. ಆಗ ಸಂತೋಷ್ ಹೆಗಡೆ ಬಂದು ಬೋಗುಣಿ ಕಿತ್ತು ಮಡಗಿ ಕಳಿಸಿದ್ರು. ಅಜೀರ್ಣಾಗಿ ಎಡೂರಪ್ಪ ಬನ್ನೇರುಘಟ್ಟ ರೋಡಲ್ಲಿರೊ ಸಾಗರ್ ಆಸುಪತ್ರೆಗೆ ಅಡಮಿಟ್ಟಾಗ್ಯವುನೆ, ಅಂತೂ ಅವುನ ಸ್ಟೋರಿ ಎಂಡಾಯ್ತಾ ಅದೆ" ಎಂದು ವಾಟಿಸ್ಸೆ ಹೊರಟ. ❖


...ಡಾಡುವ ಡಿನ್ನರ್‌ಗಳು...



...ಮಾಂಸ ತಿನ್ನಬೇಕೆ ಬೇಡವೆ ಎಂಬ ಪ್ರಶ್ನೆ ಜಟಿಲವಾದದ್ದು, ಮನುಷ್ಯನನ್ನು ಮಾತ್ರ ...ುವಂಥದ್ದು. ಮೊನ್ನೆ ನಮ್ಮ ಶೂದ್ರ ಶ್ರೀನಿವಾಸ್ ತಾನು ಮಾಂಸ ತಿನ್ನುವುದನ್ನು ಬಿಟ್ಟಿರುವುದಾಗಿ ...ೀಷಿಸಿದ; ಮಾಂಸ ಮತ್ತು ಹಿಂಸೆಯ ಬಗ್ಗೆ ಬರೆದೂಬಿಟ್ಟ. ಹಾಗೆಯೇ ಆತ ತನ್ನ ...ದಾಟದ ಅಂಗವಾಗಿ ಮೇನಕಾ ಗಾಂಧಿಯ ಭಾಷಣವೊಂದನ್ನು ಕೇಳಿದ. ಕೇಳಿದ್ದು ಮತ್ತು ...ೀಡಿದ್ದು ಎರಡೂ ಹೃದಯಂಗಮವೆನ್ನಿಸಿದವೋ ಏನೋ– ಮೇನಕಾ ಮಹಾನ್ ಪರಿಸರವಾದಿ ...ದು ಪುರಂದರನ ಎದುರು ಸಂಬಂಧಪಟ್ಟ ದಾಸರು ಕುಣಿದಾಡುವಂತೆ ಕುಣಿದಾಡಿದ. ನಾನು ...ಲ್ಲ ತಮಾಷೆ ಮಾಡಿದರೂ ನಮ್ಮ ಶೂದ್ರ ಎಷ್ಟು ಮುಗ್ಧ ಮತ್ತು ಮಾನವೀಯ ಎಂಬುದನ್ನು ... ಆತ ಮಾಂಸಾಹಾರಿ ರೆಡ್ಡಿ ಜನಾಂಗದವನು; ಕಣ್ಣೆದುರು ಕಂಡಿದ್ದರ ಪ್ರಭಾವದಲ್ಲಿ ಎಂದೋ ...ದ್ದನ್ನು ಮರೆಯುತ್ತಾನೆ. ಮೇನಕಾ ಗಾಂಧಿ ರಾಜಕಾರಣಿ. ಆಕೆಯ ಇಡೀ ಪರಿಸರವಾದ ಆಕೆಯ ಕೆಟ್ಟ ರಾಜಕೀಯ, ...ತ್ತೆ, ಸಮಯಸಾಧಕತನದಿಂದ ಕಲುಷಿತವಾಗಿದೆ. ಪ್ರಾಣಿಗಳನ್ನು ಪೊರೆಯುವ ಬಗ್ಗೆ ಮಾತಾಡುವ ಇವಳು ಉಲ್ಲಾಸ್ ...ಂತರ ಮಾತು ಕೇಳಿ ಆತನ ರೇಡಿಯೋ ಕಾಲರ್ ಬೆಂಬಲಿಸಿ ಭಾಷಣ ನೀಡಿದಳು; ಇದರಿಂದ ಪ್ರಾಣಿಗಳಿಗೆ ...ಗುತ್ತದೆ ಎಂಬ ನೆದರು ಈಕೆಗಿರಲಿಲ್ಲ, ಮೇನಕಾ ಹಾಳಾಗಲಿ, ಮಾಂಸಾಹಾರಿಯಾದ ಹುಲಿ ಹಿಂಸೆ, ಅಹಿಂಸೆಯ ... ಚಿಂತಿಸಿ ಸೊರಗುವುದಿಲ್ಲ, ಹಸಿದು ಮಾಂಸಕ್ಕಾಗಿ ಕಾತರಿಸೀತೇ ಹೊರತು ತನಗೆ ಸಿಕ್ಕದೆ ಬಚಾವಾದ ಪ್ರಾಣಿಗಳ ... ಯೋಚಿಸುವುದಿಲ್ಲ, ತನ್ನ ಆಹಾರದ ಬಗ್ಗೆ ಘೋಷಿಸುವುದಿಲ್ಲ, ಇದನ್ನು ಯಾರನ್ನೂ ಗೇಲಿ ಮಾಡಲು ಹೇಳುತ್ತಿಲ್ಲ, ...ನುಷ್ಯ ಪದೇಪದೆ ಯೋಚಿಸಬೇಕಾದ ವಿಷಯ ಇದು. ಇದರಲ್ಲಿರುವ ಸೂಕ್ಷ್ಮಗಳನ್ನು ಕೊಂಚ ಬಿಡಿಸಿ ಹೇಳುತ್ತೇನೆ, ... ನೀವು ಬಲ್ಲ ಕುರಿಮರಿ ನಿಮ್ಮನ್ನು ಪ್ರೀತಿಸುತ್ತದೆ; ನಿಮಗೆ ಅದು ಮುದ್ದಿನ ಕುರಿಮರಿ. ಅದನ್ನು ಕೊಲ್ಲಲಾಗುವುದಿಲ್ಲ, ...ಒಂದು ಅರೆಬರೆ ಪರಿಚಯದ ಪ್ರಾಣಿ. ಅದನ್ನೂ ಕೊಲ್ಲುವುದು ಕಷ್ಟ. ನಿಮಗಾಗಿ ಮಡಿಯುವ ಹೋರಿ, ಕೋಣ, ...ಳು ಅವುಗಳನ್ನು ಕೊಲ್ಲುವುದು ಕಷ್ಟ. ಉಪ್ಪು ಮತ್ತು ಹಾಲಿಗಿಂತ ದೊಡ್ಡ ಸಂಕೇತವಾಗಿರುವ ಆಕಳು ಅತ್ಯಂತ ...ಪದಾದ, ಉಪಯುಕ್ತವಾದ, ಪ್ರೀತಿ ತುಂಬಿದ ಪ್ರಾಣಿ. ಆಕಳೇ ಏಕೆ, ನಾವು ಸಾಕಿದ ಮುದ್ದಿನ ಹಂದಿಮರಿ, ಮೊಲ, ...ಳಿ. ಹೀಗೆ ನೋಡುತ್ತಾ ಹೋದರೆ ಸರಿಹೋಗುವುದಿಲ್ಲ ಎಂದು ಕೊಲ್ಲುತ್ತೇವೆ. ಜೀವಂತ ಪ್ರಾಣಿ, ಪ್ರೀತಿಯ ಪ್ರಾಣಿ ...ಮಕೊಂಡರೂ ಕೊಲ್ಲುತ್ತೇವೆ. ಕೊಲ್ಲುವುದನ್ನು ಅಭ್ಯಾಸ ಮಾಡಿಕೊಂಡ ಮನುಷ್ಯ ದೇಹದ ಮಟ್ಟದಲ್ಲಿ ಮನುಷ್ಯನನ್ನು ...ಂದು ತಿನ್ನದಿರಲು ಯಾವುದೇ ಕಾರಣವಿಲ್ಲ, ಪೊಲೀಸರು, ಕೋರ್ಟು, ಗಲ್ಲು ಮುಂತಾದ್ದಕ್ಕೆ ಹೆದರಿ ಮಾತ್ರ ...ಂದು ತಿನ್ನುವುದಿಲ್ಲ, ಅವೆಲ್ಲ ಹೆದರಿಕೆ ಇಲ್ಲದಿದ್ದರೆ ಏಡಿಯನ್ನು ಕಿವುಚಿ ತಿನ್ನುವ, ಆಮೆಯನ್ನು ಒಡೆದು ತಿನ್ನುವ ...ವ್ಯ ಮನುಷ್ಯನನ್ನು ಸೀಳಿ ತಿನ್ನಬಹುದು.

...ಹಾಗೆಂದು ಸಸ್ಯಾಹಾರಿಗಳು ಗಿಡಮರಸೊಪ್ಪು ಧಾನ್ಯ ತಿಂದು ಅಹಿಂಸಾವಾದಿಗಳೆಂದು ಹೇಳಿಕೊಳ್ಳಲಾಗುವುದಿಲ್ಲ, ಎಲ್ಲ ಪ್ರಾಣಿಗಳಿಗಿಂತ ಜೀವಂತವಾದದು ಸಸ್ಯಗಳು. ಪ್ರಾಣಿಗಳು ಮರಿ ಮಾತ್ರ ಹಾಕುತ್ತವೆ; ಸಸ್ಯಗಳು ಮೊಗ್ಗು, ಹೂವು, ಸುಗಂಧ, ಹಣ್ಣು, ಮೊಳಕೆ ಮುಂತಾದ್ದವನ್ನೆಲ್ಲ ತೋರುತ್ತವೆ. ಅವು ನಡೆದಾಡುವುದಿಲ್ಲ, ಮಾತಾಡುವುದಿಲ್ಲ ಎಂದ ಮಾತ್ರಕ್ಕೆ ಹಿಂಸೆಯನ್ನು ಅನುಭವಿಸುವುದಿಲ್ಲ ಎಂದು ಧೈರ್ಯವಾಗಿ ಹೇಳಲಾರೆವು. ನೋವು ನರಗಳು ಮತ್ತು ಮಿದುಳಿಗೆ ಸಂಬಂಧಿಸಿದ್ದು, ಚಿಂತನೆ ಕೂಡ ಮಿದುಳಲ್ಲಿ ಆಗುತ್ತೆ. ಜೀವಂತವಾಗಿ ಇರುವ, ನಮ್ಮಂತೆಯೇ ಪರಿವರ್ತನೆ, ಪರಿಸರಕ್ಕೆ ಸ್ಪಂದಿಸುವ ಮರಗಿಡಗಳಲ್ಲಿ ಇಡೀ ದೇಹವೇ ನರ, ಮಿದುಳು ಆಗಿದ್ದರೆ ಆಶ್ಚರ್ಯವಿಲ್ಲ. ಹಾಗಾದರೆ ಮನುಷ್ಯ ಏನನ್ನು ತಿನ್ನಬೇಕು?

ಜೀವಂತವಾದ ಸಸ್ಯ ಅಥವಾ ಮಾಂಸ ತಿನ್ನದಿದ್ದರೆ ಆತ ಉಳಿಯುವುದಿಲ್ಲ. ಹಾಗಾದರೆ ಆತನ ಏನು ಮಾಡಬೇಕು? ಏನನ್ನು ತಿಂದು ಬದುಕಬೇಕು? ಈ ಪ್ರಶ್ನೆ ಕೇಳಿಕೊಂಡಾಗಲೇ ಮನುಷ್ಯ ಹೇಗೆ ಇದನ್ನು ಕುರಿತು ತೀವ್ರವಾಗಿ ಯೋಚಿಸಿದ್ದಾನೆ ಎಂಬುದು ಕಂಡುಬರುತ್ತದೆ. ಅಹಿಂಸೆಯನ್ನು ಪಾಲಿಸುವುದಕ್ಕಾಗಿ ಬಾಯಿಗೆ ಬಟ್ಟೆ ಕಟ್ಟಿಕೊಳ್ಳುವ ಜೈನ ಸಂತರು ಒಂದು ಕೊನೆಯಲ್ಲಿ, ಕಂಡದ್ದನ್ನೆಲ್ಲ ಕತ್ತರಿಸಿ ತಿನ್ನುವವರು ಇನ್ನೊಂದು ಕೊನೆಯಲ್ಲಿ, ರಕ್ತಪಾತ ಮಾಡುವವರು, ಹಿಂಸೆಯ ಥ್ರಿಲ್‌ನಲ್ಲೇ ಬದುಕುವವರು, ಶತ್ರುಗಳಿಲ್ಲದಿದ್ದರೆ ಅಸ್ತಿತ್ವವನ್ನೇ ಕಳೆದುಕೊಳ್ಳುವವರು, ವಂಚಿಸುವವರು... ಈ ಮಧ್ಯೆ ಶೋಷಿಸುವವ, ದುಡಿಸಿಕೊಳ್ಳುವವ, ಸುಲಿಯುವವ, ಕಂಡದ್ದನ್ನು ನುಂಗುವವ, ಬಡವರನ್ನು ತುಳಿಯುವ–ಇವೆಲ್ಲವೂ ಸಂಕೇತಗಳು; ಉಪಮೆಗಳು. ಇವೆಲ್ಲವೂ ಬಂದಿರುವುದು ಮನುಷ್ಯ ತಲತಲಾಂತರದಿಂದ ನಾನಾ ಬಗೆಯ ರಕ್ತಪಾತದಲ್ಲಿ ಮುಳುಗಿರುವುದರಿಂದ. ಆ ಬಗ್ಗೆ ಯೋಚಿಸದಿರುವ ಹುಲಿ, ಚಿರತೆಗಳೆಲ್ಲ ಒಂದಿಷ್ಟೂ ಕೊಳಕಿಲ್ಲದೆ ತಿಂದು ನಿರುಮ್ಮಳವಾಗಿರುತ್ತವೆ. ಕೊಲ್ಲುವುದೂ ಕೊಲ್ಲಿಸಿಕೊಳ್ಳುವುದೂ ಆ ವಲಯದಲ್ಲಿ ನೈಸರ್ಗಿಕವಾದದ್ದು.




ಮನುಷ್ಯನ ಮನಸ್ಸು ಆತನ ಜೀವನವನ್ನು ಸ್ವಚ್ಛವಾಗಿಡಬಲ್ಲದು ಅಥವಾ ಜಟಿಲವಾಗಿಸಿ ಗಲೀಜುಮಾಡಬಲ್ಲದು. ತನ್ನ ಮನಸ್ಸಿನಿಂದಾಗಿಯೇ ಕೊಂದವನು ಸಹಜವಾಗಿರುವುದಿಲ್ಲ, ಹಿಂಸೆಯಲ್ಲಿ ಮುಳುಗಿಯೂ ನೆಮ್ಮದಿಯಾಗಿರುವುದಿಲ್ಲ. ಆದ್ದರಿಂದ ಮನುಷ್ಯ ಸಹಜವಾಗಿರುವುದನ್ನು ಕಲಿಯಬೇಕಾಗುತ್ತದೆ. ಮಾಂಸಕ್ಕಾಗಿ ಕೊಂದೂ ಚೊಕ್ಕವಾಗಿರುವುದು, ಸಸ್ಯಗಳನ್ನು ಬೆಳೆದು ಬಳಸಿಯೂ ಖುಷಿಯಾಗಿರುವುದು ಕಷ್ಟವೆಂದು ಮಾತ್ರ ಹೇಳುತ್ತಿದ್ದೇನೆ.

ಮಾನವನ ಮನಸ್ಸು ಅದ್ಭುತವಾದದ್ದು, ಸಸ್ಯಾಹಾರ ಅದಕ್ಕೆ ಸ್ವಲ್ಪವಾದರೂ ನೆರವಾಗುವುದಾದರೆ ಒಳ್ಳೆಯದು. ಗಿಡಮರಬಳ್ಳಿಗಳಿಗೆ ಮಿದುಳು ಇಲ್ಲವೆಂದು ಇಟ್ಟುಕೊಳ್ಳೋಣ.....

–ಅಕ್ಟೋಬರ್ 4, 1995

ಫ್ರೀಡಂ ಪಾರ್ಕ್‌ಲಿ ವೈರಿ ಕುಂತವನೆ



ಎಚ್.ಎಲ್. ಕೇಶವಮೂರ್ತಿ

ಅಣಕ

ಅವರು ಪ್ರಖ್ಯಾತ ವಕೀಲರು. ದೆಹಲಿಯಲ್ಲಿ ವಾಸ. ಎಂತಹ ಕ್ಲಿಷ್ಟ ಮೊಕದ್ದಮೆಯಾದರೂ ಗೆಲ್ಲುವ ಚಾತುರ್ಯ ಇತ್ತು. ಅವರು ಯಾರ ಪರವೂ ಅಲ್ಲ. ಅವರ ಬುದ್ಧಿಮತ್ತೆಯನ್ನು ತಕ್ಕ ಸಂಭಾವನೆ ನೀಡಿ, ಯಾರು ಬೇಕಾದರೂ ಎರವಲು ಪಡೆಯಬಹುದಾಗಿತ್ತು. ಹೀಗಿದ್ದರೂ ಅವರಿಗೆ ದೇಶದ ಕಾನೂನು ಎಂದರೆ ಅತಿಯಾದ ಗೌರವ. ಅದನ್ನು ತಪ್ಪದೆ ಪರಿಪಾಲಿಸುತ್ತಿದ್ದರು. ಅವರ ಸಂಭಾವನೆ ಎಲ್ಲ ಚೆಕ್ ಮುಖಾಂತರವೇ ಇರಬೇಕು. ನಗದು ಸ್ವೀಕರಿಸಿದ್ದೇ ಇಲ್ಲ. ಕರಾರುವಾಕ್ಕಾಗಿ ಆದಾಯ ತೆರಿಗೆ, ವೃತ್ತಿ ತೆರಿಗೆ ಇಂತಹ ಎಲ್ಲಾ ತೆರಿಗೆಗಳನ್ನು ಪಾವತಿಸುತ್ತಿದ್ದರು. ಸಭ್ಯ ನಾಗರಿಕ ಎಂದೇ ಗುರುತಿಸಿಕೊಂಡಿದ್ದರು. ಭಾರೀ ವಕೀಲರು ಅಂದ ಮೇಲೆ ಅವರ ಸೇವೆ ಭಾರೀ ಕುಳಗಳಿಗೇ ಮೀಸಲಾಗಿತ್ತು. ಬಡವರ ಸೇವೆಗೆ ಹಿಂಜರಿಯುತ್ತಿರಲಿಲ್ಲ. ಆದರೆ ಫೀಸು ಕೊಡುವ ಚೈತನ್ಯ ಇವರಿಗೆ ಇರಬೇಕಲ್ಲ! ಅನಿವಾರ್ಯವಾಗಿ ಅವರ ಸೇವೆ ಕಳ್ಳದಂಧೆಯಲ್ಲಿ ತಗುಲಿ ಹಾಕಿಕೊಂಡ ದಢೂತಿ ಕುಳಗಳಿಗೇ ಸಿಗುತ್ತಿತ್ತು. ಯಾರೋ ಒಬ್ಬರು 'ಏನು ಸ್ವಾಮಿ ಈ ಅನ್ಯಾಯ. ತಾವು ನ್ಯಾಯಪರರು ಅಂತ ಇದ್ದರೆ, ಅಂಗೈಹುಣ್ಣಿನಷ್ಟೇ ಸ್ಪಷ್ಟವಾಗಿ ಭ್ರಷ್ಟಾಚಾರ ಎಸಗಿರುವವರ ಪರ ವಾದಿಸೋಕೆ ಬಂದಿದೀರಲ್ಲ' ಎಂದು ಬೇಸರ ವ್ಯಕ್ತಪಡಿಸಿದರಂತೆ. ಅದಕ್ಕೆ ಅವರು 'ಆರೋಪಿ ಪರ ಅಷ್ಟೆ, ಅಪರಾಧಿಪರ ಅಲ್ಲ' ಎಂದು ಖಡಕ್ಕಾಗಿ ಉತ್ತರಿಸಿದರಂತೆ!

ಆರೋಪಿ, ಅಪರಾಧಿ ನಡುವಿನ ವ್ಯತ್ಯಾಸವನ್ನು ಸನ್ಮಾನ್ಯ ವಿಜಯಶಂಕರ ಅವರು ಎಳೆಎಳೆಯಾಗಿ ಬಿಡಿಸಿ ಬಿಡಿಸಿ ಎಳೆಮಕ್ಕಳಿಗೂ ತಿಳಿಯುವ ಹಾಗೆ ಮಾಧ್ಯಮದವರ ಮುಂದೆ ಹೇಳಿದಾಗ ಇದು ನೆನಪಾಯಿತು. ಇದನ್ನು ವಿವರಿಸುವ ತರದೂದು ಸನ್ಮಾನ್ಯರಿಗೆ ಯಾಕೆ ಬಂದಿತು ಎಂದರೆ.......

'ಭ್ರಷ್ಟಾಚಾರ ತೊಲಗಲಿ'

'ಪಾರದರ್ಶಕ ಆಡಳಿತ ಬರಲಿ'

'ಅಣ್ಣಾ ಅಂದರೆ ಇಂಡಿಯಾ, ಇಂಡಿಯಾ ಎಂದರೆ ಅಣ್ಣಾ'


ಇಂತಹ ತರಹೇವಾರಿ ಘೋಷಣೆಗಳು ದೇಶದ ನಗರಗಳ ಉದ್ದಗಲಕ್ಕೂ ಮೊಳಗುತ್ತಿರುವುದನ್ನು ಕಂಡು ಸನ್ಮಾನ್ಯ ಯಡ್ಯೂರಪ್ಪನವರ ಹೃದಯ ಮಿಡಿಯಿತು. ಸಾರಿದರು ಅವರು 'ಭ್ರಷ್ಟಾಚಾರಕ್ಕೆ ನನ್ನ ವಿರೋಧ!'

ಸಾರಿದರು ಸರಿ. ಜನರಿಗೆ ಇದು ತಲುಪಬೇಕಲ್ಲ? ಸಾರ್ವಜನಿಕವಾಗಿ ವ್ಯಕ್ತಪಡಿಸಲು ಸೂಕ್ತ ಸ್ಥಳಬೇಕಲ್ಲ?

ಬೆಂಗಳೂರಿನ ಫ್ರೀಡಂಪಾರ್ಕ್ ಇತ್ತು ನಿಜ. ಆದರೆ ಅಲ್ಲಿಗೆ ಸನ್ಮಾನ್ಯರು ಹೋಗುವಂತಿಲ್ಲ!

ಅಲ್ಲಿಗೆ ಹೋಗಲು ಏನು ಅಡಚಣೆ? ಸನ್ಮಾನ್ಯರೇ ಅಲ್ಲವೆ ಅದನ್ನು ಅಭಿವೃದ್ಧಿ ಪಡಿಸಿದ್ದು?

ಇದು ಸತ್ಯವೇ ಹೌದು. ಆದರೆ... ಸಂತೋಷ್ ಹೆಗ್ಡೆ ಅದನ್ನು ಆಗಲೇ ಆಕ್ರಮಿಸಿಕೊಂಡಿದ್ದರು!



ಮುಖ್ಯಮಂತ್ರಿಯ ಗದ್ದುಗೆಯಿಂದ ಬೀಳಿಸಿದ್ದ ಕಡುಪಾಪಿ ಅಲ್ಲವೇ ಅವರು. ಅಲ್ಲಿಗೆ ಹೋಗಲು ಮನಸ್ಸು ಬಾರದು. ಅಲ್ಲದೆ ಅಲ್ಲಿ ನೆರೆದಿರುವ 'ಸಂತೋಷ ಸೇನೆ' ಇವರು ಭಾಗವಹಿಸುವಿಕೆಯನ್ನು ವಿರೋಧಿಸಿದರೂ ವಿರೋಧಿಸಬಹುದು!

ಅರಸನ ಅಂಕೆ, ದೆವ್ವದ ಕಾಟ ಇಲ್ಲದ ಪ್ರಶಸ್ತ ಸ್ಥಳ ಎಂದರೆ ಗಾಂಧಿಪ್ರತಿಮೆ ಆವರಣ. ಅಲ್ಲಿ ಉಪವಾಸ ಸತ್ಯಾಗ್ರಹ ಮಾಡಲು ನಿರ್ಧರಿಸಿದರು.

ನಿಗದಿತ ವೇಳೆ ಸಮೀಪಿಸಿತ್ತು. ಸಚ್ಚಾರಿತ್ರರೆಲ್ಲರೂ ಅಲ್ಲಿ ಜಮಾಯಿಸಿದ್ದರು. ಆದರೆ ಮದುವೆ ಗಂಡೇ ನಾಪತ್ತೆ!

'ಭ್ರಷ್ಟಾಚಾರ ವಿರೋಧಿ' ಯಡ್ಯೂರಪ್ಪನವರ ಮುಖಾರವಿಂದದ ವೀಕ್ಷಣೆಗೆ ಕುತೂಹಲದಿಂದ ಕಾಯ್ದಿದ್ದರು ಮಾಧ್ಯಮದವರು. ಆ ಮುಖ ಕಾಣದೆ ನಿರಾಶೆಗೊಂಡ ಅವರು ಅಲ್ಲಿದ್ದವರಿಗೇ ಅಟಕಾಯಿಸಿಕೊಂಡರು.

'ಯಡ್ಯೂರಪ್ಪ ಕಡು ಭ್ರಷ್ಟ. ಅಂತಹವರು ಅಣ್ಣಾ ಹಜಾರೆ ಅವರಿಗೆ ಬೆಂಬಲ ನೀಡುವುದು ಎಷ್ಟು ಸರಿ?'

'ಅಂತಹ ಭ್ರಷ್ಟನಿಗೆ ಬೆಂಬಲಿಸಲು ಬಂದಿದ್ದೀರಲ್ಲ ನಿಮಗೇನು ಮಾನ ಮರ್ಯಾದೆ, ನಾಚಿಕೆ ಹೇಸಿಗೆ ಇಲ್ಲವೆ' ಅನ್ನುವ ಟೋನು ವಿಜಯಶಂಕರ ಅವರನ್ನು ಕೆರಳಿಸಿರಬೇಕು. ಆಗ ಅವರ ಬಾಯಿಂದ ಹೊರಬಂದದ್ದು ಆರೋಪಿ, ಅಪರಾಧಿ ವಿಶ್ಲೇಷಣೆ.

ಮುಹೂರ್ತ ಮೀರಿತ್ತು, ಆದರೂ ವರ ಪತ್ತೆ ಇಲ್ಲ! ಹೈಕಮಾಂಡ್ ಬೆದರಿಕೆಯೆ? ಬಂದರೆ ಅಪಹಾಸ್ಯಕ್ಕೆ ಗುರಿಯಾಗುವೆನೆಂಬ ಭಯವೆ?

ಇದು ಯಾವುದೂ ಅಲ್ಲವಂತೆ. ಸನ್ಮಾನ್ಯ ಯಡ್ಯೂರಪ್ಪನವರು ಬಂದದ್ದೇ ಆದರೆ ಸಾವಿರಾರು ಸಂಖ್ಯೆಯಲ್ಲಿ ಜಮಾಯಿಸುವ ಜನರಿಂದ ವಾಹನ ಸಂಚಾರ ಅಸ್ತವ್ಯಸ್ತವಾಗುತ್ತದೆ! ವಾಹನ ನಿಲುಗಡೆ ತಡೆಯಲು ಸತ್ಯಾಗ್ರಹ ನಿಲುಗಡೆ!

ಮೊದಲೇ ಇದರ ಅರಿವಿರಲಿಲ್ಲವೆ?

ತಿಳಿಯದು. ಅಂತೂ ಇದೇ ಸತ್ಯಸ್ಯಸತ್ಯ ಅಂತೆ!

ಯಾರು ಹೇಳಿದರು ಈ ಮಾತನ್ನು?

ಸಚ್ಚಾರಿತ್ರವಂತರಾದ ರೇಣುಕಾಚಾರ್ಯ!

ಅಂತೂಇಂತೂ ಕುಂತಿ ಮಕ್ಕಳಿಗೆ ರಾಜ್ಯ ಇಲ್ಲ, ಯಡ್ಯೂರಪ್ಪನವರ ವಿಜಯ ಸಂಕೇತ ನೋಡುವ ಭಾಗ್ಯ ಜನತೆಗಿಲ್ಲ!

ಲೊಳಲೊಟ್ಟೆ!

'ಭ್ರಷ್ಟಾಚಾರ ನಿರ್ಮೂಲನಕ್ಕೆ ಪ್ರಬಲ ಮಸೂದೆ ಬೇಕು' ಎನ್ನುತ್ತಾರೆ ಪ್ರಧಾನಿ. 'ಭ್ರಷ್ಟಾಚಾರ ತೊಲಗಲಿ' ಅಣ್ಣಾ ಅವರ ಘೋಷಣೆ.

ಈರ್ವರ ಉದ್ದೇಶವೂ ಒಂದೆ- 'ಭ್ರಷ್ಟಾಚಾರ ನಿರ್ಮೂಲನೆ!'

ತಕರಾರು ಎಲ್ಲಿದೆ?

ಲೋಕಪಾಲ ಮಸೂದೆಯಿಂದ ಇದು ಸಾಧ್ಯ ಎಂದು ಅವರು. ಜನ ಲೋಕಪಾಲ ಮಸೂದೆಯೆ ಮದ್ದು ಎಂದು ಇವರು.

ಇವೇನು ಲೋಪಮುಕ್ತವೆ?

ಪ್ರತಿಷ್ಠೆಯ ಪ್ರಶ್ನೆ. ಒಪ್ಪಲು ಯಾರೂ ಸಿದ್ಧರಿಲ್ಲ. ಹೆತ್ತಿದ್ದೇ ಹೆಗ್ಗಣ. ಅದೇ ಅವರಿಗೆ ಮುದ್ದು!

ಮತ್ತೆ ಸಂಧಾನ. ಆಧ್ಯಾತ್ಮ ಗುರು ರವಿಶಂಕರ ಗುರೂಜಿ ಅವರ ಮಧ್ಯಸ್ಥಿಕೆ.

ಭ್ರಷ್ಟಾಚಾರ ನಿಗ್ರಹ ಮಸೂದೆಯಲ್ಲಿ ಏನೇನು ಇರಬೇಕು? ಇದಲ್ಲ ಪ್ರಶ್ನೆ. ಏನೇನು ಇರಬಾರದು? ಅದರ ಚರ್ಚೆ.

ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ಅವರನ್ನು ಸರಿಯಾಗಿ ರೂಪಿಸಬೇಕು.

ಖಂಡಿತ ಖಂಡಿತ.

ಇದಕ್ಕೆ ಗುಣಮಟ್ಟದ ಶಿಕ್ಷಣ ಬೇಕು. ಆದರೆ ಇದನ್ನು ನೀಡಲು ನಾವು ಅಸಮರ್ಥರು!

ಪರಿಹಾರ ಏನು?

ಶಿಕ್ಷಣ ಖಾಸಗೀಕರಣ ಆಗಲಿ!

ಆರೋಗ್ಯವೇ ಭಾಗ್ಯ

ಹೌದು ಹೌದು.

ಉತ್ತಮ ಚಿಕಿತ್ಸೆ ನೀಡಬೇಕು.

ಎಲ್ಲರೂ ಬಯಸುವುದು ಅದನ್ನೆ.

ನಮಗೂ ಮನಸ್ಸಿದೆ. ಆದರೆ ತ್ರಾಣ ಇಲ್ಲ.

ಈ ರೋಗಕ್ಕೆ ಏನು ಮದ್ದು?

ಆರೋಗ್ಯ ಖಾಸಗೀಕರಣ ಆಗಲಿ!

ಉತ್ತಮ ಸಲಹೆ. ಖಾಸಗಿಯವರನ್ನು ಆಕರ್ಷಿಸುವುದು ಹೇಗೆ?

ಕಾರ್ಪೊರೇಟ್ ಸಂಸ್ಥೆಗಳನ್ನು ಸರ್ಕಾರಿ ನಿಯಂತ್ರಣದಿಂದ ಹೊರಗಿಡಿ!

ಆಗಲಿ. ಸರ್ಕಾರದ ನೀತಿ ನಿಯಂತ್ರಣ ಹೇಗೆ?

ಎನ್‌ಜಿಓಗಳಿಗೆ ಬಿಡಿ.

ಅವರ ಪಾಲನೆ ಪೋಷಣೆ?

ಸರ್ಕಾರಕ್ಕೆ ಹೊರೆ ಇಲ್ಲ, ಕಾರ್ಪೊರೇಟ್ ಸಂಸ್ಥೆಗಳ ಇವುಗಳ ಬೆಂಬಲಕ್ಕಿವೆ.

ಮಠಮಾನ್ಯಗಳು ಲೋಕಪಾಲ ಮಸೂದೆಯ ವ್ಯಾಪ್ತಿ ತರಬಹುದೆ?

ಕೂಡದು, ಕೂಡದು. ಸಂಧಾನ ಪ್ರಕ್ರಿಯೆ ಪ್ರಾರಂಭ ಆದದ್ದೇ ಆಧ್ಯಾತ್ಮ ಗುರುಗಳ ಶ್ರಮದಿಂದ!

ಥಟ್ಟನೆ ಎಚ್ಚರ ಆಯಿತು. ದರಿದ್ರದ ಟೀವಿ ವೀಕ್ಷಣೆಯ ಫಲ. ಬರೀ ಇಂತಹ ಕನಸುಗಳೇ. ಅಲ್ಲಾ ಲೋಕಪಾಲ ಮಸೂದೇನೋ, ಜನಲೋಕಪಾಲ ಮಸೂದೇನೋ ಯಾವುದಾದರೂ ಆಗಲಿ. ಅದರ ವ್ಯಾಪ್ತಿಯೊಳಗೆ ಬರುವುದು ಲೊಳಲೊಟ್ಟೆ!

ಅಲೆಯೊಂದಿಗೆ ಕಣ್ಣು ಮುಚ್ಚಿ ತೇಲದ 'ಲಂಕೇಶ್'

ಕರಾವಳಿಯವರೇ ಆದವರೊಬ್ಬರು ಮುಖ್ಯಮಂತ್ರಿಯಾದರೂ ಕರಾವಳಿಗೆ ಹಿಡಿದ ಶನಿದೆಶೆಯಿಂದ ಮುಕ್ತಿ ದೊರೆಯದಿರುವುದು ಖೇದಕರ (ಲಂಕೇಶ್ 28.8.2011). ಕರಾವಳಿಯಲ್ಲಿ ಭೂಮಾಫಿಯಾ, ಮರಳು ಮಾಫಿಯಾ, ಹಾಗೂ ಧಾರ್ಮಿಕ ಮಾಫಿಯಾಗಳ ಅಟ್ಟಹಾಸ ಮುಂದುವರಿಯುವಂತೆ ಕಾಣುತ್ತಿದೆ. ಎರಡು ತಿಂಗಳ ಹಿಂದೆ ಇಲ್ಲಿಂದ ವರ್ಗವಾಗಿ ಹೋದ ಜಿಲ್ಲಾಧಿಕಾರಿ ಸುಭೋದ್ ಯಾದವ್ ಮರುಳು ಮಾಫಿಯಾಕ್ಕೆ ಮುಳ್ಳಾಗಿದ್ದರೆಂದು ಕೇವಲ ಏಳೇ ತಿಂಗಳೊಳಗೆ ಅವರ ವರ್ಗಾವಣೆಯಾಗಬೇಕಾದರೆ ಮಾಫಿಯಾಗಳ ರಾಜಕೀಯ ಶಕ್ತಿ ಊಹಿಸಬಹುದು.

ತುಳುನಾಡಿನ ಭೂದಾಹಿಂಗಳು ಸಾಮಾನ್ಯ ಜನರ ಧಾರ್ಮಿಕ ನಂಬಿಕೆಗಳನ್ನು ಹಾಗೂ ಮೌಢ್ಯವನ್ನು ಬಂಡವಾಳ ಮಾಡಿಕೊಂಡು ಹೇಗೆ ಲಾಭ ಮಾಡಿಕೊಳ್ಳುತ್ತಾರೆ ಎಂಬುದು ಒಳನಾಡಿನವರಿಗೆ ಗೊತ್ತಿರಲಿಕ್ಕಿಲ್ಲ. ದಕ್ಷಿಣ ಕನ್ನಡ-ಉಡುಪಿ ಜಿಲ್ಲೆಯ ಜನರು ಬುದ್ಧಿವಂತರು ನಿಜ, ಆದರೆ ಇವರು ಇಡೀ ಭಾರತದಲ್ಲಿಯೇ ಅತಿಹೆಚ್ಚು ಮೂಢನಂಬಿಕೆಯುಳ್ಳವರು ಎಂಬ ಪ್ರತೀತಿಯೂ ಇದೆ. ಇದಕ್ಕೆ ಮೂಲ ಕಾರಣ ತುಳುನಾಡಿನ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುವ ಭೂತಾರಾಧನೆ ಹಾಗೂ ನಾಗಾರಾಧನೆ. ಹಾಗಾಗಿ ಭೂತದ ಸಿಟ್ಟು ಅಥವಾ ನಾಗದೋಷದ ಬಗ್ಗೆ ಏನೇ ಹೇಳಿದರೂ ಇಲ್ಲಿಯ ಜನರು ಹಿಂದೂಗಳು ಮಾತ್ರವಲ್ಲ ಮುಸ್ಲಿಂ, ಕ್ರಿಶ್ಚನ್ ಸಹಿತ ಎಲ್ಲರೂ ನಂಬಿಬಿಡುತ್ತಾರೆ. ಇದನ್ನೇ ಬಂಡವಾಳ ಮಾಡಿಕೊಂಡ ಇಲ್ಲಿಯ ಭೂಮಾಫಿಯಾಗಳು ಖಾಸಗಿಯವರ ಭೂಮಿಗಳನ್ನು ತೀರ ಅಗ್ಗ ಬೆಲೆಗೆ ಒಳಹಾಕಿಕೊಳ್ಳಲು ಇಲ್ಲಿಯ ಕಳ್ಳ ಪುರೋಹಿತರ ಅಥವಾ ಜ್ಯೋತಿಷಿಗಳ ನೆರವು ಪಡೆದು, ಅವರಿಗೆ ಬೇಕಾದ ಖಾಸಗಿಯವರ ಜಮೀನಿನಲ್ಲಿ "ನಾಗದೋಷವಿದೆ, ಭೂತದ ಛಾಯೆಯಿದೆ" ಎಂದು ಅಪಪ್ರಚಾರ ಮಾಡಿ ಆ ಭೂಮಿಯ ಒಡೆಯರು ತಮ್ಮ ಭೂಮಿ ಮಾರಲೇ ಬೇಕಾದ ಅನಿವಾರ್ಯತೆ ಸೃಷ್ಟಿಸಿ, ಮೂಢನಂಬಿಕೆಗೆ ಬಲಿಯಾದ ಇತರರು ಅದನ್ನು ಕೊಳ್ಳದಂತೆ ಮಾಡಿ, ಕೊನೆಗೆ ತಾವು ಆ ಭೂಮಿಯನ್ನು ಒಳ ಹಾಕಿಕೊಳ್ಳುತ್ತಾರೆ.

ಈ ಮೂಢನಂಬಿಕೆಯನ್ನು ಎರಡು ದಶಕಗಳ ಹಿಂದೆ ಮೊಟ್ಟಮೊದಲು ಪ್ರಯೋಗಿಸಿ ಲಾಭ ಮಾಡಿಕೊಂಡವನು ಇಲ್ಲಿಯ ಒಬ್ಬ ಬಂಟ ಸಾರಾಯಿ ದೊರೆ (ಈಗ ಮೆಡಿಕಲ್ ಕಾಲೇಜು ಧಣಿ). ಇದನ್ನೇ ನಂತರ ಈಗಿನ ಬಿಜೆಪಿ ಸಚಿವ ಸಹಿತ ಇತರ ಬಿಲ್ಡರ್‌ಗಳೂ ಪ್ರಯೋಗಿಸಿ ಯಶಸ್ವಿಯಾಗಿದ್ದಾರೆ. ಮೌಢ್ಯಕ್ಕೆ ಜಯವಾಗಿದೆ. ಬ್ರಹ್ಮಕಲಶ-ಜೀರ್ಣೋದ್ಧಾರ-ಅಷ್ಟಮಂಗಳ ಇವುಗಳಲ್ಲಿ ಮುಳುಗಿರುವ ತುಳುನಾಡಿನವರು ಧಾರ್ಮಿಕ ವಿಷಯಗಳಲ್ಲಿ ಮೌಢ್ಯ ತೊರೆದು ತಮ್ಮ ಮೂಲ ಬುದ್ಧಿವಂತಿಕೆ ಉಪಯೋಗಿಸಬೇಕಿದೆ.

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ದಿನಾಂಕ 31.8.2011 ರ ಸಂಚಿಕೆಯಲ್ಲಿ ಪ್ರಕಟವಾದ 'ಬೊಮ್ಮನಗೌಡ ನೀವರಿಯದ ದುರಂತ ಕತೆ' ಎಂಬ ವರದಿಯನ್ನು ಓದಿದಾಗ ವಿಷಕಾರಿ ಹಿಂದೂತ್ವವಾದಿಗಳಿಗೆ ತಕ್ಕ ಪ್ರತಿಫಲ ಎಂದು ಸಮಾಧಾನಪಡುವ ಬದಲಾಗಿ, ಕೊನೆಗೂ ತಮ್ಮ ಪತ್ರಿಕೆ ವೈದಿಕರ ಕರ್ಮಸಿದ್ಧಾಂತವನ್ನು ಪರೋಕ್ಷವಾಗಿ ಎತ್ತಿ ಹಿಡಿದ ಬಗ್ಗೆ ಬೇಸರವಾಯಿತು. "ಡೀವಿಗೆ ಗೊತ್ತಿಲ್ಲದ ನೈಸರ್ಗಿಕ ನ್ಯಾಯವೊಂದು ಸದ್ದಿಲ್ಲದೆ ತನ್ನ ಲೀಲೆ ಮೆರೆದಿತ್ತು" ಎನ್ನುವುದು ಮತ್ತು "ಮುಸ್ಲಿಂ ದ್ವೇಷದ ಬೆಂಕಿ ಹಚ್ಚಿ ಬ್ರಾಹ್ಮಣರ ಹಿತರಕ್ಷಣೆಗೆ ಕಂಕಣ ತೊಟ್ಟು ಯಾರದೋ ಮಕ್ಕಳನ್ನು"ಬಲಿಕೊಡ ಹೊರಟವನಿಗೆ ವಿಧಿ ತನ್ನದೇ ವಿಧಾನದಲ್ಲಿ ಪಾಠ ಕಲಿಸುತ್ತದೆ, ಅದು ಡೀವಿಯ ಹಿರಿಮಗ ಕೌಶಿಕನ ದುರಂತ ಸಾವಿನ ಮೂಲಕವೇ ಸಾಬೀತಾಗಿತ್ತು" ಎಂತಲೂ ಇತ್ಯಾದಿ ಕರಾವಳಿ ಕೋಮುವಾದಿ ನಾಯಕರ ಈಗಿನ ದುರಂತ ಸ್ಥಿತಿ ಬಗ್ಗೆ ಬರೆದಿದ್ದು ಮೇಲುನೋಟಕ್ಕೆ ಕೋಮುವಾದದ ವಿರೋಧಿ ಲೇಖನವಾಗಿದ್ದರೂ ವೈಚಾರಿಕ ನೆಲೆಗಟ್ಟಿನಲ್ಲಿ ನೋಡಿದಾಗ ಪಕ್ಕಾ ಕಂದಾಚಾರಿ ಕರ್ಮವಾದಿ ಸಿದ್ಧಾಂತದ ಪ್ರತಿಪಾದಕ ಲೇಖನವೇ ಆಗಿದೆ.

ಇದೇ ಲೇಖನದ ಧಾಟಿಯಲ್ಲೇ ಸನಾತನವಾದಿಗಳು, ಕೋಮುಗಲಭೆಯಲ್ಲಿ ಮೃತಪಟ್ಟವರನ್ನೋ, ನೊಂದವರನ್ನೋ ಮಾಡಿದ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತಗೊಂಡವರು ಅಂಥ ಹೇಳಬಹುದಲ್ಲವೇ? ಹಾಗೆ ಮಾಡಿದ ಪಾಪಕ್ಕೆ ಡೀವಿಗೆ ತಕ್ಕ ಶಿಕ್ಷೆಯಾಗಿದೆ ಎಂದಾದಲ್ಲಿ ಡೀವಿಯವರ ಮಗ ಕೌಶಿಕ ಮಾಡಿದ ತಪ್ಪಾದರೂ ಏನು? ಡೀವಿ ಕೋಮುವಾದಿಯಾಗಿರಬಹುದು, ಅವರ ಮಗ ಕೌಶಿಕ್ ಕೂಡ ಕೋಮುವಾದಿಯಾಗಿದ್ದನೇ? ಮುಗ್ಧ ಬಾಲಕನನ್ನು ಬಲಿ ತೆಗೆದುಕೊಂಡ ನಿಮ್ಮ ವಿಧಿ ಮತ್ತು ನೈಸರ್ಗಿಕ ನ್ಯಾಯ ಅದೆಂತಹ ನೀಚ ಪ್ರವೃತ್ತಿಯದ್ದು?

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.


ಅಂತಹ ಕೆಟ್ಟ ವಿಧಿಯನ್ನು ಮತ್ತು ನೈಸರ್ಗಿಕ ನ್ಯಾಯವನ್ನು ಕೋಮುವಾದವನ್ನು ವಿರೋಧಿಸಲು ರಾ. ಸೋಮನಾಥರವರು ಬಳಸುತ್ತಾರೆಂದರೆ ನಿಮ್ಮ ಸಿದ್ಧಾಂತಕ್ಕೂ, ಸಂಘ ಪರಿವಾರದವರ ಸಿದ್ಧಾಂತಕ್ಕೂ ಯಾವ ವ್ಯತ್ಯಾಸವಿರುತ್ತದೆ? ಉದಾಹರಣೆಗಳು ಬೇರೆಬೇರೆಯಾಗಿರಬಹುದು, ಆದರೆ ಪ್ರತಿಪಾದಿಸುವ, ಎತ್ತಿ ಹಿಡಿಯುವ ಸಿದ್ಧಾಂತ ಅದೇ ಕರ್ಮಸಿದ್ಧಾಂತವಲ್ಲವೇ?

ನಿಮ್ಮದೇ ಕರ್ಮಸಿದ್ಧಾಂತದ ಧಾಟಿಯಲ್ಲೇ ಹೇಳುವುದಾದರೆ ಗುಜರಾತ್ ಹತ್ಯಾಕಾಂಡ ಮಾಡಿದ ನರೇಂದ್ರ ಮೋದಿ ಈವರೆಗೂ ನೆಮ್ಮದಿಯಾಗಿ ಮುಖ್ಯಮಂತ್ರಿಯಾಗೇ ಉಳಿದಿದ್ದಾರಲ್ಲ? ಅವರಿಗೆ ನಿಮ್ಮ ವಿಧಿ ಮತ್ತು ನೈಸರ್ಗಿಕ ನ್ಯಾಯ ಈವರೆಗೂ ಶಿಕ್ಷೆ ನೀಡಿಲ್ಲ ಯಾಕೆ? ಬಹುಶಃ ಗುಜರಾತ್‌ನ ಮುಸ್ಲಿಂರ ನರಮೇಧ ಅವರು ಮಾಡಿದ ಪಾಪಕ್ಕೆ ವಿಧಿ ನೀಡಿದ ಶಿಕ್ಷೆಯೇ? ಅಥವಾ-ನೈಸರ್ಗಿಕ ನ್ಯಾಯವೇ ನಿಮ್ಮ ಪತ್ರಿಕೆಯ ಕೋಮುವಾದ ವಿರೋಧದ ನಿಲುವು ಸ್ವಾಗತಾರ್ಹವಾದರೂ ಮುಂದೆ ಇಂತಹದ್ದು ಪ್ರಕಟವಾಗದಿರಲಿ ಎಂದು ಆಶಿಸುವೆ.

-ಎಚ್.ಯು. ಉದಯ್ ನಾಯ್ಕ್, ಹೊನ್ನಾವರ

ಆಗಸ್ಟ್ 17, 2011 ರ ಸಂಚಿಕೆಯಲ್ಲಿ 'ಸದಾನಂದ ಸಿಡುಕ ಯಡ್ಡಿಯ ಹಸನ್ಮುಖ ನೆರಳು' ಎಂಬ ಕಂಡಹಾಗೆ ಕಾಲಂ ಬಹಳ ಚೆನ್ನಾಗಿದೆ. ನಿಮಗೆ ಧನ್ಯವಾದಗಳು. ಮುಂದಿನ ಸಂಚಿಕೆಯಲ್ಲಿ ಈ ನಮ್ಮ ಮಠಾಧೀಶರ ಬಗ್ಗೆ ಸ್ವಲ್ಪ ಬರೆಯಬೇಕಾಗಿ ಪ್ರಾರ್ಥನೆ. ಮೊನ್ನೆ ಅಣ್ಣಾ ಹಜಾರೆಯವರಿಗೆ ಬೆಂಬಲವಾಗಿ ಮಠಾಧೀಶರುಗಳೆಲ್ಲಾ ಮೆರವಣಿಗೆ ಹೊರಟಿದ್ದನ್ನು ಟಿವಿಯಲ್ಲಿ ನೋಡಿ ಬಹಳ ಕಿರಿಕಿರಿಯಾಯಿತು. ಏಕೆಂದರೆ ಯಡಿಯೂರಪ್ಪನವರು ಅಣ್ಣಾ ಹಜಾರೆಯವರನ್ನು ಬೆಂಬಲಿಸಿ ಧರಣಿ ನಡೆಸುವುದಕ್ಕೂ, ಈ ಮಠಾಧೀಶರುಗಳು ರ್‍ಯಾಲಿ ನಡೆಸಿರುವುದಕ್ಕೂ ಏನೂ ವ್ಯತ್ಯಾಸವಿಲ್ಲ. ಯಡಿಯೂರಪ್ಪನವರ ಭ್ರಷ್ಟಾಚಾರದ ಹಣದಲ್ಲಿ ಭಾಗಿಗಳಾಗಿ, ಅವರನ್ನು ಸದಾ ಹೊಗಳಿ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ಕೊಡುತ್ತಾ ಇದ್ದ ಈ ಸ್ವಾಮಿಗಳು ಅಂದರೆ ಮಠಾಧೀಶರುಗಳು ಅರ್ಥಾತ್ ಜಗದ್ಗುರುಗಳು ಅಣ್ಣಾ ಹಜಾರೆಯವರ ಚಳವಳಿಯಲ್ಲಿ ಭಾಗವಹಿಸಿದ್ದಾರೆಂದರೆ ನಮ್ಮ ಡಾ. ಪರಮೇಶ್ವರ್‌ರವರು ಹೇಳಿದ ಹಾಗೆ ನೂರು ಇಲಿಗಳನ್ನು ಕೊಂದ ಬೆಕ್ಕು ಸನ್ಯಾಸತ್ವ ಸ್ವೀಕರಿಸಿದ ಹಾಗೆ ಎಂಬ ನಾಣ್ನುಡಿಗೆ ಅರ್ಹರಾಗಿರುತ್ತಾರೆ.


-'ಲಂಕೇಶ್' ಅಭಿಮಾನಿ



ಆಡಳಿತಾರೂಢರ ಹಿತರಕ್ಷಣೆಯ ಹಲ್ಲಿಲ್ಲದ ಹಾವಿನ ಸಂಸ್ಥೆಗೆ ಪಟ್ಟು - ಸರ್ಕಾರದ ಲೋಕಪಾಲ್ ಬಿಲ್. ಪ್ರಜಾತಂತ್ರ ವ್ಯವಸ್ಥೆಗೆ ಬೆನ್ನು ಮಾಡಿ ಉತ್ತರದಾಯಿತ್ವವಿಲ್ಲದ ಸಂಸ್ಥೆಗೆ ಬಿಗಿ ಪಟ್ಟು - ಅಣ್ಣಾ ತಂಡದ ಜನ ಲೋಕಪಾಲ್ ಬಿಲ್. ಸರ್ಕಾರದ ಪಟ್ಟು- ಅಣ್ಣಾ ಹಜಾರೆ ತಂಡದ ಬಿಗಿ ಪಟ್ಟು ಕುರಿತು ಗೌರಿ ಲಂಕೇಶ್ ಬರೆದ ವಿಶ್ಲೇಷಣೆ ಸೂಕ್ತ ಮತ್ತು ಸಮಯೋಚಿತವಾಗಿದೆ. ಸರ್ಕಾರ ಮತ್ತು ಅಣ್ಣಾ ತಂಡ ಇಬ್ಬರಿಗೂ ಬಡವರು, ಶೋಷಣೆಗೊಳಗಾಗುತ್ತಿರುವ ಸಮಾಜದ ವಿವಿಧ ವರ್ಗದವರ ಬೇಕುಬೇಡಗಳ ಬಗ್ಗೆ ಕ್ಯಾರೆ ಇಲ್ಲ. ಆದರೂ ಇಬ್ಬರೂ ಹೇಳೋದು ಮಾತ್ರ 'ಜೈ ಹೋ ಇಂಡಿಯಾ'. ಹೀಗಂದುಕೊಂಡು ಅವರದೇ ಆದ ವರ್ಗದ ಹಿತ ಕಾದುಕೊಳ್ಳುತ್ತಿದ್ದಾರೆ ಅಂತ ಹೇಳಬಹುದು. ಸಂಪಾದಕೀಯ 'ಲೋಕಪಾಲ್ ವ್/ಸ್ ಜನಲೋಕ ಪಾಲ್' ಅದ್ಭುತವಾಗಿದೆ ಮತ್ತು ಪ್ರಸ್ತುತವಾಗಿದೆ.

- ಎಂ. ಎಸ್. ನಾಗೇಶ್ ಗೌಡ, ಬೆಂಗಳೂರು

ಕಲಿಯುಗದ ಕುಡುಕನಿಗೆ ಇಬ್ಬರು ಹೆಂಡಿರು!



ಆತ ಹುಟ್ಟನಿಂದ ಸಾಬ. ಆದರೆ ಬೆಳೆದಿದ್ದೆಲ್ಲಾ ಗುರು ..ಸಗತೇಶ್ವರ ಮಠದಲ್ಲಿ. ಏಳು ವರ್ಷದ ಎಳೇ ವಯಸ್ಸಿಗೇ ..ಣ್ಣ ಹಚ್ಚಿ ವೇದಿಕೆ ಏರಿದ ಹುಡುಗನ ಹೆಸರು ರಾಜು ..ಬ್! ಈಗ ಆ ವ್ಯಕ್ತಿ ರಾಜು ..ಳಿಕೋಟೆ ಎಂಬ ಹೆಸರಿನಿಂದ ಇಡೀ ..ರ್ನಾಟಕದಾದ್ಯಂತ ಮನೆಮಾತಾಗಿದ್ದಾರೆ.

ಯೋಗರಾಜ್ ಭಟ್ ನಿರ್ದೇಶನದ ..ಮನಸಾರೆ', 'ಪಂಚರಂಗಿ' ಮತ್ತು ಸೂರಿ ..ರ್ದೇಶನದ 'ಜಾಕಿ' ಮುಂತಾದ ಚಿತ್ರಗಳ ..ಮೂಲಕ ಹೆಚ್ಚು ಪ್ರಚಾರಕ್ಕೆ ಬಂದ ರಾಜು ..ಳಿಕೋಟೆ ಬಹಳ ಹಿಂದೆಯೇ 'ಹೆಂಡ್ತಿ ..ಏದ್ರೆ', 'ಪಂಜಾಬಿ ಹೌಸ್' ತರಹದ ..ತ್ರಗಳಲ್ಲಿ ನಟಿಸಿದ್ದರೂ ಅಂಥ ಹೆಸರು ..ಡೆದಿರಲಿಲ್ಲ.

ರಾಜು ತಾಳಿಕೋಟೆ ಉತ್ತರ ..ರ್ನಾಟಕದಲ್ಲಿ ಸಿಕ್ಕಾಪಟ್ಟೆ ಫೇಮಸ್ ನಟ. ..ವರ 'ಕಲಿಯುಗದ ಕುಡುಕ' ನಾಟಕ ..ತ್ತು ಸಾವಿರಕ್ಕೂ ಹೆಚ್ಚು ಪ್ರದರ್ಶನಗಳನ್ನು ..ಡಿದೆ. 'ಕಣ್ಣಿದ್ರೂ ಬುದ್ಧಿಬೇಕು', ..ಮಾನವಂತರ ಮನೆತನ', 'ತಾಳಿ ತಕ ..ರು' ಎಂಬ ಹಾಸ್ಯ ನಾಟಕಗಳ ..ಮೂಲಕ ಹೆಚ್ಚು ಜನಪ್ರಿಯತೆ ಪಡೆದ ..ಜು ಇವತ್ತಿಗೂ ವೃತ್ತಿರಂಗಭೂಮಿ ..ಲ್ಲಿ ಸಕ್ರಿಯರಾಗಿದ್ದಾರೆ.

ಕೆಲ ವರ್ಷಗಳ ಹಿಂದೆ ಸ್ವರಸಂಗಮ ..ಡಿಯೋದವರು 'ಕಲಿಯುಗದ ಕುಡುಕ' ..ಟಕವನ್ನು ಆಡಿಯೋ ರೂಪದಲ್ಲಿ ..ಹೊರತಂದಿದ್ದರು. ಈ ಆಡಿಯೋದಿಂದ ..ಜುಗೆ ಬಂದ ಸಂಭಾವನೆ 16 ಸಾವಿರ ..ರೂಪಾಯಿ. ಈ ಆಡಿಯೋ ಕೆಸೆಟ್ಟು ಕರ್ನಾಟಕ, ಗೋವಾ, ..ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಗಳಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ..ಕರಿಯಾಗಿ ಸ್ವರಸಂಗಮದವರು ಕೋಟ್ಯಂತರ ರೂಪಾಯಿಯ ..ಲಾಭ ಕಂಡಿದ್ದರು. ಇದನ್ನು ನೋಡಿ ರಾಜು ಅದೇ ನಾಟಕವನ್ನು ..ತಾವೇ ವಿಡಿಯೋ ರೂಪದಲ್ಲಿ ನಿರ್ಮಿಸಿ ಒಂದಷ್ಟು ..ಸು ನೋಡಿದ್ದರು.

ಈ ರಾಜು ತಮ್ಮ 17ನೇ ವರ್ಷಕ್ಕೇ ಬಾಲ್ಯವಿವಾಹ ..ದವರು. ಮದುವೆ ನಡೆದಾಗ ಇವರ ಪತ್ನಿಗೆ ಇನ್ನೂ ಹದಿ ..ಮೂರೇ ವರ್ಷವಂತೆ. ಮೊದಲ ಪತ್ನಿ ಮೈ ನೆರೆಯೋ ಹೊತ್ತಿಗೆ ..ಅತ್ತಿಗೆಯ ತಂಗಿಯನ್ನೂ ಪಟಾವ್ ಮಾಡಿದ ರಾಜು ..ಯನ್ನೂ ಮದುವೆಯಾಗಿಬಿಟ್ಟರಂತೆ. ವಿಶೇಷವೆಂದರೆ ಇವರ ..ಬ್ಬರೂ ಪತ್ನಿಯರ ಹೆಸರು ಪ್ರೇಮಾ. ಸದ್ಯ ಮೂವರೂ ..ಒಂದೇ ಮನೆಯಲ್ಲಿ ವಾಸವಿರುವುದರಿಂದ ಕನ್‌ಫ್ಯೂಸ್ ಆಗಬಾರದೆಂಬ ಕಾರಣಕ್ಕೆ 'ದೊಡ್ಡ ಪ್ರೇಮ', 'ಸಣ್ಣ ಪ್ರೇಮ' ಎಂದು ಕರೆಯುತ್ತಾರಂತೆ. "ಇಬ್ಬರೂ ಪತ್ನಿಯರು ಯಾವತ್ತಿಗೂ ಕಿತ್ತಾಡದೇ ಅಷ್ಟೊಂದು ಅನ್ಯೋನ್ಯವಾಗಿದ್ದಾರೆ. ನಾನೇ ಒಂಚೂರು ಕಿರಿಕಿರಿ ಮನುಷ್ಯ" ಎನ್ನುತ್ತಾರೆ ರಾಜು.

ರಾಜು ಅವರ ಬದುಕಿನಲ್ಲಿ ಇನ್ನೊಂದು ಇಂಟರೆಸ್ಟಿಂಗ್ ಸಂಗತಿ ಇದೆ. ಈಗ 45ರ ಆಸುಪಾಸಿನಲ್ಲಿರುವ ರಾಜು ತಾಳಿಕೋಟೆಗೆ 25 ವರ್ಷದ ಮಗನಿದ್ದು, ಆತನಿಗೂ ಮದುವೆಯಾಗಿ ರಾಜುಸಾಬ್‌ಗೆ ಸೊಸೆ ಬಂದಿದ್ದಾಳೆ. ತಮಾಷೆಯೆಂದರೆ ಈಗ ಮಗನ ಹೆಂಡತಿ ಮತ್ತು ತಾಳಿಕೋಟೆಯವರ ಎರಡನೇ ಪತ್ನಿ ಇಬ್ಬರೂ ತುಂಬು ಗರ್ಭಿಣಿಯರಾಗಿದ್ದಾರೆ!

ತಮ್ಮ ಕಂಪೆನಿಯನ್ನು ಹೇಗಾದರೂ ಬೆಂಗಳೂರಿಗೆ ತಂದು ವೃತ್ತಿ ನಾಟಕಗಳನ್ನು ಬೆಂಗಳೂರಿನ ಜನಕ್ಕೆ ತೋರಿಸಬೇಕು ಅನ್ನೋದು ರಾಜು ಅವರ ಹೆಬ್ಬಯಕೆ. ಆದರೆ ಕಳೆದ ಹತ್ತು ವರ್ಷಗಳಿಂದ ಪ್ರಯತ್ನ ಪಟ್ಟು, ಡಿಪಾಜಿಟ್ ಕಟ್ಟಿದ್ದರೂ ಗುಬ್ಬಿ ವೀರಣ್ಣ ರಂಗಮಂದಿರ ತಾಳಿಕೋಟೆಗೆ ಸಿಕ್ಕಿಲ್ಲವಂತೆ. ಸರ್ಕಾರಿ ಸುಪರ್ದಿನಲ್ಲಿರುವ ಈ ರಂಗಮಂದಿರ ನಿಯಮದಂತೆ ವರ್ಷಕ್ಕೊಬ್ಬರಿಗೆ ಹಸ್ತಾಂತರವಾಗಬೇಕು. ಆದರೆ ರಾಜಕೀಯ ಪ್ರಭಾವ ಬೀರಿ ಕೆಲವರು ವರ್ಷಗಟ್ಟಲೇ ಅದನ್ನು ತಮ್ಮ ಹಿಡಿತದಲ್ಲೇ ಇರಿಸಿಕೊಳ್ಳುತ್ತಿದ್ದಾರೆ. ಈ ಹಿಂದೆ ಚಂದೋಡಿ ಲೀಲಾ ಭರ್ತಿ ಆರು ವರ್ಷಗಳ ಕಾಲ ಗುಬ್ಬಿ ರಂಗಮಂದಿರವನ್ನು ಗುತ್ತಿಗೆ ಪಡೆದಿದ್ದರು. ಈಗ ಸುಧೀರ್ ಅವರ ಪತ್ನಿ ಮಾಲತಿಯವರು ಕಾರಜೋಳರ ಕೃಪೆಯಿಂದ ಎರಡನೇ ವರ್ಷವೂ ಕಂಪೆನಿಯನ್ನು ಮುಂದುವರೆಸಿದ್ದಾರೆ.

ವೃತ್ತಿ ರಂಗಭೂಮಿಯಲ್ಲಲ್ಲದೆ, ಸಿನಿಮಾದಲ್ಲಿ ಕೂಡಾ ಜನಪ್ರಿಯವಾಗಿರುವ ರಾಜು ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಪಡೆಯಬೇಕು ಎಂಬ ಅತಿದೊಡ್ಡ ಬಯಕೆ ಇದೆ. ಪ್ರತಿಬಾರಿ ಬಹಳಷ್ಟು ಕೆಲಸಕ್ಕೆ ಬಾರದ ಬಕೀಟುಗಳು, ಚೆಡ್ಡಿಗಳಿಗೆ ಕೊಡಲಾಗುತ್ತಿರುವ ರಾಜ್ಯೋತ್ಸವ ಪ್ರಶಸ್ತಿ ಈ ಅಪ್ಪಟ ಕಲಾವಿದನಿಗೆ ಸಿಗುವಂತಾಗಲಿ...

• ಅರುಣ್

ಪಾಯಿಂಟ್ ಬ್ಲಾಂಕ್!



ಇದ್ದಕ್ಕಿದ್ದಂತೆ ಗಾಂಧಿನಗರಕ್ಕೆ ಲಗ್ಗೆ ಇಟ್ಟು, ಸಿನಿಮಾ ನಿರ್ದೇಶಕಿಯಾಗಿ, ನಿರ್ಮಾಪಕಿಯಾಗಿ ಜೊತೆಗೆ ಹೀರೋಯಿನ್ ಆಗಿ ಕೂಡಾ ಅವತಾರವೆತ್ತಿರುವ ಬಿಂದಾಸ್ ಹುಡುಗಿ ಪ್ರಿಯಾ ಹಾಸನ್ ಹೆಸರು ಕೇಳಿದರೆ ಜನಕ್ಕೆ ಏನೋ ಒಂಥರಾ ಕ್ಯೂರಿಯಾಸಿಟಿ. ಈ ಗಂಡು ಬೀರಿಗೆ ಒಂದಿಷ್ಟು ಪ್ರಶ್ನೆ ಕೇಳಿದಾಗ....

ಹುಡುಗನಾಗಿ ಹುಟ್ಟಿದ್ರೆ	: ಗೋಲ್ಡನ್ ಪವರ್ ಸ್ಟಾರ್ ಆಗಿ ಮಿಂಚುತ್ತಿದ್ದೆ...
ಸಿನಿಮಾಗೆ ಬರದಿದ್ರೆ	: ಪೈಲಟ್ ಆಗ್ತಿದ್ದೆ
ತುಂಬಾ ಗೌರವಿಸೋದು	: ನನ್ನ ತಾಯಿಯನ್ನ
ದ್ವೇಷ ಯಾರ್ಮೇಲೆ?	: ಸದ್ಯಕ್ಕೆ ಯಾರ ಮೇಲೂ ಇಲ್ಲ...
ನೀವೇನಾದ್ರೂ ಸಿಎಮ್ಮಾದ್ರೆ?	: ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು
ಪ್ರೀತಿ ಅಂದ್ರೆ ಏನು?	: ಅನ್ಯೋನ್ಯತೆ
ತುಂಬಾ ಬೀಳೋ ಕನಸು	: ಸಿನಿಮಾ ಸಿನಿಮಾ ಸಿನಿಮಾ
ತುಂಬಾ ಕೋಪ ಬರೋದು ಯಾವಾಗ	: ನಂಬಿಕೆಗೆ ದ್ರೋಹವಾದಾಗ
ಬಿಂದಾಸ್ ಹುಡುಗಿಗೆ ಎಂಥಾ ಹುಡುಗ ಬೇಕು?	: ಬಿಂದಾಸ್ ಹುಡ್ಗ
ಗಂಡುಬೀರಿ ಅಳೋದುಂಟಾ?	: ಒಂಟಿ ಅನ್ನಿಸ್ದಾಗ
ರಿಯಲ್ ಹೀರೋ ಅಂದ್ರೆ ಯಾರು?	: ಸದ್ಯಕ್ಕೆ ಅಣ್ಣಾ ಹಜಾರೆ...

ಜೋಗಯ್ಯ ಪಡೆದವರ ಜೋಳಿಗೆ ಗೋತಾ!



ಭಾರಿ ಅಬ್ಬರದೊಂದಿಗೆ 'ಜೋಗಯ್ಯ' ಕೊನೆಗೂ ಬಿಡುಗಡೆಯಾಗಿದೆ. ಅದರ ಜೊತೆ-ಜೊತೆಗೆ ನಿರ್ದೇಶಕ ಪ್ರೇಮ್ ಅವರ ಬಣ್ಣವೂ ಬಯಲಾಗಿದೆ.

'ಜೋಗಯ್ಯ' ಚಿತ್ರವನ್ನು ಖರೀದಿಸಿದ ಯಾವ ಒಬ್ಬ ಹಂಚಿಕೆದಾರನೂ ಈ ಚಿತ್ರದಿಂದಾಗಿ ಲಾಭ ಮಾಡುವ ಪ್ರಶ್ನೆಯೇ ಇಲ್ಲ; ಆದರೆ ಚಾಲಾಕಿ ನಿರ್ಮಾಪಕ ಪ್ರೇಮ್ ಸಿನಿಮಾ ರಿಲೀಸ್ ಮಾಡುವ ಮೊದಲೇ ವ್ಯಾಪಾರ ಮಾಡಿ ಸುಮಾರು ಐದರಿಂದ ಆರು ಕೋಟಿ ರೂಪಾಯಿ ಲಾಭವನ್ನು ಗಳಿಸಿದ್ದಾರೆ. ಅಂದರೆ ಸ್ವತಃ ತಾನು ಮಾತ್ರ ಗಂಟು ಮಾಡಿಕೊಂಡು ಹಂಚಿಕೆದಾರರನ್ನೆಲ್ಲ ಕೇರ್ ಆಫ್ ಫುಟ್‌ಪಾತ್ ಮಾಡಿರುವ ಹೆಗ್ಗಳಿಕೆ ಪ್ರೇಮ್‌ಗೆ ಸಲ್ಲುತ್ತದೆ.

ಪ್ರೇಮ್ ನಿರ್ದೇಶಿಸಿದ್ದ 'ರಾಜ್' ಮತ್ತು 'ಪ್ರೀತಿ ಯಾಕೆ ಭೂಮಿ ಮೇಲಿದೆ' ಚಿತ್ರಗಳೂ ಕೂಡ ಇದೇ ತರಹ ತೋಪು ಹೊಡೆದಿದ್ದವು. ತನ್ನ ಚಿತ್ರದ ಮುಹೂರ್ತದ ದಿನದಿಂದ ರಿಲೀಸ್ ಆಗುವ ದಿನದತನಕ ಇಲ್ಲಸಲ್ಲದ ರೀತಿಯಲ್ಲಿ ಭಾರೀ ಪ್ರಚಾರ ಪಡೆಯುವುದು ಈತನ ಹವ್ಯಾಸ. ಆ ತರಹದ ಪ್ರಚಾರ ಮಾಡಿ ಮಾಧ್ಯಮದಲ್ಲಿ ಚಿತ್ರದ ಬಗ್ಗೆ ಒಂದು ನಿರೀಕ್ಷೆ ಹುಟ್ಟಿಸುತ್ತಾ ಅದರ ಆಧಾರದ ಮೇಲೆ ವ್ಯಾಪಾರ ಮಾಡುವ ಕಲೆ ಈತನಿಗೆ ಕರಗತವಾಗಿದೆ. ಆದರೂ 'ಜೋಗಯ್ಯ' ಶಿವಣ್ಣನ ವೃತ್ತಿಜೀವನದ ನೂರನೇ ಚಿತ್ರ ಎಂಬ ಕಾರಣಕ್ಕಾಗಿ ಹಾಗೆ ಆಗಲಾರದು ಎಂದೇ ಎಲ್ಲರೂ ಭಾವಿಸಿದ್ದರು. ಆದರೆ ಪ್ರೇಮ್ ತನ್ನ ಹುಟ್ಟುಗುಣವನ್ನು ಇಲ್ಲೂ ಕೂಡ ಬಿಡಲಿಲ್ಲ, 'ಜೋಗಯ್ಯ' ಮೊದಲನೆ ವಾರದಲ್ಲಲ್ಲ, ಮೊದಲನೆ ದಿನವೇ ಬಾಕ್ಸ್ ಆಫೀಸ್‌ನಲ್ಲಿ ಸಂಪೂರ್ಣವಾಗಿ ಮುಗ್ಗರಿಸಿದೆ.

ಪ್ರೇಮ್ ತನ್ನ ಚಿತ್ರಕ್ಕೆ ಪುಕ್ಕಟೆ ಪ್ರಚಾರವನ್ನು ಪಡೆಯುವುದನ್ನು ಕಲಿತಿದ್ದಾರೆಯೇ ವಿನಃ ಸಿನಿಮಾ ಮಾಡುವುದನ್ನು ಕಲಿತಿಲ್ಲ ಎಂಬುದು ಮತ್ತೊಮ್ಮೆ ಸಾಬೀತಾಗಿದೆ.

ಬೆಂಗಳೂರು-ಕೋಲಾರ-ತುಮಕೂರು (ಬಿಕೆಟಿ) ಹಂಚಿಕೆಯನ್ನು ಐದೂವರೆ ಕೋಟಿ ರೂ.ಗಳಿಗೆ ಖರೀದಿಸಿದ್ದ 'ಮಂದಾಕಿನಿ' ಚಿತ್ರದ ನಿರ್ಮಾಪಕ ಶ್ರೀನಿವಾಸ್ ಅವರಿಗೆ ಏನಿಲ್ಲವೆಂದರೂ ಕನಿಷ್ಠ ಎರಡೂವರೆ ಕೋಟಿ ರೂಪಾಯಿ ನಷ್ಟ ಅನುಭವಿಸುತ್ತಾರೆ ಎಂಬುದೇ ಗಾಂಧಿನಗರದವರ ಲೆಕ್ಕಾಚಾರ.

ಸಾಧಾರಣವಾಗಿ ಶಿವರಾಜ್‌ಕುಮಾರ್ ನಟಿಸಿದ ಚಿತ್ರಗಳು ಹುಬ್ಬಳ್ಳಿ ಮತ್ತು ಮೈಸೂರು ವಲಯಗಳಲ್ಲಿ ಚೆನ್ನಾಗಿ ನಡೆಯುತ್ತವೆ. ಆದರೆ 'ಜೋಗಯ್ಯ' ಶಿವಣ್ಣನ ಈ ಅಚ್ಚುಮೆಚ್ಚಿನ ಏರಿಯಾದಲ್ಲೂ ಮುಗ್ಗರಿಸಿದ್ದು ಉದ್ಯಮದವರ ಹುಬ್ಬೇರಿಸಿದೆ. ಹೀಗಾಗಿ ಹುಬ್ಬಳ್ಳಿ ಏರಿಯಾವನ್ನು ಖರೀದಿಸಿದ ಹಳೆಯ ಹುಲಿ ಕುಮಾರ್‌ಶೆಟ್ಟರ್ ಮತ್ತು ತುಮಕೂರಿನ ಮಾರುತಿ ಥಿಯೇಟರ್‌ನ ಗಣೇಶ್ ಅವರಿಗೆ 'ಜೋಗಯ್ಯ' ಯಾವುದೇ ಧನಲಕ್ಷ್ಮಿಯನ್ನು ತಂದುಕೊಡುವುದಿಲ್ಲ, ಇದೇರೀತಿ ಮೈಸೂರು ವಲಯದ ಹಕ್ಕನ್ನು ಖರೀದಿಸಿದ ಹಂಚಿಕೆದಾರರಾದ ಸತ್ಯಪ್ಪ ಕೂಡ 'ಜೋಗಯ್ಯ'ನ ವಿಷಯದಲ್ಲಿ ಕೈ ಸುಟ್ಟುಕೊಂಡಿದ್ದಾರೆ. ಈ ಎರಡೂ ಏರಿಯಾಗಳು ಸರಿಸುಮಾರು ತಲಾ 3 ಕೋಟಿ ರೂ.ಗಳಿಗೆ ಮಾರಾಟವಾಗಿದೆ ಎಂಬ ಸುದ್ದಿಯಿದೆ.

ಹೀಗೆ ಬೆಂಗಳೂರು, ಮೈಸೂರು ಮತ್ತು ಹುಬ್ಬಳ್ಳಿ ಏರಿಯಾಗಳಲ್ಲಿ ಹಂಚಿಕೆದಾರ ಕೈಸುಟ್ಟುಕೊಂಡಿದ್ದಾನೆಂದರೆ ಅಖಂಡ ಕರ್ನಾಟಕದ ಬೇರೆ ಯಾವುದೇ ಪ್ರದೇಶಗಳಲ್ಲಿ 'ಜೋಗಯ್ಯ' ಲಾಭ ಮಾಡಲು ಸಾಧ್ಯವೇ ಇಲ್ಲ.

ಇಲ್ಲಸಲ್ಲದ ಸುಳ್ಳು ಹೇಳಿ ಪ್ರಚಾರ ಗಿಟ್ಟಿಸುವುದನ್ನೇ ಹವ್ಯಾಸ ಮಾಡಿಕೊಂಡಿರುವ ಪ್ರೇಮ್ ಅಮೋಘ ಮೂರನೇ ಬಾರಿಗೆ ಗಾಂಧಿನಗರದಲ್ಲಿ ಮುಗ್ಗರಿಸಿಬಿದ್ದಿದ್ದಾರೆ. 'ಜೋಗಯ್ಯ' ಚಿತ್ರದ ಸೋಲು ಅವರ ವೃತ್ತಿಜೀವನದ ಕುರ್ಚಿಯನ್ನೇ ಅಲುಗಾಡಿಸಿದೆ. ಇದಕ್ಕಿಂತ ಮುಖ್ಯವಾಗಿ ಈ 'ಜೋಗಯ್ಯ' ಚಿತ್ರದಿಂದಾಗಿ ಅನೇಕ ಹಂಚಿಕೆದಾರರು ನಷ್ಟ ಮಾಡಿಕೊಂಡಿದ್ದಾರೆ. ಥಿಯೇಟರ್‌ಗಳ ಮಾಲೀಕರು ಅಡ್ವಾನ್ಸ್ ಕೊಟ್ಟು ಕೈ ಸುಟ್ಟುಕೊಂಡಿದ್ದಾರೆ. ಹಾಗೆಯೇ 'ಜೋಗಯ್ಯ' ಚಿತ್ರದ ಬಿಡುಗಡೆಯಾಗಲಿ ಎಂದು ಕಾದು ಕುಳಿತ ಅನೇಕ ನಿರ್ಮಾಪಕರು ಕೂಡ ತಮ್ಮ ಚಿತ್ರವನ್ನು ಬಿಡುಗಡೆ ಮಾಡದೇ, ಬಡ್ಡಿ ಕಟ್ಟಿಕೊಂಡು ಕುಳಿತುಕೊಂಡಿದ್ದಾರೆ. ಯಾವ ಚಿತ್ರ ತನ್ನ ಯಶಸ್ಸಿನೊಂದಿಗೆ ಇಡೀ ಕನ್ನಡ ಚಿತ್ರರಂಗದ ವಾತಾವರಣವನ್ನೇ ಬದಲಿಸಬಹುದು ಎಂದು ನಿರೀಕ್ಷಿಸಲಾಗಿತ್ತೋ ಈಗ ಅದೇ ಚಿತ್ರ ಅದಕ್ಕೆ ವಿರುದ್ಧದ ವಾತಾವರಣವನ್ನು ಸೃಷ್ಟಿಸಿದೆ. ಮುಂದಿನ ದಿನಗಳಲ್ಲಿ ಸುಳ್ಳ ಪ್ರೇಮ್ ಮಾತನ್ನು ಗಾಂಧಿನಗರದವರಾಗಲಿ, ಮಾಧ್ಯಮದವರಾಗಲಿ ಅಥವಾ ಸಹೃದಯ ಪ್ರೇಕ್ಷಕರಾಗಲಿ ನಂಬುವುದಿಲ್ಲ ಎಂಬುದಂತೂ ಅಪ್ಪಟ ಸತ್ಯ!

• ಶೆಣೈ

'ಲೋಕಪಾಲ್ ವ್/ಸ್ ಜನಲೋಕಪಾಲ್' ಸಂಪಾದಕೀಯ ಚೆನ್ನಾಗಿದೆ. ..ಂದೂ ಅಲೆಯೊಂದಿಗೆ ಕಣ್ಣು ಮುಚ್ಚಿ ತೇಲದ 'ಲಂಕೇಶ್' ಸದಾ ಪರ್ಯಾಯ ..ಚಿಂತನೆಯಾಗಿ ಉಳಿದಿರುವುದಕ್ಕೆ ಈ ಸಂಪಾದಕೀಯ ಸಾಕ್ಷಿಯಾಗಿದೆ.

- ರಂಗಣ್ಣ ಕೊಡಗು

ಈ ಬಾರಿಯ 'ಕಂಡಹಾಗೆ' ನಿಜವಾಗಲೂ ಅದ್ಭುತ

- ಮಲ್ಲಿಗೆ, ಬೆಂಗಳೂರು

ಅಣ್ಣಾ ಹಜಾರೆ ಅವರ ಆಂದೋಲನದ ಹಿಂದೆ ಮೇಲುಜಾತಿಯ ..ತಂತ್ರವಿದೆ. ಅವರು ಭ್ರಷ್ಟಾಚಾರದ ವಿರುದ್ಧ ಯುವಕರಲ್ಲಿರುವ ಆಕ್ರೋಶವನ್ನೇ ..ಬಂಡವಾಳ ಮಾಡಿಕೊಂಡು ದಲಿತರಿಗೆ ಮತ್ತು ಹಿಂದುಳಿದವರಿಗೆ ಮೀಸಲಾತಿಯ ..ಮೂಲಕ ಸಾಮಾಜಿಕ ನ್ಯಾಯವನ್ನು ನೀಡುವ ನಮ್ಮ ಸಂವಿಧಾನವನ್ನೇ ..ಬದಲಾಯಿಸಲು ಹೊರಟಿದ್ದಾರೆ. ಈ ಸಂಚಿನ ಬಗ್ಗೆ ಎಲ್ಲರೂ ಯೋಚಿಸುವುದು ..ಮತ್ತು ಅತ್ಯಗತ್ಯವಾಗಿದೆ.

- ಎಸ್‌ಎಂಎಸ್ ಮೂಲಕ

ಉಡುಪಿ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳು ಭ್ರಷ್ಟಾಚಾರ ತೊಲಗಿಸಲು ..ರುದ್ರಚಮಕ ಪಾರಾಯಣ ನಡೆಸಿದರು (ಉದಯವಾಣಿ ವರದಿ):

ಎನ್ನ ಕಿವುಡನ ಮಾಡಯ್ಯ ತಂದೆ..

ಎನ್ನ ಕುರುಡನ ಮಾಡಯ್ಯ ತಂದೆ...

- ಸಂವರ್ತ

1991 ರಿಂದ ಕಳೆದ 20 ವರ್ಷಗಳ ಅವಧಿಯಲ್ಲಿ ಇದೇ ಮನಮೋಹನ್ ..ಸಿಂಗ್ ಅವರ ನವ ಜಾಗತೀಕರಣದ ನೀತಿಯಿಂದಾಗಿ ಈ ಮಧ್ಯಮ ವರ್ಗಗಳು ..ದೇಶದ ಬಡವರು, ಹಿಂದುಳಿದವರು, ದಲಿತರನ್ನು ಹತ್ತಿಕ್ಕಿ ಮೇಲ್ ..ಮಧ್ಯಮವರ್ಗವಾಗಿ ರೂಪಾಂತರಗೊಂಡು ಸಾಕಷ್ಟು ಸಂಪತ್ತನ್ನು ಗಳಿಸಿ, ..ಅನುಭವಿಸಿ ಇಂದು ತೇಗುತ್ತಿರುವ ಸಂದರ್ಭದಲ್ಲಿ ಇವರು ಮುಗ್ಧ ಅಣ್ಣಾ ..ಹಜಾರೆಯವರೊಂದಿಗೆ ಗುರುತಿಸಿಕೊಳ್ಳುತ್ತಿರುವುದು ಮತ್ತೊಮ್ಮೆ ಈ ದೇಶದ ..ಬಡವರು, ಹಿಂದುಳಿದವರು, ದಲಿತರನ್ನು ಸಂಪೂರ್ಣವಾಗಿ ಮೂಲೆಗುಂಪು ..ಮಾಡಲಿಕ್ಕೆ, ಇವರಿಗೆ ಈ ಲೋಕಪಾಲ್ ಮಸೂದೆ ಎಂದರೆ ಮುಂದಿನ 20 ..ವರ್ಷಗಳಲ್ಲಿ ತಮ್ಮ ಸುಖೀ ಜೀವನಕ್ಕೆ ಅನುವು ಮಾಡಿಕೊಡಲಿರುವಂತಹದ್ದು ..ಎನ್ನುವ ಸ್ವಾರ್ಥ ಚಿಂತನೆಯಷ್ಟೆ. ಈ ಮಧ್ಯಮವರ್ಗಕ್ಕೆ ಕರ್ನಾಟಕದಲ್ಲಿ ಬಿಜೆಪಿ ..ನಡೆಸಿರುವ ಭ್ರಷ್ಟಾಚಾರ ಕಣ್ಣಿಗೆ ಕೂಡ ಬೀಳದಷ್ಟು ಜಾಣ ಕುರುಡು. ..ಇವರು ಬೌದ್ಧಿಕವಾಗಿ ಎಷ್ಟು ದಿವಾಳಿಯಾಗಿದ್ದಾರೆಂದರೆ ಬೆಂಗಳೂರಿನ ..ಮಹಾನಗರಪಾಲಿಕೆಯ ಚುನಾವಣೆಯಲ್ಲಿ ಈ ಬಿಜೆಪಿಯ ಭ್ರಷ್ಟಾಚಾರ ಗೊತ್ತಿದ್ದೂ ..ಅವರನ್ನು ಆರಿಸುತ್ತಾರೆ, ಉಪಚುನಾವಣೆಗಳಲ್ಲಿ ಆಪರೇಷನ್ ಮೂಲಕ ಕಳಂಕಿತ ..ಶಾಸಕರನ್ನು ಮತ್ತೆ ಆರಿಸುತ್ತಾರೆ.

ಇಷ್ಟೆಲ್ಲ ಆಳವಾದ, ಕ್ಲಿಷ್ಟ ಸಮಸ್ಯೆಗಳು ಈ ಅಣ್ಣಾ ಹಜಾರೆಯವರಿಗೆ ..ಅರ್ಥವಾಗುವ ಸಾಧ್ಯತೆಗಳೇ ಇಲ್ಲ, ಬಿಡಿ. ಇವರೀಗಾಗಲೆ ತಮಗೆ ದೊರಕಿದ ನವ ಗಾಂಧಿ, ನವ ಜೆಪಿ ಎಂಬ ಹೊಸ ಹುಸಿ ಬಿರುದುಗಳಿಂದ ತಾವು ಅದಿರಬಹುದೇನೊ ಎನ್ನುವ ದುರಂತಮಯ ಸುಳಿಯಲ್ಲಿ ಸಿಲುಕಿದ್ದಾರೆ.

- ಬಿ.ಶ್ರೀಪಾದ ಭಟ್, ಬೆಂಗಳೂರು

ಹಾಲಿ ಲೋಕಾಯುಕ್ತ ನ್ಯಾ. ಶಿವರಾಜ ಪಾಟೀಲ್ ರಾಯಚೂರು ಜಿಲ್ಲೆಯ ದೇವದುರ್ಗದ ಮಲದಕಲ್ ಎನ್ನುವ ಕುಗ್ರಾಮದಲ್ಲಿ ಹುಟ್ಟಿ ಬೆಳೆದು ಹೈಕೋರ್ಟ್, ಸುಪ್ರೀಂಕೋರ್ಟ್ ನ್ಯಾಯಾಧೀಶರಾಗಿ ಮತ್ತು ಮಾನವ ಹಕ್ಕುಗಳ ಆಯೋಗದ ಸದಸ್ಯರಾಗಿ ನ್ಯಾಯಾಂಗ ಕ್ಷೇತ್ರದಲ್ಲಿ ಮಾಡಿದ ಸಾಧನೆ ಸ್ವಂತ ಜಿಲ್ಲೆಯವನಾದ ನನಗೆ ಅತೀವ ಖುಷಿಕೊಟ್ಟಿದೆ. ವಚನಕಾರರ ಬಗೆಗಿನ ಆಳ ತಿಳಿವಳಿಕೆ ಅವರ ವ್ಯಕ್ತಿತ್ವವನ್ನು ಮತ್ತಷ್ಟು ಉಜ್ವಲಗೊಳಿಸಿದೆ ಎಂದು ನಾನು ನಂಬಿಕೊಂಡಿದ್ದೇನೆ. ಮಾನವೀಯ ಕಳಕಳಿಯುಳ್ಳ ಶಿವರಾಜ್ ಪಾಟೀಲರು ತಮ್ಮ ಹಿರಿಯ ಮಗ ಶರಣ್ ಪಾಟೀಲರ 'ಸ್ಪರ್ಶ'ದೊಂದಿಗೆ ವೈದ್ಯಕೀಯ ಕ್ಷೇತ್ರದಲ್ಲಿ ಬಡಜನರಿಗೆ ಆಶಾಕಿರಣವಾಗಿದ್ದಾರೆ. ಇದು ಅವರ ಮಾತೃ ಹೃದಯಕ್ಕೆ ಹಿಡಿದ ಕನ್ನಡಿ. ಆದರೆ ಹೊಸ ಬೆಳವಣಿಗೆಯೊಂದರಲ್ಲಿ ಅವರ ಇನ್ನೊಬ್ಬ ಪುತ್ರ ಬಸವಪ್ರಭು ಪಾಟೀಲ್ ರೆಡ್ಡಿಗಳ ಲಾಯರ್ ಆಗಿದ್ದರು ಎಂದು ಗೊತ್ತಾಗಿ ನನಗೆ ಆಶ್ಚರ್ಯವಾಯಿತು.

ಇನ್ನು ಮುಂದಾದರೂ ಬಸವಪ್ರಭು ಪಾಟೀಲರು ರೆಡ್ಡಿಗಳ ಪರ ವಕಾಲತ್ತನ್ನು ವಹಿಸದಿರಲಿ.

- ಬಸವರಾಜ ಪಾಟೀಲ್ ಹಳ್ಳಿ, ಸಿಂಧನೂರು

ಪ್ರಚಾರಪ್ರಿಯ ಪ್ರೇಮ್‌ಗೆ ಧಿಕ್ಕಾರ

'ಜೋಗಯ್ಯ' ಸಿನಿಮಾದಲ್ಲಿ ಕ್ರೌರ್ಯಕ್ಕೆ ತ್ರಿಡಿ ಎಫೆಕ್ಟ್ ಅಳವಡಿಸಿ ಪ್ರೇಕ್ಷಕರ ಮೇಲೆ ಬೀರುವ ದುಷ್ಪರಿಣಾಮಗಳ ಬಗ್ಗೆ 'ಗೌರಿ ಲಂಕೇಶ್' ಪತ್ರಿಕೆಯು ಸಿನಿಮಾ ಬಿಡುಗಡೆ ಆಗುವ ಮುನ್ನವೇ ಆತಂಕ ವ್ಯಕ್ತಪಡಿಸಿತ್ತು. ನಿಜವಾಗಿಯೂ ಈ ಸಿನಿಮಾ ನೋಡುವ ಮಕ್ಕಳು ಮನೆಯಲ್ಲಿ ಮಚ್ಚು ಚಾಕು ಎತ್ತಿಕೊಳ್ಳುವುದು ದಿಟ. ಏಕೆಂದರೆ ಅಷ್ಟು ಪರಿಣಾಮಕಾರಿಯಾಗಿ ಹಾಡುಗಳು ಮೂಡಿಬಂದಿವೆ. ಶಿವಣ್ಣನವರಂತಹ ಮಹಾನ್ ಕಲಾವಿದನ ನೂರನೇ ಚಿತ್ರವನ್ನು ಸಾಧಾರಣ ರೀತಿಯಲ್ಲಿ ಚಿತ್ರಿಸಿ ನಮ್ಮೆಲ್ಲರನ್ನು (ಶಿವಣ್ಣನ ಅಭಿಮಾನಿಗಳನ್ನು) ನಿರಾಶೆಗೊಳಿಸಿದ ಕೀರ್ತಿಗೆ ಪ್ರೇಮ್ ಎಂಬ ನಿರ್ದೇಶಕ ಪಾತ್ರರಾಗಿದ್ದಾರೆ. 'ಜೋಗಿ', 'ಕರಿಯ' ಮತ್ತು 'ಎಕ್ಸ್‌ಕ್ಯೂಸ್ ಮಿ' ಚಿತ್ರಗಳು ಯಶಸ್ವಿಯಾಗಲು ಪ್ರೇಮ್ ಮಾತ್ರ ಕಾರಣರಲ್ಲ, ಬದಲಿಗೆ ಅದು ಟೀಮ್‌ವರ್ಕ್ ಆಗಿತ್ತು ಎಂಬುದನ್ನು 'ಜೋಗಯ್ಯ' ರುಜುವಾತುಪಡಿಸಿದ್ದಾನೆ. 'ಜೋಗಯ್ಯ' ಚಿತ್ರದಲ್ಲಿ ಹಲವಾರು ಅಸಂಬದ್ಧತೆಗಳಿವೆಯಲ್ಲದೆ ಹಲವು ಬಾರಿ ಶಿವಣ್ಣನನ್ನು ಕೆಟ್ಟ ಪದಗಳಿಂದ ನಿಂದಿಸುವ ಸಂಭಾಷಣೆಗಳೂ ಇವೆ. ಈ ಎಲ್ಲ ಕಾರಣಗಳಿಂದ ಶಿವಣ್ಣನ ಅಭಿಮಾನಿಗಳಾದ ನಮ್ಮಿಂದ ಪ್ರೇಮ್‌ಗೆ ಧಿಕ್ಕಾರವಿದೆ.

ಇಷ್ಟೆಲ್ಲ ನ್ಯೂನತೆಗಳ ನಡುವೆಯೂ 'ಜೋಗಯ್ಯ' ಚಿತ್ರದಲ್ಲಿ ಶಿವಣ್ಣನವರ ಅಭಿನಯ ಅದ್ಭುತವಾಗಿ ಮೂಡಿಬಂದಿದೆ. ಅದಕ್ಕೆ ಹ್ಯಾಟ್ಸ್ ಆಫ್ ಟು ಶಿವಣ್ಣ.

- ವಿನಯ್ ಬೂಕನಗೌಡ ಮತ್ತು ಸ್ನೇಹಿತರು, ಮೈಸೂರು.



ಮಂದಾಕಿನಿ ಶ್ರೀನಿವಾಸ್‌ಗೆ ಉಂಡೆ ನಾಮ!

ವಿತರಕರ ಹಣೆಗೆ ನಾಮ ತಿಕ್ಕಲು ಪ್ರೇಮ್ ಹೆಣೆದ ಸುಳ್ಳು ಒಂದೇ ಎರಡೇ? ಮೊದಲು ಸಿನಿಮಾಗೆ ಒಟ್ಟು ಹದಿನಾಲ್ಕು ಕೋಟಿ ಖರ್ಚಾಗಿದೆ ಎಂದು ಬಂಡಲ್‌ಬಿಟ್ಟ. ಚಿತ್ರ ಸಕತ್ತಾಗಿ ಮೂಡಿಬಂದಿದೆ ಎಂದ. ತ್ರೀಡಿ ಹಾಡು, ತ್ರೀಡಿ ಫೈಟು ಎಂದೆಲ್ಲ ಚೀರಾಡಿದ. ಇದನ್ನೆಲ್ಲ ವಿತರಕರು ನಂಬಿದರಲ್ಲದೆ ಆತ ಬಿಡುಗಡೆಗೆ ಮುನ್ನ ದಾಕ್ಷಿಣ್ಯಕ್ಕೂ ಅವರಿಗೆ ಸಿನಿಮಾ ತೋರಿಸದಿದ್ದರೂ ಅವರೆಲ್ಲ ಕೋಟಿ ಕೋಟಿ ಕೊಟ್ಟು ಖರೀದಿಸಿದರು.

ಅಂಥವರಲ್ಲಿ ಮಂದಾಕಿನಿ ಶ್ರೀನಿವಾಸ್ ಕೂಡ ಒಬ್ಬರು. ಈ ಹಿಂದೆಯೇ ಪ್ರೇಮ್‌ಗೆ ಹದಿನಾರು ಲಕ್ಷ ರೂಪಾಯಿ ಕೊಟ್ಟು ಅದನ್ನು ವಾಪಸ್ ಪಡೆಯಲು ಕೋರ್ಟು ಮೆಟ್ಟಿಲೇರಿ ಜಯ ಸಾಧಿಸಿದ್ದ 'ಮಂದಾಕಿನಿ' ಚಿತ್ರದ ನಿರ್ಮಾಪಕ ಬಿ.ಕೆ. ಶ್ರೀನಿವಾಸ್ ಈ ಬಾರಿ ಅದೇ ಪ್ರೇಮ್ ತೋಡಿದ ಹಳ್ಳದಲ್ಲಿ ಭರ್ಜರಿಯಾಗಿ ಬಿದ್ದರು.

ಈ ಹಿಂದೆ ಶ್ರೀನಿವಾಸ್ ಶಾಂತಲಾ (ಈಗಿನ ವೀರೇಶ್) ಥಿಯೇಟರಿನಲ್ಲಿ ಟಿಕೇಟು ಹರಿದು ಬದುಕುತ್ತಿದ್ದ ಸಂದರ್ಭದಲ್ಲಿ ಶಿವಣ್ಣನ ಮೊದಲ ಮೂರು ಚಿತ್ರಗಳಾದ 'ಆನಂದ್', 'ರಥಸಪ್ತಮಿ' ಮತ್ತು 'ಮನಮೆಚ್ಚಿದ ಹುಡುಗಿ' ನೂರು ದಿನ ಓಡಿದ್ದವಂತೆ. ಹೀಗಾಗಿ ಅಂದಿನಿಂದ ಶಿವಣ್ಣನ ನೂರನೇ ಚಿತ್ರವನ್ನು ತಾನೇ ಡಿಸ್ಟ್ರಿಬ್ಯೂಟ್ ಮಾಡಬೇಕು ಎಂಬ ಆಶೆ ಶ್ರೀನಿವಾಸರದ್ದು.

ಪ್ರೇಮ್ ಸುಳ್ಳು ಸುಳ್ಳೇ ಹೇಳುವ ಗಿರಾಕಿ ಎಂದು ಗೊತ್ತಿದ್ದರೂ ಶ್ರೀನಿವಾಸ್ ಆತ 'ಜೋಗಯ್ಯ' ಕುರಿತು ಬಿಟ್ಟ ಬಂಡಲ್‌ಗಳನ್ನೆಲ್ಲ ನಂಬಿದರು. ಬರೋಬ್ಬರಿ ಐದೂವರೆ ಕೋಟಿ ರೂಪಾಯಿ ಕೊಟ್ಟು ಬಿ.ಕೆ.ಟಿ ಏರಿಯಾದಲ್ಲಿ ಅದನ್ನು ವಿತರಿಸುವ ಹಕ್ಕು ಪಡೆದರು. ಅದು ಸಾಲದೆಂಬಂತೆ ಶ್ರೀನಿವಾಸ್ ಸಿನಿಮಾದ ಪ್ರಚಾರವನ್ನೂ ತಮ್ಮ ಹೆಗಲಿಗೇ ಏರಿಸಿಕೊಂಡರು. ಇಡೀ ಬಿ.ಕೆ.ಟಿ ಏರಿಯಾದಲ್ಲಿ ದುಬಾರಿ ವಿನೈಲು, ಪೋಸ್ಟರುಗಳನ್ನು ಮೆತ್ತಿಸಿದರು. ಐವತ್ತು ಸಾವಿರ ಟೀ ಶರ್ಟು, ಐವತ್ತು ಸಾವಿರ ಕ್ಯಾಪುಗಳನ್ನು ಹಂಚಿದರು. ಈ ಚಿತ್ರದ ಹಾಡುಗಳಿರುವ ಹದಿನಾಲ್ಕು ಲಕ್ಷ ಸಿಡಿಗಳನ್ನು ತಯಾರಿಸಿ ತಮ್ಮ ಹರ್ಷ ಮಹಲ್ ಕಲ್ಯಾಣಮಂಟಪದಲ್ಲೇ ಪ್ಯಾಕು ಮಾಡಿಸಿದರು. ಹೇಗಿದ್ದರೂ ಸಿನಿಮಾ ಅರವತ್ತೆಪ್ಪತ್ತು ದಿನ ಹೌಸ್‌ಫುಲ್ ಆಗುತ್ತದೆ ಎಂಬುದು ಶ್ರೀನಿವಾಸರ ನಂಬಿಕೆಯಾಗಿತ್ತು. ಆದರೆ ಶ್ರೀನಿವಾಸರ ಆಶೆಗಳು ಮತ್ತು ಪ್ರಯತ್ನಗಳೆಲ್ಲಾ ಈಗ ಹೊಳೆಯಲ್ಲಿ ಹುಣಸೇಹಣ್ಣು ತೊಳೆದಂತಾಗಿದೆ.

'ಜೋಗಯ್ಯ' ಬಿಡುಗಡೆಯಾದ ದಿನ ಚಿತ್ರಮಂದಿರ ಭರ್ತಿಯಾಗಿತ್ತು ನಿಜ. ಆದರೆ ಎರಡನೆ ದಿನವೇ ಕಲೆಕ್ಷನ್‌ನಲ್ಲಿ ನಲವತ್ತು ಪರ್ಸೆಂಟ್ ಡ್ರಾಪ್ ಕಂಡುಬಂತು. ಬ್ಲಾಕ್ ಟಿಕೇಟ್ ಮಾರುವವರೇ ಚಿತ್ರಮಂದಿರಗಳಿಂದ ಪೇರಿ ಕಿತ್ತರು. ಮೂರನೇ ದಿನದ ಹೊತ್ತಿಗೆ ಚಿತ್ರಮಂದಿರಗಳು ಐವತ್ತರಿಂದ ಅರವತ್ತು ಪರ್ಸೆಂಟ್ ಖಾಲಿಯಾಗಿದ್ದವು. ಚಿತ್ರ ಬಿಡುಗಡೆಗೊಂಡ ತೊಂಬತ್ತೈದು ಥಿಯೇಟರುಗಳಲ್ಲಿ ಮೊದಲ ವಾರವೇ 22 ಚಿತ್ರಮಂದಿರಗಳಿಂದ ಸಿನಿಮಾವನ್ನು ತೆಗೆದುಹಾಕಲಾಯಿತು. ಮೊದಲ ವಾರದ ಕಲೆಕ್ಷನ್‌ನಲ್ಲಿ ಥಿಯೇಟರ್ ಬಾಡಿಗೆಯನ್ನು ತೆಗೆದುಹಾಕಿದರೆ ಪಬ್ಲಿಸಿಟಿಗೆ ಮಾಡಿದ ಖರ್ಚಷ್ಟೇ ಶ್ರೀನಿವಾಸ್ ಕೈ ಸೇರಲಿದೆ.

ಶ್ರೀನಿವಾಸ್ ಬಡಬಡನೆ ಮಾತಾಡುತ್ತಾರೆ, ಯಾವುದೋ ಅಭಿಮಾನಕ್ಕೆ ಬಿದ್ದು ಹುಂಬನಂತಾಡುತ್ತಾರೆ ಎಂಬುದನ್ನು ಬಿಟ್ಟರೆ ಅವರು ಸ್ವಭಾವತಃ ಸ್ನೇಹಜೀವಿ, ಧಾರಾಳಿಗ. ಈಗ ಏಕಕಾಲಕ್ಕೇ ಆರು ಚಿತ್ರಗಳನ್ನು ಅನೌನ್ಸ್ ಮಾಡಿರುವ ಶ್ರೀನಿವಾಸ್‌ರಂಥ ನಿರ್ಮಾಪಕರನ್ನು ಗಾಂಧಿನಗರದವರು ಉಳಿಸಿಕೊಳ್ಳಬೇಕಿದೆ. ಆದರೆ ಪ್ರೇಮ್ ಮಾತ್ರ ಹಾಲು ಕರೆಯಲು ಬಿಟ್ಟದ್ದಕ್ಕೆ ಕೆಚ್ಚಲನ್ನೇ ಕುಯ್ದುಹಾಕಿದ್ದಾನೆ.



ಪುಂಗಿ ಪ್ರೇಮ್ ತೋಪಯ್ಯ!

"ಬಂಡಲ್ ನನ್ ಮಗ. ಇಂತಾ ಖಾಲಿಬುಟ್ಟಿ ಇಟ್ಟುಕೊಂಡು ಒಳಗೆ ಹಾವೈತೆ ಅಂತಾ ಬೂಸಿ ಬಿಟ್ಟಿದ್ದ...", "ಇವನ ತೆವಲು ತೀರಿಸ್ಕೊಳ್ಳಕ್ಕೆ ನಮ್ ಶಿವಣ್ಣನ ನೂರನೇ ಸಿನಿಮಾನೇ ಬೇಕಾಗಿತ್ತಾ?", "ಇನ್ಯಾವತ್ತೂ ಇವುನ್ ಮಾತು ನಂಬಬಾರ್ದು"- ಹೀಗೆ 'ಜೋಗಯ್ಯ' ಚಿತ್ರವನ್ನು ನೋಡಿಬಂದ ಪ್ರತಿಯೊಬ್ಬರೂ ನಿರ್ದೇಶಕ ಪ್ರೇಮ್ ವಿರುದ್ಧ ಹಿಡಿಹಿಡಿ ಶಾಪ ಹಾಕುತ್ತಿದ್ದಾರೆ.

'ಜೋಗಯ್ಯ' ಚಿತ್ರ ಎಂತಹ ನಿರಾಶೆ ಹುಟ್ಟಿಸಿದೆ ಎಂದರೆ ಈಗ ಶಿವಣ್ಣನ ಅಭಿಮಾನಿಗಳು ಮಾತ್ರವಲ್ಲ, ಸಾಮಾನ್ಯ ಪ್ರೇಕ್ಷಕರು ಸಹ ಕೆರಳಿದ್ದಾರೆ. ಈ ಹಿಂದೆ ಪ್ರೇಮ್ ಪುನೀತ್ ರಾಜ್‌ಕುಮಾರ್ ನಟಿಸಿದ್ದ 'ರಾಜ್' ಚಿತ್ರದ ತುಂಬಾ ಅಣ್ಣಾವ್ರ ಹೆಸರು, ಅವರ ಸಿನಿಮಾ ತುಣುಕುಗಳು, ಅವರೊಂದಿಗೆ ನಟಿಸಿದ್ದ ಹಿರಿಯ ನಾಯಕಿಯರಿಗೆ ಪಾತ್ರ, ನಾಯಕನ ಪಾತ್ರಕ್ಕೆ ಮುತ್ತುರಾಜ್ ಎಂಬ ಹೆಸರು, ನಾಯಕಿಗೆ ಪಾರೂ ಎಂಬ ಹೆಸರು, ಇಷ್ಟೆಲ್ಲ ಗಿಮ್ಮಿಕ್ಕುಗಳ ನಡುವೆ ಕಥೆಯೇ ಇಲ್ಲದ ತಗಡು ಸಿನಿಮಾ ನಿರ್ದೇಶಿಸಿದ್ದ. ಆದ್ದರಿಂದಲೇ ಈ ಚಿತ್ರ ಬಾಕ್ಸ್ ಆಫೀಸಿನಲ್ಲಿ ಮಣ್ಣು ಮುಕ್ಕಿತ್ತು. ಆದರೇನಂತೆ, ಮಕಾಡೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬ ಜಾಯಮಾನ ಪ್ರೇಮ್‌ನದ್ದು.

'ರಾಜ್' ಸಿನಿಮಾದಲ್ಲಿ ರಾಜ್‌ಕುಮಾರ್ ಅವರ ಹೆಸರಿಗೆ ಪ್ರೇಮ್ ಮಸಿ ಬಳಿದಿದ್ದರೂ ಮತ್ತೊಮ್ಮೆ ಪುನೀತ್ ರಾಜ್‌ಕುಮಾರ್‌ರ ಕಾಲ್‌ಶೀಟ್ ಪಡೆಯಲು ಪ್ರೇಮ್ ಹೋಗಿದ್ದ. ಆದರೆ ರಾಘವೇಂದ್ರ ರಾಜ್‌ಕುಮಾರ್ ಪ್ರೇಮ್‌ನ ಸುಳ್ಳುಗಳನ್ನು ಅರಿತು "ಇನ್ನೂ ಎರಡು ವರ್ಷ ಪುನೀತ್ ಡೇಟ್ಸ್ ಫ್ರೀ ಇಲ್ಲ... ನಿಧಾನಕ್ಕೆ ಒಳ್ಳೆ ಕಥೆ ಮಾಡಿಕೊಂಡು ಬನ್ನಿ ಹೋಗಿ" ಎಂದು ಹೇಳಿ ಆತನನ್ನು ಮನೆಯಿಂದ ಹೊರದಬ್ಬಿದ್ದರು.



ಆಗ ತನ್ನ ಪತ್ನಿ ರಕ್ಷಿತಾ ಸಮೇತ ಶಿವಣ್ಣನ ಮನೆಗೆ ಹೋದ ಪ್ರೇಮ್ ಅದು ಹೇಗೆ ಅವರ ತಲೆಸವರಿದನೋ ಗೊತ್ತಿಲ್ಲ. 'ಜೋಗಿ'ಯ ನಂತರ 'ಪ್ರೀತಿ ಏಕೆ ಭೂಮಿ ಮೇಲಿದೆ' ಮತ್ತು ತನ್ನ ಸಹೋದರ ಪುನೀತ್ ಸಿನಿಮಾವನ್ನೂ ಪ್ರೇಮ್ ಗಬ್ಬೆಬ್ಬಿಸಿದ್ದರೂ ಈಗಲಾದರೂ ಈತ ಒಳ್ಳೆ ಸಿನಿಮಾ ಮಾಡಬಹುದು ಎಂಬ ಕರುಣೆ ಇದ್ದಿರಲೂ ಬಹುದು - ಶಿವಣ್ಣ ಕಥೆಯನ್ನೇ ಕೇಳದೆ ಪ್ರೇಮ್‌ಗೆ ಕಾಲ್‌ಶೀಟ್ ಕೊಟ್ಟುಬಿಟ್ಟರು. ಅಷ್ಟೇ ಅಲ್ಲ, ಇದರ ಮುಹೂರ್ತಕ್ಕೆ ಖುದ್ದು ತಾವೇ ಚೆನ್ನೈ, ಹೈದ್ರಾಬಾದಿಗೆ ಫೋನ್ ಮಾಡಿ ವಿಜಯ್, ಸೂರ್ಯ ಮತ್ತು ಚಿರಂಜೀವಿಯಂಥ ಸೂಪರ್‌ಸ್ಟಾರ್‌ಗಳನ್ನು ಕರೆಸಿದರು. ಆದರೆ ಅದನ್ನೆಲ್ಲಾ ಎನ್‌ಕ್ಯಾಷ್ ಮಾಡಿಕೊಂಡಿದ್ದು ಮಾತ್ರ ಹಳಿಹೈದ ಪ್ರೇಮ್.

ಪ್ರೇಮ್ ಒಬ್ಬನನ್ನು ನಂಬಿದರೆ ಕಷ್ಟ ಎಂಬ ಕಾರಣಕ್ಕೋ ಏನೋ 'ರಾಕ್ಷಸ' ಸಿನಿಮಾದಿಂದ ನಿರಂತರವಾಗಿ ಶಿವಣ್ಣನ ಸಂಪರ್ಕದಲ್ಲಿರುವ ನರೇಂದ್ರ ಬಾಬುರನ್ನು ಖುದ್ದು ಶಿವಣ್ಣನೇ ಪ್ರೇಮ್ ಜೊತೆಗೆ ಕಮಿಟ್ ಮಾಡಿಸಿದರು. ಬಾಬು ಕೂಡ ಸತತ ಎಂಟು ತಿಂಗಳುಗಳ ಕಾಲ ತಪಸ್ಸಿನಂತೆ ಕೂತು ಚಿತ್ರಕತೆ, ಸಂಭಾಷಣೆ ಬರೆದಿಟ್ಟರು. ನಿಜಕ್ಕೂ ಆ ಸ್ಕ್ರಿಪ್ಟನ್ನೇ ಯಥಾವತ್ತು ಶೂಟ್ ಮಾಡಿದ್ದಿದ್ದರೆ ಈ ಹೊತ್ತಿಗೆ 'ಜೋಗಯ್ಯ' 'ಜೋಗಿ'ಗಿಂತಲೂ ಒಂದು ಕೈ ಮುಂದಿರುತ್ತಿದ್ದ. ಆದರೆ ತಲೆಹರಟೆ ಪ್ರೇಮ್ ಸುಮ್ಮನಿರಲಿಲ್ಲವಲ್ಲಾ? ಸಿನಿಮಾ ಮುಹೂರ್ತವಾದ ಮೇಲೆ ಚಿತ್ರಕಥೆಯಲ್ಲಿ ಕಡ್ಡಿ ಅಲ್ಲಾಡಿಸಲು ಶುರುಮಾಡಿದ. ಒಂದೊಂದೇ ಎಲಿಮೆಂಟುಗಳನ್ನು ತೆಗೆದುಹಾಕಿದ, ಇಲ್ಲದ ರಾಜಕೀಯ-ರೊಡ್ಡುಗಳನ್ನು ಸೇರಿಸಿ ಇಡೀ ಸಿನೆಮಾದ ಟ್ರ್ಯಾಕ್‌ಅನ್ನೇ ಗಬ್ಬೆಬ್ಬಿಸಿಬಿಟ್ಟ.



ಸೌಮಿತ್ ಜೊತೆ ಸರಸ!

ಚಿತ್ರದ ಟಾಕಿ ಪೋರ್ಷನ್‌ಅನ್ನು ಬರೀ ಮೂವತ್ತೇ ದಿನದಲ್ಲಿ ರಭಸವಾಗಿ ಚಿತ್ರೀಕರಿಸಿದ ಪ್ರೇಮ್ ಹಾಡುಗಳ ಶೂಟಿಂಗ್ ಪ್ರಾರಂಭವಾಗುವ ಹೊತ್ತಿಗೆ ಚಿತ್ರದ ನಾಯಕಿ ಸೌಮಿತ್ ಕೌರ್‌ಳ ಪಾಶದಲ್ಲಿ ಸಿಲುಕಿಹೋದ. ಸೌಮಿತ್ ಕಾರಣಕ್ಕೇ ಅನವಶ್ಯಕವಾಗಿ ಶೂಟಿಂಗನ್ನು ಎಳೆದಾಡುತ್ತಿದ್ದ ಪ್ರೇಮ್. ಈ ವಿಚಾರ ಯೂನಿಟ್ಟಿನ ಹುಡುಗರಿಗೆ ಮಾತ್ರವಲ್ಲ, ಶಿವಣ್ಣನನ್ನೂ ದಾಟಿ ರಕ್ಷಿತಾಳ ಕಿವಿಗೆ ಬಿತ್ತು. ಕೆರಳಿದ ರಕ್ಷಿತಾ 'ಡೈವೋರ್ಸ್ ಕೊಡ್ತೀನಿ' ಅಂತಾ ಪ್ರೇಮ್‌ಗೆ ಬೆದರಿಕೆ ಹಾಕಿದಳು. ಆದರೂ ಪ್ರೇಮ್ ಸುಮ್ಮನಾಗಲಿಲ್ಲ. ಹೃಷಿಕೇಷದಲ್ಲಿ ಚಿತ್ರೀಕರಣ ನಡೆಯುತ್ತಿದ್ದಾಗಲೇ ಶಿವಣ್ಣನಿಗೆ ಇರುಸುಮುರುಸು ಶುರುವಾಗಿತ್ತು. ಮೈಸೂರಿನಲ್ಲಿ ಹಾಡಿನ ಶೂಟಿಂಗ್ ಆಗುವ ಹೊತ್ತಿಗೆ ಶಿವಣ್ಣನ ತಾಳ್ಮೆ ಮೀರಿಹೋಗಿತ್ತು. ಸತತ ಆರು ದಿನಗಳ ಕಾಲ ಹಾಡೊಂದನ್ನು ಚಿತ್ರಿಸಿದ ಪ್ರೇಮ್ ಕೇವಲ ಮೂರೇಮೂರು ಶಾಟ್‌ಗಳಿಗಾಗಿ ಮತ್ತೊಂದು ದಿನದ ಚಿತ್ರೀಕರಣವನ್ನು ಜಗ್ಗಾಡಿದ್ದ. ಇದನ್ನು ನೋಡಿ ಬೇಸರಗೊಂಡು ಶಿವಣ್ಣ ಶೂಟಿಂಗ್‌ಅನ್ನು ಕ್ಯಾನ್ಸಲ್ ಮಾಡಿ ಬೆಂಗಳೂರಿಗೆ ಹೊರಟರು. ಅವರು ಇನ್ನೇನು ಚನ್ನಪಟ್ಟಣ ದಾಟುವ ಹೊತ್ತಿಗೆ ಮತ್ತೊಂದು ಕಾರಿನಲ್ಲಿ ಓಡಿಬಂದು ಅಡ್ಡ ಹಾಕಿದ ಪ್ರೇಮ್ ನಡುರಸ್ತೆಯಲ್ಲೇ ಶಿವಣ್ಣನ ಕಾಲಿಗೆ ಬಿದ್ದು "ಅಣ್ಣಾ ತಪ್ಪಾಯ್ತು" ಎಂದು ಗೋಗರೆದಿದ್ದ. ಶಿವಣ್ಣ ಮತ್ತೆ ಮೈಸೂರಿಗೆ ತೆರಳಿ ಶೂಟಿಂಗ್ ಮುಗಿಸಿಬಂದರು.


ಅವಳಿದ್ದರೆ ನಾನಿರಲ್ಲ!

ಪ್ರೇಮ್ ಯಾವಾಗ ಬಾಂಬೆ ಹುಡುಗಿ ಸೌಮಿತಳ ಹಿಂದೆ ಬಿದ್ದನೋ ಖುದ್ದು ರಕ್ಷಿತಾ ರಣಚಂಡಿಯಂತಾದಳು. ರಕ್ಷಿತಾಳ ತಾಯಿ ಮಮತಾ ರಾವ್ ಕೂಡಾ ಒತ್ತಾಯ ಮಾಡಿ ತರಾತುರಿಯಲ್ಲಿ ಶೂಟಿಂಗ್ ಮುಗಿಸಿ ಸೌಮಿತ್‌ಳನ್ನು ಮುಂಬೈ ಕಡೆಗೆ ಮುಖ ಕಟ್ಟಿಸಿದರು. ಸಾಮಾನ್ಯವಾಗಿ ಸಿನಿಮಾವೊಂದರ ಪ್ರಮೋಷನ್‌ಗಳಿಗೆ ಚಿತ್ರದ ನಾಯಕಿಯನ್ನು ಆಕೆ ಎಷ್ಟೇ ದೂರದ ಊರಿನಲ್ಲಿದ್ದರೂ ಕರೆಸಿಕೊಳ್ಳುತ್ತಾರೆ. ಆದರೆ 'ಜೋಗಯ್ಯ'ನ ಒಂದೇ ಒಂದು ಪ್ರೆಸ್‌ಮೀಟಿನಲ್ಲೂ ಸೌಮಿತ್‌ಳ ಸುಳಿವೇ ಇರಲಿಲ್ಲ. ಕಾರಣ ಇಷ್ಟೇ. ಶೂಟಿಂಗ್ ಸಮಯದಲ್ಲೇ ಆಕೆಯೊಂದಿಗೆ ಆಡಬಾರದ ಆಟಗಳನ್ನು ಶುರುಹಚ್ಚಿಕೊಂಡ ಪ್ರೇಮ್ ಮತ್ತೆ ಸೌಮಿತ್‌ಳನ್ನು ಕರೆಸಿದರೆ ಸುಮ್ಮನೇ ಇರುವುದಿಲ್ಲ ಎಂದು ರಕ್ಷಿತಾ ಮತ್ತು ತಾಯಿ ಮಮತಾರಾವ್‌ಗೆ ಗೊತ್ತಿತ್ತು. ಅದಕ್ಕೇ ರಕ್ಷಿತಾ "ಅವಳು ಬಂದರೆ ನಾನಿರೋದಿಲ್ಲ, ಓಕೆನಾ?" ಎಂದು ಅಬ್ಬರಿಸಿದಾಗ ಪ್ರೇಮ್ ತೆಪ್ಪಗಾದ.

ಒಟ್ಟಾರೆಯಾಗಿ ಪ್ರೇಮ್‌ನ ಅಶಿಸ್ತು, ಅರೆಜ್ಞಾನದಿಂದ ಶಿವರಾಜ್‌ಕುಮಾರ್ ಎಂಬ ಸೀನಿಯರ್ ಹೀರೋ ನಟಿಸಿದ ನೂರನೇ ಚಿತ್ರ ಜೀರೋ ಆಗಿದೆ. ಇಷ್ಟೆಲ್ಲ ಆಗಿದ್ದರೂ ಮತ್ತೆ ಶಿವಣ್ಣನಿಗೆ ತಗಲಾಕಿಕೊಂಡು 'ಜಂಗಮ' ಚಿತ್ರಕ್ಕೆ ಕಾಲ್‌ಶೀಟ್ ಪಡೆಯುವ ಪ್ಲಾನು ಪ್ರೇಮ್‌ನದ್ದು.

'ಜೋಗಯ್ಯ' ಕಳೆದ ಮಾನವನ್ನು 'ಜಂಗಮ' ತೀರಿಸಲು ಸಾಧ್ಯವೇ? ಅನ್ನೋದು ಪ್ರಶ್ನೆ...

• ಅರುಣ್





ಶಿವಣ್ಣನ ದೊಡ್ಡತನ

ಕಳೆದ ಶುಕ್ರವಾರ ಮಧ್ಯಾಹ್ನ 'ಜೋಗಯ್ಯ' ತಂಡ ಗಾಂಧಿನಗರದಲ್ಲಿ ಮೆರವಣಿಗೆಯಲ್ಲಿ ಸಾಗಿತ್ತು. ಅಷ್ಟರಲ್ಲಾಗಲೇ ಫ... ಶೋ ರಿಜಲ್ಟೂ ಬಂದಿತ್ತಲ್ಲ? ಸಿನಿಮಾ ನೋಡಿಬಂದ ಶಿವಣ್ಣನ ಅಭಿಮಾನಿಗಳು ಪ್ರೇಮ್‌ಗೆ ಪಾಂಚಲು ಮುಂದಾಗಿದ್ದರು. ತ... ಪಲ್ಲಕ್ಕಿಯಿಂದ ಇಳಿದ ಶಿವಣ್ಣ ಅಭಿಮಾನಿಗಳನ್ನು ಸಮಾಧಾನ ಮಾಡಿದರು. ಅಷ್ಟರಲ್ಲಾಗಲೇ ಎಚ್.ಡಿ. ಕುಮಾರಸ್ವಾ... ಕಡೆಯವರು ಪ್ರೇಮ್‌ಗೆ ಒಂದೇ ಸಮನೆ ಬೆದರಿಕೆ ಒಡ್ಡಲು ಆರಂಭಿಸಿದ್ದರು. ಗಿಮಿಕ್ಕುರಾಜ ಪ್ರೇಮ್‌ನ ಕೈಕಾಲುಗಳು ಗಢ... ಎನ್ನತೊಡಗಿದ್ದವು. ಈ ವಿಚಾರ ಶಿವಣ್ಣನಿಗೆ ಗೊತ್ತಾಗಿದ್ದೇ ಪ್ರೇಮ್‌ನನ್ನು ಸೀದಾ ತಮ್ಮ ಕಾರಿನಲ್ಲಿ ಕೂರಿಸಿಕೊಂಡು, ನಾಗವ... ಬಳಿಯ ತಮ್ಮ ಮನೆಗೆ ಕರೆದುಕೊಂಡುಹೋಗಿ "ಹೆದರಬೇಡಿ ಪ್ರೇಮ್. ಯಾರೂ ನಿಮ್ಮನ್ನ ಮುಟ್ಟೋಕಾಗಲ್ಲ. ನಿಮ್ ಜೊ... ನಾವಿದ್ದೀನಿ. ಆರಾಮಾಗಿರಿ" ಎಂದು ಧೈರ್ಯ ತುಂಬಿದರು.

ಬೇರೆ ಯಾರೇ ಆಗಿದ್ದರೂ "ನನ್ನ ಸಿನಿಮಾವನ್ನು ಹಾಳು ಮಾಡಿದವನನ್ನು ಕಟ್ಟಿಕೊಂಡು ನನಗೇನು" ಎಂದು ಸುಮ್ಮನಿದ್ದುಬಿಡುತ್ತಿದ್ದರು ಏನೋ? ಆದರೆ ಶಿವಣ್ಣ ಪ್ರೇಮ್ ಮೇಲಿನ ಎಲ್ಲಾ ಸಿಟ್ಟು, ವಿರೋಧಗಳನ್ನು ಪಕ್ಕಕ್ಕಿಟ್ಟು ದೊಡ್ಡತನ ಮೆರೆದರು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, ...